ಮಂಗಳವಾರ, ಜುಲೈ 9, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 190 | ಪುಟ 14

• www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಸೊಳ್ಳೆಗಳನ್ನು ನಿಯಂತ್ರಿಸದಿದ್ದರೆ ಡೆಂಗಿಯನ್ನು ತಡೆಗಟ್ಟಲು ಸಾಧ್ಯವಾಗದು



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
79,960	24,320	₹75,340 (ಬೆಂಗಳೂರು)	₹94,300 (ಬೆಂಗಳೂರು)	83.50

ಜಿಲ್ಲಾಧಿಕಾರಿಗಳು, ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಜತೆ ಮುಖ್ಯಮಂತ್ರಿ ಇಡೀ ದಿನ ಸಭೆ

'ಅನರ್ಹ ಬಿಪಿಎಲ್ ಕಾರ್ಡು ರದ್ದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನರ್ಹ ಬಿಪಿಎಲ್ ಕಾರ್ಡುಗಳನ್ನು ರದ್ದುಪಡಿಸಿ, ಅರ್ಹರಿಗೆ ಬಿಪಿಎಲ್ ಕಾರ್ಡು ನೀಡಬೇಕು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಧಿಕಾರಿಗಳಿಗೆ ಸೂಚಿಸಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಸೋಮವಾರ ಇಡೀ ದಿನ ನಡೆದ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ-ನಿರ್ವಹಣಾಧಿಕಾರಿಗಳು ಮತ್ತು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಸಭೆಯಲ್ಲಿ ಅವರು ಈ ನಿರ್ದೇಶನ ನೀಡಿದರು.

'ರಾಜ್ಯದಲ್ಲಿ ಶೇ 80ರಷ್ಟು ಬಿಪಿಎಲ್ ಕುಟುಂಬಗಳಿದ್ದು (1.27 ಕೋಟಿ), 4.37 ಕೋಟಿ ಜನರು ಬಿಪಿಎಲ್ ಕಾರ್ಡ್ ಸೌಲಭ್ಯ ಪಡೆಯುತ್ತಿದ್ದಾರೆ. ಹೊಸ ಕಾರ್ಡ್‌ಗಳಿಗೆ ಸಲ್ಲಿಕೆಯಾದ 2.95 ಲಕ್ಷ ಅರ್ಜಿಗಳು ವಿಲೇವಾರಿಗೆ ಬಾಕಿಯಿವೆ. ನೀತಿ ಆಯೋಗದ ಪ್ರಕಾರ ರಾಜ್ಯದಲ್ಲಿ ಬಡವರ ಸಂಖ್ಯೆ ಕಡಿಮೆಯಾಗಿದ್ದರೂ, ಬಿಪಿಎಲ್ ಕಾರ್ಡ್ ಪ್ರಮಾಣ ಕಡಿಮೆ ಆಗದಿರಲು ಕಾರಣವೇನು?' ಎಂದರು.

'ತಮಿಳುನಾಡಿನಲ್ಲಿ ಬಿಪಿಎಲ್ ಕುಟುಂಬಗಳ ಪ್ರಮಾಣ ಶೇ 40ರಷ್ಟಿದೆ. ರಾಜ್ಯದಲ್ಲಿ ಈ ಕುರಿತು ಪರಿಶೀಲಿಸಿ, ಅನರ್ಹರನ್ನು ಕೈಬಿಡುವ ಕಾರ್ಯ ನಡೆಯಬೇಕು. ಕಾರ್ಡ್‌ಗಳಲ್ಲಿರುವ ಮೃತ ಸದಸ್ಯರ ಹೆಸರು ತೆಗೆದುಹಾಕುವ ಪ್ರಕ್ರಿಯೆಯನ್ನು ತ್ವರಿತಗೊಳಿಸಬೇಕು' ಎಂದರು.

ಹಿರಿಯ ಅಧಿಕಾರಿಗಳು ಹೊಣೆ: 'ಕೆಲಸದಲ್ಲಿನ ಉದಾಸೀನ, ನಿರ್ಲಕ್ಷ್ಯ, ಕರ್ತವ್ಯಲೋಪಕ್ಕೆ ಕೆಳಹಂತದ ಅಧಿಕಾರಿಗಳನ್ನು ಮಾತ್ರವಲ್ಲ, ಇನ್ನು ಮುಂದೆ ಹಿರಿಯ ಅಧಿಕಾರಿಗಳನ್ನೂ ಹೊಣೆ ಮಾಡಲಾಗುವುದು. ಜನರನ್ನು ಅನಗತ್ಯವಾಗಿ ಅಲೆದಾಡಿಸಬೇಡಿ. ಅವರ ದೂರುಗಳನ್ನು ಆಲಿಸಿ, ಅಗತ್ಯ ಪರಿಹಾರ ಒದಗಿಸಿ' ಎಂದು ತಾಕೀತು ಮಾಡಿದರು.

ಡೆಂಗಿ ನಿಯಂತ್ರಿಸಿ: ರಾಜ್ಯದಲ್ಲಿ ಡೆಂಗಿ ಪ್ರಕರಣಗಳು ಹೆಚ್ಚುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ ಮುಖ್ಯಮಂತ್ರಿ, 'ತಕ್ಷಣ ಡೆಂಗಿ ನಿಯಂತ್ರಣಕ್ಕೆ ತರಬೇಕು' ಎಂದು ಸೂಚಿಸಿದರು.

5ನೇ ಪುಟ ನೋಡಿ



ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಮಾಹಿತಿ ನೀಡಿದರು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಉಪಸ್ಥಿತರಿದ್ದರು

> **ಮಹಾರಾಜರು ಎಂಬ ಭಾವನೆ ಇದ್ದರೆ ಜನಸೇವೆ ಸಾಧ್ಯವಿಲ್ಲ. ಸರ್ಕಾರದ ಕಾರ್ಯಕ್ರಮಗಳನ್ನು ಜನಸಾಮಾನ್ಯರಿಗೆ ತಲುಪಿಸಲು ಜಿಲ್ಲಾಧಿಕಾರಿಗಳು, ಎಸ್‌ಪಿಗಳು, ಸಿಇಒಗಳು ಕ್ರಿಯಾಶೀಲವಾಗಿ, ಸಮನ್ವಯದಿಂದ ಕೆಲಸ ಮಾಡಬೇಕು**
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

'ರೈತರ ಆತ್ಮಹತ್ಯೆ: ಪರಿಹಾರ ವಿಳಂಬ ಸಲ್ಲ'

'ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ಪರಿಹಾರ ಒದಗಿಸುವಲ್ಲಿ ವಿಳಂಬ ಸಲ್ಲದು. ಕಾನೂನು ಪ್ರಕಾರ ಪರಿಶೀಲಿಸಿ 1,003 ಅರ್ಹ ಪ್ರಕರಣಗಳಲ್ಲಿ 994 ರೈತರ ಕುಟುಂಬಕ್ಕೆ ಪರಿಹಾರ ನೀಡಲಾಗಿದೆ. ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ಕಾನೂನು ಪ್ರಕಾರವೇ ಆದರೆ, ಔದಾರ್ಯದಿಂದ ವರ್ತಿಸಿ ಪರಿಹಾರ ನೀಡಬೇಕು. ಸಣ್ಣಪುಟ್ಟ ತಾಂತ್ರಿಕ ಕಾರಣಗಳಿಗಾಗಿ ರೈತರ ಆತ್ಮಹತ್ಯೆ ಪರಿಹಾರದ ಅರ್ಜಿಗಳನ್ನು ತಿರಸ್ಕರಿಸದೆ, ರೈತ ಕುಟುಂಬಗಳಿಗೆ ಸಹಾಯ ಮಾಡಿ' ಎಂದು ಹೇಳಿದ ಮುಖ್ಯಮಂತ್ರಿ, 'ರೈತರ ಸಭೆ ಮಾಡಿ ಜಾಗೃತಿ, ಆತ್ಮವಿಶ್ವಾಸ ಮೂಡಿಸುವ ಕಾರ್ಯ ಮಾಡಬೇಕು' ಎಂದು ಸಿದ್ದರಾಮಯ್ಯ ನಿರ್ದೇಶನ ನೀಡಿದರು.

ಆಸ್ತಿ ತೆರಿಗೆ ವಸೂಲಾತಿ: 'ಕಳೆದ ವರ್ಷದ ₹224 ಕೋಟಿ ಆಸ್ತಿ ತೆರಿಗೆ ವಸೂಲಾತಿಗೆ ಬಾಕಿಯಿದೆ. ಪ್ರಸ್ತುತ ವರ್ಷದ ಜೂನ್ ಅಂತ್ಯದವರೆಗೆ ₹806 ಕೋಟಿ ಆಸ್ತಿ ತೆರಿಗೆ ವಸೂಲು ಮಾಡಲಾಗಿದ್ದು, ₹1,053 ಕೋಟಿ ವಸೂಲಾತಿಗೆ ಬಾಕಿಯಿದೆ. ಜಿಲ್ಲಾಧಿಕಾರಿಗಳು ಅಭಿಯಾನದ ರೀತಿಯಲ್ಲಿ ಆಸ್ತಿ ತೆರಿಗೆ ವಸೂಲಾತಿಗೆ ಕ್ರಮ ಕೈಗೊಳ್ಳಬೇಕು' ಎಂದರು.

'ಅವತ್ತು ಭ್ರಷ್ಟಾಚಾರ ಹೇಗಿತ್ತು?'

'40 ವರ್ಷಕ್ಕೂ ಹೆಚ್ಚು ಅವಧಿಯಿಂದ ಅಧಿಕಾರಿಗಳ ಕಾರ್ಯವೈಖರಿ ನೋಡುತ್ತಿದ್ದೇನೆ. ಅವತ್ತು ಭ್ರಷ್ಟಾಚಾರ ಹೇಗಿತ್ತು, ಇವತ್ತು ಹೇಗಿದೆ ಎಂದು ನೋಡಿದಾಗ, ಕಾರ್ಯಾಂಗ ಮತ್ತು ಶಾಸಕಾಂಗ ಪರಿಣಾಮ-ಕಾರಿಯಾಗಿ ಕೆಲಸ ಮಾಡುತ್ತಿಲ್ಲ ಎಂಬುದು ಕಂಡುಬರುತ್ತದೆ' ಎಂದು ಸಿದ್ದರಾಮಯ್ಯ ಅಸಮಾಧಾನ ಹೊರಹಾಕಿದರು.

'ರಾಜಕಾರಣಿಗಳು ಹಾಗೂ ಅಧಿಕಾರಿಗಳ ಅನುಭವದ ಮೇಲೆ ಆಡಳಿತ ಹೆಚ್ಚು ಪರಿಣಾಮಕಾರಿ ಆಗಬೇಕು. ಆದರೆ, ನಿರೀಕ್ಷಿತ ಮಟ್ಟದಲ್ಲಿ ಪರಿಣಾಮಕಾರಿ ಆಗಿಲ್ಲ' ಎಂದೂ ಅವರು ಹೇಳಿದರು.



ಮಂಗಳೂರಿನ ಉಳ್ಳಾಲದ ಕಡಲ ತೀರದಲ್ಲಿ ಸೋಮವಾರ ಅಲೆಗಳ ಅಬ್ಬರದ ನಡುವೆ ಮೀನು ಹಿಡಿದ ಸಾರ್ವಜನಿಕರು
ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್.

ಪ್ರವಾಹಕ್ಕೆ ನಲುಗಿದ ಕರಾವಳಿ

ಪ್ರಜಾವಾಣಿ ವಾರ್ತೆ

ಉಡುಪಿ/ಕಾರವಾರ: ರಾಜ್ಯದ ಹಲವೆಡೆ ಸೋಮವಾರ ಮಳೆಯಾಗಿದೆ. ರಾಜ್ಯದ ಕರಾವಳಿಯಲ್ಲಿ ಅದರ ತೀವ್ರತೆ ಹೆಚ್ಚಿದೆ. ಉಡುಪಿ ಜಿಲ್ಲೆಯಾದ್ಯಂತ ಭಾನುವಾರ ರಾತ್ರಿ ಹಾಗೂ ಸೋಮವಾರ ಎಡೆಬಿಡದೆ ಸುರಿದ ಧಾರಾಕಾರ ಮಳೆಯಿಂದಾಗಿ ಹಲವು ಕಡೆ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ. ಮನೆ, ಅಂಗಡಿಗಳಿಗೆ ಮಳೆ ನೀರು ನುಗ್ಗಿದೆ. ರಸ್ತೆಗಳು ಮುಳುಗಡೆಯಾದ ಪರಿಣಾಮ ಹಲವು ಬಡಾವಣೆಗಳಲ್ಲಿ ವಾಹನ ಸಂಚಾರಕ್ಕೆ ಅಡಚಣೆಯಾಗಿತ್ತು.

ನಗರದ ಗುಂಡಿಬೈಲು, ಪಾಡಿಗಾರು, ಕರಂಬಳ್ಳಿ, ಮಠದಬೆಟ್ಟು, ಕಲ್ಸಂಕ ಸಮೀಪದ ಬೈಲಕೆರೆ, ಶ್ರೀಕೃಷ್ಣ ಮಠದ ವಾಹನ ಪಾರ್ಕಿಂಗ್ ಪ್ರದೇಶದ ಸಮೀಪ ನೆರೆ ನೀರು ನಿಂತಿದೆ. ಗುಂಡಿಬೈಲು, ಬಡಗುಪೇಟೆಯಲ್ಲಿ ಮನೆ, ಅಂಗಡಿಗಳಿಗೆ ಮಳೆ ನೀರು ನುಗ್ಗಿದೆ. ಬೈಲಕೆರೆಯಲ್ಲಿ ಪ್ರವಾಹಪೀಡಿತ ಪ್ರದೇಶದಲ್ಲಿನ ಜನರನ್ನು ಸುರಕ್ಷಿತ ಪ್ರದೇಶಗಳಿಗೆ ಸ್ಥಳಾಂತರಿಸಲಾಗಿದೆ.

ಭಾರಿ ಮಳೆಯಾಗುತ್ತಿರುವುದ-ರಿಂದ ಮುಂಜಾಗ್ರತಾ ಕ್ರಮವಾಗಿ ಇದೇ 9ರಂದು ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ಅಂಗನವಾಡಿ ಕೇಂದ್ರಗಳಿಗೆ, ಪ್ರಾಥಮಿಕ, ಪ್ರೌಢ-ಶಾಲೆಗಳಿಗೆ ಹಾಗೂ ಪದವಿಪೂರ್ವ ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

60 ಜನರ ಸ್ಥಳಾಂತರ: ಕಾರವಾರ ಜಿಲ್ಲೆಯ ಹೊನ್ನಾವರ, ಕುಮಟಾ ತಾಲ್ಲೂಕಿನ ವಿವಿಧೆಡೆ ವ್ಯಾಪಕ ಮಳೆ ಸುರಿದಿದ್ದು ಗುಂಡಬಾಳ ನದಿಯಲ್ಲಿ ನೀರಿನ ಮಟ್ಟ ಏರಿಕೆಯಾದ ಪರಿಣಾಮ ಕಡತೋಕಾ ಗ್ರಾಮದ ಗುದ್ನಕಟ್ಟು ಎಂಬಲ್ಲಿ ಸಿಲುಕಿದ್ದ 60 ಜನರನ್ನು ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡದ ಸದಸ್ಯರು ರಕ್ಷಿಸಿ ಸೋಮವಾರ ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಿದರು. ಹೊನ್ನಾವರ ತಾಲ್ಲೂಕಿನಲ್ಲಿ ತೆರೆಯಲಾದ 8 ಕಾಳಜಿ ಕೇಂದ್ರಗಳಲ್ಲಿ 313 ಮಂದಿ, ಕುಮಟಾದಲ್ಲಿ ತೆರೆಯಲಾದ 2 ಕಾಳಜಿ ಕೇಂದ್ರಗಳಲ್ಲಿ 72 ಮಂದಿ ಆಶ್ರಯ ಪಡೆದಿದ್ದರು. ಕುಮಟಾದಲ್ಲಿ 22.18 ಸೆಂ.ಮೀ ಮತ್ತು ಕುಮಟಾ ತಾಲ್ಲೂಕಿನ ಕತಗಾಲದಲ್ಲಿ 15.93 ಸೆಂ.ಮೀ ಮಳೆ ಸುರಿದಿತ್ತು. ಮಳೆಯ ಪರಿಣಾಮದಿಂದ ಜಿಲ್ಲೆಯ ವಿವಿಧೆಡೆ 2 ಮನೆಗಳು ಸಂಪೂರ್ಣ ಹಾನಿಗೀಡಾಗಿದ್ದರೆ, 13 ಮನೆಗಳಿಗೆ ಭಾಗಶಃ ಹಾನಿ ಸಂಭವಿಸಿದೆ.

ಇನ್ನಷ್ಟು ಸುದ್ದಿಗಳು 04

ಬಿ.ಸಿ. ಪಾಟೀಲ ಅಳಿಯ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಮಾಜಿ ಸಚಿವ, ಬಿಜೆಪಿಯ ಬಿ.ಸಿ.ಪಾಟೀಲ ಅವರ ಅಳಿಯ ಕೆ.ಜಿ. ಪ್ರತಾಪ್ ಕುಮಾರ್ (43) ಸೋಮವಾರ ದಾವಣಗೆರೆ ಜಿಲ್ಲೆಯ ಹೊನ್ನಾಳಿ ತಾಲ್ಲೂಕಿನ ಅರಕೆರೆ ಗ್ರಾಮದ ಬಳಿಯ ಅರಣ್ಯ ಪ್ರದೇಶದಲ್ಲಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.



ಪ್ರತಾಪ್ ಕುಮಾರ್

ಮೂಲತಃ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಕತ್ತಲಗೆರೆ ಗ್ರಾಮದ ಪ್ರತಾಪ್‌ಕುಮಾರ್, ಬಿ.ಸಿ. ಪಾಟೀಲ ಅವರ ಹಿರಿಯ ಪುತ್ರಿ ಸೌಮ್ಯಾ ಅವರ ಪತಿ. ಮಧ್ಯಾಹ್ನ ಕಾರಿನಲ್ಲಿಯೇ ವಿಷ ಸೇವಿಸಿದ್ದ ಸ್ಥಿತಿಯಲ್ಲಿ ಪತ್ತೆಯಾಗಿದ್ದ ಇವರನ್ನು ಸಹೋದರ ಪ್ರಭುದೇವ್ ಹೊನ್ನಾಳಿ ತಾಲ್ಲೂಕು ಆಸ್ಪತ್ರೆಗೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ಕೊಡಿಸಿದ್ದಾರೆ. ನಂತರ ಶಿವಮೊಗ್ಗದ ಆಸ್ಪತ್ರೆಗೆ ಕರೆತರುವ ಮಾರ್ಗ ಮಧ್ಯದಲ್ಲಿಯೇ ಸಾವಿಗೀಡಾಗಿ-ದ್ದಾರೆ ಎಂದು ತಿಳಿದುಬಂದಿದೆ

ಇಲ್ಲಿನ ಮೆಗ್ಗಾನ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ನಡೆಸಿ ದೇಹವನ್ನು ರಾತ್ರಿ ಕತ್ತಲಗೆರೆಗೆ ಕೊಂಡೊಯ್ಯಲಾಯಿತು. ಪ್ರತಾಪ್‌ಕುಮಾರ್ ಹಿರೇಕೆರೂರಿನಲ್ಲಿ ಗುತ್ತಿಗೆದಾರರಾಗಿ ಕೆಲಸ ಮಾಡುತ್ತಿದ್ದರು.

5ನೇ ಪುಟ ನೋಡಿ

'ಪರಿಣಾಮ ಬೀರಿದ್ದರೆ ಮರುಪರೀಕ್ಷೆ'

ನೀಟ್–ಯುಜಿ ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ: 'ಸುಪ್ರೀಂ' ವಿಚಾರಣೆ ಆರಂಭ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: 'ನೀಟ್-ಯುಜಿ 2024' ಪ್ರವೇಶ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಯಾವ ಮಟ್ಟದಲ್ಲಿ ನಡೆದಿದೆ ಎಂಬುದನ್ನು ಬಹಿರಂಗಪಡಿಸುವಂತೆ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಗೆ (ಎನ್‌ಟಿಎ) ಸುಪ್ರೀಂ ಕೋರ್ಟ್ ಸೋಮವಾರ ನಿರ್ದೇಶಿಸಿದ್ದು, ಸೋರಿಕೆಯು ಇಡೀ ಪ್ರಕ್ರಿಯೆ ಮೇಲೆ ಪರಿಣಾಮ ಬೀರಿದ್ದರೆ ಮರುಪರೀಕ್ಷೆಗೆ ಆದೇಶಿಸಬೇಕಾಗುತ್ತದೆ ಎಂದು ಹೇಳಿತು.

ಪ್ರಶ್ನೆ ಪತ್ರಿಕೆ ಎಲ್ಲಿ, ಯಾವ ರೀತಿ ಸೋರಿಕೆಯಾಯಿತು ಮತ್ತು ಸೋರಿಕೆ ನಡೆದ ಸಮಯ ಹಾಗೂ ಪರೀಕ್ಷೆ ನಡೆದ ದಿನದ (ಮೇ 5, 2024) ನಡುವಿನ ಅವಧಿಯಲ್ಲಿ ಏನಾಯಿತು ಎಂಬ ಬಗ್ಗೆ ಮಾಹಿತಿ ಒದಗಿಸುವಂತೆ ಎನ್‌ಟಿಎ ಮತ್ತು ಸಿಬಿಐಗೆ ಸೂಚಿಸಿತು.

'ಪರೀಕ್ಷಾ ಅಕ್ರಮದ ಫಲಾನುಭವಿಗಳನ್ನು ಮತ್ತು ಪ್ರಾಮಾಣಿಕವಾಗಿ ಪರೀಕ್ಷೆ ಬರೆದ ಅಭ್ಯರ್ಥಿಗಳನ್ನು ಪ್ರತ್ಯೇಕಿಸಲು ಸಾಧ್ಯವಾಗದಿದ್ದರೆ ಮರುಪರೀಕ್ಷೆ ನಡೆಸಬೇಕಾಗುತ್ತದೆ' ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠ ಅಭಿಪ್ರಾಯಪಟ್ಟಿತು.

ಎನ್‌ಟಿಎಗೆ ನೀಡಿದ ಸೂಚನೆ

- ಪರೀಕ್ಷಾ ಅಕ್ರಮದ ಫಲಾನುಭವಿಗಳನ್ನು ಪತ್ತೆಹಚ್ಚಲು ಇದುವರೆಗೆ ತೆಗೆದುಕೊಂಡ ಕ್ರಮಗಳನ್ನು ಬಹಿರಂಗಪಡಿಸಿ
- ಪ್ರಶ್ನೆ ಪತ್ರಿಕೆ ಸೋರಿಕೆಯಾದ ಕೇಂದ್ರಗಳು ಮತ್ತು ನಗರಗಳನ್ನು ಗುರುತಿಸಲು ತೆಗೆದುಕೊಂಡ ಕ್ರಮಗಳು, ಫಲಾನುಭವಿಗಳನ್ನು ಗುರುತಿಸಲು ಅನುಸರಿಸಿದ ವಿಧಾನಗಳ ಬಗ್ಗೆ ಮಾಹಿತಿ ಒದಗಿಸಿ



> **ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂಬುದರಲ್ಲಿ ಯಾವುದೇ ಸಂದೇಹ ಇಲ್ಲ. ಸೋರಿಕೆ ಯಾವ ಮಟ್ಟದಲ್ಲಿ ನಡೆದಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕಿದೆ**
> **ಸುಪ್ರೀಂ ಕೋರ್ಟ್ ಪೀಠ**

ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕಾಗಿ ಮೇ 5ರಂದು ನಡೆದ ನೀಟ್-ಯುಜಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆ ಹಾಗೂ ಇತರೆ ಅವ್ಯವಹಾರಗಳಿಗೆ ಸಂಬಂಧಿಸಿದ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಸೋಮವಾರ ಆರಂಭಿಸಿತು. ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರು ಪೀಠದಲ್ಲಿದ್ದಾರೆ.

ಜೂನ್ 23ರಿಂದ ಇದುವರೆಗೆ ತನಿಖೆಯಲ್ಲಿ ಆಗಿರುವ ಪ್ರಗತಿಯ ಬಗ್ಗೆ ವರದಿ ಸಲ್ಲಿಸುವಂತೆ ಸಿಬಿಐಗೆ ಸೂಚಿಸಿದ ಪೀಠ, ಮುಂದಿನ ವಿಚಾರಣೆಯನ್ನು ಗುರುವಾರಕ್ಕೆ (ಜುಲೈ 11) ನಿಗದಿಪಡಿಸಿದೆ.

ಅರ್ಜಿದಾರರ ಪರ ವಕೀಲರು ಮತ್ತು ಕೇಂದ್ರ ಸರ್ಕಾರ ಹಾಗೂ ಎನ್‌ಟಿಎಯನ್ನು ಪ್ರತಿನಿಧಿಸುತ್ತಿರುವ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರ ವಾದ ಆಲಿಸಿದ ಪೀಠ, 'ಮರುಪರೀಕ್ಷೆಯನ್ನು ನಡೆಸಬೇಕೇ ಅಥವಾ ಬೇಡವೇ ಎಂಬುದನ್ನು ನಿರ್ಧರಿಸುವ ಮುನ್ನ ಕೆಲವೊಂದು ವಿಷಯಗಳನ್ನು ಖಚಿತಪಡಿಸಿಕೊಳ್ಳಬೇಕಿದೆ' ಎಂದಿತು.

11ನೇ ಪುಟ ನೋಡಿ

ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನಿರ್ದೇಶನ

'ಮುಟ್ಟಿನ ರಜೆಗೆ ನೀತಿ ರೂಪಿಸಿ'

ನವದೆಹಲಿ (ಪಿಟಿಐ): ಮಹಿಳಾ ಉದ್ಯೋಗಿಗಳು ಮತ್ತು ವಿದ್ಯಾ-ರ್ಥಿನಿಯರಿಗೆ ಮುಟ್ಟಿನ ರಜೆ ನೀಡುವ ಕುರಿತು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಸಮಾಲೋಚನೆ ನಡೆಸಿ ಮಾದರಿ ನೀತಿಯೊಂದನ್ನು ರೂಪಿಸಬೇಕು ಎಂದು ಸುಪ್ರೀಂ ಕೋರ್ಟ್ ಸೋಮವಾರ ನಿರ್ದೇಶನ ನೀಡಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಜೆ.ಬಿ. ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ಪೀಠವು, ಮುಟ್ಟಿನ ರಜೆಯ ಸೌಲಭ್ಯ ಕಲ್ಪಿಸುವ ವಿಷಯವು ನ್ಯಾಯಾಲಯಗಳು ಪರಿಶೀಲಿಸುವಂತದ್ದಲ್ಲ ಎಂದೂ ಹೇಳಿದೆ. ಮಹಿಳೆಯರಿಗೆ ಮುಟ್ಟಿನ ರಜೆ ನೀಡುವ ಕುರಿತು ನ್ಯಾಯಾಲಯ ತೀರ್ಪು ಪ್ರಕಟಿಸಿದರೆ, ಅದು ಕೆಲಸದ ಸ್ಥಳದಲ್ಲಿ ವ್ಯತಿರಿಕ್ತ ಪರಿಣಾಮ ಬೀರಬಹುದು. ಅಲ್ಲದೆ, ಉದ್ಯೋಗದಾತರು ಮಹಿಳೆಯರನ್ನು ಉದ್ಯೋಗಕ್ಕೆ ನೇಮಕಾತಿ ಮಾಡಿಕೊಳ್ಳುವುದನ್ನು ಕೈಬಿಡಲು ಕಾರಣವಾಗಬಹುದು ಎಂದೂ ಪೀಠವು ಹೇಳಿದೆ.

'ಮುಟ್ಟಿನ ರಜೆಯನ್ನು ಕಡ್ಡಾಯಗೊಳಿಸುವುದರಿಂದ ಮಹಿಳೆಯರು ಕೆಲಸದಿಂದ ಹೊರಗುಳಿಯುತ್ತಾರೆ. ನಾವು ಇಂಥದ್ದನ್ನು ಬಯಸುವುದಿಲ್ಲ. ಇದು ವಾಸ್ತವವಾಗಿ ಸರ್ಕಾರದ ನೀತಿಗೆ ಸಂಬಂಧಿಸಿದ್ದಾಗಿದೆ. ಇದು ನ್ಯಾಯಾಲಯಗಳು ಪರಿಶೀಲಿಸುವ ವಿಷಯವಲ್ಲ' ಎಂದು ಹೇಳಿದೆ.

'2023ರ ಮೇನಲ್ಲಿ ಕೇಂದ್ರಕ್ಕೆ ಅರ್ಜಿ ಸಲ್ಲಿಸಿರುವುದಾಗಿ ಅರ್ಜಿದಾರರು ಹೇಳಿದ್ದಾರೆ. ಇದರಲ್ಲಿ ಎತ್ತಿರುವ ವಿಷಯಗಳು ಸರ್ಕಾರದ ನೀತಿಯ ಬಹುವಿಧದ ಉದ್ದೇಶಗಳಿಗೆ ಸಂಬಂಧಿಸಿವೆ. ಹೀಗಾಗಿ ನ್ಯಾಯಾಲಯವು ಮಧ್ಯಪ್ರವೇಶಿಸಲು ಯಾವುದೇ ಕಾರಣ ಕಾಣಿಸುತ್ತಿಲ್ಲ' ಎಂದು ಪೀಠ ಹೇಳಿದೆ.

ಆದಾಗ್ಯೂ ಈ ಅರ್ಜಿಯ ವಿಚಾರಣೆ ವೇಳೆ ಅರ್ಜಿದಾರರು ಮತ್ತು ವಕೀಲ ಶೈಲೇಂದ್ರ ತ್ರಿಪಾಠಿ ಅವರ ಪರವಾಗಿ ಹಾಜರಾಗಲು ವಕೀಲ ರಾಕೇಶ್ ಖನ್ನಾ ಅವರಿಗೆ ಪೀಠವು ಅನುಮತಿಸಿತು.

11ನೇ ಪುಟ ನೋಡಿ

ಆ.15: ಅಂಬೇಡ್ಕರ್ ಭಾವಚಿತ್ರ ಕಡ್ಡಾಯ

ಬೆಂಗಳೂರು: ಆಗಸ್ಟ್ 15ರ ಸ್ವಾತಂತ್ರ್ಯ ದಿನಾಚರಣೆಯಂದು ಸರ್ಕಾರದ ವತಿಯಿಂದ ನಡೆಸುವ ಎಲ್ಲ ಕಾರ್ಯ-ಕ್ರಮಗಳಲ್ಲಿ ಮಹಾತ್ಮ ಗಾಂಧಿ ಅವರ ಭಾವಚಿತ್ರದೊಂದಿಗೆ, ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರವನ್ನೂ ಕಡ್ಡಾಯವಾಗಿ ಇರಿಸಬೇಕು ಎಂದು ರಾಜ್ಯ ಸರ್ಕಾರ ಸೂಚಿಸಿದೆ.

ಎಲ್ಲ ಸರ್ಕಾರಿ ಕಚೇರಿಗಳು, ಸರ್ಕಾರಿ ಸ್ವಾಮ್ಯಕ್ಕೆ ಒಳಪಟ್ಟ ಸಂಸ್ಥೆಗಳು, ಶಾಲಾ ಕಾಲೇಜುಗಳಿಗೂ ಇದು ಅನ್ವಯವಾಗುತ್ತದೆ. ನವೆಂಬರ್ 26ರಂದು ನಡೆಯುವ ಸಂವಿಧಾನದ ದಿನಾಚರಣೆ ಕಾರ್ಯ-ಕ್ರಮಗಳಲ್ಲೂ ಈ ಸೂಚನೆಯನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಸುತ್ತೋಲೆ ಹೇಳಿದೆ.

ಗೋದಾವರಿ–ಕೃಷ್ಣಾ–ಕಾವೇರಿ ನದಿಗಳ ಜೋಡಿಸುವ ಯೋಜನೆ

ರಾಜ್ಯಕ್ಕೆ ಬರೀ 2.19 ಟಿಎಂಸಿ ಅಡಿ ನೀರು!

• ಮಂಜುನಾಥ ಹೆಬ್ಬಾರ್

ನವದೆಹಲಿ: ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಮಹಾನದಿ–ಗೋದಾವರಿ–ಕೃಷ್ಣಾ–ಕಾವೇರಿ– ಪೆನ್ನಾರ್ ನದಿಗಳ ಜೋಡಣೆಯಿಂದ ಕರ್ನಾಟಕ ರಾಜ್ಯಕ್ಕೆ ನೈಜವಾಗಿ ಸಿಗುವುದು 2.19 ಟಿಎಂಸಿ ಅಡಿ ನೀರು ಮಾತ್ರ.

ನೀರು ಹಂಚಿಕೆ (ನೀರಾವರಿ ಸೇರಿ)

ರಾಜ್ಯ	ಟಿಎಂಸಿ ಅಡಿ	ಶೇ
ತೆಲಂಗಾಣ	45	30.46
ಆಂಧ್ರಪ್ರದೇಶ	43.61	29.65
ಕರ್ನಾಟಕ	15.89	10.74
ಪುದುಚೇರಿ	2.18	1.48

ನೀರಿನ ಹಂಚಿಕೆಯಲ್ಲಿ ಭಾರಿ ಅನ್ಯಾಯವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿರುವ ಕರ್ನಾಟಕ ಸರ್ಕಾರ, ಈ ತಾರತಮ್ಯ ಸರಿಪಡಿಸದಿದ್ದರೆ ಕರಡು ಒಪ್ಪಂದಕ್ಕೆ ಸಹಿ ಹಾಕುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ರಾಜ್ಯವಾರು ನೀರಿನ ಹಂಚಿಕೆಯನ್ನು ಪುನರ್ ಪರಿಶೀಲಿಸಬೇಕು ಎಂದು ಆಗ್ರಹಿಸಿ ಜಲಸಂಪನ್ಮೂಲ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ರಾಷ್ಟ್ರೀಯ ಜಲ ಅಭಿವೃದ್ಧಿ ಸಂಸ್ಥೆಯ ಮಹಾನಿರ್ದೇಶಕರಿಗೆ ಜೂನ್ 19ರಂದು ಪತ್ರ ಬರೆದಿದ್ದಾರೆ.

ಮಹಾನದಿ–ಗೋದಾವರಿ ಕಣಿವೆಯ ಹೆಚ್ಚುವರಿ 7 ಸಾವಿರ ಮಿಲಿಯನ್ ಕ್ಯೂಬಿಕ್ ಮೀಟರ್ (ಎಂಸಿಎಂ) ನೀರನ್ನು ಕೃಷ್ಣಾ, ಪೆನ್ನಾರ್ ಹಾಗೂ ಕಾವೇರಿ ಕಣಿವೆಯ ಭಾಗಕ್ಕೆ ಹರಿಸಿ 9.44 ಲಕ್ಷ ಹೆಕ್ಟೇರ್ ಭೂಮಿಗೆ ನೀರುಣಿಸಲು ಸಂಸ್ಥೆ ಪ್ರಸ್ತಾವ ಸಿದ್ಧಪಡಿಸಿತ್ತು. ಬಳಿಕ ಬೇಡ್ತಿ–ವರದಾ ನದಿಗಳ ಜೋಡಣೆಯನ್ನು ಈ ಪ್ರಸ್ತಾವದಲ್ಲಿ ಸೇರಿಸಲಾಗಿತ್ತು. ರಾಜ್ಯಗಳ ಜತೆಗೆ ಸಮಾಲೋಚಿಸಿ ಬಳಿಕ ಪರಿಷ್ಕೃತ ಪ್ರಸ್ತಾವ ಸಿದ್ಧಪಡಿಸಲಾಗಿತ್ತು. ಹೆಚ್ಚುವರಿ ನೀರಿನ ವರ್ಗಾವಣೆ ಪ್ರಮಾಣವನ್ನು 7 ಸಾವಿರ ಎಂಸಿಎಂನಿಂದ 4 ಸಾವಿರ ಎಂಸಿಎಂಗೆ ಇಳಿಸಲಾಗಿತ್ತು. ನದಿ ಜೋಡಣೆಯಾದ ಬಳಿಕ ದಕ್ಷಿಣದ ರಾಜ್ಯಗಳಿಗೆ 147 ಟಿಎಂಸಿ ಅಡಿ ನೀರು ಲಭ್ಯವಾಗಲಿದೆ. ರಾಜ್ಯಕ್ಕೆ ಶೇ 10.74ರಷ್ಟು ಪ್ರಮಾಣದ ನೀರು ನಿಗದಿಪಡಿಸಲಾಗಿದೆ.

ಆಂಧ್ರಪ್ರದೇಶ ಹಾಗೂ ತಮಿಳುನಾಡು ರಾಜ್ಯಗಳಿಗೆ ಕುಡಿಯುವ ನೀರು, ಕೈಗಾರಿಕೆ ಹಾಗೂ ನೀರಾವರಿ ಉದ್ದೇಶಕ್ಕೆ ನೀರಿನ ಹಂಚಿಕೆ ಮಾಡಲಾಗಿದೆ. ಆದರೆ, ಕರ್ನಾಟಕಕ್ಕೆ ಕೈಗಾರಿಕೆ ಹಾಗೂ ಕುಡಿಯುವ ನೀರಿನ ಉದ್ದೇಶಕ್ಕೆ ಮಾತ್ರ ಹಂಚಿಕೆ ಆಗಿದೆ. ರಾಜ್ಯಕ್ಕೆ ನೈಜವಾಗಿ 2.19 ಟಿಎಂಸಿ ಅಡಿ ಮಾತ್ರ ಸಿಗಲಿದೆ.

7ನೇ ಪುಟ ನೋಡಿ

ಹಾವೇರಿ ಜಿಲ್ಲಾಸ್ಪತ್ರೆ ವಾರ್ಡ್‌ಗಳು ಭರ್ತಿ: ಜಾಗದ ಕೊರತೆ

ಡೆಂಗಿ ಹಾವಳಿ: ಕಾರಿಡಾರ್‌ನಲ್ಲಿ ಬೆಡ್

• ಸಂತೋಷ ಜಿಗಳಿಕೊಪ್ಪ

ಹಾವೇರಿ: ಜಿಲ್ಲೆಯಲ್ಲಿ ಡೆಂಗಿ ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಇಲ್ಲಿಯ ಜಿಲ್ಲಾ ಆಸ್ಪತ್ರೆ ರೋಗಿಗಳಿಂದ ಭರ್ತಿ ಆಗಿದೆ. ವಾರ್ಡ್‌ಗಳಲ್ಲಿ ಜಾಗದ ಕೊರತೆ ಉಂಟಾಗಿದ್ದು, ಹೊರಭಾಗದ ಕಾರಿಡಾರ್‌ಗಳಲ್ಲಿ (ಪಡಸಾಲೆ) ಬೆಡ್‌ಗಳನ್ನು ಹಾಕಿ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ.

ಜಿಲ್ಲೆಯಲ್ಲಿ ಇದುವರೆಗೂ 481 ಡೆಂಗಿ ಪ್ರಕರಣಗಳು ವರದಿಯಾಗಿವೆ. ಈ ಪೈಕಿ ಹಲವು ರೋಗಿಗಳು ಜಿಲ್ಲಾ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಜಿಲ್ಲಾಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆ ಇರುವುದರಿಂದ, ರೋಗಿಗಳು ಬಹುಬೇಗನೇ ಗುಣಮುಖರಾಗುತ್ತಿದ್ದಾರೆ. ಜಿಲ್ಲಾಸ್ಪತ್ರೆಗೆ ಬರುವವರ ಸಂಖ್ಯೆಯೂ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.

ಡೆಂಗಿ, ಇಲಿ ಜ್ವರ ಹಾಗೂ ಇತರೆ ಗಂಭೀರ ಸ್ವರೂಪದ ಆರೋಗ್ಯ ಸಮಸ್ಯೆ ಎದುರಿಸುತ್ತಿರುವ ಮಕ್ಕಳನ್ನು ಆಸ್ಪತ್ರೆ ಕಟ್ಟಡದ ಎರಡನೇ ಮಹಡಿಯಲ್ಲಿರುವ ತೀವ್ರ ನಿಗಾ ಘಟಕದ ವಾರ್ಡ್‌ನಲ್ಲಿ ದಾಖಲಿಸಿಕೊಳ್ಳಲಾಗುತ್ತಿದೆ. ವಾರ್ಡ್‌ನಲ್ಲಿರುವ ಬೆಡ್‌ಗಳು ಸಂಪೂರ್ಣ ಭರ್ತಿಯಾಗಿದ್ದು, ಹೊರಗಿನ ಕಾರಿಡಾರ್‌ನಲ್ಲಿ ಪ್ರತ್ಯೇಕ ಬೆಡ್‌ಗಳನ್ನು ಹಾಕಿ ರೋಗಿಗಳನ್ನು ಇರಿಸಲಾಗಿದೆ.

ತುರ್ತು ಸ್ಥಿತಿಯಲ್ಲಿ ಹೊಸ ರೋಗಿಗಳು ಬಂದಾಗಲೂ ಕಾರಿಡಾರ್‌ನಲ್ಲಿಯೇ ಬೆಡ್ ಇಟ್ಟು ದಾಖಲಿಸಿಕೊಳ್ಳಲಾಗುತ್ತಿದೆ. 330 ಬೆಡ್ ಸಾಮರ್ಥ್ಯದ ಜಿಲ್ಲಾ ಆಸ್ಪತ್ರೆ ಹಾಗೂ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಸದ್ಯ 380ಕ್ಕೂ ಹೆಚ್ಚು ರೋಗಿಗಳಿದ್ದು, ಹೆಚ್ಚುವರಿಯಾದ ಹಲವು ರೋಗಿಗಳು ಕಾರಿಡಾರ್‌ನ ಬೆಡ್ ಮೇಲೆ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

5ನೇ ಪುಟ ನೋಡಿ



ಹಾವೇರಿ ಜಿಲ್ಲಾಸ್ಪತ್ರೆಯ ವಾರ್ಡ್‌ನ ಹೊರಗಿನ ಕಾರಿಡಾರ್‌ನಲ್ಲಿ (ಪಡಸಾಲೆ) ಹಾಕಿರುವ ಬೆಡ್‌ಗಳ ಮೇಲೆ ರೋಗಿಗಳು ಚಿಕಿತ್ಸೆ ಪಡೆದರು
– ಪ್ರಜಾವಾಣಿ ಚಿತ್ರ / ಮಾಲತೇಶ ಇಚ್ಚಂಗಿ

> **ರೋಗಿಗಳ ಸಂಖ್ಯೆ ಹೆಚ್ಚಿರುವುದರಿಂದ ವಾರ್ಡ್‌ಗಳು ಭರ್ತಿಯಾಗಿವೆ. ಕಾರಿಡಾರ್‌ನ ಬೆಡ್‌ನಲ್ಲಿ ನನ್ನ ಮಗನಿಗೆ ವೈದ್ಯರು ಚಿಕಿತ್ಸೆ ನೀಡುತ್ತಿದ್ದಾರೆ**
> **ರಾಮಪ್ಪ**
> ಚಿಕಿತ್ಸೆ ಪಡೆಯುತ್ತಿರುವ ಬಾಲಕನ ತಂದೆ

> **ತುರ್ತು ಅಗತ್ಯವಿರುವವರಿಗೆ ಬೆಡ್ ಇಲ್ಲವೆಂದು ನಿರಾಕರಿಸುವುದಿಲ್ಲ. ಜಾಗದ ಕೊರತೆ ಇದ್ದರೂ ಕಾರಿಡಾರ್‌ನಲ್ಲಿ ಬೆಡ್ ಇರಿಸಿ ರೋಗಿಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ**
> **ಡಾ. ಪಿ.ಆರ್. ಹಾವನೂರ**
> ಹಾವೇರಿ ಜಿಲ್ಲಾ ಶಸ್ತ್ರ ಚಿಕಿತ್ಸಕ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ವಾಹನಗಳಲ್ಲಿ ಪ್ರಖರ ಬೆಳಕು: 8,244 ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಣ್ಣುಕುಕ್ಕುವ ಎಲ್‌ಇಡಿ ದೀಪಗಳನ್ನು ಅಳವಡಿಕೆ ಮಾಡಿಕೊಂಡಿರುವ ವಾಹನ ಚಾಲಕರ ವಿರುದ್ಧ ಕಾರ್ಯಾಚರಣೆ ನಡೆಸುತ್ತಿರುವ ಪೊಲೀಸರು, ಜುಲೈ 1ರಿಂದ 7ರ ವರೆಗೆ ರಾಜ್ಯದಾದ್ಯಂತ ಒಟ್ಟು 8,244 ಪ್ರಕರಣಗಳನ್ನು ದಾಖಲಿಸಿಕೊಂಡಿದ್ದಾರೆ.

ಎಲ್‌ಇಡಿ ದೀಪಗಳನ್ನು ಅಳವಡಿಸಿಕೊಂಡಿರುವ ಚಾಲಕರ ವಿರುದ್ಧ ಕ್ರಮ ಕೈಗೊಂಡ ಮೊದಲ ರಾಜ್ಯ ಕರ್ನಾಟಕವಾಗಿದೆ ಎಂದು ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ (ಸಂಚಾರ ಮತ್ತು ರಸ್ತೆ ಸುರಕ್ಷತಾ ವಿಭಾಗ) ಅಲೋಕ್ ಕುಮಾರ್ ಅವರು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಮಾಹಿತಿ ನೀಡಿದ್ದಾರೆ.

ಕಾರು, ಬೈಕ್ ಹಾಗೂ ಇತರ ವಾಹನಗಳಲ್ಲಿಕಣ್ಣುಕುಕ್ಕುವಂತಹಎಲ್‌ಇಡಿದೀಪಗಳನ್ನು ಅಳವಡಿಸಿಕೊಂಡು ಅಪಘಾತಕ್ಕೆ ಕಾರಣ ಆಗುತ್ತಿರುವ ಸವಾರ ವಿರುದ್ಧ ಒಂದು ವಾರದಿಂದ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಕೇಂದ್ರ ಮೋಟಾರ್ ಕಾಯ್ದೆ ಉಲ್ಲಂಘಿಸುತ್ತಿರುವ ವಾಹನ ಚಾಲಕರ ವಿರುದ್ಧ ಕ್ರಮ ಕೈಗೊಳ್ಳುತ್ತಿರುವ ಸಿಬ್ಬಂದಿಗಳ ಕಾರ್ಯ ಶ್ಲಾಘನೀಯ ಎಂದಿದ್ದಾರೆ.

ಬಿಬಿಎಂಪಿಗೆ ಪ್ರಸ್ತಾವ ಸಲ್ಲಿಸಿರುವ ನಗರ ಸಂಚಾರ ವಿಭಾಗದ ಪೊಲೀಸರು

66 ಸ್ಥಳಗಳಲ್ಲಿ ಸ್ಕೈವಾಕ್ ನಿರ್ಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹೆಚ್ಚು ಅಪಘಾತಗಳು ಸಂಭವಿಸುತ್ತಿರುವ ಹಾಗೂ ವಾಹನ ದಟ್ಟಣೆ ಹೆಚ್ಚಿರುವ 60ಕ್ಕೂ ಹೆಚ್ಚು ಪ್ರಮುಖ ರಸ್ತೆ ಮತ್ತು ಜಂಕ್ಷನ್‌ಗಳಲ್ಲಿ ಸ್ಕೈವಾಕ್ ನಿರ್ಮಿಸಬೇಕೆಂದು ನಗರ ಸಂಚಾರ ವಿಭಾಗದ ಪೊಲೀಸರು ಬಿಬಿಎಂಪಿಗೆ ಪ್ರಸ್ತಾವ ಸಲ್ಲಿಸಿದ್ದಾರೆ.

ಪಾದಚಾರಿಗಳು ರಸ್ತೆ ದಾಟಲು ಅನುಕೂಲ ಕಲ್ಪಿಸುವ ಹಾಗೂ ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡುವುದಕ್ಕಾಗಿ ಸ್ಕೈವಾಕ್ ನಿರ್ಮಿಸುವಂತೆ ಪ್ರಸ್ತಾವದಲ್ಲಿ ಶಿಫಾರಸು ಮಾಡಲಾಗಿದೆ.

ಜಾಲಹಳ್ಳಿ, ಗೊರಗುಂಟೆಪಾಳ್ಯ, ಎಸ್‌ಆರ್‌ಎಸ್ ಜಂಕ್ಷನ್ ಸೇರಿ 30 ಸಂಚಾರ ಪೊಲೀಸ್ ಠಾಣೆಗಳ ವ್ಯಾಪ್ತಿಯಲ್ಲಿ ಸಂಚಾರ ದಟ್ಟಣೆಯಿರುವ 66 ಸ್ಥಳಗಳನ್ನು ಸ್ಕೈವಾಕ್ ನಿರ್ಮಿಸಲು ಉದ್ದೇಶಿಸಲಾಗಿದೆ.

ಈ ವರ್ಷದ ಜನವರಿಯಲ್ಲಿ ಇದೇ ರೀತಿಯ ಸಂಚಾರ ದಟ್ಟಣೆಯ ಸ್ಥಳಗಳನ್ನು ನಗರ ಸಂಚಾರ ಪೊಲೀಸರು ಗುರುತಿಸಿದ್ದರು. ಅದರಲ್ಲಿ 11 ಸ್ಥಳಗಳನ್ನು 'ಬ್ಲ್ಯಾಕ್ ಸ್ಪಾಟ್' ಎಂದು ಉಲ್ಲೇಖಿಸಿದ್ದರು. ಈ ಸ್ಥಳಗಳಲ್ಲಿ ಹೆಚ್ಚು ಅಪಘಾತಗಳು ಸಂಭವಿಸಿದ್ದು, ವಾಹನ ಸಂಚಾರಕ್ಕೂ ಅಡೆತಡೆಯಾಗುತ್ತಿದೆ. ಹೀಗಾಗಿ, ಇಲ್ಲಿ ಸ್ಕೈವಾಕ್‌ಗಳನ್ನು ನಿರ್ಮಿಸುವಂತೆ ಬಿಬಿಎಂಪಿಗೆ ಪ್ರಸ್ತಾವ ಸಲ್ಲಿಸಲಾಗಿತ್ತು.



ಹೆಚ್ಚು ಅಪಘಾತಗಳು ಸಂಭವಿಸಿರುವ ಹಾಗೂ ದಟ್ಟಣೆಯಿರುವ ಸ್ಥಳಗಳನ್ನು ಸ್ಕೈವಾಕ್ ನಿರ್ಮಾಣಕ್ಕೆ ಗುರುತಿಸಿದ್ದೇವೆ
ಎಂ.ಎನ್.ಅನುಚೇತ್
ಜಂಟಿ ಕಮಿಷನರ್, ಸಂಚಾರ ವಿಭಾಗ

ಮಂದಗತಿ ಕಾಮಗಾರಿ

ಸ್ಕೈವಾಕ್‌ಗಳ ನಿರ್ಮಾಣಕ್ಕೆ ಹೊಸ ಪ್ರಸ್ತಾವ ಸಲ್ಲಿಸುವ ಮುನ್ನವೇ ಅತ್ಯಂತ ದಟ್ಟಣೆ ಪ್ರದೇಶಗಳಲ್ಲಿ ಒಂದಾಗಿರುವ ಜಾಲಹಳ್ಳಿ ಜಂಕ್ಷನ್‌ನಲ್ಲಿ 'ಗ್ರೇಡ್ ಸೆಪರೇಟರ್' ಕಾಮಗಾರಿಗೆ ಚಾಲನೆ ನೀಡಲಾಗಿತ್ತು. ಈಗಲೂ ಕಾಮಗಾರಿ ಕುಂಟುತ್ತಾ ಸಾಗಿದೆ.

ಜಾಲಹಳ್ಳಿಯ ಎಸ್.ಎಂ. ರಸ್ತೆಯಿಂದ ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ (ಜಾಲಹಳ್ಳಿ ಕ್ರಾಸ್) ಸಂಪರ್ಕ ಕಲ್ಪಿಸುವ ಈ ಗ್ರೇಡ್ ಸೆಪರೇಟರ್ ಕಾಮಗಾರಿಗೆ 2019ರಲ್ಲೇ ಯೋಜನೆ ರೂಪಿಸಲಾಗಿತ್ತು. ₹ 57 ಕೋಟಿ ವೆಚ್ಚದ ಕಾಗಾರಿಗೆ ಟೆಂಡರ್ ಪ್ರಕ್ರಿಯೆ ನಡೆಸಿ, 24 ತಿಂಗಳ ಕಾಲಾವಧಿ ನಿಗದಿಪಡಿಸಲಾಗಿತ್ತು. ರಸ್ತೆಯ ಎರಡು ಬದಿಗಳಲ್ಲಿದ್ದ ಕಟ್ಟಡಗಳನ್ನು ತೆರವುಗೊಳಿಸಿದ್ದು ಬಿಟ್ಟರೆ, ಗುರುತಿಸುವಂತಹ ಪ್ರಗತಿ ಕಂಡಿಲ್ಲ ಎಂದು ಸ್ಥಳೀಯರು ದೂರುತ್ತಾರೆ.

'ಸದಾ ವಾಹನಗಳು ಹಾಗೂ ಜನರಿಂದ ಗಿಜಿಗುಡುವ ಈ ಜಂಕ್ಷನ್‌ನಲ್ಲಿ, ಹೆದ್ದಾರಿ ದಾಟಲು ಸರಿಯಾದ ವ್ಯವಸ್ಥೆಯಿಲ್ಲ. ಪಾದಚಾರಿಗಳು ಆತಂಕದಿಂದಲೇ ರಸ್ತೆ ದಾಟುತ್ತಾರೆ. ಹಲವು ವರ್ಷಗಳಿಂದಲೂ ಈ ಸಮಸ್ಯೆಗೆ ಮುಕ್ತಿಯೇ ಸಿಕ್ಕಿಲ್ಲ' ಎಂದು ಬೇಸರ ವ್ಯಕ್ತಪಡಿಸುತ್ತಾರೆ.

ಕಳೆದ ವಿಧಾನಸಭಾ ಚುನಾವಣೆಗೆ ಮುನ್ನ ಜಾಲಹಳ್ಳಿ ಕ್ರಾಸ್‌ನಲ್ಲಿ ಅಂಡರ್‌ಪಾಸ್ ನಿರ್ಮಾಣಕ್ಕಾಗಿ ರಸ್ತೆ ಪಕ್ಕದ ಕೆಲವು ಕಟ್ಟಡಗಳನ್ನು ತೆರವುಗೊಳಿಸಲಾಯಿತು. ಚುನಾವಣೆ ನಂತರ ಕೆಲಸ ಮುಂದುವರಿಸಲಿಲ್ಲ. ವಾಹನ ದಟ್ಟಣೆಯ ಟ್ರಾಫಿಕ್ ಸಮಸ್ಯೆ ಹೆಚ್ಚಾಗುತ್ತಿದೆ. ಬೇಗ ಅಂಡರ್‌ಪಾಸ್ ನಿರ್ಮಾಣವಾಗಬೇಕು
ವಿನಯ್ (ಅನಿಲ್), ಮೆಡಿಕಲ್ ಸ್ಟೋರ್ ಉದ್ಯೋಗಿ, ಜಾಲಹಳ್ಳಿ ಕ್ರಾಸ್

ಪೊಲೀಸರ ಸಲಹೆ ಮೇರೆಗೆ, 11 ಸ್ಥಳಗಳಲ್ಲಿ ಸ್ಕೈವಾಕ್‌ಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲು ಬಿಬಿಎಂಪಿ ಟೆಂಡರ್ ಆಹ್ವಾನಿಸಿತ್ತು. ಮೂರು ತಿಂಗಳಲ್ಲಿ ವರದಿ ನೀಡುವಂತೆಯೂ ಸೂಚಿಸಿತ್ತು. ಈವರೆಗೆ ವರದಿ ಸಲ್ಲಿಕೆಯಾಗಿಲ್ಲ. ಸ್ಕೈವಾಕ್ ನಿರ್ಮಾಣ ಕಾಮಗಾರಿಯೂ ಆರಂಭವಾಗಿಲ್ಲ. ಈ ನಡುವೆ ಹೊಸದಾಗಿ 66 ಕಡೆಗಳಲ್ಲಿ ಸ್ಕೈವಾಕ್ ನಿರ್ಮಿಸಲು ನಗರ ಸಂಚಾರ ಪೊಲೀಸರು ಮತ್ತೊಂದು ಪ್ರಸ್ತಾವವನ್ನು ಬಿಬಿಎಂಪಿಗೆ ಸಲ್ಲಿಸಿದ್ದಾರೆ.

'ತುಮಕೂರು ರಸ್ತೆಯಲ್ಲಿ ಗೊರಗುಂಟೆಪಾಳ್ಯ, ಎಸ್‌ಆರ್‌ಎಸ್ ಜಂಕ್ಷನ್, ಜಾಲಹಳ್ಳಿ ವೃತ್ತದಲ್ಲಿ ಹೆಚ್ಚು ದಟ್ಟಣೆಯಿದೆ. ಪಾದಚಾರಿಗಳು ರಸ್ತೆ ದಾಟುವುದಕ್ಕೆ ಸಾಹಸಪಡುತ್ತಾರೆ. ಈ ಸ್ಥಳಗಳಲ್ಲಿ ಕೆಳಸೇತುವೆ ಅಥವಾ ಸ್ಕೈವಾಕ್ ಅಗತ್ಯವಿದೆ' ಎಂದು ನಗರ ಸಂಚಾರ ಪೊಲೀಸ್ ವಿಭಾಗದ ಜಂಟಿ ಕಮಿಷನರ್ ಎಂ.ಎನ್.ಅನುಚೇತ್ ತಿಳಿಸಿದರು.

ನರ್ಸಿಂಗ್ ವಿದ್ಯಾರ್ಥಿನಿ ಆತ್ಮಹತ್ಯೆ

ಬೆಂಗಳೂರು: ಹಾಸ್ಟೆಲ್‌ನಲ್ಲಿ ನೆಲೆಸಿದ್ದ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿನಿ ದಿಯಾ ಮಂಡೋಲ್(21) ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಪಶ್ಚಿಮ ಬಂಗಾಳದ ದಿಯಾ ಜಾಲಹಳ್ಳಿಯ ಮದರ್ ಥೆರೆಸಾ ನರ್ಸಿಂಗ್ ಕಾಲೇಜಿನಲ್ಲಿ ಓದುತ್ತಿದ್ದರು. 2 ದಿನಗಳ ಹಿಂದೆ ಹಾಸ್ಟೆಲ್‌ನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದು ಪೊಲೀಸರು ಹೇಳಿದರು.

'ಕೌಟುಂಬಿಕ ಕಲಹದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬಸ್ಥರಿಗೆ ಮೃತದೇಹ ಹಸ್ತಾಂತರಿಸಲಾಗಿದೆ. ಪ್ರಕರಣದ ತನಿಖೆ ನಡೆಯುತ್ತಿದೆ' ಎಂದು ಪೊಲೀಸರು ಹೇಳಿದರು.

ನಕಲಿ ದಾಖಲೆ: ₹2.32 ಕೋಟಿ ಸಾಲ

ಐವರ ವಿರುದ್ಧ ಎಫ್‌ಐಆರ್ ದಾಖಲಿಸಿದ ಸಿಸಿಬಿ ಪೊಲೀಸರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿವೇಶನ ಖರೀದಿಸುವ ಸೋಗಿನಲ್ಲಿ ಬ್ಯಾಂಕ್‌ಗೆ ನಕಲಿ ದಾಖಲೆ ಸಲ್ಲಿಸಿ ಸಾಲ ಪಡೆದಿದ್ದ ಐವರ ವಿರುದ್ಧ ಸಿಸಿಬಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಬೆಂಗಳೂರು ಕೇಂದ್ರ ಶಾಖೆಯ (ಬೌರಿಂಗ್ ಆಸ್ಪತ್ರೆ ಎದುರು) ಸಹಾಯಕ ಪ್ರಧಾನ ವ್ಯವಸ್ಥಾಪಕ ದೊರೈರಾಜು ಅವರು ನೀಡಿರುವ ದೂರು ಆಧರಿಸಿ ಅನ್ವಯ ಶಿವಣ್ಣ, ಪಿ.ಅಚ್ಚುಕುಟ್ಟನ್, ಮೊಹಮ್ಮದ್ ಫಯಾಜ್, ವೀರಭದ್ರಪ್ಪ ಹಾಗೂ ಸೈಯದ್ ಹಾಶೀಂ ಎಂಬುವವರ ವಿರುದ್ಧ ಪ್ರಕರಣ ದಾಖಲಾಗಿದೆ.

ನಿವೇಶನ ಖರೀದಿಗಾಗಿ ₹2.32 ಕೋಟಿ ಸಾಲ ಪಡೆದಿದ್ದ ಆರೋಪದಡಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಸಿಸಿಬಿ ಪೊಲೀಸರು ಹೇಳಿದರು.

ಬೆಂಗಳೂರು ಉತ್ತರ ತಾಲ್ಲೂಕಿನ ಮಲ್ಲತ್ತಹಳ್ಳಿ ಗ್ರಾಮದಲ್ಲಿ ಶಿವಣ್ಣ ಅವರಿಗೆ ಸೇರಿದ ನಿವೇಶನ ಖರೀದಿಸಲು ಸಾಲಕ್ಕಾಗಿ ಬ್ಯಾಂಕ್‌ಗೆ ಅಚ್ಚುಕುಟ್ಟನ್ ಅವರು ಅರ್ಜಿ ಸಲ್ಲಿಸಿದ್ದರು. 2023ರ ಜನವರಿಯಲ್ಲಿ ₹1.16 ಕೋಟಿ ಸಾಲ ಮಂಜೂರು ಆಗಿತ್ತು. ಸಾಲ ಮರುಪಾವತಿ ಮಾಡದಿದ್ದಾಗ ಬ್ಯಾಂಕ್‌ನಿಂದ ಅಚ್ಚುಕುಟ್ಟನ್ ಅವರಿಗೆ ನೋಟಿಸ್ ಜಾರಿ ಮಾಡಲಾಗಿತ್ತು. ನೋಟಿಸ್ ಸ್ವೀಕೃತಿಯಾಗದೇ ವಾಪಸ್ ಬಂದಿತ್ತು. ಅದಾದ ಮೇಲೆ ಬ್ಯಾಂಕ್ ಅಧಿಕಾರಿಗಳು ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದಾಗ ನಿವೇಶನ ಬೇರೆಯವರ ಹೆಸರಿನಲ್ಲಿ ಇರುವುದು ಪತ್ತೆಯಾಗಿದೆ ಎಂದು ಮೂಲಗಳು ತಿಳಿಸಿವೆ.

'ಇದೇ ರೀತಿ ಆರೋಪಿ ಮೊಹಮ್ಮದ್ ಫಯಾಜ್ ಎಂಬುವವರೂ ಶಿವಣ್ಣ ಅವರಿಗೆ ಸೇರಿದ ನಿವೇಶನ ಖರೀದಿಸಲು ಸಾಲಕ್ಕಾಗಿ ಅರ್ಜಿ ಸಲ್ಲಿಸಿ ₹ 1.16 ಕೋಟಿ ಸಾಲ ಪಡೆದುಕೊಂಡಿದ್ದರು. ಅವರಿಗೂ ನೋಟಿಸ್ ನೀಡಿದ್ದು ಸ್ವೀಕೃತವಾಗದೇ ವಾಪಸ್ ಬಂದಿತ್ತು. ಅವರೂ ನಕಲಿ ದಾಖಲೆ ಸೃಷ್ಟಿಸಿ ಸಾಲ ಪಡೆದಿದ್ದಾರೆ' ಎಂಬುದು ಗೊತ್ತಾಗಿದೆ' ಎಂದರು.

ಎಟಿಎಂ ಧ್ವಂಸ: ₹16.56 ಲಕ್ಷ ದರೋಡೆ

ಬೆಂಗಳೂರು: ಸರ್ಜಾಪುರ ರಸ್ತೆಯ ದೊಡ್ಡಕನ್ನಹಳ್ಳಿಯಲ್ಲಿರುವ ಆ್ಯಕ್ಸಿಸ್ ಬ್ಯಾಂಕ್‌ನ ಎಟಿಎಂ ಕೇಂದ್ರಕ್ಕೆ ನುಗ್ಗಿದ ದರೋಡೆಕೋರರು, ಎಟಿಎಂ ಯಂತ್ರ ಧ್ವಂಸಗೊಳಿಸಿ ₹16.56 ಲಕ್ಷ ದರೋಡೆ ಮಾಡಿಕೊಂಡು ಪರಾರಿ ಆಗಿದ್ದಾರೆ.

'ಮುಖಕ್ಕೆ ಬೆಡ್‌ಶೀಟ್ ಸುತ್ತಿಕೊಂಡು ಎಟಿಎಂ ಕೇಂದ್ರಕ್ಕೆ ನುಗ್ಗಿ ದರೋಡೆ ನಡೆಸಲಾಗಿದೆ. ಆರೋಪಿಗಳ ಪತ್ತೆಗಾಗಿ ಮೂರು ವಿಶೇಷ ತನಿಖಾ ತಂಡ ರಚಿಸಲಾಗಿದೆ' ಎಂದು ಪೊಲೀಸರು ಹೇಳಿದರು.

ಸಿಸಿಟಿವಿ ಕ್ಯಾಮೆರಾಗಳಿಗೆ ಕಪ್ಪು ಸ್ಪ್ರೇ: 'ಭಾನುವಾರ ಬೆಳಿಗ್ಗೆ 6 ಗಂಟೆಗೆ ಸುಮಾರಿಗೆ ದರೋಡೆಕೋರರು ಎಟಿಎಂ ಕೇಂದ್ರಕ್ಕೆ ನುಗ್ಗಿದ್ದಾರೆ. ಬಳಿಕ, ಕೇಂದ್ರದಲ್ಲಿರುವ ಎರಡು ಸಿಸಿಟಿವಿ ಕ್ಯಾಮೆರಾಗಳಿಗೆ ಕಪ್ಪು ಬಣ್ಣದ ಸ್ಪ್ರೇ ಸಿಂಪಡಿಸಿದ್ದಾರೆ. ಗ್ಯಾಸ್ ಕಟರ್‌ನಿಂದ ಎಟಿಎಂ ಯಂತ್ರದ ಕ್ಯಾಶ್ ಬಾಕ್ಸ್ ತೆರೆದು, ಅದರಲ್ಲಿದ್ದ ಹಣ ದೋಚಿ ಪರಾರಿಯಾಗಿದ್ದಾರೆ. ಆರೋಪಿಗಳು ಬೆಡ್‌ಶೀಟ್ ಸುತ್ತಿಕೊಂಡು ಎಟಿಎಂ ಕೇಂದ್ರಕ್ಕೆ ನುಗ್ಗಿರುವುದು, ಸಿಸಿಟಿವಿ ಕ್ಯಾಮೆರಾಕ್ಕೆ ಆರೋಪಿಗಳು ಕಪ್ಪು ಬಣ್ಣದ ಸ್ಪ್ರೇ ಸಿಂಪಡಿಸಿರುವುದು, ಕ್ಯಾಮೆರಾಗಳಲ್ಲಿ ಸೆರೆಯಾಗಿದೆ' ಎಂದು ಪೊಲೀಸರು ತಿಳಿಸಿದರು. 'ಉತ್ತರ ಭಾರತ ಮೂಲದ ಇಬ್ಬರು ಆರೋಪಿಗಳು ಕೃತ್ಯ ಎಸಗಿದ್ದಾರೆ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಆರೋಪಿಗಳು ಬಂದಿದ್ದ ಕಾರಿನ ಮಾಹಿತಿ ಪತ್ತೆ ಹಚ್ಚಿದಾಗ ಅದು ಸಹ ಕಳವು ನಡೆಸಿರುವುದೆಂದು ಗೊತ್ತಾಗಿದೆ' ಎಂದರು ಪೊಲೀಸರು. ಬೆಳ್ಳಂದೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಪರಾಧ ಸುದ್ದಿ

ಮದ್ಯದ ಅಮಲಿನಲ್ಲಿ ಗಲಾಟೆ: ವ್ಯಕ್ತಿ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾರ್ಟಿ ನಡೆಸುತ್ತಿದ್ದ ವೇಳೆ ನಡೆದ ಗಲಾಟೆಯಲ್ಲಿ ವ್ಯಕ್ತಿಯೊಬ್ಬರನ್ನು ಕೊಲೆ ಮಾಡಲಾಗಿದ್ದು, ಈ ಸಂಬಂಧ ಕೋಣನಕುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನೇಪಾಳದ ಬಾಲಾಜಿ(43) ಕೊಲೆಯಾದ ವ್ಯಕ್ತಿ. ನಿರ್ಮಾಣ ಹಂತದಲ್ಲಿರುವ ಕೊತ್ತನೂರು ಸಮುದಾಯ ಭವನ ಕಟ್ಟಡದಲ್ಲಿ ಭಾನುವಾರ ಮಧ್ಯರಾತ್ರಿ 12ರ ಸುಮಾರಿಗೆ ಕೃತ್ಯ ನಡೆದಿದೆ. ಇಬ್ಬರು ಆರೋಪಿಗಳು ಪರಾರಿಯಾಗಿದ್ದಾರೆ ಎಂದು ಪೊಲೀಸರು ಹೇಳಿದರು.

ಕೊಲೆಯಾದ ಬಾಲಾಜಿ ದಿನಗೂಲಿ ಕೆಲಸಗಾರನಾಗಿದ್ದರು. ಹಲವು ವರ್ಷಗಳ ಹಿಂದೆ ಕುಟುಂಬದ ಸದಸ್ಯರ ಜತೆಗೆ ನಗರಕ್ಕೆ ಬಂದು ನೆಲೆಸಿದ್ದರು. ತಂದೆ–ತಾಯಿ ಕೊತ್ತನೂರಿನಲ್ಲಿ ನೆಲೆಸಿದ್ದರೆ, ಪತ್ನಿ ವರ್ತೂರಿನಲ್ಲಿ ನೆಲೆಸಿದ್ದಾರೆ. ಬಾಲಾಜಿ ಅವರಿಗೆ ಮದ್ಯ ಸೇವನೆಯ ಅಭ್ಯಾಸವಿತ್ತು. ರಾತ್ರಿ ಮನೆಗೆ ಬಾರದೆ ಕೊತ್ತನೂರು ಭಾಗದಲ್ಲಿ ಎಲ್ಲೆಂದರಲ್ಲಿ ಮಲಗುತ್ತಿದ್ದರು ಎಂದು ಪೊಲೀಸರು ಹೇಳಿದರು.

ಕೊತ್ತನೂರಿನ ನಿರ್ಮಾಣ ಹಂತದ ಸಮುದಾಯ ಭವನದ ಕಟ್ಟಡದಲ್ಲಿ ಭಾನುವಾರ ರಾತ್ರಿ ಬಾಲಾಜಿ ಹಾಗೂ ಇಬ್ಬರು ಸ್ನೇಹಿತರು ಮದ್ಯದ ಪಾರ್ಟಿ ನಡೆಸುತ್ತಿದ್ದರು. ಈ ವೇಳೆ ಜಗಳ ನಡೆದಿದೆ. ಸ್ನೇಹಿತರಿಬ್ಬರು ಬಾಲಾಜಿ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿದ್ದರು. ಕಿರುಚಾಟ ಗಮನಿಸಿದ್ದ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದರು. ಸ್ಥಳಕ್ಕೆ ಬಂದಿದ್ದ ಪೊಲೀಸರು ರಕ್ತದ ಮಡುವಿನಲ್ಲಿ ಬಿದ್ದಿದ್ದ ಬಾಲಾಜಿ ಅವರನ್ನು ನಿಮ್ಹಾನ್ಸ್ ಆಸ್ಪತ್ರೆಗೆ ಕರೆದೊಯ್ದಿದ್ದರು. ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಸೋಮವಾರ ಮುಂಜಾನೆ ಅವರು ಮೃತಪಟ್ಟಿದ್ದಾರೆ ಎನ್ನಲಾಗಿದೆ. 'ಕೊಲೆಗೆ ಕಾರಣ ಗೊತ್ತಾಗಿಲ್ಲ. ಆರೋಪಿಗಳನ್ನು ಬಂಧಿಸಿದ ನಂತರ ಕಾರಣ ತಿಳಿಯಲಿದೆ. ಕೃತ್ಯ ಎಸಗಿದವರ ಪತ್ತೆಗೆ ಶೋಧ ಕಾರ್ಯ ಮುಂದುವರೆದಿದೆ' ಎಂದು ಪೊಲೀಸರು ಹೇಳಿದರು.

ಕೋಣನಕುಂಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುದ್ದಿ 2 ನಿಮಿಷ

77 ಕೈದಿಗಳ ಬಿಡುಗಡೆ ಇಂದು

ಬೆಂಗಳೂರು: ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ಇರುವ 77 ಸಜಾ ಕೈದಿಗಳನ್ನು ಮಂಗಳವಾರ ಸನ್ನಡತೆ ಆಧಾರದ ಮೇಲೆ ಬಿಡುಗಡೆ ಮಾಡಲಾಗುತ್ತಿದೆ.

ಜೈಲಾಧಿಕಾರಿಗಳು ಹಾಗೂ ಸರ್ಕಾರದ ಶಿಫಾರಸು ಮೇರೆಗೆ ಸನ್ನಡತೆ ತೋರಿದ್ದ 77 ಕೈದಿಗಳ ಅವಧಿಪೂರ್ವ ಬಿಡುಗಡೆಗೆ ರಾಜ್ಯಪಾಲರು ಅನುಮತಿ ನೀಡಿದ್ದರು ಎಂದು ಗೊತ್ತಾಗಿದೆ.

ಬೆಂಗಳೂರು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಿಂದ 34, ಮೈಸೂರು ಕೇಂದ್ರ ಕಾರಾಗೃಹದಿಂದ 7, ಬೆಳಗಾವಿ ಕೇಂದ್ರ ಕಾರಾಗೃಹದಿಂದ 5, ಕಲಬುರಗಿ ಕೇಂದ್ರ ಕಾರಾಗೃಹದಿಂದ ಒಂಬತ್ತು, ವಿಜಯಪುರ ಕೇಂದ್ರ ಕಾರಾಗೃಹದಿಂದ ಆರು, ಬಳ್ಳಾರಿ ಕೇಂದ್ರ ಕಾರಾಗೃಹದಿಂದ 10, ಧಾರವಾಡ ಜೈಲಿನಿಂದ ಆರು ಕೈದಿಗಳನ್ನು ಬಿಡುಗಡೆ ಮಾಡಲಾಗುತ್ತಿದೆ.

ಕೈದಿಗಳು ವಿವಿಧ ಕಾರಾಗೃಹಗಳಲ್ಲಿ ಹಲವು ವರ್ಷಗಳ ಕಾಲ ಕಾರಾಗೃಹ ವಾಸಿಗಳಾಗಿದ್ದರು. ಮನಃಪರಿವರ್ತನೆ ಹೊಂದಿ ಸಮಾಜದಲ್ಲಿ ಉತ್ತಮ ನಾಗರಿಕನಾಗಿ ಬದುಕಬೇಕೆಂಬ ಆಶಯದೊಂದಿಗೆ ಬಿಡುಗಡೆ ಮಾಡಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಮಂಗಳವಾರ ಬೆಳಿಗ್ಗೆ ಪರಪ್ಪನ ಅಗ್ರಹಾರ ಕಾರಾಗೃಹದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಗೃಹ ಸಚಿವ ಜಿ. ಪರಮೇಶ್ವರ ಅವರು ಭಾಗವಹಿಸಲಿದ್ದಾರೆ.

ಪಠ್ಯಗಳಲ್ಲಿ ಕೆಂಪೇಗೌಡರ ಕೊಡುಗೆ ಪರಿಚಯಿಸಿ: ಸ್ವಾಮೀಜಿ



ಕೆಂಗೇರಿ: 'ಪ್ರಾಥಮಿಕ ಶಾಲೆಯಿಂದ ಉನ್ನತ ಶಿಕ್ಷಣದವರೆಗಿನ ಪಠ್ಯ ಪುಸ್ತಕಗಳಲ್ಲಿ ಕೆಂಪೇಗೌಡರ ಕೊಡುಗೆಯನ್ನು ಪರಿಚಯಿಸುವ ಪಠ್ಯವಿರಬೇಕು. ಸರ್ಕಾರಿ ಕಚೇರಿಗಳಲ್ಲಿ ಕಡ್ಡಾಯವಾಗಿ ಕೆಂಪೇಗೌಡರ ಭಾವಚಿತ್ರ ಪ್ರದರ್ಶಿಸಬೇಕು' ಎಂದು ಪಟ್ಟನಾಯಕನಹಳ್ಳಿಯ ಸ್ಫಟಿಕಪುರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ನಂಜಾವಧೂತ ಸ್ವಾಮೀಜಿ ಒತ್ತಾಯಿಸಿದರು.

ಮಾಗಡಿ ರಸ್ತೆ ತಾವರೆಕೆರೆಯಲ್ಲಿ ನಡೆದ ನಾಡಪ್ರಭು ಕೆಂಪೇಗೌಡರ 515ನೆಯ ಜಯಂತ್ಯುತ್ಸವದಲ್ಲಿ ಅವರು ಮಾತನಾಡಿದರು.

'ನಾಡಪ್ರಭು ಕೆಂಪೇಗೌಡರು ಕೇವಲ ಸಾಮಂತ ಅರಸರಂತೆ ಸೀಮಿತ ಚೌಕಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತಿರಲಿಲ್ಲ. ನಾಡಿನ ಏಳ್ಗೆಗಾಗಿ ಕೆರೆ ಕಟ್ಟೆ ನಿರ್ಮಾಣಕ್ಕೆ ಆದ್ಯತೆ ನೀಡಿದರು. ದೇಗುಲಗಳ ನಿರ್ಮಾಣ ಮಾಡಿದರು. ಸರ್ವ ಜನಾಂಗದವರಿಗೂ ಸ್ವಾಭಿಮಾನದಿಂದ ಬದುಕುವ ಅವಕಾಶ ಕಲ್ಪಿಸಿದರು' ಎಂದು ಹೇಳಿದರು.

ತಾವರೆಕೆರೆಯಲ್ಲಿ ಕೆಂಪೇಗೌಡರ ಬೃಹತ್ ಪುತ್ಥಳಿಯನ್ನು ನಿರ್ಮಿಸುವುದರ ಮೂಲಕ ಎಲ್ಲ ಸಮುದಾಯದವರು ಒಮ್ಮತದಿಂದ ಕೆಂಪೇಗೌಡರ ಜಯಂತಿಯನ್ನು ಆಚರಿಸಬೇಕು ಎಂದು ಸಲಹೆ ನೀಡಿದರು. ತಾವರೆಕೆರೆ ಕಾಳಪ್ಪ ಸ್ವಾಮಿ ಮಠದ ರೇವಣಸಿದ್ದಯ್ಯ ಸ್ವಾಮೀಜಿ, ತಾವರೆಕೆರೆ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ಕೆಂಪೇಗೌಡ, ಗ್ರಾಮಸ್ಥರಾದ ಟಿ.ಎಲ್ ಚಂದ್ರಶೇಖರ್, ಶಂಕರೇಗೌಡ, ಟಿ.ಎ. ಮೂರ್ತಿ, ಗಂಗನರಸಯ್ಯ, ಶಿಕ್ಷಕ ಚಿಕ್ಕವೀರಯ್ಯ, ಲಕ್ಷ್ಮೀಶ್ ಗೌಡ, ವೆಂಕಟೇಶ್, ಎಸ್‌ಎಲ್‌ಎನ್ ನವೀನ್, ಕಾಂತರಾಜು ಮತ್ತಿತರರು ಉಪಸ್ಥಿತರಿದ್ದರು.

ಮಹಿಳೆಗೆ ಮರ್ಮಾಂಗ ತೋರಿಸಿ ಅಸಭ್ಯ ವರ್ತನೆ: ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ



ಅಯೂಬ್ ರೆಹಮಾನ್

ಬೆಂಗಳೂರು: ರಸ್ತೆಯಲ್ಲಿ ನಡೆದು ತೆರಳುತ್ತಿದ್ದ ಮಹಿಳೆಯೊಬ್ಬರಿಗೆ ಮರ್ಮಾಂಗ ತೋರಿಸಿ ಅಸಭ್ಯವಾಗಿ ವರ್ತಿಸಿದ್ದ ಆರೋಪಿಯನ್ನು ವಿ.ವಿ ಪುರಂ ಠಾಣೆ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

ಅಯೂಬ್ ರೆಹಮಾನ್(48) ಬಂಧಿತ ಆರೋಪಿ.

'ಭಾನುವಾರ ಮಧ್ಯಾಹ್ನ ವಿ.ವಿ ಪುರಂನ ಮುಖ್ಯರಸ್ತೆಗೆ ಬೈಕ್‌ನಲ್ಲಿ ಬಂದಿದ್ದ ಆರೋಪಿ, ಸಾರ್ವಜನಿಕ ಸ್ಥಳದಲ್ಲಿ ಮಹಿಳೆಗೆ ಮರ್ಮಾಂಗ ತೋರಿಸಿದ್ದ. ಆರೋಪಿಯ ಅಸಭ್ಯ ವರ್ತನೆಯನ್ನು ಸ್ಥಳೀಯರು ತಮ್ಮ ಮೊಬೈಲ್‌ಗಳಲ್ಲಿ ಸೆರೆ ಹಿಡಿದಿದ್ದರು. ಅದು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಅದನ್ನು ವಿ.ವಿ ಪುರಂ ಠಾಣೆ ಪೊಲೀಸರು ಗಮನಿಸಿದ್ದರು. ವಿಡಿಯೊ ಹಾಗೂ ಸಿಸಿ ಟಿ.ವಿ ಕ್ಯಾಮೆರಾಗಳಲ್ಲಿ ಸೆರೆಯಾದ ದೃಶ್ಯವನ್ನು ಪರಿಶೀಲಿಸಿ ಆರೋಪಿಯನ್ನು ಬಂಧಿಸಿದ್ದಾರೆ' ಎಂದು ಮೂಲಗಳು ಹೇಳಿವೆ.

'ಆರೋಪಿ ಕಲಾಸಿಪಾಳ್ಯದಲ್ಲಿ ಟೀ ಅಂಗಡಿ ನಡೆಸುತ್ತಿದ್ದಾನೆ. ಆತನನ್ನು ಬಂಧಿಸಿ ವಿಚಾರಣೆ ನಡೆಸಲಾಗಿದೆ' ಎಂದು ಪೊಲೀಸರು ಹೇಳಿದರು.

ಪುಂಡರ ಹಾವಳಿ: 'ಠಾಣಾ ವ್ಯಾಪ್ತಿಯಲ್ಲಿ ಪುಂಡರ ಹಾವಳಿ ಮಿತಿಮೀರಿದೆ. ಮದ್ಯ ವ್ಯಸನಿಗಳು ಮಹಿಳೆಯರು ಹಾಗೂ ಯುವತಿಯರಿಗೆ ನಿತ್ಯ ಕಿರುಕುಳ ನೀಡುತ್ತಿದ್ದಾರೆ. ಪೊಲೀಸರು ಬಂಧಿಸಿರುವ ಆರೋಪಿ ಹಲವು ದಿನಗಳಿಂದ ಇದೇ ರೀತಿಯ ವರ್ತನೆ ತೋರುತ್ತಿದ್ದ' ಎಂದು ಸ್ಥಳೀಯರು ದೂರಿದ್ದಾರೆ.

ಗೀತ ಗೌರವ ಹಾಗೂ ಅಭಿನಂದನೆ ಕಾರ್ಯಕ್ರಮ

'ಚನ್ನವೀರ ಕಣವಿಗೆ ಜ್ಞಾನಪೀಠ ಸಿಗಬೇಕಿತ್ತು'

ಪ್ರಜಾವಾಣಿ ವಾರ್ತೆ


ಬೆಂಗಳೂರು: 'ಜ್ಞಾನಪೀಠ ಪ್ರಶಸ್ತಿಯಿಂದ ವಂಚಿತರಾದ ಶ್ರೇಷ್ಠ ಕನ್ನಡ ಸಾಹಿತಿಗಳಲ್ಲಿ ಚನ್ನವೀರ ಕಣವಿ ಅವರು ಕೂಡ ಒಬ್ಬರು ಎಂಬುದನ್ನು ಯಾರೂ ಮರೆಯುವಂತಿಲ್ಲ' ಎಂದು ಸಾಹಿತಿ ಎಸ್.ಜಿ. ಸಿದ್ದರಾಮಯ್ಯ ಹೇಳಿದರು.

ಕರ್ನಾಟಕ ಸುಗಮ ಸಂಗೀತ ಪರಿಷತ್ತು ಭಾನುವಾರ ಆಯೋಜಿಸಿದ್ದ 'ಕಾವ್ಯ ಪಾರಿಜಾತ ಸಮನ್ವಯ ಕವಿ ಚನ್ನವೀರ ಕಣವಿ ಹಾಗೂ ಕಾವ್ಯ ಸೌಗಂಧಿಕಾ ಡಾ.ಎಚ್.ಎಸ್. ವೆಂಕಟೇಶಮೂರ್ತಿ–80' ಅವರಿಗೆ ಗೀತ ಗೌರವ ಹಾಗೂ ಅಭಿನಂದನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕನ್ನಡದ ಕೆಲವು ಪ್ರಮುಖ ಕವಿಗಳಿಗೂ ಜ್ಞಾನಪೀಠ ಪ್ರಶಸ್ತಿ ಸಿಗಬೇಕಾಗಿತ್ತು. ಕನ್ನಡ ಸಾಹಿತ್ಯ ಇದುವರೆಗೂ ಸಮೃದ್ಧವಾಗಿ ಬೆಳೆಯುತ್ತಿದ್ದರೆ ಅದಕ್ಕೆ ನಮ್ಮ ಕವಿಗಳ ಕೊಡುಗೆ ಬಹಳಷ್ಟಿದೆ. ಎಲ್ಲ ಸಂಸ್ಕೃತಿಗಳ ತತ್ವ ಸಿದ್ಧಾಂತಗಳ ಸಾರವನ್ನು ಹೀರಿಕೊಂಡು ತಮ್ಮ ಕಾವ್ಯಗಳಲ್ಲಿ ಒಡಮೂಡಿಸಿದ ಕೀರ್ತಿ ಚನ್ನವೀರ ಕಣವಿ ಅವರಿಗೆ ಸಲ್ಲುತ್ತದೆ. ನವೋದಯ ಸಾಹಿತ್ಯ ಕಾಲದಲ್ಲಿ ಭಾವಗೀತೆಗಳು ಹೆಚ್ಚು ರಚನೆಯಾದವು. ನಂತರದ ಸಾಹಿತ್ಯ ಪ್ರಕಾರಗಳಲ್ಲಿ ಹೆಚ್ಚು ಭಾವಗೀತೆಗಳು ರಚನೆಯಾಗಲಿಲ್ಲ' ಎಂದರು.

ಸಾಹಿತಿ ನಾ. ದಾಮೋದರ ಶೆಟ್ಟಿ ಮಾತನಾಡಿ, 'ಎಚ್.ಎಸ್. ವೆಂಕಟೇಶಮೂರ್ತಿ ಅವರ ಬಗ್ಗೆ ಮಾತನಾಡುವುದೇ ಒಂದು ಸೊಗಸು. ಅವರ ಬಹುಪಾಲು ಕಾವ್ಯವನ್ನು ಗಮನಿಸಿದ್ದಲ್ಲಿ ಯಾವುದೇ ಸಂದರ್ಭದಲ್ಲೂ ಏಳು–ಬೀಳುಗಳನ್ನು ಕಾಣಲು ಸಾಧ್ಯವಿಲ್ಲ. ಎಚ್.ಎಸ್.ವೆಂಕಟೇಶಮೂರ್ತಿ ಅವರ ಬುದ್ಧ ಚರಣ ಮಹಾಕಾವ್ಯ ಕನ್ನಡ ಕಾವ್ಯ ಪರಂಪರೆಗೆ ಕೊಟ್ಟ ದೊಡ್ಡ ಕೊಡುಗೆ' ಎಂದು ಹೇಳಿದರು.

ಚನ್ನವೀರ ಕಣವಿ ಹಾಗೂ ಎಚ್.ಎಸ್. ವೆಂಕಟೇಶ್‌ಮೂರ್ತಿ ಅವರು ರಚಿಸಿರುವ ಭಾವಗೀತೆಗಳ ಸಂಗೀತ ಕಛೇರಿಯ ಮೂಲಕ ಗೀತ ಗೌರವ ಸಲ್ಲಿಸಲಾಯಿತು.



ಕಾವ್ಯ ಸೌಗಂಧಿಕಾ ಡಾ.ಎಚ್.ಎಸ್. ವೆಂಕಟೇಶಮೂರ್ತಿ–80' ಅಭಿನಂದನೆ–ಗೀತ ಗೌರವ ಕಾರ್ಯಕ್ರಮದಲ್ಲಿ ಸಾಹಿತಿ ಎಚ್.ಎಸ್. ವೆಂಕಟೇಶಮೂರ್ತಿ ಅವರನ್ನು ಸನ್ಮಾನಿಸಲಾಯಿತು. ಬಿ.ಕೆ. ಸುಮಿತ್ರಾ, ರೋಹಿಣಿ ಮೋಹನ್, ಇಂದು ವಿಶ್ವನಾಥ್, ಗಾಯಕ ವೈ.ಕೆ. ಮುದ್ದುಕೃಷ್ಣ, ನಿರ್ದೇಶಕ ಟಿ.ಎಸ್. ನಾಗಾಭರಣ, ಕವಿ ಬಿ. ಆರ್. ಲಕ್ಷ್ಮಣರಾವ್, ನಿರ್ದೇಶಕ ಟಿ. ಎನ್. ಸೀತಾರಾಮ್, ಸಾಹಿತಿಗಳಾದ ಎಸ್.ಜಿ. ಸಿದ್ದರಾಮಯ್ಯ, ನಾ. ದಾಮೋದರ ಶೆಟ್ಟಿ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ವಾಹನ ಸಂಚಾರ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಪಣತ್ತೂರು ರೈಲ್ವೆ ಬ್ರಿಡ್ಜ್ ಬಳಿ ಅಂಡರ್ ಪಾಸ್ ನಿರ್ಮಾಣ ಕಾಮಗಾರಿ ಕೈಗೊಂಡಿರುವುದರಿಂದ ಜುಲೈ 9 ರಿಂದ 12ರವರೆಗೆ ಪಣತ್ತೂರು ದಿಣ್ಣೆಯಿಂದ ಪಣತ್ತೂರು ರೈಲ್ವೆ ಬ್ರಿಡ್ಜ್‌ವರೆಗೆ ಎಲ್ಲಾ ರೀತಿಯ ವಾಹನಗಳ ಸಂಚಾರ ನಿರ್ಬಂಧಿಸಲಾಗಿದೆ.

ಪರ್ಯಾಯ ಮಾರ್ಗ: ಪಣತ್ತೂರು ದಿಣ್ಣೆ ಕಡೆಯಿಂದ ಪಣತ್ತೂರು ಮತ್ತು ಕುಂದಲಹಳ್ಳಿ ಕಡೆಗೆ ಹೋಗುವ ಸವಾರರು ಗುಂಜೂರು ಪಾಳ್ಯ ರಸ್ತೆಯಿಂದ ಸಿಲ್ವರ್ ಓಕ್ ರಸ್ತೆ ಮೂಲಕ ಬಳಗೆರೆ ಮುಖ್ಯರಸ್ತೆ ಬಳಸಿ ಪಣತ್ತೂರು ಮತ್ತು ಕುಂದಲಹಳ್ಳಿ ಕಡೆಗೆ ಸಂಚರಿಸಬಹುದು. ಪಣತ್ತೂರು ಕಡೆಯಿಂದ ಪಣತ್ತೂರು ದಿಣ್ಣೆ ಕಡೆಗೆ ಹೋಗುವ ವಾಹನಗಳು ಬಳಗೆರೆ ಮುಖ್ಯರಸ್ತೆಯಿಂದ ಸಿಲ್ವರ್ ಓಕ್ ಮೂಲಕ ಗುಂಜೂರು ಪಾಳ್ಯ ರಸ್ತೆ ಬಳಸಿ ಪಣತ್ತೂರು ದಿಣ್ಣೆ ಕಡೆಗೆ ಸಾಗಬೇಕು ಎಂದು ಸಂಚಾರ ವಿಭಾಗದ ಪೊಲೀಸರು ತಿಳಿಸಿದ್ದಾರೆ.

13ಕ್ಕೆ ದೇಹದಾರ್ಢ್ಯ ಪರೀಕ್ಷೆ

ಬೆಂಗಳೂರು: ಕೆಎಸ್‌ಆರ್‌ಟಿಸಿಯ ಚಾಲಕ ಕಂ ನಿರ್ವಾಹಕ ಹುದ್ದೆಗೆ ಅರ್ಜಿ ಸಲ್ಲಿಸಿರುವವರಿಗೆ ಮೂಲ ದಾಖಲೆ ಹಾಗೂ ದೇಹದಾರ್ಢ್ಯ ಪರಿಶೀಲನೆಗೆ ಜುಲೈ 13ರಂದು ಅವಕಾಶ ನೀಡಲಾಗಿದೆ. ಇದು ಕೊನೆಯ ಅವಕಾಶವಾಗಿದೆ.

ಬಿಬಿಎಂಪಿ: ಡೆಂಗಿ ನಿಯಂತ್ರಣ, ಜಾಗೃತಿಗೆ ಮೂರು ಸಾವಿರ ತಂಡ ನಿಯೋಜನೆ

25 ಲಕ್ಷ ಮನೆಗಳಿಗೂ ಭೇಟಿ, ಸಮೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೆಂಗಿ ನಿಯಂತ್ರಣ, ಜಾಗೃತಿಗೆ ಮೂರು ಸಾವಿರಕ್ಕೂ ಹೆಚ್ಚು ತಂಡಗಳನ್ನು ನಿಯೋಜಿಸಲಾಗಿದ್ದು, ನಗರದಲ್ಲಿರುವ ಎಲ್ಲ 25 ಲಕ್ಷ ಮನೆಗಳಿಗೂ ಭೇಟಿ ನೀಡಿ, ಸಮೀಕ್ಷೆ ನಡೆಸಲಿದ್ದಾರೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ತಿಳಿಸಿದರು.

ವಲಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ನಂತರ ಸುದ್ದಿಗಾರರೊಂದಿಗೆ ಸೋಮವಾರ ಮಾತನಾಡಿದ ಅವರು, 'ಡೆಂಗಿ ನಿಯಂತ್ರಣಕ್ಕಾಗಿ ಕಿರಿಯ ಆರೋಗ್ಯ ವೈದ್ಯಾಧಿಕಾರಿಗಳು, ಆಶಾ ಕಾರ್ಯಕರ್ತೆಯರು, ಕಿರಿಯ ಆರೋಗ್ಯ ಸಹಾಯಕರು, ಲಿಂಕ್ ವರ್ಕರ್ಸ್ ಹಾಗೂ ಸ್ವಯಂ ಸೇವಕರನ್ನೊಳಗೊಂಡ ತಂಡಗಳನ್ನು ರಚಿಸಲಾಗಿದೆ ಎಂದರು.



ನಗರದಲ್ಲಿ ಈ ವರ್ಷದ ಜನವರಿಯಿಂದ ಜುಲೈ 6ರವರೆಗೆ 3,815 ಡೆಂಗಿ ಪ್ರಕರಣಗಳು ಕಂಡುಬಂದಿದ್ದು, ಜುಲೈ 1ರಿಂದ 6ರವರೆಗೆ 776 ಪ್ರಕರಣಗಳು ದೃಢಪಟ್ಟಿವೆ. ಪ್ರತಿನಿತ್ಯ ಸರಾಸರಿ 130ರಿಂದ 140 ಪ್ರಕರಣಗಳು ಪತ್ತೆಯಾಗುತ್ತಿದ್ದು, ಹೆಚ್ಚು ಪ್ರಕರಣಗಳು ಕಂಡುಬರುವ ಕಡೆ ಔಷಧಿ ಸಿಂಪಡಣೆ ಹಾಗೂ ಫಾಗಿಂಗ್ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಪಾಲಿಕೆ ಸಿಬ್ಬಂದಿ ಮನೆ-ಮನೆಗೆ ಭೇಟಿ ನೀಡಿ ನಾಗರಿಕರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ನಿವಾಸಿಗಳು ತಮ್ಮ ಮನೆಗಳಲ್ಲಿ ಸೊಳ್ಳೆ ನಿಯಂತ್ರಣ ಕ್ರಮಗಳನ್ನು ತಪ್ಪದೆ ಅನುಸರಿಸಿದರೆ ಡೆಂಗಿ ನಿಯಂತ್ರಣ ಸಾಧ್ಯವಾಗುತ್ತದೆ ಅಲ್ಲದೆ ಸಾರ್ವಜನಿಕರ ಸಹಕಾರವೂ ಬಹುಮುಖ್ಯವಾದುದು ಎಂದರು.

ಮಳೆ ನಿಂತು-ನಿಂತು ಬರುತ್ತಿರುವುದರಿಂದ ನೀರು ನಿಂತು ಲಾರ್ವಾ ಉತ್ಪತ್ತಿಯಾಗಿ, ಸೊಳ್ಳೆಗಳು ಹೆಚ್ಚಾಗುತ್ತಿವೆ. ಜೋರಾಗಿ ಮಳೆ ಬಂದರೆ ಸೊಳ್ಳೆಗಳ ಉತ್ಪತ್ತಿ ತಾಣಗಳು ನಾಶವಾಗಲಿವೆ. ಸೊಳ್ಳೆ ಉತ್ಪತ್ತಿ ತಾಣಗಳನ್ನು ನಾಶ ಪಡಿಸುವ ಕಾರ್ಯಕ್ಕೆ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಿಕೊಳ್ಳಲು ವಲಯ ಆಯುಕ್ತರಿಗೆ ಸೂಚಿಸಲಾಗಿದೆ ಎಂದು ಅವರು ಹೇಳಿದರು.

ರಸ್ತೆ ಗುಂಡಿ ಮುಚ್ಚಲು ತಂತ್ರಾಂಶ: ಮುಖ್ಯ ಹಾಗೂ ಉಪಮುಖ್ಯ ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚಲು, ಹೊಸ ತಂತ್ರಾಂಶವನ್ನು ಬಿಡುಗಡೆ ಮಾಡಲಾಗುತ್ತದೆ. ನಾಗರಿಕರು ಗುಂಡಿಗಳ ಚಿತ್ರಗಳನ್ನು ಅಪ್‌ಲೋಡ್ ಮಾಡುವ ವ್ಯವಸ್ಥೆ ಇರಲಿದೆ. ಇದರಿಂದ ತ್ವರಿತವಾಗಿ ಗುಂಡಿಗಳನ್ನು ಮುಚ್ಚಬಹುದು ಎಂದು ತುಷಾರ್ ಗಿರಿನಾಥ್ ತಿಳಿಸಿದರು.

ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಡಾ. ಕೆ. ಹರೀಶ್ ಕುಮಾರ್, ಸುರಳ್ಕರ್ ವಿಕಾಸ್ ಕಿಶೋರ್, ಶಿವಾನಂದ ಕಲ್ಕೆರೆ, ವಲಯ ಆಯುಕ್ತರಾದ ಡಾ. ಆರ್.ಎಲ್. ದೀಪಕ್, ರಮೇಶ್, ಶಿವಾನಂದ ಕಾಪಶಿ, ಆರ್. ಸ್ನೇಹಲ್, ವಿನೋತ್ ಪ್ರಿಯಾ, ರಮ್ಯಾ ಗೆಹ್ಲೋಟ್ ಉಪಸ್ಥಿತರಿದ್ದರು.

ಒಟಿಎಸ್‌ಗೆ 1533 ಸಹಾಯವಾಣಿ

ಒಂದು ಬಾರಿ ತೀರುವಳಿ (ಒಟಿಎಸ್) ಯೋಜನೆಯಡಿ ಆಸ್ತಿ ತೆರಿಗೆ ಎಷ್ಟು ಪಾವತಿಸಬೇಕಿದೆ, ಎಲ್ಲಿ ಪಾವತಿಸಬೇಕು ಎಂಬ ಬಗ್ಗೆ ಗೊಂದಲಗಳಿದ್ದರೆ ಸಹಾಯವಾಣಿ 1533ಗೆ ಕರೆ ಮಾಡಿ ಮಾಹಿತಿಯನ್ನು ಪಡೆದುಕೊಳ್ಳಬಹುದು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಒಟಿಎಸ್ ಯೋಜನೆ ಜುಲೈ 31ಕ್ಕೆ ಮುಗಿಯಲಿದೆ. ಈ ಅವಧಿಯ ನಂತರ ಬಡ್ಡಿ, ದಂಡವನ್ನು ಬಾಕಿ ಉಳಿಸಿಕೊಂಡ ದಿನದಿಂದ ಭರಿಸಬೇಕಾಗುತ್ತದೆ. ಕೆಲವರಿಗೆ ಈ ಮೊತ್ತ ಎರಡು, ಮೂರು ಪಟ್ಟೂ ಹೆಚ್ಚಾಗಬಹುದು ಎಂದರು.

ಒಟಿಎಸ್ ಯೋಜನೆಯಡಿ ಸುಮಾರು 4 ಲಕ್ಷ ಸುಸ್ತಿದಾರರಿದ್ದು, ಇದರಲ್ಲಿ 80 ಸಾವಿರ ಸುಸ್ತಿದಾರರು ಆಸ್ತಿ ತೆರಿಗೆ ಪಾವತಿಸಿದ್ದಾರೆ. 3.20 ಲಕ್ಷ ಸುಸ್ತಿದಾರರಿಗೆ ಜುಲೈ 31ರವರೆಗೆ ಮಾತ್ರ ಅವಕಾಶವಿದೆ ಎಂದು ಹೇಳಿದರು.



ಟೈರ್‌ಗಳಲ್ಲಿ ಸಂಗ್ರಹವಾಗಿದ್ದ ನೀರನ್ನು ಬಿಎಂಟಿಸಿ ಸಿಬ್ಬಂದಿ ಚೆಲ್ಲಿದರು

ಬಿಎಂಟಿಸಿ ಘಟಕಗಳಲ್ಲಿ ಲಾರ್ವಾ ನಿಯಂತ್ರಣ ದ್ರಾವಣ ಸಿಂಪಡಣೆ

ಬೆಂಗಳೂರು: ಡೆಂಗಿ ನಿಯಂತ್ರಣಕ್ಕಾಗಿ ಬಿಎಂಟಿಸಿ ಘಟಕಗಳು, ಬಸ್ ನಿಲ್ದಾಣಗಳಲ್ಲಿ ಸೋಮವಾರ ಸ್ವಚ್ಛತಾಕಾರ್ಯ ಹಾಗೂ ದ್ರಾವಣ ಸಿಂಪಡಣೆ ನಡೆಯಿತು.

ಡೆಂಗಿ ನಿಯಂತ್ರಣಕ್ಕೆ ಕ್ರಮ ವಹಿಸುವಂತೆ ಬಿಎಂಟಿಸಿಯ ಎಲ್ಲ ವಿಭಾಗೀಯ ನಿಯಂತ್ರಣಾಧಿಕಾರಿಗಳಿಗೆ, ಘಟಕ ವ್ಯವಸ್ಥಾಪಕರಿಗೆ, ನಿಲ್ದಾಣಾಧಿಕಾರಿಗಳಿಗೆ ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ರಾಮಚಂದ್ರನ್. ಆರ್. ಸೂಚಿಸಿದ್ದರು. ಅದರಂತೆ 49 ಘಟಕಗಳು, 10 ಸಂಚಾರ ಮತ್ತು ಸಾರಿಗೆ ನಿರ್ವಹಣಾ ಕೇಂದ್ರ (ಟಿಟಿಎಂಸಿ), ಪ್ರಮುಖ ಬಸ್ ನಿಲ್ದಾಣಗಳಾಗಿರುವ ಮೆಜೆಸ್ಟಿಕ್ ಕೆಂಪೇಗೌಡ ಬಸ್ ನಿಲ್ದಾಣ, ಕೆ.ಆರ್. ಮಾರುಕಟ್ಟೆ ಮತ್ತು ಶಿವಾಜಿನಗರ ಬಸ್ ನಿಲ್ದಾಣಗಳು ಹಾಗೂ ನಾಲ್ಕು ಕಾರ್ಯಾಗಾರಗಳಲ್ಲಿ ಬಿಬಿಎಂಪಿ ಸಹಯೋಗದೊಂದಿಗೆ ಲಾರ್ವಾ ನಿಯಂತ್ರಣ ದ್ರಾವಣ ಸಿಂಪಡಿಸಲಾಯಿತು.

ಘಟಕಗಳಲ್ಲಿ ಬಳಸಿದ ಟೈರುಗಳಲ್ಲಿ ನೀರು ಶೇಖರಿಸದಂತೆ ಎಚ್ಚರಿಕೆ ವಹಿಸಲಾಯಿತು. ನೀರು ಶೇಖರಿಸುವ ಸಿಮೆಂಟ್ ತೊಟ್ಟಿ, ಡ್ರಮ್, ಬ್ಯಾರಲ್‌ಗಳಿಗೆ ಸೂಕ್ತ ಮುಚ್ಚಳ ಅಳವಡಿಸಲಾಯಿತು. ಘಟಕಗಳಲ್ಲಿ ಶೇಖರಣೆಯಾಗುವ ಘನ ತ್ಯಾಜಗಳಲ್ಲಿ ನೀರು ನಿಲ್ಲದಂತೆ ಮಾಡಿದ್ದಲ್ಲದೇ, ಕಸ ವಿಲೇವಾರಿಗೆ ಕ್ರಮ ವಹಿಸಲಾಯಿತು. ಹೂದಾನಿಗಳಲ್ಲಿ ನೀರು ಶೇಖರವಾಗದಂತೆ ಎಚ್ಚರಿಕೆ, ಕಟ್ಟಡಗಳ ಮೆಟ್ಟಿಲು ಮತ್ತು ಚಾವಣಿಯ ಮೇಲೆ ನೀರು ನಿಲ್ಲದಂತೆ ಮಾಡಲಾಯಿತು ಎಂದು ಬಿಎಂಟಿಸಿ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

'ಸೊಳ್ಳೆಗಿಂತ ಬಿಜೆಪಿಯ ಸುಳ್ಳು ನಿಯಂತ್ರಣವಾಗಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೆಂಗಿ ಹರಡುವ ಸೊಳ್ಳೆಗಳಿಗಿಂತಲೂ ಮೊದಲು ಡೆಂಗಿ ಬಗ್ಗೆ ಬಿಜೆಪಿಯವರು ಹರಡುವ ಸುಳ್ಳು ನಿಯಂತ್ರಣವಾಗಬೇಕು ಎಂದು ಆರೋಗ್ಯ ಸಚಿವ ದಿನೇಶ್ ಗುಂಡುರಾವ್ ತಿಳಿಸಿದರು.



ದಿನೇಶ್ ಗುಂಡೂರಾವ್

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಡೆಂಗಿ ಬಗ್ಗೆ ಸಂಸದ ಡಾ.ಸಿ.ಎನ್. ಮಂಜುನಾಥ್ ಜೊತೆಗೆ ಚರ್ಚೆ ನಡೆಸಿದ್ದೇನೆ. ಅವರು ಉತ್ತಮ ಸಲಹೆಗಳನ್ನು ನೀಡಿದ್ದಾರೆ. ಆದರೆ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಜನರನ್ನು ದಾರಿ ತಪ್ಪಿಸುವ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಡೆಂಗಿಯನ್ನು ರಾಜಕೀಯಕ್ಕೆ ಬಳಸಿಕೊಳ್ಳುವುದರ ಬದಲು ಡೆಂಗಿ ನಿಯಂತ್ರಣಕ್ಕೆ ಸಹಕಾರ ನೀಡಲಿ' ಎಂದು ಸಲಹೆ ನೀಡಿದರು.

ತುರ್ತು ಸ್ಥಿತಿ ಘೋಷಿಸುವ ಅಗತ್ಯವಿಲ್ಲ: ತಾಂತ್ರಿಕ ಸಲಹಾ ಸಮಿತಿಯ ಸಭೆ ನಡೆಸಿ ಡೆಂಗಿ ಬಗ್ಗೆ ಚರ್ಚಿಸಲಾಯಿತು. ವೈದ್ಯಕೀಯ ತುರ್ತುಪರಿಸ್ಥಿತಿ ಘೋಷಣೆ ಮಾಡುವಂತೆ ಅಲ್ಲಿ ವಿರೋಧ ಪಕ್ಷದವರು ಸಲಹೆ ನೀಡಿದರು. ಅಂತಹ ಪರಿಸ್ಥಿತಿ ರಾಜ್ಯದಲ್ಲಿ ಇಲ್ಲ. ಹಾಸಿಗೆ, ಔಷಧಗಳಿಗೆ ಕೊರತೆ ಇಲ್ಲ. ಡೆಂಗಿ ನಿಯಂತ್ರಣದಲ್ಲಿದೆ. ಮಳೆಗಾಲ ಇನ್ನೂ ಎರಡು ತಿಂಗಳು ಇರುವುದರಿಂದ ಈ ಅವಧಿಯಲ್ಲಿ ಜರನು ಹೆಚ್ಚು ಜಾಗರೂಕರಾಗಿರಬೇಕು ಎಂದರು.

ಮನೆಯ ಸುತ್ತಮುತ್ತ ನೀರು ಶೇಖರಣೆಯಾಗದಂತೆ ನೋಡಿಕೊಳ್ಳಬೇಕು. ಆರೋಗ್ಯ ಇಲಾಖೆ ಕೂಡ ಜನರಲ್ಲಿ ಜಾಗೃತಿ ಮೂಡಿಸುತ್ತಿದೆ. ಪ್ರತಿ ಶುಕ್ರವಾರ ಅಭಿಯಾನದ ರೀತಿ ಈಡಿಸ್ ಸೊಳ್ಳೆಯ ಉತ್ಪತ್ತಿ ತಾಣಗಳನ್ನ ನಾಶ ಪಡಿಸಲಾಗುತ್ತಿದೆ ಎಂದು ವಿವರಿಸಿದರು.

ಹೆಚ್ಚು ಡೆಂಗಿ ಪ್ರಕರಣಗಳು ಕಂಡುಬರುವ ಸ್ಥಳಗಳಲ್ಲಿ 'ಫೀವರ್ ಕ್ಲಿನಿಕ್' ತೆರೆದು, ಟೆಸ್ಟಿಂಗ್ ಹೆಚ್ಚಿಸಲು ಜಿಲ್ಲಾಧಿಕಾರಿಗಳಿಗೆ ಹಾಗೂ ಜಿ.ಪಂ.ಸಿಇಒಗಳಿಗೆ ಸೂಚಿಸಲಾಗಿದೆ. ಬಿಬಿಎಂಪಿ ಅಧಿಕಾರಿಗಳೊಂದಿಗೂ ಸಭೆ ನಡೆಸಲಾಗಿದೆ ಎಂದು ದಿನೇಶ್ ತಿಳಿಸಿದರು.

ಈಜಿದರೆ ತಪ್ಪೇನು?

'ಈಜು ಆರೋಗ್ಯಕ್ಕೆ ಒಳ್ಳೆಯದು. ದೇಹಕ್ಕೆ ಉತ್ತಮ ವ್ಯಾಯಾಮವನ್ನು ನೀಡುತ್ತದೆ. ನಾನು ಸರ್ಕಾರಿ ಈಜುಕೊಳಕ್ಕೆ ಹೋಗಿ ಈಜಿದರೆ ತಪ್ಪೇನು? ಬಿಜೆಪಿ ಮುಖಂಡರು ಟೀಕೆ ಮಾಡುವುದರಲ್ಲಿ ಅರ್ಥವಿಲ್ಲ' ಎಂದು ದಿನೇಶ್ ಗುಂಡೂರಾವ್ ಸಮರ್ಥಿಸಿಕೊಂಡರು.

'ಬಿಜೆಪಿಯವರು ಮೋಜು ಮಸ್ತಿ ಮಾಡುತ್ತಾರಲ್ಲ. ನಿನ್ನೆ ನೆಲಮಂಗಲದಲ್ಲಿ ಅಭಿನಂದನಾ ಸಮಾರಂಭದಲ್ಲಿ ಏನೇನೋ ಹಂಚಿದರಲ್ಲ. ಅದೇ ರೀತಿ ಈಜು ಕೂಡ ಅಂತಂದುಕೊಂಡಿರಬೇಕು. ನಾನು ರೆಸಾರ್ಟ್‌ಗೆ ಹೋಗಿದ್ದಲ್ಲ. ಮಂಗಳೂರು ಪ್ರವಾಸದಲ್ಲಿದ್ದಾಗ ಅಲ್ಲಿನ ಸರ್ಕಾರಿ ಈಜುಕೊಳಕ್ಕೆ ಹೋಗಿದ್ದೆ' ಎಂದು ತಿಳಿಸಿದರು.

ನೀರು ಪೂರೈಕೆ: ಸ್ಥಳಕ್ಕೆ ತೆರಳಿ ಸಮಸ್ಯೆ ಬಗೆಹರಿಸಿ

ಹಿರಿಯ ಅಧಿಕಾರಿಗಳಿಗೆ ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಕಟ್ಟುನಿಟ್ಟಿನ ಸೂಚನೆ

ಪ್ರಜಾವಾಣಿ ವಾರ್ತೆ

ಜಲಮಂಡಳಿ ಸುದ್ದಿ

ಬೆಂಗಳೂರು: 'ನೀರು ಪೂರೈಕೆಯಲ್ಲಿ ಉಂಟಾಗುವ ಸಮಸ್ಯೆಗಳನ್ನು ಪರಿಹರಿಸಲು ಹಿರಿಯ ಅಧಿಕಾರಿಗಳು ಖುದ್ದಾಗಿ ಸ್ಥಳಕ್ಕೆ ಭೇಟಿ ನೀಡಬೇಕು' ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಅಧಿಕಾರಿಗಳಿಗೆ ಸೂಚಿಸಿದರು.

ಜಲಮಂಡಳಿಯ ಕೇಂದ್ರ ಕಚೇರಿಯಲ್ಲಿ ಸೋಮವಾರ ಹಿರಿಯ ಅಧಿಕಾರಿಗಳ ಸಭೆ ನಡೆಸಿದ ಅವರು, 'ಜೂನ್ ಮೊದಲ ವಾರದಲ್ಲಿ ಕಾವೇರಿ ಐದನೇ ಹಂತದ ಯೋಜನೆಯ ಪರಿಶೀಲನೆಗಾಗಿ ನಗರದಾದ್ಯಂತ ನೀರು ಸರಬರಾಜನ್ನು ಸ್ಥಗಿತಗೊಳಿಸಲಾಗಿತ್ತು. ಸಮಸ್ಯೆ ಇರುವ ಸ್ಥಳಗಳಲ್ಲಿ ಪರಿಹಾರ ಕ್ರಮ ಕೈಗೊಂಡು ನೀರು ಪೂರೈಕೆ ಪುನರಾರಂಭ ಆದ ಬಳಿಕವೂ ನಗರದ ಕೆಲವು ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿರುವ ಬಗ್ಗೆ ದೂರುಗಳು ಬರುತ್ತಿವೆ. ಜೊತೆಗೆ, ಮಳೆ ನೀರಿನಿಂದಾಗಿ ಒಳ ಚರಂಡಿಗಳು ಉಕ್ಕಿ ಹರಿಯುತ್ತಿರುವ ಪ್ರಕರಣಗಳು ವರದಿಯಾಗುತ್ತಿವೆ. ಈ ಸಮಸ್ಯೆಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು' ಎಂದು ನಿರ್ದೇಶನ ನೀಡಿದರು.



ಬೆಂಗಳೂರು ಜಲಮಂಡಳಿ ಅಧ್ಯಕ್ಷ ರಾಮ್‌ಪ್ರಸಾತ್ ಮನೋಹರ್ ಅವರು ಮಂಡಳಿಯ ಹಿರಿಯ ಅಧಿಕಾರಿಗಳ ಜತೆ ಸೋಮವಾರ ಸಭೆ ನಡೆಸಿದರು

'ಬೇಸಿಗೆಯಲ್ಲಿ ಯಶಸ್ವಿಯಾಗಿ ನೀರು ನಿರ್ವಹಣೆ ಮಾಡಿದಂತೆ, ಮಳೆಗಾಲದಲ್ಲೂ ಸಮರ್ಪಕವಾಗಿ ನಿಭಾಯಿಸುವ ನಿಟ್ಟಿನಲ್ಲಿ ಅಧಿಕಾರಿಗಳು ಕಾರ್ಯತತ್ಪರರಾಗಬೇಕು' ಎಂದು ಸೂಚಿಸಿದರು.

'ಆಯಾ ವಲಯದ ಮುಖ್ಯ ಎಂಜಿನಿಯರ್‌ಗಳು ತಮ್ಮ ಅಧೀನ ಅಧಿಕಾರಿಗಳ ತಂಡ ರಚಿಸಿಕೊಂಡು ಕೆಲಸ ಮಾಡಬೇಕು. ನಗರದಲ್ಲಿ ಜಲಮಂಡಳಿಯ 143 ಸೇವಾ ಕೇಂದ್ರಗಳಿವೆ. ಈ ಕೇಂದ್ರಗಳ ವ್ಯಾಪ್ತಿಯಲ್ಲಿ ಬರುವ ದೂರುಗಳನ್ನು ಖುದ್ದಾಗಿ ಹಿರಿಯ ಅಧಿಕಾರಿಗಳು ಪರಿಶೀಲಿಸಿ ಪರಿಹರಿಸಬೇಕು' ಎಂದು ತಿಳಿಸಿದರು.

ಮುಂದಿನ ವಾರದಿಂದ ಸೇವಾ ಕೇಂದ್ರಗಳ ವ್ಯಾಪ್ತಿಯಲ್ಲಿ ಪರಿಶೀಲನೆ ಆರಂಭಿಸಲಾಗುವುದು. ಹೆಚ್ಚಿನ ದೂರುಗಳು ಬಂದ ಪ್ರದೇಶಗಳಿಂದಲೇ ಪರಿಶೀಲನೆ ಆರಂಭವಾಗಲಿದೆ ಎಂದು ರಾಮ್‌ಪ್ರಸಾತ್ ಹೇಳಿದರು.

'ಜನರ ತಲೆಯಲ್ಲಿ ಪುರಾಣವೇ ತುಂಬಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ಸಾಮಾನ್ಯ ಜನರ ಚರಿತ್ರೆಯನ್ನು ಮರೆಮಾಚಲಾಗಿದೆ. ಜನರ ತಲೆಗೆ ಪುರಾಣವನ್ನೇ ತುಂಬಲಾಗಿದೆ. ತಳಸಮುದಾಯಗಳ ಚರಿತ್ರೆಯನ್ನು ಕಟ್ಟಿಕೊಡುವ ಕೆಲಸವನ್ನು ವಿದ್ಯಾವಂತರು ಮಾಡಬೇಕಿದೆ ಎಂದು ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ತಿಳಿಸಿದರು.

ನಗರದಲ್ಲಿ ಭಾನುವಾರ ನಡೆದ ಬುದ್ಧಪ್ರಿಯ ಗಂಗಾಧರ್ ಮಾವಳ್ಳಿ ಅವರ 'ಜಲ ಸ್ವಾತಂತ್ರ್ಯ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ಭಾನುವಾರ ಉಪನ್ಯಾಸ ನೀಡಿದರು.

ಭಾರತಕ್ಕೆ ಸ್ವಾತಂತ್ರ್ಯ ಬಂದು ಸಂವಿಧಾನ ಜಾರಿಯಾದ ಮೇಲೆ ಪಡೆದ ಹಕ್ಕುಗಳಿಂದ ತಳಸಮುದಾಯಗಳು ಸ್ವಾಭಿಮಾನದಿಂದ ಬದುಕುವಂತಾಗಿದೆ. ವಿದ್ಯೆ ಪಡೆದು ಉತ್ತಮ ಸ್ಥಾನಗಳಿಗೆ ಈ ಸಮುದಾಯದವರು ಹೋಗಿದ್ದಾರೆ. ಆದರೆ, ಹಿಂದೆ ತಳಸಮುದಾಯಗಳು ಯಾವ ಸ್ಥಿತಿಯಲ್ಲಿದ್ದವು? ಈ ಸ್ಥಾನಮಾನ ಪಡೆಯಲು ಕಾರಣವೇನು? ಎಂಬ ಇತಿಹಾಸವನ್ನು ಮುಂದಿನ ಪೀಳಿಗೆಗೆ ತಿಳಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಪೌರ ಕಾರ್ಮಿಕರ ಮಗನಾಗಿರುವ ಬುದ್ಧಪ್ರಿಯ ಗಂಗಾಧರ್ ಸಮಾಜವನ್ನು ಹಿಂತಿರುಗಿ ನೋಡುವ ಕೆಲಸವನ್ನು ಮಾಡುತ್ತಿದ್ದಾರೆ. ಡಾ.ಬಿ.ಆರ್. ಅಂಬೇಡ್ಕರ್ ಅವರು ಮಹಾಡ್ ಕೆರೆ ನೀರನ್ನು ಮುಟ್ಟುವ ಮೂಲಕ ಸ್ವಾಭಿಮಾನಿ ಚಳವಳಿಯನ್ನು ಹೇಗೆ ಕಟ್ಟಿದರು ಎಂಬುದನ್ನು ತಿಳಿಸುವ ಕೆಲಸ ಮಾಡಿದ್ದಾರೆ ಎಂದು ಶ್ಲಾಘಿಸಿದರು.

ತಹಶೀಲ್ದಾರ್ ರಾಜಶೇಖರ ಮೂರ್ತಿ ಮಾತನಾಡಿ, 'ಸಂವಿಧಾನದ ಆಶಯದಂತೆ ಶೋಷಿತ ಸಮುದಾಯಗಳನ್ನು ಮೇಲೆತ್ತುವ ಕೆಲಸವನ್ನು ಸರ್ಕಾರ ಒಂದು ಕಡೆ ಮಾಡಬೇಕಾಗುತ್ತದೆ. ಅಷ್ಟಕ್ಕೆ ಸೀಮಿತವಾಗದೇ ಸಮುದಾಯವೂ ಕೈಜೋಡಿಸಬೇಕು. ತಳ ಸಮುದಾಯಗಳಿಂದ ಬಂದ ನೌಕರರು ಸಾಮಾಜಿಕ ಹೊಣೆಗಾರಿಕೆ ಇಟ್ಟುಕೊಂಡು ಕೆಲಸ ಮಾಡಬೇಕು' ಎಂದು ಅವರು ಸಲಹೆ ನೀಡಿದರು.

ಬಿಬಿಎಂಪಿ ಜಂಟಿ ಆಯುಕ್ತೆ ಲಕ್ಷ್ಮೀದೇವಿ ಆರ್., ರಾಜ್ಯ ಮಹಾನಗರ ಪಾಲಿಕೆ ಅಧಿಕಾರಿ ಮತ್ತು ನೌಕರರ ಸಂಘದ ಅಧ್ಯಕ್ಷ ಎ.ಅಮೃತ್ ರಾಜ್, ಡಿಸಿಆರ್‌ಇ ಡಿವೈಎಸ್‌ಪಿ ಮಹಾನಂದ್, ಸ್ಯಾಮ್ ಪಬ್ಲಿಕೇಷನ್ ಮುಖ್ಯಸ್ಥ ಸಿದ್ಧಾರ್ಥ ಆನಂದ್ ಮಾಲೂರು, ಕೃತಿಕಾರ ಬುದ್ಧಪ್ರಿಯ ಗಂಗಾಧರ್ ಮಾವಳ್ಳಿ, ಅನುವಾದಕ ಅಬ್ದುಲ್ ರೆಹಮಾನ್ ಪಾಷಾ ಭಾಗವಹಿಸಿದ್ದರು.

ತೋಟಗಾರಿಕೆ ಇಲಾಖೆಯಿಂದ ಐತಿಹಾಸಿಕ ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನಕ್ಕೆ ಸಿದ್ಧತೆ

ಅಂಬೇಡ್ಕರ್ ಜೀವನ ಫಲಪುಷ್ಪದಲ್ಲಿ ಅನಾವರಣ

• ಖಲೀಲಅಹ್ಮದ ಶೇಖ

ಮುಖ್ಯಾಂಶಗಳು

- *ಅಗಸ್ಟ್ 8ರಿಂದ 19ರವರಗೆ ನಡೆಯಲಿರುವ ಪ್ರದರ್ಶನ
- * ಅಂಬೇಡ್ಕರ್ ಜೀವನಕ್ಕೆ ಸಂಬಂಧಿಸಿದ ಪ್ರತಿಕೃತಿಗಳ ನಿರ್ಮಾಣ
- * ಪುಷ್ಪಗಳಲ್ಲಿ ಅರಳಲಿರುವ ಸಂಸತ್ತು, ಸಂವಿಧಾನದ ಪ್ರತಿಕೃತಿ

ಬೆಂಗಳೂರು: ಸ್ವಾತಂತ್ರ್ಯೋತ್ಸವದ ಅಂಗವಾಗಿ ತೋಟಗಾರಿಕೆ ಇಲಾಖೆ ಆಯೋಜಿಸುವ ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನದಲ್ಲಿ ಈ ಬಾರಿ 'ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್' ಅವರ ಜೀವನ ವಿಷಯಾಧಾರಿತ ಹೂವಿನ ಪ್ರತಿಕೃತಿ ಕಣ್ಮನ ಸೆಳೆಯಲಿದೆ.

ಸ್ವಾತಂತ್ರ್ಯೋತ್ಸವದ ಅಂಗವಾಗಿ 2024ರ ಅಗಸ್ಟ್ 8ರಿಂದ ಅಗಸ್ಟ್ 19ರವರೆಗೆ ಲಾಲ್‌ಬಾಗ್‌ನಲ್ಲಿ ಫಲಪುಷ್ಪ ಪ್ರದರ್ಶನ ನಡೆಯಲಿದೆ. ಇದಕ್ಕಾಗಿ ಈಗಾಗಲೇ ತೋಟಗಾರಿಕೆ ಇಲಾಖೆ ವಿವಿಧ ಬಗೆಯ ಅಲಂಕಾರಿಕ, ದೇಶಿ–ವಿದೇಶಿ ಹೂಗಳನ್ನು ಸಿದ್ಧತೆ ಮಾಡಿಕೊಳ್ಳುತ್ತಿದೆ.

ಗಾಜಿನ ಮನೆಯಲ್ಲಿ ಅಂಬೇಡ್ಕರ್ ಅವರ ಪುತ್ಥಳಿ, ಕಲಾಕೃತಿಗಳು ಸೇರಿ ಅವರ ಜೀವನದ ಪ್ರಮುಖ ಘಟನೆಗಳ ಛಾಯಾಚಿತ್ರಗಳು, ಸಂಕ್ಷಿಪ್ತ ಮಾಹಿತಿ ಒದಗಿಸುವ ಬ್ಯಾನರ್‌ಗಳನ್ನು ಅಳವಡಿಸಲಾಗುವುದು. ಗಾಜಿನ ಮನೆಯಲ್ಲಿ ಒಂದು ಭಾಗದಲ್ಲಿ ಸಂಸತ್ ಭವನ, ಅಂಬೇಡ್ಕರ್ ಅವರು ಜನಿಸಿದ ಸ್ಥಳ ಹಾಗೂ ಸಂವಿಧಾನದ ಪ್ರತಿಕೃತಿಗಳನ್ನು ಪುಷ್ಪಗಳಲ್ಲಿ ಅಲಂಕರಿಸುವ ಕುರಿತು ತಜ್ಞರೊಂದಿಗೆ ಚರ್ಚೆ ನಡೆಯುತ್ತಿದೆ. ಈ ಬಗ್ಗೆ ಈಗಾಗಲೇ ಎರಡು ಮೂರು ಸಭೆಗಳು ನಡೆದಿವೆ.

'ಈ ಬಾರಿಯ ಫಲಪುಷ್ಪ ಪ್ರದರ್ಶನದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ವಿಚಾರಧಾರೆಗಳನ್ನು ಹೂ ರಾಶಿಯ ಮೂಲಕ ಯುವ ಸಮೂಹ ಹಾಗೂ ವಿದ್ಯಾರ್ಥಿಗಳಿಗೆ ತಿಳಿಸುವ ಉದ್ದೇಶವಿದೆ. ಲಾಲ್‌ಬಾಗ್‌ನ ಎಲ್ಲ ದ್ವಾರಗಳಲ್ಲಿ ಅಂಬೇಡ್ಕರ್ ಅವರ ವಿಚಾರಧಾರೆಗಳನ್ನು ತಿಳಿಸುವ ಎಲ್‌ಇಡಿ ಪರದೆಗಳನ್ನು ಅಳವಡಿಸಲಾಗುವುದು. ಗಾಜಿನ ಮನೆಯ ಒಳಾಂಗಣದಲ್ಲಿ ಐತಿಹಾಸಿಕ ಘಟನೆಗಳನ್ನು ಸಾರುವ ಫ್ಲೆಕ್ಸ್‌ಗಳು, ಪ್ರತಿಕೃತಿಗಳನ್ನು ಅಳವಡಿಸುವ ಕುರಿತು ಚಿಂತನೆ ನಡೆಯುತ್ತಿದೆ' ಎಂದು ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್ ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

'ಗಾಜಿನ ಮನೆಯಲ್ಲಿ ವೈವಿಧ್ಯಮಯ ಪುಷ್ಪಗಳ ಪ್ರದರ್ಶನ: ಕುಂಡದಲ್ಲಿ ಬೆಳೆದ ಚಿತ್ತಾಕರ್ಷಕ ವರ್ಣಗಳಿಂದ ಕೂಡಿದ ವರ್ಷಕ್ಕೊಮ್ಮೆ ಅರಳುವ ವಿವಿಧ ಹೂವುಗಳು ಪುಷ್ಪ ರಸಿಕರಿಗೆ, ಕವಿ ಮನಸ್ಸುಗಳಿಗೆ ಮುದ ನೀಡಲಿವೆ. ಸೇವಂತಿಗೆ, ಗುಲಾಬಿ, ಪಾಯಿನ್ಸಿಟಿಯಾ, ಪೆಂಟಾಸ್ ಕಾರ್ನಿಯಾ, ಜರ್ಬೇರಾ, ಕಾರ್ನೇಷನ್ಸ್, ಟ್ಯೂಬಿ ರೋಸ್ ರೋಟೆಡ್, ಬಿಗೋನಿಯಾ, ಸಿಲೋಷಿಯಾ, ಜಿರೇನಿಯಂ ಇತ್ಯಾದಿ ಹೂವುಗಳು ನೋಡುಗರನ್ನು ಸೆಳೆಯಲಿವೆ' ಎಂದರು.



ಸಾಂದರ್ಭಿಕ ಚಿತ್ರ

50 ಸಾವಿರ ಹೂ ಕುಂಡಗಳು ಸಿದ್ಧ

'ಫಲಪುಷ್ಪ ಪ್ರದರ್ಶನಕ್ಕಾಗಿ ಲಾಲ್‌ಬಾಗ್, ಕಬ್ಬನ್ ಉದ್ಯಾನ, ಕೆಮ್ಮಣ್ಣುಗುಂಡಿ, ಊಟಿಯ ಉದ್ಯಾನಗಳಲ್ಲಿ 50 ಸಾವಿರಕ್ಕೂ ಹೆಚ್ಚು ಹೂವಿನ ಕುಂಡಗಳನ್ನು ಬೆಳಸಲಾಗುತ್ತಿದ್ದು, ಜುಲೈ ಕೊನೆಯ ವಾರದಲ್ಲಿ ಲಾಲ್‌ಬಾಗ್ ಉದ್ಯಾನಕ್ಕೆ ಬರಲಿವೆ. ಇದರ ಜೊತೆಗೆ ಹೊರ ರಾಜ್ಯ ಮತ್ತು ವಿದೇಶಗಳಿಂದಲೂ ವಿವಿಧ ಬಗೆಯ ಹೂಗಳನ್ನು ತರಿಸುವ ಕುರಿತು ಚರ್ಚಿಸಲಾಗುತ್ತಿದೆ' ಎಂದು ಲಾಲ್‌ಬಾಗ್ ಉಪ ನಿರ್ದೇಶಕಿ ಕುಸುಮಾ ತಿಳಿಸಿದರು.

> **ಅಂಬೇಡ್ಕರ್ ಅವರ ಜೀವನವನ್ನು ಫಲಪುಷ್ಪ ಪ್ರದರ್ಶನದಲ್ಲಿ ಹೇಗೆ ಪ್ರಸ್ತುತ ಪಡಿಸಬಹುದು ಎಂಬುದರ ಕುರಿತು ಡಾ.ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರಗಳ ಸಲಹೆ ಪಡೆದುಕೊಳ್ಳಲಾಗುವುದು.**
> **ಎಂ. ಜಗದೀಶ್**
> ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ

ಸುದ್ದಿ 2 ನಿಮಿಷ

ಗೊಂದಲ ಮಾಡದಂತೆ ಹೈಕಮಾಂಡ್ ಹೇಳಿದೆ: ರಾಜಣ್ಣ

ಬೆಂಗಳೂರು: 'ನಾಯಕತ್ವ ಬದಲಾವಣೆ ವಿಚಾರದಲ್ಲಿ ಯಾವುದೇ ಗೊಂದಲ ಉಂಟು ಮಾಡಬಾರದೆಂದು ಕಾಂಗ್ರೆಸ್ ಹೈಕಮಾಂಡ್ ಹೇಳಿದೆ' ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಬದಲಾವಣೆ ಹೇಳಿಕೆ ಸಂಬಂಧ ರಾಜ್ಯ ಕಾಂಗ್ರೆಸ್ ನಾಯಕರಿಗೆ ಪಕ್ಷದ ವರಿಷ್ಠರು ಎಚ್ಚರಿಕೆ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ನೋಡ್ರಿ, ಆ



ವಿಚಾರವಾಗಿ ಯಾರೂ ಮಾತನಾಡಬಾರದು. ನಾಯಕತ್ವ ಬದಲಾವಣೆ ಏನೇ ಇದ್ದರೂ ಹೈಕಮಾಂಡ್ ಮಾಡಲಿದೆ' ಎಂದರು. 'ಹೈಕಮಾಂಡ್ ತೀರ್ಮಾನಕ್ಕೆ ಎಲ್ಲರೂ ಬದ್ಧರಾಗಿ ಇರಬೇಕಾಗುತ್ತದೆ. ಈ ವಿಚಾರವಾಗಿ ಯಾವುದೇ ಗೊಂದಲ ಇರಬಾರದೆಂದು ನನಗೂ ಅನಿಸಿದೆ. ಗೊಂದಲ ಇರಬಾರದೆಂದು ಹೈಕಮಾಂಡ್ ಕೂಡ ಹೇಳಿದೆ.

ಯಾವೆಲ್ಲಾ ಬದಲಾವಣೆ ಇದೆಯೊ, ಅದನ್ನು ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಅದು ಎಲ್ಲರಿಗೂ ಅನ್ವಯಿಸುತ್ತದೆ' ಎಂದು ಹೇಳಿದರು. ಹುಬ್ಬಳ್ಳಿಯಲ್ಲಿ ಸಿದ್ದರಾಮೋತ್ಸವ ಕಾರ್ಯಕ್ರಮ ಆಯೋಜನೆ ಬಗ್ಗೆ ಕೇಳಿದ ಪ್ರಶ್ನೆಗೆ, 'ಯಾವ ಸಮಾವೇಶವೂ ಇಲ್ಲ, ಏನೂ ಇಲ್ಲ. ಚಿಂತನೆ ಇದೆಯೊ, ಇಲ್ಲವೊ ಎಂಬ ಬಗ್ಗೆ ಮುಂದೆ ಹೇಳುತ್ತೇನೆ' ಎಂದರು.

27 ವೈದ್ಯಕೀಯ ಕಾಲೇಜುಗಳಿಗೆ ದಂಡ

ಬೆಂಗಳೂರು: ಮೂಲ ಸೌಕರ್ಯಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸದ ರಾಜ್ಯದ 27 ವೈದ್ಯಕೀಯ ಕಾಲೇಜುಗಳಿಗೆ ರಾಷ್ಟ್ರೀಯ ವೈದ್ಯಕೀಯ ಆಯೋಗ ದಂಡ ವಿಧಿಸಿದೆ.

ಅಗತ್ಯ ಸಂಖ್ಯೆಯ ಅಧ್ಯಾಪಕರನ್ನು ನೇಮಕ ಮಾಡಿಕೊಳ್ಳದೆ ಇರುವುದು, ಪ್ರಯೋಗಾಲಯಗಳ ಕೊರತೆ, ಕಳಪೆ ಉಪಕರಣಗಳು, ರೋಗಿಗಳ ದತ್ತಾಂಶಗಳನ್ನು ಸರಿಯಾಗಿ ನಿರ್ವಹಿಸದೆ ಇರುವುದು, ತನಿಖೆಯ ಸಮಯದಲ್ಲಿ ಅಗತ್ಯವಾದ ಮಾಹಿತಿಗಳನ್ನು ಒದಗಿಸದ ಕಾರಣಗಳಿಗಾಗಿ ಕಾಲೇಜುಗಳಿಗೆ ದಂಡ ವಿಧಿಸಲಾಗಿದೆ. ಅವುಗಳಲ್ಲಿ 11 ಖಾಸಗಿ ವೈದ್ಯಕೀಯ ಕಾಲೇಜುಗಳೂ ಸೇರಿವೆ.

ಚಿಕ್ಕಮಗಳೂರು, ಚಿತ್ರದುರ್ಗ, ಚಿಕ್ಕಬಳ್ಳಾಪುರ, ಮಂಡ್ಯ, ಯಾದಗಿರಿ, ಶಿವಮೊಗ್ಗ, ಕಾರವಾರ, ಮೈಸೂರು, ಕಲಬುರಗಿ, ಹುಬ್ಬಳ್ಳಿ, ಕೊಡಗು, ಚಾಮರಾಜ ನಗರ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಹಾಗೂ ಎರಡು ಇಎಸ್‌ಐ ಕಾಲೇಜುಗಳು ದಂಡನೆಗೆ ಒಳಗಾಗಿವೆ. ವಿಧಿಸಿದ ದಂಡದ ಮೊತ್ತ ₹3 ಲಕ್ಷದಿಂದ ₹15 ಲಕ್ಷದವರೆಗೆ ಇದೆ.

ಬಾಡಿಗೆಗೆ ಮನೆ ಕೇಳುವ ನೆಪದಲ್ಲಿ ಸರ ಕಸಿದು ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತ್ಯೇಕ ಸರ ಕಳವು ಪ್ರಕರಣಗಳಲ್ಲಿ ಮೂವರು ಆರೋಪಿಗಳನ್ನು ರಾಜಗೋಪಾಲನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಠಾಣಾ ವ್ಯಾಪ್ತಿಯ ಶ್ರೀಗಂಧನಗರದ ಹೆಗ್ಗನಹಳ್ಳಿಯಲ್ಲಿ ನಡೆದ ಸರ ಕಳ್ಳತನ ಪ್ರಕರಣದಲ್ಲಿ ಸುಂಕದಕಟ್ಟೆ ನಿವಾಸಿ ಮನೋಜ್‌ಕುಮಾರ್ (27) ಎಂಬಾತನನ್ನು ಬಂಧಿಸಿ, ₹90 ಸಾವಿರ ಮೌಲ್ಯದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಜೂನ್ 19ರಂದು ಬಾಲಾಜಿ ಅಪಾರ್ಟ್‌ಮೆಂಟ್ ಬಳಿ ಬೈಕ್‌ನಲ್ಲಿ ತೆರಳುತ್ತಿದ್ದ ವ್ಯಕ್ತಿಯೊಬ್ಬರ ಕತ್ತಿನಲ್ಲಿದ್ದ ಚಿನ್ನದ ಸರವನ್ನು ಬೈಕ್‌ನಲ್ಲಿ ಬಂದಿದ್ದ ಆರೋಪಿ ಕಸಿದು ಪರಾರಿಯಾಗಿದ್ದ. ಸರ ಕಳೆದುಕೊಂಡಿದ್ದವರು ನೀಡಿದ ದೂರು ಆಧರಿಸಿ, ಹೆಗ್ಗನಹಳ್ಳಿ ಕೆ.ಟಿ.ಸಿ ಕಾಲೇಜು ಬಳಿ ಆರೋಪಿಯನ್ನು ಬಂಧಿಸಲಾಯಿತು. ಕೃತ್ಯಕ್ಕೆ ಬಳಸಿದ್ದ ಬೈಕ್ ಜಪ್ತಿ ಮಾಡಲಾಗಿದೆ. ಆರೋಪಿ ಪತ್ತೆಗೆ ವಿವಿಧ ಸ್ಥಳಗಳಲ್ಲಿ ಹಾಕಿದ್ದ ಸಿಸಿಟಿವಿ ಕ್ಯಾಮೆರಾ ಪರಿಶೀಲನೆ ನಡೆಸಲಾಗಿತ್ತು' ಎಂದು ಪೊಲೀಸರು ಹೇಳಿದರು.

ಇಬ್ಬರ ಬಂಧನ: ಹೆಗ್ಗನಹಳ್ಳಿ ಸಂಜೀವಿನಿನಗರದ ಮನೆಯೊಂದರಲ್ಲಿ ಗೃಹಿಣಿ ಧರಿಸಿದ್ದ ಚಿನ್ನದ ಸರ ಕಸಿದು ಪರಾರಿಯಾಗಿದ್ದ ರಾಮಕೃಷ್ಣ ಅಲಿಯಾಸ್ ಸಚ್ಚಿನ್ (37) ಹಾಗೂ ನಾಗೇಶ್ (32) ಎಂಬುವವರನ್ನು ಇದೇ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಜುಲೈ 1ರಂದು ಬಾಡಿಗೆಗೆ ಮನೆ ಕೇಳುವ ನೆಪದಲ್ಲಿ ಬಂದಿದ್ದ ಆರೋಪಿಗಳು, ಮಹಿಳೆಯ ಕತ್ತಿನಲ್ಲಿದ್ದ ಮಾಂಗಲ್ಯದ ಸರವನ್ನು ಕಸಿದುಕೊಂಡು ಪರಾರಿಯಾಗಿದ್ದರು. ಮನೆ ಮಾಲೀಕರು ನೀಡಿದ ದೂರು ಆಧರಿಸಿ, ಠಾಣಾ ವ್ಯಾಪ್ತಿಯ ಆಲದಮರದ ವೃತ್ತದ ಬಳಿ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

'ಬಂಧಿತರಿಂದ ₹1.5 ಲಕ್ಷದ ಮೌಲ್ಯದ ಚಿನ್ನಾಭರಣವನ್ನು ಜಪ್ತಿ ಮಾಡಲಾಗಿದೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ತಿಳಿಸಿದರು.

ರಾಜಕಾಲುವೆ ಕಾಮಗಾರಿ ಪರಿಶೀಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಥಣಿಸಂದ್ರ–ನಾಗವಾರ ಮುಖ್ಯರಸ್ತೆಯ ಎಂ.ಎಸ್. ರಾಮಯ್ಯ ನಾರ್ಥ್ ಸಿಟಿ ಸಮೀಪದಲ್ಲಿ ನಡೆಯುತ್ತಿರುವ ರಾಜಕಾಲುವೆ ಕಾಮಗಾರಿಯ ಪ್ರಗತಿಯನ್ನು ಕಂದಾಯ ಸಚಿವ ಕೃಷ್ಣಬೈರೇಗೌಡ ಪರಿಶೀಲನೆ ನಡೆಸಿದರು.

'ಥಣಿಸಂದ್ರ ವಾರ್ಡ್ ವ್ಯಾಪ್ತಿಯ ಮಾನ್ಯತಾ ಟೆಕ್ ಪಾರ್ಕಿನ ಕೆಳಭಾಗದಲ್ಲಿ ಪ್ರತಿಬಾರಿ ಮಳೆ ಸುರಿದ ಸಂದರ್ಭದಲ್ಲಿ ಪ್ರವಾಹ ಉಂಟಾಗುತ್ತದೆ. ಮಾನ್ಯತಾ ಟೆಕ್ ಪಾರ್ಕ್ ಒಳಗೆ ಮತ್ತು ಹಿಂದಿರುವ ಮೂರ್ನಾಲ್ಕು ಕಿಲೋಮೀಟರ್ ವ್ಯಾಪ್ತಿಯವರೆಗೆ ಮನೆಗಳಿಗೆ ನೀರು ನುಗ್ಗುತ್ತಿದೆ. ಇದಕ್ಕೆ ಪರಿಹಾರ ಕಲ್ಪಿಸುವ ಉದ್ದೇಶದಿಂದ ಕೆಳಭಾಗದಲ್ಲಿರುವ ರಾಜಕಾಲುವೆಯ ವಿಸ್ತರಣೆ ಕಾಮಗಾರಿಯನ್ನು ₹ 10 ಕೋಟಿ ವೆಚ್ಚದಲ್ಲಿ ಕೈಗೊಳ್ಳಲಾಗಿದೆ' ಎಂದು ಸಚಿವರು ತಿಳಿಸಿದರು.



ನಗರದಲ್ಲಿ ಸೋಮವಾರ ಸುರಿದ ಧಾರಾಕಾರ ಮಳೆಯಿಂದಾಗಿ ಅನಿಲ್ ಕುಂಬ್ಳೆ ವೃತ್ತದ ಬಳಿ ಜಲಾವೃತಗೊಂಡ ರಸ್ತೆಯಲ್ಲೇ ವಾಹನ ಸವಾರರು ಸಂಚರಿಸಿದರು —ಪ್ರಜಾವಾಣಿ; ಎಸ್‌.ಕೆ. ದಿನೇಶ್



ಬಳ್ಳಾರಿ ರಸ್ತೆಯ ಎಲಿವೇಟೆಡ್ ರಸ್ತೆಯಲ್ಲಿ ನೀರು ತುಂಬಿಕೊಂಡು ವಾಹನ ಸಂಚಾರಕ್ಕೆ ಹಲವು ತಾಸು ಸಮಸ್ಯೆಯಾಯಿತು

ನಗರದ ಹಲವೆಡೆ ಧಾರಾಕಾರ ಮಳೆ • ವಾಹನ ಸವಾರರ ಪರದಾಟ

ಎಲಿವೇಟೆಡ್ ಎಕ್ಸ್‌ಪ್ರೆಸ್‌ವೇನಲ್ಲಿ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಉತ್ತರ ಭಾಗದಲ್ಲಿ ಸೋಮವಾರ ಅತಿಹೆಚ್ಚು ಮಳೆಯಾಗಿ ಬಳ್ಳಾರಿ ರಸ್ತೆಯ ಎಲಿವೇಟೆಡ್ ಎಕ್ಸ್‌ಪ್ರೆಸ್‌ವೇನಲ್ಲಿ ಮಳೆನೀರು ನಿಂತು ಮೂರು ಗಂಟೆ ವಾಹನ ದಟ್ಟಣೆ ಉಂಟಾಗಿತ್ತು.

ಮಳೆ ನೀರಿನ ಜೊತೆಗೆ ಕಾರು ಹಾಗೂ ಬಿಎಂಟಿಸಿ ಬಸ್ ಕೆಟ್ಟು ನಿಂತದ್ದು ಇನ್ನಷ್ಟು ದಟ್ಟಣೆ ಉಂಟು ಮಾಡಿತು. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಎಲಿವೇಟೆಡ್ ಕಾರಿಡಾರ್‌ನಲ್ಲಿ ಕೊಡಿಗೆಹಳ್ಳಿ ಸಮೀಪ ಮಳೆನೀರು ಹರಿಯದೆ ರಸ್ತೆಯ ಮೇಲೇ ನಿಂತುಕೊಂಡಿತ್ತು. ಸುಮಾರು ಒಂದು ಅಡಿಯಷ್ಟು ನೀರು ನಿಂತಿದ್ದರಿಂದ ವಾಹನ ಸಂಚಾರ ಸುಗಮಗೊಳಿಸಲು ಸಂಚಾರ ಪೊಲೀಸರು ಹರಸಾಹಸ ಪಟ್ಟರು.

ಬಿಬಿಎಂಪಿ ವ್ಯಾಪ್ತಿಯ 198 ವಾರ್ಡ್‌ಗಳಲ್ಲಿ 118 ವಾರ್ಡ್‌ಗಳಲ್ಲಿ ಸೋಮವಾರ ಮಳೆಯಾಯಿತು. ಜಕ್ಕೂರು, ರಾಧಾಕೃಷ್ಣ ದೇವಸ್ಥಾನ, ಅರಮನೆ ನಗರದಲ್ಲಿ ತಲಾ 2.6 ಸೆಂ.ಮೀ, ವಿದ್ಯಾರಣ್ಯಪುರ, ಥಣಿಸಂದ್ರ, ಬ್ಯಾಟರಾಯನಪುರ, ಕೊಡಿಗೇಹಳ್ಳಿಯಲ್ಲಿ ತಲಾ 2.1 ಸೆಂ.ಮೀ, ಕುವೆಂಪುನಗರ, ದಾಸರಹಳ್ಳಿ, ಶೆಟ್ಟಿಹಳ್ಳಿ, ಜಾಲಹಳ್ಳಿ, ಸಂಪಂಗಿರಾಮನಗರ, ಶಾಂತಲಾನಗರದಲ್ಲಿ ತಲಾ 1.9 ಸೆಂ.ಮೀ, ಶಾಂತಿನಗರ, ಬಿನ್ನಿಪೇಟೆಯಲ್ಲಿ ತಲಾ 1.6 ಸೆಂ.ಮೀ ಮಳೆಯಾಗಿದೆ.

ರಾಜರಾಜೇಶ್ವರಿನಗರ, ನಾಯಂಡಹಳ್ಳಿ, ಕೆಂಗೇರಿ, ಹಂಪಿನಗರ, ಬೊಮ್ಮನಹಳ್ಳಿ, ಹೆಮ್ಮಿಗೆಪುರ, ಸಿಂಗಸಂದ್ರ, ಹೊಂಗಸಂದ್ರ ಸುತ್ತಮುತ್ತ ಪ್ರದೇಶಗಳಲ್ಲಿ ಮಳೆಯಾಯಿತು. ಹೆಬ್ಬಾಳ ಮೇಲ್ಸೇತುವೆ, ಕೆಳಭಾಗ, ಜಯಮಹಲ್, ರಾಮಮೂರ್ತಿನಗರ, ಬಳ್ಳಾರಿ ರಸ್ತೆಯ ಸಂಜಯನಗರ ಕ್ರಾಸ್, ವಿಂಡ್ಸರ್ ಮ್ಯಾನರ್ ಸೇತುವೆ, ಕ್ವೀನ್ಸ್ ರಸ್ತೆ, ಬಿನ್ನಿ ಮಿಲ್‌ನಿಂದ ಹುಣಸೇಮರದ ಕಡೆಯ ರಸ್ತೆ, ವೀರಣ್ಣಪಾಳ್ಯದಿಂದ ಹೆಬ್ಬಾಳ ಕಡೆಗೆ, ಕೆಂಪಾಪುರ ಜಂಕ್ಷನ್‌ನಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ಅಡಚಣೆಯಾಗಿತ್ತು.

'ನಾವು ಮನುಜರು' ಆರಂಭ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ಘೋಷಿಸಿದ್ದ 'ನಾವು ಮನುಜರು' ಕಾರ್ಯಕ್ರಮವನ್ನು ಎಲ್ಲಾ ಶಾಲಾ-ಕಾಲೇಜುಗಳಲ್ಲೂ ಆರಂಭಿಸುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸುತ್ತೋಲೆ ಹೊರಡಿಸಿದೆ.

ಸಾಮಾಜಿಕ ಸಾಮರಸ್ಯ, ವೈಜ್ಞಾನಿಕ ಮನೋಭಾವ, ಮೌಲ್ಯಯುತ ಶಿಕ್ಷಣ ಮತ್ತು ಸಹಬಾಳ್ವೆಯನ್ನು ಉತ್ತೇಜಿಸಲು ಸಂಪನ್ಮೂಲ ವ್ಯಕ್ತಿಗಳು, ತಜ್ಞರನ್ನು ಆಹ್ವಾನಿಸಿ ಸಂವಾದ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ವಾರಕ್ಕೆ ಎರಡು ಗಂಟೆಗಳನ್ನು (ತಲಾ 40 ನಿಮಿಷಗಳ ಮೂರು ಕಾರ್ಯಕ್ರಮ) ಮೀಸಲಿಡಲು ಸೂಚಿಸಲಾಗಿದೆ.

ದೇಶದ ಸಮಾಜ ಸುಧಾರಕರು, ಕ್ರಾಂತಿಗಳ ಮಾಹಿತಿ ಒದಗಿಸುವುದು, ಸಮೀಪದ ಐತಿಹಾಸಿಕ ಸ್ಥಳಗಳಿಗೆ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗುವುದು, ಸಮಾಜದಲ್ಲಿನ ಅಸಮಾನತೆ ನಿವಾರಣೆ ಕುರಿತು ಚರ್ಚೆಗಳನ್ನು ಆಯೋಜಿಸಲು ತಿಳಿಸಲಾಗಿದೆ.

ಪ್ರಸಕ್ತ ಶೈಕ್ಷಣಿಕ ಸಾಲಿನಿಂದಲೇ ಎಲ್ಲ ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಶಾಲೆಗಳಿಗೆ ಕಾರ್ಯಕ್ರಮ ಜಾರಿಗೊಳಿಸಲು ಸೂಚಿಸಲಾಗಿದೆ. ಆದರೆ, ಕಾರ್ಯಕ್ರಮ ಅನುಷ್ಠಾನಕ್ಕೆ ಪ್ರತ್ಯೇಕ ಹಣ ಬಿಡುಗಡೆ ಮಾಡಿಲ್ಲ.

ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅಭಿಮತ

'ಸೌಹಾರ್ದದಿಂದ ವ್ಯಾಜ್ಯ ಬಗೆಹರಿಸಿಕೊಳ್ಳಿ'

ಪ್ರಜಾವಾಣಿ ವಾರ್ತೆ


ಬೆಂಗಳೂರು: 'ವ್ಯಾಜ್ಯಗಳನ್ನು ಅನವಶ್ಯಕವಾಗಿ ನ್ಯಾಯಾಲಯಕ್ಕೆ ತಂದು ಸುದೀರ್ಘವಾಗಿ ಬೆಳೆಸುವ ಬದಲು, ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳಬೇಕಾದ ಅಗತ್ಯವಿದೆ' ಎಂದು ಹೈಕೋರ್ಟ್ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ತಿಳಿಸಿದರು.

ಸೌಂದರ್ಯ ಕಾನೂನು ಕಾಲೇಜು ನಗರದಲ್ಲಿ ಹಮ್ಮಿಕೊಂಡ ಕಾನೂನು ಸೇವೆಗಳ ಕ್ಲಿನಿಕ್ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ, ಮಾತನಾಡಿದರು.

'ದೇಶದಲ್ಲಿ ಸಾಕಷ್ಟು ಪ್ರಕರಣಗಳು ಹಲವು ವರ್ಷಗಳಿಂದ ಇತ್ಯರ್ಥವಾಗದೇ ಉಳಿದಿವೆ. ಇದಕ್ಕೆ ವಕೀಲರು ಮತ್ತು ನ್ಯಾಯಾಧೀಶರು ಮಾತ್ರ ಕಾರಣವಲ್ಲ. ಬೆಳೆಯುತ್ತಿರುವ ಜನಸಂಖ್ಯೆಯಿಂದಾಗಿ ಹೆಚ್ಚುತ್ತಿರುವ ವಿವಾದ, ಮನಸ್ತಾಪಗಳೂ ಕಾರಣ. ವ್ಯಾಜ್ಯದ ಮೇಲೆ ಮೇಲ್ಮನವಿಗಳನ್ನು ಸಲ್ಲಿಸಿ, ವರ್ಷಗಟ್ಟಲೆ ಕಾಲಹರಣ ಮಾಡುವುದರಿಂದ ಪ್ರಕರಣಗಳು ಇತ್ಯರ್ಥಗೊಳ್ಳುವುದು ವಿಳಂಬವಾಗುತ್ತಿವೆ. ಹೀಗಾಗಿ, ವ್ಯಾಜ್ಯವನ್ನು ಒಂದು ಚೌಕಟ್ಟಿನೊಳಗೆ ಬಗೆಹರಿಸುವ ಅಗತ್ಯವಿದೆ. ಅದಕ್ಕಾಗಿ ವಕೀಲರು ತಮ್ಮ ಬಳಿ ಬರುವ ಕಕ್ಷೀದಾರರಿಗೆ ಈ ಬಗ್ಗೆ ತಿಳಿಹೇಳಿ, ಸೌಹಾರ್ದಯುತವಾಗಿ ವ್ಯಾಜ್ಯ ಬಗೆಹರಿಸಿಕೊಳ್ಳಲು ಸಹಕರಿಸಬೇಕು' ಎಂದು ತಿಳಿಸಿದರು.

ವಕೀಲರ ವಾಹಿನಿ ಪತ್ರಿಕೆಯ ಸಂಪಾದಕ ಮತ್ತು ಪ್ರಕಾಶಕ ಡಿ.ಎಂ. ಹೆಗ್ಡೆ, 'ನ್ಯಾಯದಾನಕ್ಕೆ ಸಂಬಂಧಿಸಿದಂತೆ ಗೆದ್ದವ ಸೋತ, ಸೋತವ ಸತ್ತ ಎಂಬ ಮಾತಿದೆ. ಯಾವುದೇ ಪ್ರಕರಣ ಇರಲಿ ಇಬ್ಬರಿಗೂ ಸಮಾಧಾನವಾಗುವಂತೆ ಬಗೆಹರಿಸುವ ವ್ಯವಸ್ಥೆ ಹೆಚ್ಚಾಗಬೇಕು. ಅದಕ್ಕಾಗಿ ಈಗ ಪರ್ಯಾಯ ವಿವಾದ ಪರಿಹಾರ ಎಂಬ ವ್ಯವಸ್ಥೆ ಜಾರಿಯಲ್ಲಿದೆ. ನ್ಯಾಯಾಲಯಗಳೂ ಅದಕ್ಕೆ ಸಹಕರಿಸುತ್ತವೆ' ಎಂದು ತಿಳಿಸಿದರು.

ಸೌಂದರ್ಯ ಕಾಲೇಜಿನ ಅಧ್ಯಕ್ಷ ಸೌಂದರ್ಯ ಪಿ. ಮಂಜಪ್ಪ, 'ಜಗತ್ತಿನಲ್ಲಿ ಭಾರತದ ಮಕ್ಕಳಿಗೆ ಮತ್ತು ಅವರ ಜ್ಞಾನಕ್ಕೆ ಬೇಡಿಕೆಯಿದೆ. ಹೀಗಾಗಿಯೇ ಸಾಕಷ್ಟು ಮಂದಿ ವಿದೇಶಗಳಿಗೆ ತೆರಳುತ್ತಾರೆ. ಅವರು ಇಲ್ಲಿಯೇ ಉಳಿದು, ದೇಶಕ್ಕಾಗಿ ಸೇವೆ ಸಲ್ಲಿಸುವಂತಹ ವ್ಯವಸ್ಥೆ ಸೃಷ್ಟಿಯಾಗಬೇಕು' ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ನ್ಯಾ.ಕೃಷ್ಣ ಎಸ್. ದೀಕ್ಷಿತ್ ಮಾತನಾಡಿದರು. ಸೌಂದರ್ಯ ಕಾನೂನು ಕಾಲೇಜಿನ ಪ್ರಾಂಶುಪಾಲ ಬಿ.ಪಿ.ಮಹೇಶ್, ಸೌಂದರ್ಯ ಪಿ. ಮಂಜಪ್ಪ, ಡಿ.ಎಂ.ಹೆಗ್ಡೆ ಹಾಗೂ ಸೌಂದರ್ಯ ಎಜುಕೇಷನಲ್ ಟ್ರಸ್ಟ್‌ನ ಸಿಇಒ ಕೀರ್ತನ್ ಕುಮಾರ್ ಪಾಲ್ಗೊಂಡಿದ್ದರು

ಕೆ.ಸಿ. ಬಲ್ಲಾಳ್ ಆಯ್ಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ದಕ್ಷಿಣ ಕನ್ನಡಿಗರ ಸಂಘ ಬೆಂಗಳೂರು ಇದರ ನೂತನ ಅಧ್ಯಕ್ಷರಾಗಿ ಕೆ.ಸಿ. ಬಲ್ಲಾಳ್ ಆಯ್ಕೆಯಾಗಿದ್ದಾರೆ.

65 ವರ್ಷಗಳ ಇತಿಹಾಸ ಇರುವ ಈ ಸಂಘದ ಸಭೆ ಸೋಮವಾರ ನಡೆಯಿತು. ಅಧ್ಯಕ್ಷರ ಆಯ್ಕೆ ಮಾಡಲಾಯಿತು ಎಂದು ಸಂಘ ತಿಳಿಸಿದೆ.

ಬಿಆರ್‌ಟಿಯಲ್ಲಿ ಹೆಣ್ಣಾನೆ ಸಾವು

ಹನೂರು (ಚಾಮರಾಜನಗರ ಜಿಲ್ಲೆ): ಬಿಆರ್‌ಟಿ ಹುಲಿಸಂರಕ್ಷಿತ ಪ್ರದೇಶದಲ್ಲಿ ಸೋಮವಾರ 35 ವರ್ಷದ ಹೆಣ್ಣಾನೆ ಮೃತಪಟ್ಟಿದೆ.

ಬೈಲೂರು ವನ್ಯಜೀವಿ ವಲಯದ ಮಾವತ್ತೂರು ಅರಣ್ಯ ಪ್ರದೇಶದಲ್ಲಿ ಗಸ್ತಿನಲ್ಲಿದ್ದ ಅರಣ್ಯ ಸಿಬ್ಬಂದಿಗೆ ಕಳೇಬರ ಕಂಡುಬಂದಿದೆ. ಸ್ಥಳಕ್ಕೆ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಡಿಸಿಎಫ್ ದೀಪ್ ಜೆ. ಕಂಟ್ರಾಕ್ಟರ್ ಹಾಗೂ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ನಂದಗೋಪಾಲ್ ಭೇಟಿನೀಡಿ ಪರಿಶೀಲಿಸಿದರು.

ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಎಚ್.ಎನ್. ನಾಗಮೋಹನದಾಸ್

'ಪುಸ್ತಕ ಪ್ರಕಾಶನ, ಮಾರಾಟದಲ್ಲಿ ಹೊಸತನ ಬರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪುಸ್ತಕ ಪ್ರಕಾಶಕರು ಮತ್ತು ಸರ್ಕಾರವು ಹೊಸ ಕಾರ್ಯವಿಧಾನಗಳನ್ನು ಕಂಡುಕೊಂಡು ಓದುಗರಿಗೆ ಪುಸ್ತಕ ತಲುಪಿಸುವ ಕೆಲಸ ಮಾಡಬೇಕು' ಎಂದು ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ಅವರು ಸಲಹೆ ಮಾಡಿದರು.

ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದಿಂದ ಹಮ್ಮಿಕೊಳ್ಳಲಾಗಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಅಮೆರಿಕದಲ್ಲಿ ಪುಸ್ತಕ ಖರೀದಿಸಿ, ಓದಿದ ನಂತರ ಹಾಳು ಮಾಡದೇ ಮೂರು ದಿನಗಳಲ್ಲಿ ವಾಪಸು ಮಾಡಿದರೆ ಪುಸ್ತಕ ದರದ ಶೇ 75ರಷ್ಟು ವಾಪಸು ನೀಡುತ್ತಾರೆ. 1 ವಾರದಲ್ಲಿ ವಾಪಸು ಮಾಡಿದರೆ ಶೇ 50, 3 ವಾರಗಳಲ್ಲಿ ವಾಪಸು ಮಾಡಿದರೆ ಶೇ 25 ದರ ವಾಪಸು ಮಾಡುತ್ತಾರೆ. ಅಂಥ ಪದ್ಧತಿ ನಮ್ಮಲ್ಲೂ ಬರಬೇಕು' ಎಂದು ಸಲಹೆ ನೀಡಿದರು.

'ಅಲ್ಲಿನ ನ್ಯಾಯಾಲಯದಲ್ಲಿ ಒಂದು ತೀರ್ಪು ಬಂದರೆ ಬರಹಗಾರರು ಜಾಲಾಡಿಸಿಬಿಡುತ್ತಾರೆ. ವಿಮರ್ಶಿಸುತ್ತಾರೆ. ಪ್ರಶ್ನೆ ಮಾಡುತ್ತಾರೆ. ಆ ಬಗ್ಗೆ ಪುಸ್ತಕವನ್ನೇ ತರುತ್ತಾರೆ. ಆದರೆ, ನಮ್ಮಲ್ಲಿ ತೀರ್ಪುಗಳನ್ನು ಓದುವ ಅಭ್ಯಾಸವೇ ಇಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಬರವಣಿಗೆಯಲ್ಲಿ ಯಾರಿಗಾದರೂ ಮಾನನಷ್ಟ ಉಂಟು ಮಾಡಿದರೆ ಬರಹಗಾರನ ಜೊತೆಗೆ ಪ್ರಕಾಶಕನೂ ಜವಾಬ್ದಾರಿ. ಇಂಥ ಒಂದು ಮೊಕದ್ದಮೆ ಹೂಡಿದರೆ ಪ್ರಕಾಶಕ ದುಡಿದಿರುವುದನ್ನೆಲ್ಲ ಅದಕ್ಕೆ ವೆಚ್ಚ ಮಾಡಬೇಕಾಗುತ್ತದೆ. ಇದನ್ನು ತಪ್ಪಿಸಲು ವಿಮೆ ಮಾಡಿಸಬೇಕು ಎಂದು ಸಲಹೆ ನೀಡಿದರು.

ಕಾನೂನು ಪುಸ್ತಕದಿಂದ 'ಕ್ರಿಮಿನಲ್ ಕಂಟೆಂಟ್ ಆಫ್ ಕೋರ್ಟ್', 'ಕ್ರಿಮಿನಲ್ ಡಿಫಮೇಶನ್', 'ಸೆಡಿಶನ್' ತೆಗೆದು ಅಭಿವ್ಯಕ್ತಿ ಸ್ವಾತಂತ್ರ್ಯ ಕಾಪಾಡಬೇಕು ಎಂದು ಒತ್ತಾಯಿಸಿದರು.

ಸಂಘದ ಅಧ್ಯಕ್ಷ ನಿಡಸಾಲೆ ಪುಟ್ಟಸ್ವಾಮಯ್ಯ ಅವರು, '2020ನೇ ಸಾಲಿನ ಸಗಟು ಪುಸ್ತಕ ಖರೀದಿಯ ಹಣ ₹13 ಕೋಟಿಯನ್ನು ಸರ್ಕಾರ ಬಿಡುಗಡೆ ಮಾಡಬೇಕು. 3 ವರ್ಷಗಳಿಂದ ಪುಸ್ತಕ ಖರೀದಿಯಾಗಿಲ್ಲ. ಖರೀದಿಗೆ ಪುಟಕ್ಕೆ 40 ಪೈಸೆ ಹೆಚ್ಚಿಸಬೇಕು. ಹೈಟೆಕ್ ಗ್ರಂಥಾಲಯ ತೆರೆಯಬೇಕು' ಎಂದು ಆಗ್ರಹಿಸಿದರು.

ಎನ್. ಜಗದೀಶ ಕೊಪ್ಪ ಅವರಿಗೆ 'ಸಾಹಿತ್ಯ ರತ್ನ', ರಂಜಿನಿ ರಾಘವನ್ ಅವರಿಗೆ 'ಯುವ ಸಾಹಿತ್ಯ ರತ್ನ', ಅಭಿರುಚಿ ಗಣೇಶ್ ಅವರಿಗೆ 'ಪುಸ್ತಕ ರತ್ನ', ಟಂಕಸಾಲ ಎಸ್. ನಾಗರಾಜ್ ಅವರಿಗೆ 'ಮುದ್ರಣ ರತ್ನ' ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಸಾರ್ವಜನಿಕ ಗ್ರಂಥಾಲಯ ಇಲಾಖೆಯ ನಿರ್ದೇಶಕಿ ಎಂ. ಕನಗವಲ್ಲಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಸಂಘದ ಕಾರ್ಯದರ್ಶಿ ಆರ್. ದೊಡ್ಡೇಗೌಡ ಉಪಸ್ಥಿತರಿದ್ದರು.



ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘದಿಂದ ಶನಿವಾರ ರಜನಿ ರಾಘವನ್ (ಯುವ ಸಾಹಿತ್ಯ ರತ್ನ), ಟಂಕಸಾಲ ಎಸ್. ನಾಗರಾಜ್ (ಮುದ್ರಣ ರತ್ನ ಪ್ರ), ಎನ್. ಜಗದೀಶ್ ಕೊಪ್ಪ (ಸಾಹಿತ್ಯ ರತ್ನ) ಮತ್ತು ಅಭಿರುಚಿ ಗಣೇಶ (ಪುಸ್ತಕ ರತ್ನ) ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು —ಪ್ರಜಾವಾಣಿ ಚಿತ್ರ

ರಾಮಸೇತು ನಕ್ಷೆ ಸಿದ್ಧಪಡಿಸಿದ ಇಸ್ರೊ ವಿಜ್ಞಾನಿಗಳು

ಪ್ರಜಾವಾಣಿ ವಾರ್ತೆ

ನವದೆಹಲಿ: ಅಮೆರಿಕದ ಉಪಗ್ರಹದ ದತ್ತಾಂಶಗಳನ್ನು ಬಳಸಿಕೊಂಡು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ವಿಜ್ಞಾನಿಗಳು ರಾಮಸೇತುವಿನ ಅತ್ಯಂತ ವಿವರವಾದ ನಕ್ಷೆಯನ್ನು ಸಿದ್ಧಪಡಿಸಿದ್ದಾರೆ.

ಭಾರತ ಮತ್ತು ಶ್ರೀಲಂಕಾ ನಡುವೆ ಇರುವ ಈ ಸೇತುವೆಯ ಮೂಲದ ಕುರಿತು ದೀರ್ಘಕಾಲದಿಂದ ಇರುವ ವಿವಾದಗಳನ್ನು ಬಗೆಹರಿಸಲು ಈ ನಕ್ಷೆಯಿಂದ ಸಾಧ್ಯವಾಗಲಿದೆ ಎಂದು ಭಾವಿಸಲಾಗಿದೆ.

29 ಕಿ.ಮೀ. ಉದ್ದದ ಸೇತುವೆಯ ಸಮುದ್ರದಡಿಯ ನಕ್ಷೆಯನ್ನು ಇಷ್ಟೊಂದು ನಿಖರವಾಗಿ ಸಿದ್ಧಪಡಿಸಿರುವುದು ಇದೇ ಮೊದಲು. ಸೇತುವೆಯು ಸಮುದ್ರದ ತಳದಿಂದ ಎಂಟು ಮೀ.ನಷ್ಟು ಎತ್ತರದಲ್ಲಿದೆ ಎಂದು ನಕ್ಷೆಯಲ್ಲಿ ತೋರಿಸಲಾಗಿದೆ.

'ನಾಸಾದ ಐಸಿಇಸ್ಯಾಟ್‌–2 ಉಪಗ್ರಹದ ದತ್ತಾಂಶಗಳನ್ನು ಬಳಸಿಕೊಂಡು ನಕ್ಷೆ ಸಿದ್ಧಪಡಿಸಲಾಗಿದೆ. ರಾಮಸೇತು ಮತ್ತು ಅದರ ಉಗಮದ ಬಗ್ಗೆ ಇನ್ನಷ್ಟು ತಿಳಿಯಲು ಇದು ನೆರವಾಗಲಿದೆ' ಎಂದು ಇಸ್ರೊದ ನ್ಯಾಷನಲ್ ರಿಮೋಟ್ ಸೆನ್ಸಿಂಗ್ ಸೆಂಟರ್‌ನ ವಿಜ್ಞಾನಿಗಳು ಹೇಳಿರುವುದಾಗಿ 'ಸೈಂಟಿಫಿಕ್ ರಿಪೋರ್ಟ್ಸ್'ನಲ್ಲಿ ಪ್ರಕಟವಾದ ವರದಿ ತಿಳಿಸಿದೆ.

ನಾಸಾದ ಉಪಗ್ರಹವು ಲೇಸರ್ ಆ್ಯಲ್ಟಿಮೀಟರ್ ಉಪಕರಣ ಹೊಂದಿದ್ದು, ಅದರ ನೆರವಿನಿಂದ ಸಮುದ್ರದ ಆಳವಿಲ್ಲದ ಪ್ರದೇಶದ ಯಾವುದೇ ರಚನೆಯ ಎತ್ತರವನ್ನು ಅಳೆಯಲು ಸಾಧ್ಯವಾಗುತ್ತದೆ.

ನುಡಿ ನಮನ ಕಾರ್ಯಕ್ರಮದಲ್ಲಿ ಚಿರಂಜೀವಿ ಸಿಂಘ್

ಪ್ರಚಾರದ ಹಂಗಿಲ್ಲದ ಸಾಹಿತಿ ಖಲೀಲ್ ಮಾಮೂನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉರ್ದು ಕವಿ ಗುಲ್ಜಾರ್‌ಗೆ ಈ ಬಾರಿಯ ಜ್ಞಾನಪೀಠ ಪ್ರಶಸ್ತಿ ನೀಡಲಾಗಿದೆ. ಅದಕ್ಕೂ ಮುನ್ನ ಖಲೀಲ್ ಮಾಮೂನ್ ಅವರನ್ನು ಗುರುತಿಸಿ ಜ್ಞಾನಪೀಠ ಪ್ರಶಸ್ತಿ ನೀಡಬೇಕಿತ್ತು. ಉರ್ದು ಸಾಹಿತ್ಯಕ್ಕೆ ಅಷ್ಟೊಂದು ದೊಡ್ಡ ಕೊಡುಗೆ ನೀಡಿದವರು ಅವರು' ಎಂದು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಘ್ ತಿಳಿಸಿದರು.

ರಾಜ್ಯ ಉರ್ದು ಅಕಾಡೆಮಿ ಸೋಮವಾರ ಆಯೋಜಿಸಿದ್ದ ಉರ್ದು ಕವಿ, ಬರಹಗಾರ ಹಾಗೂ ಅನುವಾದಕ 'ಖಲೀಲ್ ಮಾಮೂನ್‌ರವರಿಗೆ ನುಡಿ ನಮನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಖಲೀಲ್ ಮಾಮೂನ್ ಕರ್ನಾಟಕಕ್ಕೆ ಸೀಮಿತವಾದ ವ್ಯಕ್ತಿಯಾಗಿರಲಿಲ್ಲ. ತಮ್ಮ ಸಾಹಿತ್ಯದ ಮೂಲಕ ವಿಶ್ವದಾದ್ಯಂತ ಉರ್ದು ಭಾಷಿಕರಲ್ಲಿ ಚಿರಪರಿಚಿತರಾಗಿದ್ದರು. ಯಾವತ್ತೂ ಪ್ರಚಾರದ ಹಂಗಿಗೆ ಬೀಳದೇ, ಪ್ರಶಸ್ತಿ, ಸನ್ಮಾನಗಳಿಗೆ ಹಾತೊರೆಯದೇ ಬರೆದವರು. ಅವರಂತೆ ಅರ್ಥಗರ್ಭಿತ, ಮೌಲ್ಯಯುತ ಕವಿತೆಗಳನ್ನು ಬರೆಯಲು ಈಗಿನವರಿಗೆ ಕಷ್ಟ. ಅವರ ಎಂಟು ಕೃತಿಗಳನ್ನು ಉರ್ದು ಅಕಾಡೆಮಿ ಒಟ್ಟುಗೂಡಿಸಿ ಸಮಗ್ರ ಸಾಹಿತ್ಯ ಸಂಪುಟ ಹೊರತರಬೇಕು' ಎಂದು ಸಲಹೆ ನೀಡಿದರು.

ಖಲೀಲ್ ಮಾಮೂನ್ ಅವರ ಜೀವನ, ಸಾಧನೆ, ಸಾಹಿತ್ಯದ ಕುರಿತು ಕಾರ್ಯಕ್ರಮದ ಸಂಚಾಲಕ ಮುಹಮ್ಮದ್ ಆಜಂ ಶಾಹೀದ್ ಬೆಳಕು ಚೆಲ್ಲಿದರು.


ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷ ಯು. ನಿಸಾರ್ ಅಹ್ಮದ್, ಸಾಹಿತಿ ಎಚ್.ಎಸ್.ಶಿವಪ್ರಕಾಶ್, ರಾಜ್ಯ ಉರ್ದು ಅಕಾಡೆಮಿಯ ಅಧ್ಯಕ್ಷ ಮೌಲಾನ ಮುಹಮ್ಮದ್ ಅಲಿ ಖಾಝಿ, ಸದಸ್ಯರಾದ ಶಾಹಿದ್ ಖಾಝಿ, ಅನೀಸ್ ಸಿದ್ದೀಖಿ, ಝುಫರ್ ಮೊಹಿಯುದ್ದೀನ್, ದಾವೂದ್ ಮೊಹ್ಸಿನ್, ಅಮೀನ್ ನವಾಝ್, ಆಬಿದ್ ಅಸ್ಲಮ್, ಶಾಯಿಸ್ತಾ ಯೂಸುಫ್, ಮಿಲನ್‌ಸಾರ್ ಅಥರ್ ಅಹ್ಮದ್, ಮಾಹೆರ್ ಮನ್ಸೂರ್ ಭಾಗವಹಿಸಿದ್ದರು.



ಉರ್ದು ಕವಿ ಖಲೀಲ್ ಮಾಮೂನ್ ಅವರಿಗೆ ನುಡಿ ನಮನ ಕಾರ್ಯಕ್ರಮದಲ್ಲಿ ಬರಹಗಾರರಾದ ಎಚ್.ಎಸ್. ಶಿವಪ್ರಕಾಶ್, ಮೊಹಮ್ಮದ್ ಆಜಂ ಶಾಹೀದ್, ಶಾಹಿಸ್ತಾ ಯೂಸೂಫ್, ಚಿರಂಜೀವಿ ಸಿಂಘ್, ಮೊಹಮ್ಮದ್ ಅಲಿ ಖಾಝಿ ಭಾಗವಹಿಸಿದ್ದರು. ಪ್ರಜಾವಾಣಿ ಚಿತ್ರ

ನಗರದಲ್ಲಿ ಇಂದು

ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ಪುನರ್‌ಮನನ ಕಾರ್ಯಾಗಾರ, ಸೆಟ್ ಮೆರಿಟ್ ವಿದ್ಯಾರ್ಥಿವೇತನ ವಿತರಣೆ: ಅತಿಥಿಗಳು: ಅಂಜನಪ್ಪ ಟಿ.ಎಚ್., ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಎನ್.ಆರ್. ಪಂಡಿತ ಆರಾಧ್ಯ, ಆಯೋಜನೆ ಮತ್ತು ಸ್ಥಳ: ಶೇಷಾದ್ರಿಪುರಂ ಇಂಡಿಪೆಂಡೆಂಟ್ ಪಿ.ಯು ಕಾಲೇಜು, ಕೆಂಗೇರಿ ಉಪನಗರ, ಬೆಳಿಗ್ಗೆ 9



ವಚನ ಪಿತಾಮಹ ಡಾ.ಫ.ಗು. ಹಳಕಟ್ಟಿ ಅವರ ಜನ್ಮದಿನಾಚರಣೆ: ಸಾನ್ನಿಧ್ಯ: ತೋಂಟದ ಸಿದ್ಧರಾಮ ಸ್ವಾಮೀಜಿ, ಉದ್ಘಾಟನೆ: ಎಂ.ಬಿ. ಪಾಟೀಲ, ಅಧ್ಯಕ್ಷತೆ: ಚಂದ್ರಶೇಖರ ಕಂಬಾರ, ಆಶಯ ನುಡಿ: ಸಿ. ಸೋಮಶೇಖರ್, ಆಯೋಜನೆ: ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು, ಕದಳಿ ಮಹಿಳಾ ವೇದಿಕೆ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಶೇಷಾದ್ರಿಪುರ, ಸಂಜೆ 5

ಭಜನ-ಪ್ರವಚನ-ಸಂಕೀರ್ತನ: ಭಜನೆ: ವಾಣಿ ಮತ್ತು ತಂಡ, ಪ್ರವಚನ: ರಾಮವಿಠಲಾಚಾರ್ಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂ ಧರ್ಮ ಪ್ರಚಾರ ಪರಿಷತ್, ಸ್ಥಳ: ರಾಮಮಂದಿರ ಮೂರನೇ ಬಡಾವಣೆ, ರಾಜಾಜಿನಗರ, ಸಂಜೆ 6

ಸುನಿತಾ ಕೃಷ್ಣನ್ ಅವರ 'ಸ್ಟೋರಿಸ್ ಆಫ್ ಸರ್ವೈವಲ್ ಆ್ಯಂಡ್ ಟ್ರೈಂಪ್' ಪುಸ್ತಕದ ಕುರಿತು ಚರ್ಚೆ: ಭಾಷಣಕಾರರು: ಸುನಿತಾ ಕೃಷ್ಣನ್, ಗೀತಾ ಮೆನನ್, ಕೃಪಾ ಸುಕುಮಾರನ್, ಭಾವನಾ ಚಿರಂಜಯ್, ಮೊಹುವಾ ಚಿನ್ನಪ್ಪ, ಆಯೋಜನೆ: ವೆಸ್ಟ್‌ಲ್ಯಾಂಡ್ ಬುಕ್ಸ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ. nagaradalli_indu@prajavani.co.in

ಚಿತ್ರಾವಳಿ



ಬಸವನಗುಡಿಯ ನ್ಯಾಷನಲ್ ಕಾಲೇಜಿನ ಡಾ.ಎಚ್.ಎನ್. ಮಲ್ಟಿಮೀಡಿಯಾ ಹಾಲ್‌ನಲ್ಲಿ ಡಿಮ್ ಎನ್ ಡಿಪ್ ಸ್ಟುಡಿಯೋಸ್ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕಾವ್ಯಾ ಕಡಮೆ ಅವರ (ಎಡದಿಂದ ಮೂರನೇಯವರು) 'ಸಂಜೀವಿನಿ ಸ್ಟೋರ್ಸ್', 'ತೊಟ್ಟು ಕ್ರಾಂತಿ' ಕೃತಿಗಳನ್ನು ಸಾಮಾಜಿಕ ಹೋರಾಟಗಾರ್ತಿ ದು. ಸರಸ್ವತಿ ಅವರು ಭಾನುವಾರ ಬಿಡುಗಡೆಗೊಳಿಸಿದರು. ನಾಟಕಕಾರ ಕೆ.ವೈ. ನಾರಾಯಣಸ್ವಾಮಿ, ಪ್ರಾಧ್ಯಾಪಕ ಹುಲಿಕುಂಟೆ ಮೂರ್ತಿ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ



ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ನಾಯಂಡಹಳ್ಳಿ ಮೆಟ್ರೊ ಲೇಔಟ್‌ನಲ್ಲಿ ಕೊಳವೆ ಬಾವಿ ಮೂಲಕ ಶುದ್ಧ ಕುಡಿಯುವ ನೀರು ಪೂರೈಕೆಗೆ ಸಂಸದ ತೇಜಸ್ವಿ ಸೂರ್ಯ ಸೋಮವಾರ ಚಾಲನೆ ನೀಡಿದರು. ಬಿಜೆಪಿ ಮುಖಂಡ ಡಾ. ಅರುಣ್ ಸೋಮಣ್ಣ, ಮಂಡಲ ಅಧ್ಯಕ್ಷ ವಿಶ್ವನಾಥ್ ಗೌಡ, ಬಿಬಿಎಂಪಿ ಮಾಜಿ ಸದಸ್ಯರಾದ ಕೆ. ಉಮೇಶ್ ಶೆಟ್ಟಿ, ಮೋಹನ್ ಕುಮಾರ್, ದಾಸೆ ಗೌಡ, ಪಲ್ಲವಿ ಚನ್ನಪ್ಪ, ಮಹಿಳಾ ಮಂಡಲದ ಅಧ್ಯಕ್ಷೆ ರತ್ನಮ್ಮ, ರಾಜೇಶ್ವರಿ ಬೆಳಗೋಡು ಭಾಗವಹಿಸಿದ್ದರು

ಹೊರವರ್ತುಲ ರಸ್ತೆ–ಹೊಸಕೆರೆಹಳ್ಳಿ ಕೆರೆಕೋಡಿ ಜಂಕ್ಷನ್ ಗ್ರೇಡ್ ಸೆಪರೇಟರ್

ನಾಲ್ಕು ವರ್ಷಗಳಿಂದ ನಿತ್ಯವೂ 'ಹೊಸ' ಸಮಸ್ಯೆ

• ಆರ್. ಮಂಜುನಾಥ್

ಬಿಬಿಎಂಪಿ ಕಾಮಗಾರಿ ಮುಗಿಸೋದು ಯಾವಾಗ ರೀ?

ನಗರದಲ್ಲಿ ಕೆಲವು ವರ್ಷಗಳ ಹಿಂದೆ ಆರಂಭವಾಗಿರುವ ಗ್ರೇಡ್ ಸೆಪರೇಟರ್ ಹಾಗೂ ಮೇಲ್ಸೇತುವೆ ಕಾಮಗಾರಿಗಳು ಆಮೆಗತಿಯಲ್ಲಿವೆ. ಬಿಲ್ ಪಾವತಿ ವಿಳಂಬದಿಂದ ಕಾಮಗಾರಿ ನಿಧಾನವಾಗಿದೆ ಎಂಬ ಆರೋಪವಿದೆ. ಈ ಮಧ್ಯೆ ಸರ್ಕಾರ ಹೊಸದಾಗಿ 11 ಮೇಲ್ಸೇತುವೆಗಳನ್ನು ನಿರ್ಮಿಸಲು ಮುಂದಾಗಿದೆ. ನಿಧಾನಗತಿಯ ಕಾಮಗಾರಿಯಿಂದ ಜನರಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ಈ ಬಗ್ಗೆ 'ಬಿಬಿಎಂಪಿ ಕಾಮಗಾರಿ ಮುಗಿಸೋದು ಯಾವಾಗ ರೀ?' ಸರಣಿ ಬೆಳಕು ಚೆಲ್ಲಲಿದೆ....

ಬೆಂಗಳೂರು: ಸುಗಮ ಸಂಚಾರಕ್ಕೆ ಅನುವಾಗ ಬೇಕಾಗಿದ್ದ ಮೇಲ್ಸೇತುವೆ ಹಾಗೂ ಅಂಡರ್‌ಪಾಸ್‌ಗಳ ಕಾಮಗಾರಿಗಳು ವರ್ಷಗಳಿಂದ ನಿಧಾನಗತಿಯಲ್ಲೇ ಸಾಗಿವೆ. ಸಂಚಾರ ದಟ್ಟಣೆ ತಗ್ಗಿಸುವ ಉದ್ದೇಶದಿಂದ ಆರಂಭಿಸಿರುವ ಕಾಮಗಾರಿಗಳೇ ಕುಂಟುತ್ತಾ ಸಾಗಿರುವುದರಿಂದ ಪರಿಹಾರ ಮರೀಚಿಕೆಯಾಗಿಯೇ ಉಳಿಯುವಂತಾಗಿದೆ.

ಮೇಲ್ಸೇತುವೆ, ಅಂಡರ್‌ಪಾಸ್‌ಗಳ ಕಾಮಗಾರಿ ನಿಧಾನಗತಿಗೆ ಬಿಲ್ ಪಾವತಿ ವಿಳಂಬವೇ ಪ್ರಮುಖ ಕಾರಣ ಎಂದು ಹೇಳಲಾಗುತ್ತಿದೆ. ಇದರ ಜೊತೆಗೆ ಸ್ಥಳೀಯವಾಗಿ ಸಾಕಷ್ಟು ತೊಂದರೆಗಳು ಎದುರಾಗುತ್ತಿದ್ದು, ಅಧಿಕಾರಿಗಳು ಇದನ್ನು ಬಗೆಹರಿಸುತ್ತಿಲ್ಲ ಎಂಬ ವಾದವೂ ಇದೆ. ಎಂಜಿನಿಯರ್‌ಗಳು ಹಾಗೂ ಗುತ್ತಿಗೆದಾರರ ಪರಸ್ಪರ ದೋಷಾರೋಪದ ಮಧ್ಯೆ ನಾಗರಿಕರು ನಿತ್ಯವೂ ಪರಿತಪಿಸುತ್ತಿದ್ದಾರೆ. 'ಕಾಮಗಾರಿ ಮುಗಿಸೋದು ಯಾವಾಗ' ಎಂದು ಪ್ರಶ್ನಿಸುತ್ತಿದ್ದಾರೆ.

ಅಂದಿನ ಹಾಗೂ ಇಂದಿನ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿಯವರು ಹಲವು ಬಾರಿ 'ನಗರ ಪ್ರದಕ್ಷಿಣೆ' ಹಾಕಿದ ಸಂದರ್ಭದಲ್ಲಿ ಈ ಕಾಮಗಾರಿಗಳನ್ನು ಕಂಡಿದ್ದರು, ವೇಗ ನೀಡಲು ಸೂಚಿಸಿದ್ದರು. ಆದರೆ, ವರ್ಷಗಳು ಉರುಳುತ್ತಿದ್ದರೂ ಕಾಮಗಾರಿಗಳು ಮಾತ್ರ ಮುಗಿಯುವ ಹಂತಕ್ಕೆ ತಲುಪಿಲ್ಲ.

ಮೈಸೂರು ರಸ್ತೆ ಜಂಕ್ಷನ್ ಸಮೀಪದ ಹೊರವರ್ತುಲ ರಸ್ತೆಯಲ್ಲಿ ಗ್ರೇಡ್ ಸೆಪರೇಟರ್ ಕಾಮಗಾರಿ ಆರಂಭವಾಗಿ ನಾಲ್ಕು ವರ್ಷಗಳಾಗುತ್ತಿವೆ. ಹೊರವರ್ತುಲ ರಸ್ತೆಯಲ್ಲಿ ಸಿಗ್ನಲ್‌ರಹಿತ ಸಂಚಾರ ಹಾಗೂ ಹೊಸಕೆರೆಹಳ್ಳಿ, ಕೋಡಿರಸ್ತೆ ಹಾಗೂ ಗಿರಿನಗರದ ಕಡೆಗೆ ಮುಕ್ತವಾಗಿ ಸಾಗಲು ಅನುವಾಗುವಂತೆ ಈ ಗ್ರೇಡ್ ಸೆಪರೇಟರ್ ಅನ್ನು ವಿನ್ಯಾಸಗೊಳಿಸಲಾಗಿದೆ. 15 ತಿಂಗಳಲ್ಲಿ ಮುಗಿಯಬೇಕಾಗಿದ್ದ ಕಾಮಗಾರಿ ಶೇ 50ರಷ್ಟೂ ಮುಗಿದಿಲ್ಲ.

ಮುಖ್ಯಮಂತ್ರಿಯವರ ನವ ನಗರೋತ್ಥಾನ ಅನುದಾನದಲ್ಲಿ ಬಿಬಿಎಂಪಿ ರಾಜರಾಜೇಶ್ವರಿನಗರ ವಲಯದ ರಸ್ತೆ ಮೂಲಸೌಕರ್ಯ ವಿಭಾಗದಿಂದ ನಿರ್ವಹಿಸಲಾಗುತ್ತಿರುವ 'ಹೊಸಕೆರೆಹಳ್ಳಿ ಕೆರೆಕೋಡಿ ರಸ್ತೆ ಜಂಕ್ಷನ್ ಗ್ರೇಡ್ ಸೆಪರೇಟರ್' ಕಾಮಗಾರಿಯನ್ನು ಪಿಜಿಪಿ ಎಂಜಿನಿಯರ್ಸ್ ಸಂಸ್ಥೆ ನಡೆಸುತ್ತಿದೆ.

ನೈಸ್ ಲಿಂಕ್ ರಸ್ತೆಗೆ ಹೊಂದಿಕೊಂಡಂತೆಯೇ ಇರುವ ಹೊಸಕೆರೆಹಳ್ಳಿ ಕೆರೆಕೋಡಿ ರಸ್ತೆ ಜಂಕ್ಷನ್‌ನಲ್ಲಿ ಗ್ರೇಡ್ ಸೆಪರೇಟರ್ ಕಾಮಗಾರಿಯಿಂದ ಸುತ್ತಮುತ್ತಲಿನ ಹೊಸಕೆರೆಹಳ್ಳಿ, ಬಂಗಾರಪ್ಪನಗರ, ಮೂಕಾಂಬಿಕೆನಗರ, ಪ್ರಮೋದ ಲೇಔಟ್, ಗಿರಿನಗರ, ಗಣಪತಿನಗರ, ಆವಲಹಳ್ಳಿ ಪ್ರದೇಶಗಳ ನಿವಾಸಿಗಳಿಗೆ ಪ್ರದೇಶಕ್ಕೆ ಸಂಪರ್ಕ ರಸ್ತೆಯೇ ಇಲ್ಲದಂತಾಗಿದೆ. ಗ್ರೇಡ್ ಸೆಪರೇಟರ್ ಕಾಮಗಾರಿ ನಡೆಯುತ್ತಿರುವ ಸುತ್ತಲೂ ತಡೆಗೋಡೆ ನಿರ್ಮಿಸಲಾಗಿದ್ದು, ಏಕಮುಖ ರಸ್ತೆಯಲ್ಲಿ ಸಾಕಷ್ಟು ದೂರ ಮುಂದೆ ಸಾಗಿ 'ಯೂ ಟರ್ನ್' ಪಡೆದು ಸಾಗಬೇಕಾಗಿದೆ.

ನಾಯಂಡಹಳ್ಳಿ ಜಂಕ್ಷನ್‌ನಿಂದ ಬರುವವರು ಹೊಸಕೆರೆಹಳ್ಳಿ ಕಡೆಗೆ ಹೋಗಲು ಪಿಇಎಸ್ ವಿಶ್ವವಿದ್ಯಾಲಯದವರೆಗೆ ಸಾಗಿ 'ಯೂ ಟರ್ನ್' ಪಡೆಯಬೇಕು. ಗಿರಿನಗರದ ಕಡೆಯಿಂದ ಬರುವವರೂ ಎಡಕ್ಕೆ ಸಾಗಿ, ತಿರುವು ಪಡೆಯಬೇಕು. ಹೊಸಕೆರೆಹಳ್ಳಿ ಕಡೆಯಿಂದ ಬರುವವರು ನಾಯಂಡಹಳ್ಳಿ ಜಂಕ್ಷನ್‌ನ ಮೇಲುರಸ್ತೆಯ ಮಧ್ಯಭಾಗದಲ್ಲಿರುವ ಕೆಳರಸ್ತೆಯಲ್ಲಿ ತಿರುವು ಪಡೆದುಕೊಳ್ಳಬೇಕು. ಇದರಿಂದ ನಿತ್ಯವೂ ಇಲ್ಲಿ ವಾಹನದಟ್ಟಣೆ ಉಂಟಾಗುತ್ತಿದೆ.

'ಗ್ರೇಡ್ ಸೆಪರೇಟರ್ ಕಾಮಗಾರಿಯಿಂದ ಸುತ್ತಮುತ್ತಲಿನಲ್ಲಿರುವ ಮಳಿಗೆಗಳಲ್ಲಿ ವ್ಯಾಪಾರವೂ ಕಡಿಮೆಯಾಗಿದೆ. ರಸ್ತೆಯಲ್ಲಿ ಯಾವಾಗಲೂ ವಾಹನದಟ್ಟಣೆ ಇರುವುದರಿಂದ ಮಳಿಗೆಗಳಿಗೆ ಜನರು ಬರಲು ಸಾಧ್ಯವಿಲ್ಲದಂತಾಗಿದೆ. ಪಾದಚಾರಿ ಮಾರ್ಗವೂ ಇಲ್ಲದಂತಾಗಿದ್ದು, ಪಾದಚಾರಿಗಳಿಗೆ ತೊಂದರೆಯಾಗುತ್ತಿದೆ' ಎಂದು ವ್ಯಾಪಾರಿ ಮನೋಜ್ ಹೇಳಿದರು.



ಹೊರವರ್ತುಲ ರಸ್ತೆಯ ಹೊಸಕೆರೆ ಕೋಡಿರಸ್ತೆ ಜಂಕ್ಷನ್‌ನಲ್ಲಿ ನಿರ್ಮಾಣ ಹಂತದಲ್ಲಿರುವ ಗ್ರೇಡ್ ಸೆಪರೇಟರ್ – ಪ್ರಜಾವಾಣಿ ಚಿತ್ರ/ ರಂಜು ಪಿ.



ಹೊಸಕೆರೆ ಕೋಡಿರಸ್ತೆ ಜಂಕ್ಷನ್ ಅಕ್ಕಪಕ್ಕದ ಕಿರಿದಾದ ರಸ್ತೆಯಲ್ಲಿ ವಾಹನದಟ್ಟಣೆ ಉಂಟಾಗುತ್ತಿದೆ – ಪ್ರಜಾವಾಣಿ ಚಿತ್ರ/ ರಂಜು ಪಿ.

₹30 ಕೋಟಿ	₹9.62 ಕೋಟಿ	2020 ಆಗಸ್ಟ್ 7	15 ತಿಂಗಳು
ಗ್ರೇಡ್ ಸೆಪರೇಟರ್ ವೆಚ್ಚ	ಕಾಮಗಾರಿಗೆ ಬಿಲ್ ಪಾವತಿ	ಗುತ್ತಿಗೆದಾರರಿಗೆ ಕಾರ್ಯಾದೇಶ	ಕಾಮಗಾರಿ ಮುಗಿಸಲು ನೀಡಿದ್ದ ಗಡುವು



ಕಿರಿದಾದ ರಸ್ತೆ

ಪ್ರತಿ ದಿನವೂ ಮಕ್ಕಳನ್ನು ಶಾಲೆಗೆ ಬಿಡಲು ಹಾಗೂ ಕರೆತರಲು ಸಾಕಷ್ಟು ಸಮಸ್ಯೆಯಾಗುತ್ತಿದೆ. ಗಿರಿನಗರದಿಂದ ಹೊಸಹಳ್ಳಿ ಕೆರೆಕೋಡಿ ರಸ್ತೆಗೆ ಹೋಗಲು ಮೂರು ವರ್ಷಗಳಿಂದ ಸುತ್ತುಹಾಕಿಕೊಂಡು ಹೋಗಬೇಕಿದೆ. ಗ್ರೇಡ್ ಸೆಪರೇಟರ್ ಅಕ್ಕಪಕ್ಕದ ರಸ್ತೆಗಳು ತೀರ ಕಿರಿದಾಗಿದ್ದು, ವಾಹನದಟ್ಟಣೆ ಉಂಟಾಗುತ್ತದೆ. ಎಷ್ಟು ಬೇಗ ಮನೆಯಿಂದ ಹೊರಟರೂ ಶಾಲೆಗೆ ಮಕ್ಕಳು ತಡವಾಗಿ ತಲುಪುವಂತಾಗಿದೆ ಎಂದು ಗಿರಿನಗರದ ನಿವಾಸಿ ರಾಮಮನೋಹರ್ ಹೇಳಿದರು.

20 ನಿಮಿಷ ವ್ಯರ್ಥ

ಹೊರವರ್ತುಲ ರಸ್ತೆಯನ್ನು ಸಿಗ್ನಲ್‌ಮುಕ್ತ ಮಾಡುತ್ತೇವೆ ಎಂದು ವರ್ಷಗಳಿಂದ ನಮಗೆ ತೊಂದರೆ ಕೊಡುತ್ತಿದ್ದಾರೆ. ನಾಲ್ಕೈದು ಪಿಲ್ಲರ್‌ಗಳು ನಿಂತುಕೊಂಡು ವರ್ಷಗಳೇ ಕಳೆದರೂ ಕಾಮಗಾರಿ ಮುಂದುವರಿದಿಲ್ಲ. ನಿತ್ಯವೂ ಈ ಜಂಕ್ಷನ್ ದಾಟಬೇಕೆಂದರೆ ಸಾಕಷ್ಟು ಸಮಯ ಬೇಕು. ವಾಹನ ದಟ್ಟಣೆಯ ಅವಧಿಯಲ್ಲಂತೂ 20 ನಿಮಿಷದಿಂದ 30 ನಿಮಿಷ ಇಲ್ಲೇ ವ್ಯರ್ಥವಾಗುತ್ತದೆ ಎಂದು ನಾಯಂಡಹಳ್ಳಿ ನಿವಾಸಿ ರಾಜು ಬೇಸರ ವ್ಯಕ್ತಪಡಿಸಿದರು.

'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ' ಕರಡು ಸಲ್ಲಿಕೆ

ಪ್ರಜಾವಾಣಿ ವಾರ್ತೆ



ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಬಿ.ಎಸ್. ಪಾಟೀಲ, ವಿ. ರವಿಚಂದರ್ ಹಾಗೂ ಸಿದ್ದಯ್ಯ ಅವರು ಸೋಮವಾರ ಗ್ರೇಟರ್ ಬೆಂಗಳೂರು ಆಡಳಿತ ಮಸೂದೆಯ ಕರಡನ್ನು ಸಲ್ಲಿಸಿದರು

ಬೆಂಗಳೂರು: ಬೆಂಗಳೂರು ನಗರಕ್ಕೆ ಹೊಸ ಆಡಳಿತ ವ್ಯವಸ್ಥೆ ಕಲ್ಪಿಸುವ 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ– 2024'ರ ಕರಡು ಸರ್ಕಾರಕ್ಕೆ ಸಲ್ಲಿಕೆಯಾಗಿದೆ.

ಬಿಬಿಎಂಪಿ ಸುಧಾರಣಾ ಸಮಿತಿಯ (ಬ್ರ್ಯಾಂಡ್ ಬೆಂಗಳೂರು ಸಮಿತಿ) ಅಧ್ಯಕ್ಷ ಬಿ.ಎಸ್. ಪಾಟೀಲ, ಸದಸ್ಯರಾದ ವಿ. ರವಿಚಂದರ್ ಹಾಗೂ ಸಿದ್ದಯ್ಯ ಅವರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಸೋಮವಾರ ಮಸೂದೆಯ ಕರಡನ್ನು ಸಲ್ಲಿಸಿದರು.

'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ–2024'ರಲ್ಲಿ ಮೂರು ಹಂತದ ಆಡಳಿತ ವ್ಯವಸ್ಥೆಯನ್ನು ಕಲ್ಪಿಸುವ 'ಗ್ರೇಟರ್ ಬೆಂಗಳೂರು ಪ್ರಾಧಿಕಾರ' (ಜಿಬಿಎ) ರಚನೆಯ ಪ್ರಸ್ತಾವವಿದೆ. ಪ್ರಾಧಿಕಾರ, ಪಾಲಿಕೆ ಹಾಗೂ ವಾರ್ಡ್‌ಗಳೆಂಬ ಮೂರು ಹಂತದಲ್ಲಿ ಆಡಳಿತ ವ್ಯವಸ್ಥೆ ಇರಲಿದೆ. ಒಂದರಿಂದ 10 ಪಾಲಿಕೆಗಳು ಹಾಗೂ ವಾರ್ಡ್‌ಗಳನ್ನು 400ರವರೆಗೆ ರಚಿಸಬಹುದು. 708 ಚದರ ಕಿಲೋಮೀಟರ್ ವ್ಯಾಪ್ತಿಯ ಬಿಬಿಎಂಪಿಯನ್ನು ಗ್ರೇಟರ್ ಬೆಂಗಳೂರಾಗಿ ಮಾರ್ಪಡಿಸಿ, ಅದರ ವ್ಯಾಪ್ತಿಯನ್ನು ಸುಮಾರು 950 ಚದರ ಕಿಲೋಮೀಟರ್‌ವರೆಗೆ ವಿಸ್ತರಿಸುವುದು ಸರ್ಕಾರದ ವಿವೇಚನೆಗೆ ಒಳಪಟ್ಟಿದೆ. ಬೆಂಗಳೂರಿಗೆ ಸಂಬಂಧಿಸಿದ ಎಲ್ಲ ಇಲಾಖೆಗಳೂ ಜಿಬಿಎ ವ್ಯಾಪ್ತಿಗೆ ಬರಲಿವೆ.

'ಬೆಂಗಳೂರು ನಗರಕ್ಕೆ ಮೂರು ಹಂತದ ಆಡಳಿತ ವ್ಯವಸ್ಥೆಯ ಅಗತ್ಯವಿದ್ದು, ಈ ಕುರಿತು ಸಾಕಷ್ಟು ಅಧ್ಯಯನಗಳೊಂದಿಗೆ ಮಸೂದೆಯ ಕರಡು ರೂಪಿಸಲಾಗಿದೆ. ಈ ಆಡಳಿತ ವ್ಯವಸ್ಥೆಗೆ ಕಾಯ್ದೆಯಾಗಬೇಕಿದ್ದು, ಅದನ್ನು ಮಸೂದೆ ರೂಪದಲ್ಲಿ ಉಪ ಮುಖ್ಯಮಂತ್ರಿಯವರಿಗೆ ಸಲ್ಲಿಸಲಾಗಿದೆ' ಎಂದು ವಿ. ರವಿಚಂದರ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಅಧಿವೇಶನದಲ್ಲಿ ಮಂಡನೆ: 'ಗ್ರೇಟರ್ ಬೆಂಗಳೂರು ಆಡಳಿತ ಮಸೂದೆ–2024' ಅನ್ನು ಅಧಿವೇಶನದಲ್ಲಿ ಮಂಡಿಸುವ ರೀತಿಯಲ್ಲೇ ಸಿದ್ಧಪಡಿಸಲಾಗಿದೆ. ಮುಂದಿನ ಸಂಪುಟ ಸಭೆಯಲ್ಲಿ ಅನುಮೋದಿಸಿ, ಜುಲೈ 15ರಿಂದ ಆರಂಭವಾಗುವ ವಿಧಾನ ಮಂಡಲ ಅಧಿವೇಶನದಲ್ಲಿ ಮಂಡಿಸುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಲಂಚ: ಲೋಕಾಯುಕ್ತ ಬಲೆಗೆ ಬಿದ್ದ ಪೌರಾಯುಕ್ತ

ಪ್ರಜಾವಾಣಿ ವಾರ್ತೆ

ಹರಿಹರ: ಗುತ್ತಿಗೆದಾರರೊಬ್ಬರಿಂದ ಲಂಚ ಪಡೆಯುವಾಗ ಇಲ್ಲಿನ ನಗರ ಸಭೆ ಆಯುಕ್ತ ಬಸವರಾಜ ಐಗೂರ ಸೋಮವಾರ ಲೋಕಾಯುಕ್ತ ಪೊಲೀಸರ ಬಲೆಗೆ ಬಿದ್ದಿದ್ದಾರೆ.

ಹರಿಹರ ನಗರಸಭೆ ವ್ಯಾಪ್ತಿಯ ನೀರು ಶುದ್ಧೀಕರಣ ಘಟಕಗಳಿಗೆ ಆಲಂ ಮತ್ತು ಬ್ಲೀಚಿಂಗ್ ಪೌಡರ್ ಪೂರೈಸಿದ್ದ ಗುತ್ತಿಗೆದಾರ ಎಚ್.ಕರಿಬಸಪ್ಪ ಅವರಿಗೆ ₹25.30 ಲಕ್ಷದ ಬಿಲ್ ಮಂಜೂರು ಮಾಡಲು ಬಸವರಾಜ ಐಗೂರ ₹2 ಲಕ್ಷ ಲಂಚಕ್ಕೆ ಬೇಡಿಕೆ ಇರಿಸಿದ್ದರು.ಈ ಬಗ್ಗೆ ಕರಿಬಸಪ್ಪ ಲೋಕಾಯುಕ್ತ ಪೊಲೀಸರಿಗೆ ದೂರು ನೀಡಿದ್ದರು. ದೂರು ದಾಖಲಿಸಿಕೊಂಡಿದ್ದ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ, ₹2 ಲಕ್ಷ ಲಂಚ ಪಡೆಯುವಾಗ ಐಗೂರ ಅವರನ್ನು ಬಂಧಿಸಿದ್ದಾರೆ.



ಬಸವರಾಜ ಐಗೂರು

ರಟಕಲ್ ಸಿದ್ಧರಾಮ ಸ್ವಾಮೀಜಿ ಆತ್ಮಹತ್ಯೆ

ಕಾಳಗಿ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ರಟಕಲ್ ಗ್ರಾಮದ ವಿರಕ್ತ ಮಠದ ಪೀಠಾಧಿಪತಿ ಸಿದ್ಧರಾಮ ಸ್ವಾಮೀಜಿ(35) ಭಾನುವಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಗಂಟಲು ನೋವಿನಿಂದ ಪ್ರವಚನ ಮಾಡಲು ಆಗುತ್ತಿಲ್ಲ ಎಂದು ಜಿಗುಪ್ಸೆಗೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ತಂದೆಯ ಅನಾರೋಗ್ಯ: ದೇಶ ಬಿಟ್ಟು ತೆರಳಲು ಕೋರಿದ್ದ ಅರ್ಜಿ

ಚೀನಾ ಮಹಿಳೆ ಜಾಮೀನು ಷರತ್ತು ಸಡಿಲಿಸಲು ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ 80 ವರ್ಷದ ವಯೋವೃದ್ಧ ತಂದೆ ಅನಾರೋಗ್ಯದಿಂದ ನರಳುತ್ತಿದ್ದು, ವಿದೇಶಕ್ಕೆ ತೆರಳಬೇಕಾಗಿದೆ. ಹಾಗಾಗಿ, ನನ್ನ ಜಾಮೀನಿನ ಷರತ್ತುಗಳನ್ನು ಮಾರ್ಪಾಡು ಮಾಡಿ ಅನುಮತಿ ನೀಡಬೇಕು' ಎಂದು ಕೋರಿದ್ದ ಪವರ್‌ಬ್ಯಾಂಕ್ ಹಗರಣದ ಆರೋಪಿಯಾದ ಚೀನಾ ಮಹಿಳೆಯೊಬ್ಬರ ಅರ್ಜಿಯನ್ನು ಹೈಕೋರ್ಟ್ ಸಾರಾಸಗಟಾಗಿ ತಿರಸ್ಕರಿಸಿದೆ.

ಈ ಸಂಬಂಧ ವರ್ತೂರು ಹೋಬಳಿ ವೈಟ್‌ಫೀಲ್ಡ್ ಮುಖ್ಯರಸ್ತೆಯಲ್ಲಿರುವ ಹ್ಯೂ ಕ್ಸಿಯೊಲಿನ್ (42) ಎಂಬ ಚೀನಾದ ಪ್ರಜೆ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ವಜಾಗೊಳಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ, 'ಅರ್ಜಿದಾರರ ವಿರುದ್ಧ ಭಾರತದ ನೆಲದಲ್ಲಿ ಹಲವು ಅಪರಾಧ ಪ್ರಕರಣಗಳ ವಿಚಾರಣೆ ಬಾಕಿ ಇದೆ. ಒಂದೊಮ್ಮೆ ಅವರಿಗೆ ದೇಶದಿಂದ ನಿರ್ಗಮಿಸಲು ಅವಕಾಶ ನೀಡಿದರೆ, ವಿಚಾರಣೆಯನ್ನು ಮುಕ್ತಾಯಗೊಳಿಸುವುದು ಅಸಾಧ್ಯವಾಗುತ್ತದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.

ಪ್ರಕರಣದ ಪ್ರತಿವಾದಿಯಾದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಪರ ಡೆಪ್ಯುಟಿ ಸಾಲಿಸಿಟರ್ ಜನರಲ್ ಎಚ್. ಶಾಂತಿಭೂಷಣ್ ಮಂಡಿಸಿದ, 'ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾ ಅಪರಾಧಿಕ ಕಾನೂನಿನ ಪ್ರಕಾರ; ಒಬ್ಬ ಚೀನಿಯೇತರ ವ್ಯಕ್ತಿ ಅಲ್ಲಿನ ನೆಲದಲ್ಲಿ ಒಮ್ಮೆ ಆರೋಪಿ ಎಂದು ವಿಚಾರಣೆಗೆ ಒಳಗಾದರೆ ಅಂತಹವರು ಅಲ್ಲಿನ ವಿಚಾರಣೆ ಪೂರ್ಣಗೊಳ್ಳುವತನಕ ಚೀನಾ ದೇಶ ಬಿಟ್ಟು ಹೊರ ಹೋಗುವಂತಿಲ್ಲ. ಇದೇ ಕಾನೂನು ಭಾರತದ ನೆಲದಲ್ಲಿ ಅಪರಾಧ ಎಸಗಿರುವ ಚೀನಾದ ಪ್ರಜೆಗೂ ಅನ್ವಯವಾಗುತ್ತದೆ' ಎಂಬ ವಾದಂಶವನ್ನು ನ್ಯಾಯಪೀಠ ಎತ್ತಿಹಿಡಿದಿದೆ.

'ಅರ್ಜಿದಾರರರ ವಿರುದ್ಧ ಕರ್ನಾಟಕ ಮತ್ತು ಕೇರಳದ ವಿವಿಧೆಡೆ ಕ್ರಿಮಿನಲ್ ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ಇನ್ನೂ ದೋಷಾರೋಪ ಪಟ್ಟಿ ಸಲ್ಲಿಸಿಲ್ಲ. ಈ ಹಿಂದೆ ಇದೇ ಅರ್ಜಿದಾರರು ಕೋರಿದ್ದ ಮನವಿಯನ್ನು ಸೆಷನ್ಸ್ ನ್ಯಾಯಾಲಯ ಮತ್ತು ಹೈಕೋರ್ಟ್‌ನ ಮತ್ತೊಂದು ನ್ಯಾಯಪೀಠ ತಿರಸ್ಕರಿಸಿಯಾಗಿದೆ. ಈಗ ಅವರು ಮತ್ತೊಂದು ಅರ್ಜಿ ಸಲ್ಲಿಸಿ ತಂದೆಗೆ ಅನಾರೋಗ್ಯ ಎಂದು ಹೊಸ ನೆಪ ಹುಡುಕಿಕೊಂಡಿದ್ದಾರೆ. ಇಂತಹ ಸಂದರ್ಭದಲ್ಲಿ ಅವರಿಗೆ ದೇಶದಿಂದ ಹೊರ ಹೋಗಲು ಅನುಮತಿ ನೀಡಿದರೆ ವಿಚಾರಣೆಯಿಂದ ತಪ್ಪಿಸಿಕೊಳ್ಳಲು ಅನುಮತಿ ನೀಡಿದಂತಾಗಲಿದೆ' ಎಂಬ ಶಾಂತಿಭೂಷಣ್ ವಾದವನ್ನು ನ್ಯಾಯಪೀಠ ಮನ್ನಿಸಿದೆ.

ಪ್ರಕರಣವೇನು?: 'ನನ್ನ ವಿರುದ್ಧ ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್ ಪ್ರಧಾನ ನ್ಯಾಯಾಧೀಶರು 2023ರ ಸೆಪ್ಟೆಂಬರ್ 4ರಂದು ಹೊರಡಿಸಿರುವ ಆದೇಶವನ್ನು ರದ್ದುಗೊಳಿಸಬೇಕು ಅಥವಾ ಮಾರ್ಪಾಡು ಮಾಡಿ ಆದೇಶಿಸಬೇಕು' ಎಂದು ಕೋರಿ ಹ್ಯೂ ಕ್ಸಿಯೊಲಿನ್ ಈ ಅರ್ಜಿ ಸಲ್ಲಿಸಿದ್ದರು.

ಪ್ರಾಸಿಕ್ಯೂಷನ್ ಆರೋಪಿಸಿರುವಂತೆ ಹ್ಯೂ ಕ್ಸಿಯೊಲಿನ್ 2017ರಲ್ಲಿ ಭಾರತಕ್ಕೆ ಬಂದು, ಕೇರಳದ ಅನಸ್ ಅಹ್ಮದ್ ಅವರನ್ನು ಮದುವೆಯಾಗಿ, ಸದ್ಯ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಆಡುಗೋಡಿಯಲ್ಲಿ ಕಚೇರಿ ಹೊಂದಿರುವ ಮೆಸರ್ಸ್ ರೋಜರ್‌ಪೇ ಸಾಫ್ಟ್‌ವೇರ್ ಪ್ರೈವೇಟ್ ಲಿಮಿಟೆಡ್ ಕಂಪನಿ ನೀಡಿರುವ ದೂರಿನಂತೆ ಪವರ್ ಬ್ಯಾಂಕ್ ಹಗರಣದಲ್ಲಿ ಅನಸ್ ಅಹ್ಮದ್ ವಿರುದ್ಧ ಭಾರತೀಯ ದಂಡ ಸಂಹಿತೆ–1860ರ ಕಲಂ 420 ಮತ್ತು ಮಾಹಿತಿ ತಂತ್ರಜ್ಞಾನ ಕಾಯ್ದೆ–2008ರ ಕಲಂ 66ಡಿ ಅನುಸಾರ ಸೈಬರ್ ಕ್ರೈಂ ಪೊಲೀಸರು ಕ್ರಿಮಿನಲ್ ಪ್ರಕರಣ ದಾಖಲಿಸಿದ್ದಾರೆ. ಈ ಪ್ರಕರಣದಲ್ಲಿ ಹ್ಯೂ ಕ್ಸಿಯೊಲಿನ್ ಕೂಡಾ ಆರೋಪಿಯಾಗಿದ್ದು ಬಂಧನಕ್ಕೆ ಒಳಗಾಗಿದ್ದರು.

ಸೀಮಂತ್ ಕುಮಾರ್ ಸಿಂಗ್ ವಿರುದ್ಧದ ವಿಚಾರಣೆ ರದ್ದು

ಬೆಂಗಳೂರು: ಅಧಿಕಾರ ದುರುಪಯೋಗ ಮತ್ತು ಸುಲಿಗೆ ಆರೋಪಕ್ಕೆ ಸಂಬಂಧಿಸಿದಂತೆ ಹಿರಿಯ ಪೊಲೀಸ್ ಅಧಿಕಾರಿ ಸೀಮಂತ್ ಕುಮಾರ್ ಸಿಂಗ್ ಸೇರಿದಂತೆ ಇತರೆ ಕೆಲ ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ವಿಶೇಷ ನ್ಯಾಯಾಲಯದಲ್ಲಿ ನಡೆಯುತ್ತಿದ್ದ ವಿಚಾರಣಾ ಪ್ರಕ್ರಿಯೆಯನ್ನು ಹೈಕೋರ್ಟ್ ರದ್ದುಪಡಿಸಿದೆ.

ಈ ಸಂಬಂಧ ಸೀಮಂತ್ ಕುಮಾರ್ ಸಿಂಗ್ ಸೇರಿದಂತೆ ಏಳು ಅಧಿಕಾರಿಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ಪ್ರಕರಣವನ್ನು ವಿಚಾರಣೆಗೆ ಪರಿಗಣಿಸಿರುವ ಕ್ರಮವನ್ನು ರದ್ದುಪಡಿಸಿದೆ. ಆದರೆ, ದೂರು ರದ್ದುಪಡಿಸಲು ನಿರಾಕರಿಸಿದೆ. 'ಅರ್ಜಿದಾರ ಅಧಿಕಾರಿಗಳ ವಿರುದ್ಧ ವಿಚಾರಣೆ ನಡೆಸುವುದಕ್ಕಾಗಿ ಸಕ್ಷಮ ಪ್ರಾಧಿಕಾರ ಅನುಮತಿ ನೀಡಿದಲ್ಲಿ ವಿಚಾರಣಾ ಪ್ರಕ್ರಿಯೆ ಮುಂದುವರಿಸ ಬಹುದು' ಎಂದು ಹೇಳಿದೆ.



'ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಿವೇಶನಗಳ ಹಂಚಿಕೆಯಲ್ಲಿ ಅಕ್ರಮ ನಡೆದಿದೆ ಎಂಬ ಆರೋಪ ಪ್ರಕರಣದಲ್ಲಿ ಅರ್ಜಿದಾರ ಅಧಿಕಾರಿಗಳು ಎಸಿಬಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ತಮ್ಮ ಅಧಿಕಾರ ದುರುಪಯೋಗ ಪಡಿಸಿಕೊಂಡಿದ್ದಾರೆ' ಎಂದು ಅವರ ವಿರುದ್ಧ ಅಧಿಕಾರ ದುರ್ಬಳಕೆ, ಕ್ರಿಮಿನಲ್ ದುರ್ನಡತೆ, ಸುಲಿಗೆ ಯತ್ನ, ಮತ್ತು ನಕಲಿ ದಾಖಲೆಗಳ ಸೃಷ್ಟಿ ಆರೋಪದ ಪ್ರಕರಣವನ್ನು ಲೋಕಾಯುಕ್ತ ವಿಶೇಷ ನ್ಯಾಯಾಲಯ ವಿಚಾರಣೆ ನಡೆಸುತ್ತಿದೆ.

'ನಮ್ಮ ವಿರುದ್ಧದ ವಿಚಾರಣೆ ಕಾನೂನುಬಾಹಿರ. ಪ್ರಕರಣ ದಲ್ಲಿ ಪೂರ್ವಾನುಮತಿ ಪಡೆಯದೆ ದೂರನ್ನು ವಿಚಾರಣೆಗೆ ಪರಿಗಣಿಸಲಾಗಿದೆ. ಆದ್ದರಿಂದ ರದ್ದುಗೊಳಿಸಬೇಕು' ಎಂದು ಕೋರಿ ಸೀಮಂತ್ ಕುಮಾರ್ ಸಿಂಗ್, ಎಂ.ಕೆ.ತಿಮ್ಮಯ್ಯ, ಪ್ರಕಾಶ್, ಆರ್.ಎಚ್.ವಿಜಯಾ, ಉಮಾ ಪ್ರಶಾಂತ್, ಎಸ್.ಆರ್.ವೀರೇಂದ್ರ ಪ್ರಸಾದ್, ಮಂಜುನಾಥ್ ಜಿ.ಹೂಗಾರ್ ಈ ಅರ್ಜಿ ಸಲ್ಲಿಸಿದ್ದರು.

ವೈದ್ಯಕೀಯ ಚಿಕಿತ್ಸೆಗೆ ಹೈಕೋರ್ಟ್ ಅಸ್ತು

ಬೆಂಗಳೂರು: ಕರ್ನಾಟಕ ಮಾಹಿತಿ ಹಕ್ಕು ಆಯೋಗದ ನಿವೃತ್ತ ಮಾಹಿತಿ ಆಯುಕ್ತ ಎಲ್.ಕೃಷ್ಣಮೂರ್ತಿ ಅವರಿಗೆ ಕೇಂದ್ರ ಸರ್ಕಾರದ ಆರೋಗ್ಯ ಯೋಜನೆಯಡಿ ಸಿಜಿಎಚ್‌ಎಸ್ (ಕೇಂದ್ರ ಸರ್ಕಾರದ ಆರೋಗ್ಯ ಯೋಜನೆಗಳನ್ನು ಒದಗಿಸುವ) ಆಸ್ಪತ್ರೆಗಳಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆದುಕೊಳ್ಳಲು ಹೈಕೋರ್ಟ್ ಅವಕಾಶ ಕಲ್ಪಿಸಿದೆ.

'ಕೃಷ್ಣಮೂರ್ತಿ ಅವರಿಗೆ ಸಿಜಿಎಚ್‌ಎಸ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ನೀಡಬೇಕು' ಎಂಬ ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ ಕೇಂದ್ರ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಸೋಮವಾರ ತಳ್ಳಿಹಾಕಿದೆ.

ಪ್ರಕರಣವೇನು?: ಎಲ್.ಕೃಷ್ಣಮೂರ್ತಿ 2019ರ ಅಕ್ಟೋಬರ್ 25ರಂದು ನಿವೃತ್ತರಾಗಿದ್ದರು. ನಂತರ ಅವರು ವೈದ್ಯಕೀಯ ಪ್ರಯೋಜನ ಕೋರಿ ಸರ್ಕಾರಕ್ಕೆ ಹಲವು ಅರ್ಜಿಗಳನ್ನು ಸಲ್ಲಿಸಿದ್ದರು. ಆದರೆ, ಅವರ ಅರ್ಜಿಗಳನ್ನು ತಿರಸ್ಕರಿಸಿದ್ದ ಅಧಿಕಾರಿಗಳು, '2019ರ ಅಕ್ಟೋಬರ್ 24ರಂದು ಹೊರಡಿಸಿರುವ ಅಧಿಸೂಚನೆ ಪ್ರಕಾರ ವೈದ್ಯಕೀಯ ಭತ್ಯೆ ನೀಡಲಾಗದು' ಎಂದು ಆದೇಶಿಸಿದ್ದರು.

ಈ ಆದೇಶವನ್ನು ಪ್ರಶ್ನಿಸಿ ಕೃಷ್ಣಮೂರ್ತಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಏಕಸದಸ್ಯ ನ್ಯಾಯಪೀಠ, 'ಅರ್ಜಿದಾರರು ವೈದ್ಯಕೀಯ ಚಿಕಿತ್ಸೆಗೆ ಅರ್ಹರಾಗಿದ್ದಾರೆ' ಎಂದು 2023ರ ಜೂನ್ 21ರಂದು ಆದೇಶಿಸಿತ್ತು.

ಸಿಯುಇಟಿ –ಯುಜಿ: ಕೀ ಉತ್ತರದಲ್ಲಿ ಹಲವು ದೋಷ–ಆರೋಪ

ನವದೆಹಲಿ(ಪಿಟಿಐ): ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ(ಎನ್‌ಟಿಎ) ನಡೆಸಿದ ವಿಶ್ವವಿದ್ಯಾಲಯಗಳ ಸಾಮಾನ್ಯ ಪ್ರವೇಶ ಪರೀಕ್ಷೆಯ(ಸಿಯುಇಟಿ –ಯುಜಿ) ಕೀ ಉತ್ತರಗಳಲ್ಲಿ ತಪ್ಪುಗಳಿವೆ ಎಂದು ಪರೀಕ್ಷೆ ಬರೆದ ಹಲವು ಅಭ್ಯರ್ಥಿಗಳು ಆರೋಪಿಸಿದ್ದಾರೆ.

ಎನ್‌ಟಿಎ ಕೀ ಉತ್ತರಗಳನ್ನು ಪ್ರಕಟಿಸಿದ ಮರುದಿನವೇ ಈ ಆರೋಪಗಳು ಕೇಳಿಬಂದಿವೆ.

ಸಿಯುಇಟಿ –ಯುಜಿ ಪರೀಕ್ಷೆಗೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಎತ್ತಿರುವ ಯಾವುದೇ ಕುಂದುಕೊರತೆಗಳು ಕಂಡುಬಂದಲ್ಲಿ ಜುಲೈ 15ರಿಂದ ಜುಲೈ 19ರವರೆಗೆ ಮರು ಪರೀಕ್ಷೆ ನಡೆಸುವುದಾಗಿ ಎನ್‌ಟಿಎ ಈ ಹಿಂದೆ ತಿಳಿಸಿತ್ತು. ಎನ್‌ಟಿಎ ಪ್ರಕಟಿಸಿದ ಕೀ ಉತ್ತರದ ಕುರಿತು ಆಕ್ಷೇಪಣೆಗಳಿದ್ದರೆ ಜುಲೈ 9ರ ಸಂಜೆ 5 ಗಂಟೆ ಒಳಗಾಗಿ ಪ್ರತಿಯೊಂದು ಉತ್ತರಕ್ಕೆ ತಲಾ ₹200 ಪಾವತಿಸಿ ಪ್ರಶ್ನಿಸಬಹುದು.

'ಸರ್, ಸಿಯುಇಟಿ ಕೀ ಉತ್ತರದಲ್ಲಿ ಹಲವು ತಪ್ಪುಗಳು ಕಂಡುಬಂದಿವೆ. ನಾನು ಅದನ್ನು ಪ್ರಶ್ನಿಸಲು ಮುಂದಾದರೆ, ನಾನು ಸಿಯುಇಟಿ ಅರ್ಜಿಗೆ ಸಲ್ಲಿಸಿದ್ದಕ್ಕಿಂತಲೂ ಹೆಚ್ಚಿನ ಹಣ ಪಾವತಿಸಬೇಕಿದೆ' ಎಂದು ಅಭ್ಯರ್ಥಿ ರಿಷಭ್ 'ಎಕ್ಸ್'ನಲ್ಲಿ ಬರೆದಿದ್ದಾರೆ.



ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ವಿಜಯ ಮ್ಯೂಸಿಕ್ ಸ್ಕೂಲ್ ವತಿಯಿಂದ ಭಾನುವಾರ ನಡೆದ 'ಸಪ್ತಸ್ವರ ಸಂಗೀತ ಸಂಜೆ' ಕಾರ್ಯಕ್ರಮದಲ್ಲಿ ಸಮಾಜ ಸೇವಕ ಮಹೇಂದ್ರ ಮುನ್ನೋತ್ ಅವರನ್ನು ಸನ್ಮಾನಿಸಲಾಯಿತು. ವಿಜಯ ಮ್ಯೂಸಿಕ್ ಸ್ಕೂಲ್‌ನ ಅಧ್ಯಕ್ಷೆ ಜಯಲಕ್ಷ್ಮಿ ನಾಗೇಂದ್ರ, ನಿರ್ದೇಶಕ ಪ್ರಸನ್ನಕುಮಾರ್ ಭಾಗವಹಿಸಿದ್ದರು

ಅಪರೂಪದ ಕಾಯಿಲೆಯಿಂದ ಬಳಲುತ್ತಿರುವ ಮಹಿಳೆಯಿಂದ ಸಿ.ಎಂ.ಗೆ ಪತ್ರ

'ನೆರವಾಗಿ ಇಲ್ಲವೇ ದಯಾಮರಣ ನೀಡಿ'

ಪ್ರಜಾವಾಣಿ ವಾರ್ತೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ನಾವೂರು ಗ್ರಾಮದ ಬಡ ಕುಟುಂಬದ ಚಾಂದಿನಿ ಜಿ.ಡಿ. (33) ಎಂಬುವರು 'ಹೈಪರ್ ಐಜಿಇ ಸಿಂಡ್ರೋಮ್' ಎಂಬ ಅಪರೂಪದ ಕಾಯಿಲೆಯಿಂದ ಬಳಲುತ್ತಿದ್ದು, ಚಿಕಿತ್ಸೆ ವೆಚ್ಚ ಭರಿಸಲು ಸರ್ಕಾರದ ನೆರವು ಕೋರಿದ್ದಾರೆ.

'ಚಿಕಿತ್ಸೆಗೆ ನೆರವು ನೀಡಲು ಸಾಧ್ಯವಾಗದಿದ್ದರೆ ದಯಾಮರಣವನ್ನಾದರೂ ನೀಡಿ' ಎಂದು ಕೋರಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಇ- ಮೇಲ್ ಕಳುಹಿಸಿದ್ದಾರೆ.

'ನನ್ನ ಕಾಯಿಲೆಗೆ ಊರಿನಲ್ಲಿ ಚಿಕಿತ್ಸೆ ಪಡೆದರೂ ಪ್ರಯೋಜನವಾಗಿರಲಿಲ್ಲ. ಹೆಚ್ಚಿನ ಚಿಕಿತ್ಸೆಗೆ ಹೈದರಾಬಾದ್‌ನ ಎಐಜಿ ಆಸ್ಪತ್ರೆಗೆ ದಾಖಲಾಗುವಂತೆ ಊರಿನ ವೈದ್ಯರು ಸಲಹೆ ನೀಡಿದ್ದರು. ನನಗೆ ಅತ್ಯಂತ ಅಪರೂಪವಾದ 'ಹೈಪರ್ ಐಜಿಇ ಮೆಡಿಕೇಟೆಡ್ ಸೆಲ್ ಆಕ್ಟಿವೇಷನ್ ಸಿಂಡ್ರೋಮ್' ಕಾಯಿಲೆ ಇರುವುದನ್ನು ಆ ಆಸ್ಪತ್ರೆಯವರು ಪತ್ತೆ ಹಚ್ಚಿದ್ದರು. ತೀವ್ರತರವಾದ ಅಲರ್ಜಿಯನ್ನುಂಟು ಮಾಡುವ (ಅನಫಿಲ್ಯಾಕ್ಸಿಸ್) ಈ ಕಾಯಿಲೆಗೆ ಅಲ್ಲಿ ಒಮ್ಮೆ ಚಿಕಿತ್ಸೆ ಪಡೆದು ಬಳಿಕ ಮಂಗಳೂರಿನ ಸರ್ಕಾರಿ ವೆನ್ಲಾಕ್ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ತೆರಳಿದ್ದೆ. ಅಲ್ಲಿ ಈ ಕಾಯಿಲೆಗೆ ಚಿಕಿತ್ಸೆ ಲಭ್ಯವಿಲ್ಲ ಎಂದು ವೈದ್ಯರು ತಿಳಿಸಿದ್ದರು. ಬೆಂಗಳೂರಿನ ಕೆಲವು ಆಸ್ಪತ್ರೆಯಲ್ಲಿ ಇದಕ್ಕೆ ಚಿಕಿತ್ಸೆ ಲಭ್ಯವಿದೆ ಎಂದು ತಿಳಿದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹಾಗೂ ಆರೋಗ್ಯ ಇಲಾಖೆಯ ಉನ್ನತ ಅಧಿಕಾರಿಗಳಿಗೆ ಪತ್ರ ಬರೆದಿದ್ದೆ. ಅಲ್ಲಿಂದ ಉತ್ತರ ಬಂದಿರಲಿಲ್ಲ' ಎಂದು ಚಾಂದಿನಿ ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

'ಈ ನಡುವೆ ಆರೋಗ್ಯ ಏರುಪೇರಾಗಿದ್ದರಿಂದ ಹೈದರಾಬಾದ್‌ನ ಎಐಜಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಾಗಿದ್ದೆ. ಚಿಕಿತ್ಸೆ ವೆಚ್ಚ ಭರಿಸುವ ಬಗ್ಗೆ ಆರೋಗ್ಯ ಇಲಾಖೆಯಿಂದ ಪತ್ರ ಬಾರದ ಕಾರಣಕ್ಕೆ ಎಐಜಿ ಆಸ್ಪತ್ರೆಯವರು ಎರಡು ಸಲ ಚಿಕಿತ್ಸೆ ನಿಲ್ಲಿಸಿದ್ದರು. ಸರ್ಕಾರದಿಂದ ಭರವಸೆ ಸಿಗುತ್ತಿದೆಯಾದರೂ, ಚಿಕಿತ್ಸೆಗೆ ಹಣದ ನೆರವು ಸಿಗುತ್ತಿಲ್ಲ. ಹಾಗಾಗಿ ದಯಾಮರಣ ಕೋರಿ ಈ ಪತ್ರ ಬರೆಯುತ್ತಿದ್ದೇನೆ' ಎಂದು ಅವರು ಉಲ್ಲೇಖಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಮುಲ್ಲೈ ಮುಗಿಲನ್ ಎಂಪಿ, 'ಈ ವಿಚಾರವನ್ನು ಸರ್ಕಾರದ ಗಮನಕ್ಕೆ ತರಲು ಡಿಎಚ್‌ಒ ಈಗಾಗಲೇ ಕ್ರಮವಹಿಸಿದ್ದಾರೆ' ಎಂದರು. ಪರಿಶಿಷ್ಟ ಪಂಗಡಕ್ಕೆ ಸೇರಿದ ಧನಂಜಯ ನಾಯ್ಕ್ ಅವರ ಮಗಳಾದ ಚಾಂದಿನಿ ಅವರಿಗೆ ಮದುವೆಯಾಗಿದ್ದು, ಒಂದು ಮಗುವಿದೆ.



ಚಾಂದಿನಿ

'ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಸಂದೇಶ'

ಡಿಎಚ್‌ಒ ಡಾ.ಎಚ್.ಆರ್.ತಿಮ್ಮಯ್ಯ ಅವರಿಗೆ ಚಾಂದಿನಿ ಅವರು ಜೂನ್ 21ರಂದು ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ವಾಟ್ಸ್‌ಆ್ಯಪ್‌ನಲ್ಲಿ ಸಂದೇಶ ಕಳುಹಿಸಿದ್ದರು. 'ನನ್ನ ಸಾವಿಗೆ ಆರೋಗ್ಯ ಸಚಿವರು, ಸುಳ್ಯ ಕ್ಷೇತ್ರದ ಶಾಸಕರು, ಡಿಎಚ್‌ಒ ಹೊಣೆ' ಎಂದು ತಿಳಿಸಿದ್ದರು. ಇದಕ್ಕೆ ಪ್ರತಿಕ್ರಿಯಿಸಿದ್ದ ಡಿಎಚ್‌ಒ, 'ದುಡುಕಿನ ನಿರ್ಧಾರ ಕೈಗೊಳ್ಳಬೇಡಿ. ಚಿಕಿತ್ಸೆಗೆ ನೆರವಾಗುವ ಬಗ್ಗೆ ರಾಜ್ಯ ಸರ್ಕಾರ ಉನ್ನತ ಅಧಿಕಾರಿಗಳ ಜೊತೆ ಚರ್ಚಿಸಿದ್ದೇವೆ' ಎಂದು ಪತ್ರ ಬರೆದಿದ್ದರು.

ನಿಧನ ವಾರ್ತೆ

ಮೊಹಮ್ಮದ್ ಯುಸೂಫ್



ರಾಯಚೂರು: ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಇಲಾಖೆಯಲ್ಲಿ ನಿರ್ದೇಶಕರಾಗಿ ಕಾರ್ಯ ನಿರ್ವಹಿಸುತ್ತಿರುವ ಮೊಹಮ್ಮದ್ ಯುಸೂಫ್ (60) ಅವರು ಹೃದಯಾಘಾತದಿಂದ ಬೆಂಗಳೂರಿನಲ್ಲಿ ಸೋಮವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ಮೊಹಮ್ಮದ್ ಯುಸೂಫ್ ಅವರು ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಯಲಿಯೂರು ಗ್ರಾಮದವರು. ಸೋಮವಾರ ಯಲಿಯೂರಿನಲ್ಲಿ ಅಂತ್ಯಕ್ರಿಯೆ ನೆರವೇರಿತು.

ಸಂಗೀತದಿಂದ ಕಾಯಿಲೆ ವಾಸಿ

'ಸಂಗೀತ ಸಂಜೆ'ಯಲ್ಲಿ ಡಾ.ಸಿ.ಎನ್. ಮಂಜುನಾಥ್ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಗೀತವು ದೇವರು ನೀಡಿದ ಅದ್ಭುತ ಕೊಡುಗೆ. ಇದಕ್ಕೆ ಕಾಯಿಲೆಗಳನ್ನು ವಾಸಿ ಮಾಡುವ ಶಕ್ತಿಯಿದೆ' ಎಂದು ಸಂಸದ ಹಾಗೂ ಹೃದ್ರೋಗ ತಜ್ಞ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

ವಿಜಯ ಮ್ಯೂಸಿಕ್ ಸ್ಕೂಲ್ ನಗರದಲ್ಲಿ ಭಾನುವಾರ ಹಮ್ಮಿಕೊಂಡ 'ಸಪ್ತಸ್ವರ ಸಂಗೀತ ಸಂಜೆ' ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

'ಮನೋವೈದ್ಯಕೀಯ ಕ್ಷೇತ್ರದಲ್ಲಿ 'ಮ್ಯೂಸಿಕ್ ಥೆರಪಿ' ನೀಡಲಾಗುತ್ತಿದೆ. ಸಂಗೀತದಿಂದ ಆತಂಕ, ಒತ್ತಡ ದೂರವಾಗುತ್ತದೆ. ವೈದ್ಯಕೀಯ ಕ್ಷೇತ್ರದಲ್ಲಿಯೂ ಸಂಗೀತಕ್ಕೆ ಆದ್ಯತೆ ನೀಡಲಾಗುತ್ತಿದೆ. ಹೆರಿಗೆ ವಾರ್ಡ್, ಎಂಆರ್‌ಐ ಘಟಕ ಸೇರಿ ವಿವಿಧೆಡೆ ನೋವನ್ನು ಮರೆಯಲು ಸುಮಧುರ ಸಂಗೀತ ಹಾಕಲಾಗುತ್ತಿದೆ. ಸಂಗೀತ ಕಲಿತರೆ ಇಡೀ ವಿಶ್ವದ ಭಾಷೆ ಕಲಿತಂತೆ. ನಮ್ಮ ಭಾವನೆಯನ್ನು ವ್ಯಕ್ತಪಡಿಸಲು ಸಂಗೀತ ಸಹಕಾರಿಯಾಗಿದೆ' ಎಂದರು.


'ಆಧುನಿಕ ಕಾಲಘಟ್ಟದಲ್ಲಿ ಸಂಗೀತದಲ್ಲಿಯೂ ಮಾರ್ಪಾಡಾಗಿದೆ. ಮೊದಲು ಸಮಾಜವನ್ನು ತಿದ್ದುವಂತಹ ಗೀತೆಗಳು ಬರುತ್ತಿದ್ದವು. ಆದರೆ, ಸಂಗೀತದ ಅಬ್ಬರದಲ್ಲಿ ಸಾಹಿತ್ಯ ಹಿನ್ನೆಲೆಗೆ ಸರಿದಿದೆ. ಈಗಿನ ಕಾಲದ ಮಕ್ಕಳಿಗೆ ಮೊಬೈಲ್ ಗೀಳು ಹೆಚ್ಚಾಗಿದೆ. ಅವರಲ್ಲಿನ ಈ ಗೀಳನ್ನು ಹೋಗಲಾಡಿಸಿ, ಸಂಗೀತದ ಕಡೆ ಆಸಕ್ತಿ ಹೆಚ್ಚಿಸಬೇಕು' ಎಂದು ತಿಳಿಸಿದರು.

ವಿಜಯ ಮ್ಯೂಸಿಕ್ ಸ್ಕೂಲ್‌ನ ನಿರ್ದೇಶಕ ಪ್ರಸನ್ನಕುಮಾರ್, ಅಧ್ಯಕ್ಷೆ ಜಯಲಕ್ಷ್ಮಿ ನಾಗೇಂದ್ರ ಉಪಸ್ಥಿತರಿಸಿದ್ದರು. ಬಳಿಕ ಕನ್ನಡದ ಜನಪ್ರಿಯ ಹಳೆಯ ಚಿತ್ರಗೀತೆಗಳ ಗಾಯನ ನಡೆಯಿತು.

ದಂತ ವೈದ್ಯಕೀಯ: ಅರ್ಜಿ ಸಲ್ಲಿಕೆಗೆ 10ರವರೆಗೆ ಅವಕಾಶ

ಬೆಂಗಳೂರು: ಸ್ನಾತಕೋತ್ತರ ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ (ನೀಟ್–ಎಂಡಿಎಸ್) ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಿದೆ.

ಅರ್ಜಿ ಸಲ್ಲಿಸಲು ಜುಲೈ 10ರ ಬೆಳಿಗ್ಗೆ 11ರ ಒಳಗೆ ಅರ್ಜಿ ಸಲ್ಲಿಸಿ, ಸಂಜೆ 6ರ ಒಳಗೆ ಶುಲ್ಕ ಪಾವತಿಸಬೇಕು. ಅರ್ಜಿ ಸಲ್ಲಿಕೆ ಹಾಗೂ ಶುಲ್ಕ ಪಾವತಿಗಾಗಿ ಜುಲೈ 8ರಿಂದ ಪೋರ್ಟಲ್ ತೆರೆಯಲಾಗಿದೆ ಎಂದು ಎಂದು ಕೆಇಎ ಹೇಳಿದೆ.







1. ಚಿಕ್ಕೋಡಿ ತಾಲ್ಲೂಕಿನ ಯಕ್ಸಂಬಾ ಹೊರವಲಯದ ಹರಜತ್ ಮನ್ಸೂರ್‌ವಲಿ ದರ್ಗಾ ಜಲಾವೃತಗೊಂಡಿರುವುದು 2. ಸತತ ಮಳೆಯಿಂದಾಗಿ ದೂಧಗಂಗಾ ನದಿಗೆ ಅಡ್ಡಲಾಗಿ ನಿರ್ಮಿಸಿದ ಚಿಕ್ಕೋಡಿ ತಾಲ್ಲೂಕಿನ ಮಲಿಕವಾಡ–ದತ್ತವಾಡ ಸೇತುವೆ ಮುಳುಗಡೆಯಾಗಿದೆ 3. ಉಡುಪಿಯ ಪಾಡಿಗಾರಿನ ಪಿ.ಜಿ. ಒಂದರಿಂದ ವಿದ್ಯಾರ್ಥಿನಿಯರನ್ನು ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯಲಾಯಿತು

ಕರಾವಳಿಯಲ್ಲಿ ಇಂದು ರೆಡ್ ಅಲರ್ಟ್; ಕೃಷ್ಣಾ ನದಿಗೆ, ಲಿಂಗನಮಕ್ಕಿ ಜಲಾಶಯಕ್ಕೆ ಒಳಹರಿವು ಹೆಚ್ಚಳ

ಉಕ್ಕೇರಿದ ನದಿಗಳು, ಸೇತುವೆ ಮುಳುಗಡೆ

ಪ್ರಜಾವಾಣಿ ವಾರ್ತೆ

ಉಡುಪಿ: ಜಿಲ್ಲೆಯಲ್ಲಿ ಭಾನುವಾರ ರಾತ್ರಿ ಮತ್ತು ಸೋಮವಾರ ಧಾರಾಕಾರ ಮಳೆಯಾಗಿದೆ. ಬ್ರಹ್ಮಾವರ, ಕೋಟ ಪರಿಸರದಲ್ಲಿ ವ್ಯಾಪಕ ಮಳೆಯಾಗುತ್ತಿದ್ದು, ಕೋಟದ ಗಿಳಿಯಾರು, ಬನ್ನಾಡಿ, ಮಣೂರು ಪ್ರದೇಶದಲ್ಲಿ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ.

ಗುಂಡಿಬೈಲು ಬಳಿಯ ಪಾಡಿಗಾರು ಸಮೀಪ ಪಿ.ಜಿ. ಒಂದರಲ್ಲಿದ್ದ ವಿದ್ಯಾರ್ಥಿನಿಯರನ್ನು ಅಗ್ನಿಶಾಮಕ ದಳದವರು ಸುರಕ್ಷಿತ ಪ್ರದೇಶಕ್ಕೆ ಬೋಟ್‌ನಲ್ಲಿ ಸ್ಥಳಾಂತರಿಸಿದರು.

ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಮಳೆ ಮುಂದುವರಿದಿದ್ದು, ನದಿಗಳು ತುಂಬಿ ಹರಿಯುತ್ತಿವೆ.

ಇದೇ 9 ಹಾಗೂ 10ರಂದು ಕೂಡ ಕರಾವಳಿಯ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಗುಡುಗಿನಿಂದ ಕೂಡಿ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮಂಗಳವಾರ ಈ ಮೂರೂ ಜಿಲ್ಲೆಗಳಿಗೆ ರೆಡ್ ಅಲರ್ಟ್ ಹಾಗೂ 10ರಂದು ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಚಿಕ್ಕಮಗಳೂರು ನಗರ, ಜಿಲ್ಲೆಯ ವಿವಿಧೆಡೆ ಮಳೆಯಾಗಿದೆ. ಹೇಮಾವತಿ, ತುಂಗಾ, ಭದ್ರಾ ನದಿಗಳು ಮೈದುಂಬಿ ಹರಿಯುತ್ತಿವೆ.

ಸೋಮವಾರ ಬೆಳಿಗ್ಗೆ 8.30 ರವರೆಗಿನ 24 ಗಂಟೆಗಳಲ್ಲಿ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ತ್ರಾಸಿಯಲ್ಲಿ 21 ಸೆಂ.ಮೀ, ಮಳೆಯಾಗಿದೆ.

ಬೆಳಗಾವಿ ವರದಿ: ಸೋಮವಾರವೂ ಮಳೆ ಮುಂದುವರಿದಿದ್ದರಿಂದ ಕೃಷ್ಣಾ ನದಿಯಲ್ಲಿ ಒಳಹರಿವು ಹೆಚ್ಚಿದೆ. ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಬಳಿ ಕೃಷ್ಣಾ ನದಿಗೆ 62,070 ಕ್ಯುಸೆಕ್ ನೀರು ಹರಿದು ಬರುತ್ತಿದೆ. ದೂಧಗಂಗಾ ನದಿಗೆ ಅಡ್ಡಲಾಗಿ ನಿರ್ಮಿಸಿದ ಮಲಿಕವಾಡ-ದತ್ತವಾಡ ಸೇತುವೆ ಸೋಮವಾರ ಜಲಾವೃತ ಗೊಂಡಿದ್ದು, ಕರ್ನಾಟಕ-ಮಹಾರಾಷ್ಟ್ರ ನಡುವಿನ ಸಂಪರ್ಕ ಕಡಿತಗೊಂಡಿದೆ. ದೂಧಗಂಗಾ ನದಿಯಲ್ಲಿ ನೀರು ಹರಿವು ಹೆಚ್ಚಿದ್ದರಿಂದ ಯಕ್ಸಂಬಾ ಹೊರವಲಯದ ಹಜರತ್ ಮನ್ಸೂರ್ ವಲಿ ದರ್ಗಾ ಜಲಾವೃತಗೊಂಡಿದೆ.

ಕಲಬುರಗಿ ವರದಿ: ಕಲ್ಯಾಣ ಕರ್ನಾಟಕದ ಕಲಬುರಗಿ, ಬೀದರ್, ಕೊಪ್ಪಳ ಜಿಲ್ಲೆಗಳಲ್ಲಿ ಉತ್ತಮವಾಗಿ ಮಳೆಯಾಗಿದೆ. ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕು ಹಾಗೂ ಗ್ರಾಮೀಣ ಭಾಗದಲ್ಲಿ 20 ನಿಮಿಷ ಉತ್ತಮವಾಗಿ ಮಳೆ ಸುರಿದಿದೆ.

ಶಿವಮೊಗ್ಗ ವರದಿ: ಮಲೆನಾಡಿನಲ್ಲಿ ಮಳೆ ಮುಂದುವರಿದಿದ್ದು, ಲಿಂಗನಮಕ್ಕಿ ಜಲಾಶಯದ ಒಳಹರಿವು ಹೆಚ್ಚಿದೆ.

ಹುಲಿಕಲ್ ಘಾಟಿ ಸೇರಿದಂತೆ ಜಲಾನಯನ ಪ್ರದೇಶದಲ್ಲಿ ಹೆಚ್ಚು ಮಳೆ ಸುರಿಯುತ್ತಿರುವುದರಿಂದ ಲಿಂಗನಮಕ್ಕಿ ಜಲಾಶಯಕ್ಕೆ ಒಳಹರಿವು 12,000 ಕ್ಯುಸೆಕ್‌ನಷ್ಟು ಏರಿಕೆಯಾಗಿದೆ.



ಕೊಡಗು ಜಿಲ್ಲೆಯ ಕುಶಾಲನಗರ ತಾಲ್ಲೂಕಿನ ಹಾರಂಗಿ ಜಲಾಶಯದಿಂದ ನದಿಗೆ ನೀರನ್ನು ಸೋಮವಾರ ಹೊರ ಬಿಡಲಾಯಿತು
ಪ್ರಜಾವಾಣಿ ಚಿತ್ರ: ರಘು ಹೆಬ್ಬಾಲೆ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	102.80	8,425	567
ಹಾರಂಗಿ	2,859	2,849.08	3,290	1,000
ಕಬಿನಿ	2,284.00	2,282.05	4,681	2,000
ಹೇಮಾವತಿ	2,922	2,897.55	8,448	250
ಲಿಂಗನಮಕ್ಕಿ	1,819	1,769.40	41,048	1709
ಸೂಪಾ (ಮೀ)	564	532.32	29,536	000
ಮಾಣಿ	595	575.90	725	000
ತುಂಗಭದ್ರಾ	1,633	1,599.47	30,388	156
ಮಲಪ್ರಭಾ	2,079.5	2,050.70	12,995	194
ಘಟಪ್ರಭಾ	2175	2,123.80	21,232	118
ಭದ್ರಾ	186	133.1	8,777	154
ಆಲಮಟ್ಟಿ (ಮೀ)	519.6	515.16	60,603	430
ನಾರಾಯಣಪುರ (ಮೀ)	492.25	489.20	200.58	95.58

* ನೆಲಮಟ್ಟದಿಂದ

ಹಾರಂಗಿ: ಸಾವಿರ ಕ್ಯುಸೆಕ್ ನೀರು ನದಿಗೆ

ಮಡಿಕೇರಿ: ಇಲ್ಲಿನ ಕುಶಾಲನಗರದ ಹಾರಂಗಿ ಜಲಾಶಯಕ್ಕೆ ಅಧಿಕ ಪ್ರಮಾಣದ ನೀರು ಹರಿದು ಬರುತ್ತಿರುವುದರಿಂದ ಮುಂಜಾಗ್ರತಾ ಕ್ರಮವಾಗಿ ಸೋಮವಾರ ಸಂಜೆ ನದಿಗೆ ನೀರನ್ನು ಹೊರಬಿಡಲಾಯಿತು.

ಜಲಾಶಯದ ಎಲ್ಲ 4 ಕ್ರೆಸ್ಟ್‌ಗೇಟ್‌ಗಳನ್ನು ತೆರೆದು ಒಂದು ಸಾವಿರ ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಯಿತು. ಜಲಾಶಯ ತುಂಬಲು ಇನ್ನೂ 10 ಅಡಿಗಳು ಬಾಕಿ ಇದೆ. ನದಿ ದಂಡೆಯ ನಿವಾಸಿಗಳ ಸುರಕ್ಷತೆಯ ದೃಷ್ಟಿಯಿಂದ ಭರ್ತಿಗೂ ಮುನ್ನವೇ ನೀರನ್ನು ಹೊರಬಿಡಲಾಗುತ್ತಿದೆ. ಒಳಹರಿವಿನ ಪ್ರಮಾಣ ಮತ್ತಷ್ಟು ಹೆಚ್ಚಾಗುವ ಸಂಭವವಿದ್ದು, ನದಿ ದಂಡೆಯ ನಿವಾಸಿಗಳಿಗೆ ಪ್ರವಾಹದ ಮುನ್ನೆಚ್ಚರಿಕೆ ನೀಡಲಾಗಿದೆ.

ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕಿನ ದಕ್ಷಿಣ ಕನ್ನಡ ಜಿಲ್ಲೆಗೆ ಹೊಂದಿಕೊಂಡಂತಿರುವ ಸಂಪಾಜೆ ಹೋಬಳಿಯಲ್ಲಿ ಬಿರುಸಿನ ಮಳೆ ಸುರಿಯುತ್ತಿದೆ. ಇದರಿಂದ ಇಲ್ಲಿಗೆ ಸಮೀಪದ ಮಂಗಳೂರು ರಾಷ್ಟ್ರೀಯ ಹೆದ್ದಾರಿಯಲ್ಲಿನ ಮದೆ ಗ್ರಾಮ ಪಂಚಾಯತಿ ವ್ಯಾಪ್ತಿಯ ಕರ್ತೋಜಿ ಬಳಿ ರಸ್ತೆಯ ಒಂದು ಬದಿ ಉಬ್ಬಿಕೊಂಡಿದ್ದು, ರಾಷ್ಟ್ರೀಯ ಹೆದ್ದಾರಿಯ ಅಧಿಕಾರಿಗಳು ಎಚ್ಚರಿಕೆ ಫಲಕ ಅಳವಡಿಸಿದ್ದಾರೆ. ಇನ್ನೂ ಹೆಚ್ಚು ಮಳೆಯಾದರೆ ಈ ಮಣ್ಣು ರಸ್ತೆಗೆ ವ್ಯಾಪಿಸುವ ಸಾಧ್ಯತೆ ಇದೆ.

ನಾಪೋಕ್ಲು - ಭಾಗಮಂಡಲ ಮುಖ್ಯರಸ್ತೆಯ ಚೋನಕೆರೆ ಎಂಬಲ್ಲಿ ಬೃಹತ್ ಗಾತ್ರದ ಮರ ಮುರಿದುಬಿದ್ದು ರಸ್ತೆ ಸಂಪರ್ಕ ಕಡಿತಗೊಂಡಿತು. ವಿದ್ಯುತ್ ತಂತಿಗಳು ತುಂಡಾಗಿ ಗ್ರಾಮಾಂತರ ಪ್ರದೇಶಗಳ ವಿದ್ಯುತ್ ಸಂಪರ್ಕವೂ ಕಡಿತಗೊಂಡಿತು. ಕುರುಳಿ -ಎಮ್ಮೆ ಮಾಡು ಮುಖಾಂತರ ಬಳಸು ರಸ್ತೆಯಲ್ಲಿ ವಾಹನಗಳು ಸಾಗಿದವು. ನಂತರ ಮರವನ್ನು ತೆರವುಗೊಳಿಸಲಾಯಿತು.

(ಹಾಸನ ವರದಿ): ಜಿಲ್ಲೆಯಾದ್ಯಂತ ಸೋಮವಾರ ಮುಂಗಾರು ಚುರುಕು ಪಡೆದಿದ್ದು, ಮಲೆನಾಡು ಭಾಗವಾದ ಸಕಲೇಶಪುರ, ಆಲೂರು, ಹಾಸನ ತಾಲ್ಲೂಕುಗಳಲ್ಲಿ ಉತ್ತಮ ಮಳೆಯಾಗಿದೆ. ಸಕಲೇಶಪುರ ತಾಲ್ಲೂಕಿನಲ್ಲಿ ನಿರಂತರ ಮಳೆ ಸುರಿಯುತ್ತಿದೆ. ಜಿಲ್ಲೆಯ ಹೇಮಾವತಿ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿದ್ದು, 8448 ಕ್ಯುಸೆಕ್ ನೀರು ಹರಿದು ಬರುತ್ತಿದೆ. ಮೈಸೂರು ಮತ್ತು ಚಾಮರಾಜನಗರದಲ್ಲಿ ಆಗಾಗ ತುಂತುರು ಮಳೆಯಾಯಿತು.

ಇಂದು, ನಾಳೆ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ಕರಾವಳಿ ಹಾಗೂ ಉತ್ತರ ಒಳನಾಡಿನ ಹಲವು ಜಿಲ್ಲೆಗಳಲ್ಲಿ ಜುಲೈ 9 ಮತ್ತು 10ರಂದು ಭಾರಿ ಮಳೆಯಾಗುವ ಬಗ್ಗೆ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೀದರ್, ಕಲಬುರ್ಗಿ, ಚಿಕ್ಕಮಗಳೂರು, ಶಿವಮೊಗ್ಗ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಕೋಲಾರ, ಚಿಕ್ಕಬಳ್ಳಾಪುರದಲ್ಲಿ ಧಾರಾಕಾರ ಮಳೆಯಾಗುವ ಸಾಧ್ಯತೆ ಇದೆ. ಬಾಗಲಕೋಟೆ, ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಕೊಪ್ಪಳ, ರಾಯಚೂರು, ದಕ್ಷಿಣ ಒಳನಾಡಿನ ಬಳ್ಳಾರಿ, ಚಾಮರಾಜನಗರ, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಮಂಡ್ಯ, ಮೈಸೂರು,ರಾಮನಗರ, ತುಮಕೂರು ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗುವ ಸಂಭವ ಇದೆ.

ಎಡವಟ್ಟು ಮಾಡುವಷ್ಟು ದಡ್ಡ ಅಲ್ಲ: ಪಾಟೀಲ

ಬೆಂಗಳೂರು: 'ನಿಯಮದ ಪ್ರಕಾರವೇ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ (ಕೆಐಎಡಿಬಿ) ಸಿ.ಎ ನಿವೇಶನ ಹಂಚಿಕೆ ಮಾಡಿದ್ದೇವೆ' ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಸ್ಪಷ್ಟನೆ ನೀಡಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಸಿ.ಎ ನಿವೇಶನ ಹಂಚಿಕೆಗೆ ಸಂಬಂಧಿಸಿದ ಆರೋಪವನ್ನು ವಾಟ್ಸ್‌ಆ್ಯಪ್‌ನಲ್ಲಿ ನಾನು ಗಮನಿಸಿದ್ದೇನೆ. ಯಾರೊ ಮುಖ್ಯಮಂತ್ರಿಗೆ ಪತ್ರ ಬರೆದಿದ್ದಾರಲ್ಲ. ಎಂ.ಬಿ. ಪಾಟೀಲ ಎಡವಟ್ಟು ಮಾಡುವಷ್ಟು ದಡ್ಡರಲ್ಲ' ಎಂದರು.

ಎಸ್‌ಐಟಿ ಎದುರು ನಾಗೇಂದ್ರ ಹಾಜರು ಇಂದು?

ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ: ವಿಚಾರಣೆಗೆ ತನಿಖಾಧಿಕಾರಿಗಳ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣದ ತನಿಖೆ ನಡೆಸುತ್ತಿರುವ ವಿಶೇಷ ತನಿಖಾ ತಂಡದ (ಎಸ್‌ಐಟಿ) ಎದುರು ಮಾಜಿ ಸಚಿವ, ಬಳ್ಳಾರಿ ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಿ.ನಾಗೇಂದ್ರ ಹಾಗೂ ನಿಗಮದ ಅಧ್ಯಕ್ಷರೂ ಆಗಿರುವ ರಾಯಚೂರು ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಸನಗೌಡ ದದ್ದಲ್ ಅವರು ಮಂಗಳವಾರ ವಿಚಾರಣೆಗೆ ಹಾಜರಾಗುವ ಸಾಧ್ಯತೆಯಿದೆ.



ಬಿ.ನಾಗೇಂದ್ರ



ಬಸನಗೌಡ

ಹಗರಣದಲ್ಲಿ ಇಬ್ಬರ ಪಾತ್ರದ ಕುರಿತು ವಿಚಾರಣೆ ನಡೆಸಲು ಜುಲೈ 9ರಂದು ಸಿಐಡಿ ಕಚೇರಿಗೆ ಬರುವಂತೆ ಸೂಚಿಸಿ ಎಸ್‌ಐಟಿ ನೋಟಿಸ್ ಜಾರಿ ಮಾಡಿತ್ತು. ನಿಗಮದ ಬ್ಯಾಂಕ್ ಖಾತೆಯಿಂದ ₹94.97 ಕೋಟಿಯನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ ಆರೋಪದಡಿ ಹೈಗ್ರೌಂಡ್ಸ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆಯನ್ನು ಎಸ್‌ಐಟಿ ನಡೆಸುತ್ತಿದೆ.

'ಎಸ್‌ಐಟಿ ಮುಖ್ಯಸ್ಥ ಮನೀಶ್ ಖರ್ಬೀಕರ್ ಅವರ ನೇತೃತ್ವದಲ್ಲಿ ವಿಚಾರಣೆ ನಡೆಯಲಿದೆ. ಕೆಲವು ಪ್ರಶ್ನೆ ಕೇಳಲಾಗುವುದು. ಇಬ್ಬರ ಹೇಳಿಕೆಗಳನ್ನೂ ದಾಖಲು ಮಾಡಿಕೊಳ್ಳುತ್ತೇವೆ. ಇದಕ್ಕಾಗಿ ಎಲ್ಲ ಸಿದ್ಧತೆ ಮಾಡಿಕೊಳ್ಳಲಾಗಿದೆ' ಎಂದು ತನಿಖಾ ತಂಡದ ಮೂಲಗಳು 'ಪ್ರಜಾವಾಣಿ'ಗೆ ಹೇಳಿವೆ.

ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರಾಗಿದ್ದ ಬಿ.ನಾಗೇಂದ್ರ ಅವರು ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ಹೊರಬಿದ್ದ ಬಳಿಕ ಜೂನ್ 6ರಂದು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

'ಹಣ ವರ್ಗಾವಣೆಯಲ್ಲಿ ಬಿ.ನಾಗೇಂದ್ರ ಅವರ ಆಪ್ತ ನೆಕ್ಕಂಟಿ ನಾಗರಾಜ್ ಹಾಗೂ ಅವರ ಸಂಬಂಧಿ ನಾಗೇಶ್ವರ ರಾವ್ ಅವರನ್ನು ಎಸ್‌ಐಟಿ ಬಂಧಿಸಿತ್ತು. ಅವರಿಬ್ಬರೂ ವಿಚಾರಣೆ ವೇಳೆ ನೀಡಿದ್ದ ಮಾಹಿತಿ ಆಧರಿಸಿ ನಾಗೇಂದ್ರ ಅವರಿಗೆ ಜುಲೈ 5ರಂದು ನೋಟಿಸ್ ಜಾರಿ ಮಾಡಲಾಗಿತ್ತು. ಬಸನಗೌಡ ದದ್ದಲ್ ಅವರ ಆಪ್ತರೊಬ್ಬರಿಗೆ ಹಣ ಸಂದಾಯ ಆಗಿರುವ ಆರೋಪದ ಮೇಲೆ ದದ್ದಲ್ ಅವರಿಗೂ ಅಂದೇ ನೋಟಿಸ್ ನೀಡಲಾಗಿತ್ತು' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

'ಮದ್ಯ ಹಂಚಿಕೆ ನಡ್ಡಾ ಉತ್ತರಿಸಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೆಲಮಂಗಲದಲ್ಲಿ ಬಿಜೆಪಿ ಕಾರ್ಯಕ್ರಮದಲ್ಲಿ ಮದ್ಯ ಹಂಚಿಕೆ ಮಾಡಿರುವ ಬಗ್ಗೆ ವರದಿ ಕೇಳಿದ್ದೇವೆ. ವರದಿ ಬಂದ ಬಳಿಕ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಬಿಜೆಪಿ ಸಂಸದ ಡಾ.ಕೆ. ಸುಧಾಕರ್ ಅವರು ಕಾರ್ಯಕರ್ತರಿಗೆ ಮದ್ಯ ಹಂಚಿಕೆ ಮಾಡಿರುವ ಬಗ್ಗೆ ಆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಉತ್ತರಿಸಬೇಕು' ಎಂದರು.

ನೇಹಾ ಕೊಲೆ; ದೋಷಾರೋಪ ಸಲ್ಲಿಕೆ

ಹುಬ್ಬಳ್ಳಿ: ಮಹಾನಗರ ಪಾಲಿಕೆ ಸದಸ್ಯ ನಿರಂಜನಯ್ಯ ಹಿರೇಮಠ ಅವರ ಪುತ್ರಿ ನೇಹಾ (23) ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಐಡಿ ಅಧಿಕಾರಿಗಳು ಸೋಮವಾರ ಸ್ಥಳೀಯ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಸಿಐಡಿ ಡಿವೈಎಸ್‌ಪಿ ಮನೋಹರ ಎಚ್. ಪೈಕ್ ಅವರು ಇಲ್ಲಿನ ಒಂದನೇ ಹೆಚ್ಚುವರಿ ಸೆಷನ್ಸ್ ಮತ್ತು 3ನೇ ಜೆಎಂಎಫ್‌ಸಿ ನ್ಯಾಯಾಲಯಕ್ಕೆ 483 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಿದರು.

ಏ.18ರಂದು ವಿದ್ಯಾನಗರದ ಬಿವಿಬಿ ಕಾಲೇಜು ಆವರಣದಲ್ಲಿ ನೇಹಾ ಅವರನ್ನು ಅವರ ಸ್ನೇಹಿತ ಸವದತ್ತಿ ಮೂಲದ ಫಯಾಜ್, ಚಾಕುವಿನಿಂದ ಇರಿದು ಕೊಲೆ ಮಾಡಿದ್ದ. ನೇಹಾ ಪ್ರೀತಿ ನಿರಾಕರಿಸಿದ್ದಕ್ಕೆ, ಕೋಪಗೊಂಡು ಕೊಲೆ ಮಾಡಿರುವುದಾಗಿ ಪೊಲೀಸ್ ವಿಚಾರಣೆ ವೇಳೆ ಫಯಾಜ್ ಹೇಳಿದ್ದ ಎನ್ನಲಾಗಿತ್ತು. ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಈ ಬಗ್ಗೆ ಪ್ರಕರಣ ದಾಖಲಾಗಿತ್ತು.

ನೇಹಾ ಕೊಲೆ ಖಂಡಿಸಿ ದೇಶದಾದ್ಯಂತ ಸಾರ್ವಜನಿಕರು, ವಿವಿಧ ಸಂಘಟನೆಗಳು ತೀವ್ರ ಪ್ರತಿಭಟನೆ ನಡೆಸಿ, ಆರೋಪಿಗೆ ಗಲ್ಲು ಶಿಕ್ಷೆಯಾಗಬೇಕು, ಎನ್‌ಕೌಂಟರ್ ಮಾಡಬೇಕು ಎಂದು ಆಗ್ರಹಿಸಿದ್ದವು. ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸುವಂತೆ ಬಿಜೆಪಿ ಹಾಗೂ ನೇಹಾ ತಂದೆ ನಿರಂಜನಯ್ಯ ಹಿರೇಮಠ ಕೂಡ ಒತ್ತಾಯಿಸಿದರು. ನಂತರ ರಾಜ್ಯ ಸರ್ಕಾರ ತನಿಖೆಯನ್ನು ಸಿಐಡಿಗೆ ಹಸ್ತಾಂತರಿಸಿತ್ತು.

ನಿಖಿಲ್ ಜಾಮೀನು ಅರ್ಜಿ ವಾಪಸ್

ರೇಣುಕಸ್ವಾಮಿ ಕೊಲೆ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ 17ನೇ ಆರೋಪಿ ನಿಖಿಲ್ ನಾಯಕ್ ಜಾಮೀನು ಕೋರಿ ಸಲ್ಲಿಸಿದ್ದ ತಮ್ಮ ಅರ್ಜಿಯನ್ನು ವಾಪಸ್ ಪಡೆದಿದ್ದಾರೆ.

ಈ ಕುರಿತಂತೆ ನಿಖಿಲ್ ನಾಯಕ್ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ಸಿಟಿ ಸಿವಿಲ್ ಮತ್ತು ಸೆಷನ್ಸ್‌ನ 57ನೇ ಕೋರ್ಟ್ ನ್ಯಾಯಾಧೀಶ ಜಯಶಂಕರ್ ಸೋಮವಾರ ವಿಚಾರಣೆ ನಡೆಸಿದರು. ಈ ವೇಳೆ ಅರ್ಜಿದಾರ ನಿಖಿಲ್ ಪರ ವಕೀಲರು, ಜಾಮೀನು ಕೋರಿಕೆ ಅರ್ಜಿಯನ್ನು ವಾಪಸು ಪಡೆಯುತ್ತಿರುವುದಾಗಿ ನ್ಯಾಯಾಲಯಕ್ಕೆ ತಿಳಿಸಿದರು.

ಕಳೆದ ವಿಚಾರಣೆ ವೇಳೆ ಪ್ರಾಸಿಕ್ಯೂಷನ್ ಜಾಮೀನು ಅರ್ಜಿಗೆ ತನ್ನ ಬಲವಾದ ಆಕ್ಷೇಪಣೆ ಸಲ್ಲಿಸಿತ್ತು. ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್ ಹಾಜರಿದ್ದರು.

ಆಕ್ಷೇಪಣೆಯಲ್ಲಿ ಏನಿತ್ತು?: 'ಮೃತ ಶರೀರವನ್ನು ಸಾಗಿಸುವ ಮೂಲಕ ಆರೋಪಿ ನಿತಿನ್ ನಾಯಕ್ ಸಾಕ್ಷ್ಯ ನಾಶ ಮಾಡಿದ್ದಾರೆ. ಘಟನೆಗೂ ಮುನ್ನ ಮತ್ತು ನಂತರ ಪ್ರಕರಣದ 15ನೇ ಆರೋಪಿ ಕಾರ್ತೀಕ ಜೊತೆ ಫೋನ್‌ನಲ್ಲಿ ಮಾತನಾಡಿರುವುದರಿಂದ ಪಿತೂರಿಯ ಪ್ರಮುಖ ಆರೋಪಿ ಎನಿಸಿದ್ದಾರೆ. ಅಂತೆಯೇ, ತನಿಖೆ ಇನ್ನೂ ಬಾಕಿ ಇದೆ. ಪ್ರಕರಣದ ಪ್ರಮುಖ ಆರೋಪಿಯಾದ ಎ–2 ಪ್ರಭಾವಿ ವ್ಯಕ್ತಿಯಾಗಿದ್ದು ಸಾಕ್ಷಿಗಳಿಗೆ ಬೆದರಿಕೆ ಹಾಕುವ ಸಾಧ್ಯತೆ ಇದೆ' ಎಂದು ಪ್ರಾಸಿಕ್ಯೂಷನ್ ಆತಂಕ ವ್ಯಕ್ತಪಡಿಸಿತ್ತು.

'ಘಟನೆ ನಂತರ ನಿಖಿಲ್ ನಾಯಕ್ ಖುದ್ದು ಪೊಲೀಸರಿಗೆ ಶರಣಾಗಿದ್ದಾರೆ. ಅಲ್ಲದೆ, ನಿಖಿಲ್ ಬಳಿಯಿದ್ದ ₹4.5 ಲಕ್ಷ ವಶಪಡಿಸಿಕೊಳ್ಳಲಾಗಿದೆ. ನಿಖಿಲ್ ಆಕ್ಷೇಪಿಸಿರುವಂತೆ ಪೊಲೀಸ್ ಕಸ್ಟಡಿಗೆ ಪಡೆಯುವ ಮುನ್ನ ರಿಮ್ಯಾಂಡ್ ಅರ್ಜಿ ಸಲ್ಲಿಸಿಲ್ಲ ಎಂಬುದು ಸಮರ್ಥನೀಯವಲ್ಲ. ಅಪರಾಧ ಪ್ರಕ್ರಿಯಾ ಸಂಹಿತೆಯ ಕಲಂ 167 ಮತ್ತು 172ರ ಪ್ರಕಾರ ಈ ಆರೋಪಿಗೆ ರಿಮ್ಯಾಂಡ್ ಅರ್ಜಿ ಕೊಡುವ ಪ್ರಶ್ನೆಯೇ ಇಲ್ಲ' ಎಂದು ಪ್ರತಿಪಾದಿಸಿತ್ತು.

ಇದನ್ನು ಒಪ್ಪದೆ, 'ಅರ್ಜಿ ವಾಪಸು ಪಡೆಯಲು ಅವಕಾಶ ನೀಡಬಾರದು. ನಮ್ಮ ವಾದ ಕೇಳಿ ನಂತರ ಅರ್ಜಿಯ ಬಗ್ಗೆ ತೀರ್ಮಾನ ಕೈಗೊಳ್ಳಬೇಕು' ಎಂದು ಕೋರಿದರು. ಅಂತಿಮವಾಗಿ, ನ್ಯಾಯಾಧೀಶರು, 'ವಾಪಸು ಪಡೆಯಲು ಅವಕಾಶ ನೀಡಲಾಗಿದೆ' ಎಂದರು.

ಗೊಲ್ಲರಹಟ್ಟಿಗೆ ಮಹಿಳಾ ಆಯೋಗದ ಅಧ್ಯಕ್ಷೆ ಭೇಟಿ

ಕುಟೀರಕ್ಕೆ ಬೀಗ: ಬಾಣಂತಿಯರು ಮನೆಗೆ

ಪ್ರಜಾವಾಣಿ ವಾರ್ತೆ

ತೋವಿನಕೆರೆ (ತುಮಕೂರು): ಬಿಸಾಡಿಹಳ್ಳಿ ಗೊಲ್ಲರಹಟ್ಟಿ ಕೃಷ್ಣ ಕುಟೀರದಲ್ಲಿದ್ದ ಮೂವರು ಬಾಣಂತಿಯರು ಹಾಗೂ ಶಿಶುಗಳನ್ನು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಮತ್ತೆ ಮನೆಗೆ ಸೇರಿಸಿದರು. ಎರಡು ಕೃಷ್ಣ ಕುಟೀರಗಳಿಗೆ ಅವರೇ ಬೀಗ ಹಾಕಿದರು.

ಗೊಲ್ಲರಹಟ್ಟಿಗೆ ಸೋಮವಾರ ಭೇಟಿ ನೀಡಿ ಅಲ್ಲಿನ ಜನರ ಜತೆ ಚರ್ಚಿಸಿದರು. ಸಮಸ್ಯೆಗಳ ಕುರಿತು ಮಾಹಿತಿ ಪಡೆದರು. ಅಗತ್ಯ ಸೌಲಭ್ಯ ಕಲ್ಪಿಸುವ ಭರವಸೆ ನೀಡಿದರು. ಇನ್ನು ಮುಂದೆ ಮೌಢ್ಯಾಚರಣೆ ಮುಂದುವರಿಸಬಾರದು ಎಂದು ಕಿವಿಮಾತು ಹೇಳಿದರು.

ಹಲವು ದಿನಗಳಿಂದ ಕೃಷ್ಣ ಕುಟೀರದಲ್ಲಿ ವಾಸವಿದ್ದ ಬಾಣಂತಿಯರನ್ನು ಅವರ ಕುಟುಂಬಸ್ಥರ ಮನವೊಲಿಸಿ ಮನೆಗೆ ಕಳುಹಿಸಿದರು. ಮಗುವನ್ನು ತಾವೇ ಎತ್ತಿಕೊಂಡು ಹೋಗಿ ಮನೆ ಒಳಗೆ ಬಿಟ್ಟರು. ಇದೇ ಸಮಯದಲ್ಲಿ ಒಂದು ಮಗುವಿಗೆ 'ನಾಗಲಕ್ಷ್ಮಿ'ಎಂದು ನಾಮಕರಣ ಮಾಡಲಾಯಿತು.

'ಕುಟೀರಗಳನ್ನು ಮುಂದಿನ 6 ತಿಂಗಳಲ್ಲಿ ಗ್ರಂಥಾಲಯ ಮತ್ತು ಅಂಗನವಾಡಿ ಕೇಂದ್ರವಾಗಿ ಮಾರ್ಪಡಿಸಬೇಕು. ಮಕ್ಕಳಿಗೆ ಶಿಕ್ಷಣ ನೀಡಿ, ವಿದ್ಯಾವಂತರನ್ನಾಗಿ ರೂಪಿಸಬೇಕು. ಈ ನಿಟ್ಟಿನಲ್ಲಿ ಅಗತ್ಯ ಕ್ರಮಕೈಗೊಳ್ಳಬೇಕು' ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳಿಗೆ ನಿರ್ದೇಶಿಸಿದರು.

ಗೊಲ್ಲರಹಟ್ಟಿ ಕುಟೀರಗಳಲ್ಲಿ ಬಾಣಂತಿ, ಮಕ್ಕಳನ್ನು ಬಿಡುತ್ತಿರುವ ಬಗ್ಗೆ 'ಪ್ರಜಾವಾಣಿ'ಯಲ್ಲಿ ಸರಣಿ ವರದಿಗಳು ಪ್ರಕಟವಾಗಿವೆ.



ಮನೆಯತ್ತ ಮಗುವನ್ನು ಎತ್ತಿಕೊಂಡು ಬಂದ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ

ಉಳ್ಳಾಲದ ಖಾಜಿ ಸಯ್ಯದ್ ಫಝಲ್ ಕೋಯಮ್ಮ ತಂಙಳ್ ನಿಧನ

ಉಳ್ಳಾಲ (ದಕ್ಷಿಣ ಕನ್ನಡ): ಉಳ್ಳಾಲದ ಖಾಜಿ ಸಯ್ಯದ್ ಫಝಲ್ ಕೋಯಮ್ಮ ತಂಙಳ್ ಅಲ್ ಬುಖಾರಿ (ಕೂರತ್ ತಂಙಳ್) (65) ಅವರು ಕೇರಳದ ಕಣ್ಣೂರು ಜಿಲ್ಲೆಯ ಪಯ್ಯನೂರಿನ ಎಟ್ಟಿಕ್ಕುಳಂನ ಮನೆಯಲ್ಲಿ ಸೋಮವಾರ ನಿಧನರಾದರು.

ಅವರಿಗೆ ಇಬ್ಬರು ಪುತ್ರರು ಇದ್ದಾರೆ.

ಉಳ್ಳಾಲ ಸೈಯದ್ ಮದನಿ ದರ್ಗಾದ ವಠಾರದಲ್ಲಿ ಸೈಯದ್ ಮದನಿ ಷರೀಯತ್ ಕಾಲೇಜಿನ ನೂತನ ವಿದ್ಯಾರ್ಥಿನಿಲಯ ಕಟ್ಟಡದ ಶಿಲಾನ್ಯಾಸ ಕಾರ್ಯಕ್ರಮದಲ್ಲಿ ಅವರು ಭಾಗವಹಿಸುವವರಿದ್ದರು. ಈ ಕಾರ್ಯಕ್ರಮಕ್ಕಾಗಿ ಹೊರಡಲು ಸಜ್ಜಾಗುತ್ತಿದ್ದಾಗ ಅವರಿಗೆ ಹೃದಯ ಸ್ತಂಭನ ಉಂಟಾಗಿತ್ತು.

ಉಳ್ಳಾಲ ಸೈಯದ್ ಮದನಿ ಅರೆಬಿಕ್ ಕಾಲೇಜಿನಲ್ಲಿ ಪದವಿ ಪಡೆದರು. ಆ ಬಳಿಕ ಅದೇ



ಕಾಲೇಜಿನಲ್ಲೇ ಮುದರ್ರಿಸ್ ಆಗಿ ಕಾರ್ಯ ನಿರ್ವಹಿಸಿದ್ದರು. ಸಮಸ್ತ ಕೇರಳ ಜಂಇಯ್ಯತುಲ್ ಉಲಮಾ ಕೇಂದ್ರ ಮುಶಾವರ ಸದಸ್ಯರಾಗಿದ್ದ ಅವರು ಕಾಸರಗೋಡು ದೇಳಿಯ ಜಾಮಿಯ ಸಅದಿಯ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಉಳ್ಳಾಲದ ಖಾಜಿಯಾಗಿದ್ದ ಅವರ ತಂದೆ ತಾಜುಲ್ ಉಲಮಾ ಸಯ್ಯದ್ ಅಬ್ದುಲ್ ರಹಿಮಾನ್ ಕುಂಞಿ ಕೋಯ ತಂಙಳ್ 2014ರಲ್ಲಿ ತೀರಿಕೊಂಡ ಬಳಿಕ ಸಯ್ಯದ್ ಫಝಲ್ ಕೋಯಮ್ಮ ತಂಙಳ್ ಅವರೇ ಉಳ್ಳಾಲದ ಖಾಜಿಯಾದರು.

ಉಳ್ಳಾಲ ಸಹಿತ 100ಕ್ಕೂ ಅಧಿಕ ಮೊಹಲ್ಲಾಗಳ ಖಾಜಿಯಾಗಿಯೂ ಕಾರ್ಯನಿರ್ವಹಿಸಿದ್ದರು.

ನ್ಯಾಯಾಲಯದ ಆದೇಶ ಉಲ್ಲೇಖಿಸಿ ಹಂಚಿಕೆ; ನಂತರ ಆದೇಶಕ್ಕೆ ತಡೆ • ತನಿಖಾ ಸಮಿತಿ ಕೈ ಸೇರಿದ ದಾಖಲೆಗಳು

ಸಿದ್ದರಾಮಯ್ಯ ಆಪ್ತನಿಗೂ '50:50' ನಿವೇಶನ

• ಆರ್. ಜಿತೇಂದ್ರ

ಮೈಸೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ರಾಕೇಶ್ ಪಾಪಣ್ಣ ಅವರ ತಂದೆ ಎ. ಪಾಪಣ್ಣ ಅವರಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು '50:50' ಅನುಪಾತದಲ್ಲಿ 20 ಬದಲಿ ನಿವೇಶನ ಹಂಚಿದೆ. ಇದೀಗ ಆ ಆದೇಶಕ್ಕೆ ತಡೆ ಬಿದ್ದಿದ್ದು, ದಾಖಲೆಗಳು ತನಿಖಾ ಸಮಿತಿಯ ಕೈ ಸೇರಿವೆ.

ಮೈಸೂರು ತಾಲ್ಲೂಕಿನ ಹಿನಕಲ್ ಗ್ರಾಮದ ಸರ್ವೆ ಸಂಖ್ಯೆ 211ರಲ್ಲಿದ್ದ 3 ಎಕರೆ 5 ಗುಂಟೆ ಜಮೀನನ್ನು ಮುಡಾ ವಿಜಯನಗರ ಬಡಾವಣೆಗಾಗಿ ವಶಪಡಿಸಿಕೊಂಡು 1981ರಲ್ಲಿ ಅಧಿಸೂಚನೆ ಹೊರಡಿಸಿತ್ತು. ಭೂ ಮಾಲೀಕರು ಪರಿಹಾರ ಪಡೆಯದೇ ನ್ಯಾಯಾಲಯದ ಮೊರೆ ಹೋಗಿದ್ದರು.

2024ರ ಏಪ್ರಿಲ್ 15ರಂದು ಮಾಲೀಕರಾದ ಎ. ಪಾಪಣ್ಣ ಮುಡಾಕ್ಕೆ ಅರ್ಜಿ ಸಲ್ಲಿಸಿ ಪರಿಹಾರ ಕೋರಿದ್ದು, ಆಯುಕ್ತರು ಜೂನ್ 12ರಂದು ಒಟ್ಟು 36,753 ಚ.ಅಡಿ ಅಳತೆಯ ನಿವೇಶನಗಳನ್ನು ವಿಜಯನಗರ ಬಡಾವಣೆಯಲ್ಲೇ ಮಂಜೂರು ಮಾಡಿದ್ದಾರೆ.

ಪ್ರಕರಣವೇನು?: 'ನ್ಯಾಯಾಲಯದ ಸೂಚನೆಯಂತೆ ಭೂಸಂತ್ರಸ್ತರಿಗೆ ಆದ ನಷ್ಟಕ್ಕೆ ಅಂದಿನ ನಿಯಮಗಳಿಗೆ ಅನುಗುಣವಾಗಿ ಪರಿಹಾರ ಹಾಗೂ ಬಡ್ಡಿ ಪಾವತಿಯನ್ನು ಮುಡಾ ನೀಡಬಹುದಿತ್ತು. ಆದರೆ 50:50 ಅನುಪಾತದಲ್ಲಿ ಯಾವುದೇ ಬದಲಿ ನಿವೇಶನ ಹಂಚಿಕೆ ಮಾಡದಂತೆ ಸರ್ಕಾರವು 2023ರ ಅಕ್ಟೋಬರ್‌ನಲ್ಲೇ ಸ್ಪಷ್ಟ ನಿರ್ದೇಶನ ನೀಡಿದ್ದು, ಆ ಆದೇಶವನ್ನು ಉಲ್ಲಂಘಿಸಿ ಅವರಿಗೆ ಬದಲಿ ನಿವೇಶನಗಳನ್ನು ಹಂಚಲಾಗಿದೆ. ಇದು ಸರ್ಕಾರದ ಆದೇಶದ ವಿರುದ್ಧ ನಡೆಯಾಗಿದ್ದು, ಅಧಿಕಾರಿಗಳ ಮೇಲೆ ಪ್ರಭಾವ ಬೀರಲಾಗಿದೆ ' ಎಂಬ ದೂರುಗಳು ಕೇಳಿಬಂದಿವೆ.

> **ನ್ಯಾಯಾಲಯದ ಆದೇಶದ ಹಿನ್ನೆಲೆಯಲ್ಲಿ ಪಾಪಣ್ಣ ಅವರಿಗೆ 20 ಬದಲಿ ನಿವೇಶನ ಹಂಚಿಕೆ ಆಗಿತ್ತು. ಅದರಲ್ಲಿ ಕೆಲವು ಗೊಂದಲಗಳು ಕಂಡುಬಂದ ಕಾರಣ ನಿವೇಶನ ಹಂಚಿಕೆಗೆ ತಡೆ ಬಿದ್ದಿದೆ**
> **ಕೆ. ಮರಿಗೌಡ** ಮುಡಾ ಅಧ್ಯಕ್ಷ

ಈ ಕುರಿತು ಮುಡಾ ಅಧ್ಯಕ್ಷ ಕೆ. ಮರಿಗೌಡ ಪ್ರತಿಕ್ರಿಯಿಸಿ, 'ಪಾಪಣ್ಣ ಅವರಿಗೆ ನ್ಯಾಯಾಲಯದ ಆದೇಶದ ಅನ್ವಯ ನಿವೇಶನ ಮಂಜೂರು ಮಾಡಲಾಗಿತ್ತು. ನಂತರ ಪರಿಶೀಲಿಸಲಾಗಿ, ಕೆಲವು ಲೋಪಗಳು ಕಂಡುಬಂದವು. ಇದೀಗ ಈ ಪ್ರಕರಣವೂ ಸೇರಿದಂತೆ 50:50 ಅನುಪಾತದಲ್ಲಿ ಹಂಚಿಕೆಯಾದ ಎಲ್ಲ ನಿವೇಶನಗಳನ್ನೂ ಸರ್ಕಾರವೇ ತಡೆ ಹಿಡಿದಿದೆ. ತನಿಖಾ ಸಮಿತಿಯು ಈ ಬಗ್ಗೆ ಪರಿಶೀಲಿಸಿ ಸರ್ಕಾರಕ್ಕೆ ವರದಿ ಸಲ್ಲಿಸಲಿದೆ' ಎಂದರು.

ಮುಡಾ ಹಗರಣ

ಸಿದ್ದರಾಮಯ್ಯ ವಿರುದ್ಧ ಆಸ್ತಿ ವಿವರ ಮರೆ ಮಾಚಿದ ಆರೋಪ

ಮೈಸೂರು: '2010ರಲ್ಲೇ ಆಸ್ತಿ ನೋಂದಣಿಯಾಗಿದ್ದರೂ 2013ರ ಚುನಾವಣೆ ವೇಳೆ ಸಲ್ಲಿಸಿದ್ದ ಅಫಿಡವಿಟ್‌ನಲ್ಲಿ ಸಿದ್ದರಾಮಯ್ಯ ತಮ್ಮ ಪತ್ನಿ ಪಾರ್ವತಿಯವರ ಹೆಸರಿನಲ್ಲಿದ್ದ ಜಮೀನಿನ ವಿವರಗಳನ್ನು ಉಲ್ಲೇಖಿಸಿಲ್ಲ' ಎಂಬ ಆರೋಪ ಕೇಳಿಬಂದಿದೆ.

ಈ ಕುರಿತು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್‌.ಡಿ. ಕುಮಾರಸ್ವಾಮಿ ಸೇರಿದಂತೆ ಹಲವರು ಆರೋಪ ಮಾಡಿದ್ದಾರೆ. 'ಪಾರ್ವತಿ ಅವರು ತಮ್ಮ ಸಹೋದರನಿಂದ 2010ರಲ್ಲಿ ಮೈಸೂರು ತಾಲ್ಲೂಕಿನ ಕೆಸರೆ ಗ್ರಾಮದ ಸರ್ವೆ ಸಂಖ್ಯೆ 464ರಲ್ಲಿನ 3 ಎಕರೆ 16 ಗುಂಟೆ ಜಮೀನನ್ನು ದಾನವಾಗಿ ಪಡೆದಿದ್ದರು. ಆದರೂ ಅದನ್ನು ಸಿದ್ದರಾಮಯ್ಯ 2013ರ ಅಫಿಡವಿಟ್‌ನಲ್ಲಿ ಉಲ್ಲೇಖಿಸಿಲ್ಲ. ಪತ್ನಿ ಹೆಸರಿನಲ್ಲಿ ₹2.5 ಕೋಟಿ ಮೌಲ್ಯದ ಆಸ್ತಿ ಘೋಷಣೆ ಮಾಡಿದ್ದು, ಆ ಜಮೀನಿನ ವಿವರಗಳು ಇಲ್ಲ' ಎಂದು ಹೇಳಲಾಗಿದೆ.

₹25 ಲಕ್ಷ ಮೌಲ್ಯ: 2018ರ ಚುನಾವಣೆ ಸಂದರ್ಭ ಸಿದ್ದರಾಮಯ್ಯ ಅವರು ಸಲ್ಲಿಸಿದ ಅಫಿಡವಿಟ್‌ನಲ್ಲಿ ಪಾರ್ವತಿ ಅವರ ಹೆಸರಿನಲ್ಲಿ ಇದೇ ಜಮೀನನ್ನು ಉಲ್ಲೇಖಿಸಿದ್ದು, ಅದರ ಮೌಲ್ಯ ₹25 ಲಕ್ಷ ಎಂದು ಘೋಷಿಸಿಕೊಂಡಿದ್ದಾರೆ.

2023ರ ಚುನಾವಣಾ ಅಫಿಡವಿಟ್‌ನಲ್ಲಿ ಈ ಜಮೀನಿನ ಬದಲಾಗಿ ಮುಡಾ ನೀಡಿರುವ ನಿವೇಶನಗಳ ಉಲ್ಲೇಖವಿದೆ. 'ಭೂ ಪರಿಹಾರ ರೂಪದಲ್ಲಿ ಒಟ್ಟು 37,190 ಚದರ ಅಡಿಯ ನಿವೇಶನಗಳನ್ನು ಮುಡಾ ವಿಜಯನಗರದಲ್ಲಿ ನೀಡಿದ್ದು, ಅದರ ಒಟ್ಟಾರೆ ಮಾರುಕಟ್ಟೆ ಮೌಲ್ಯವು ₹8.33 ಕೋಟಿ' ಎಂದು ಅವರು ಘೋಷಿಸಿಕೊಂಡಿದ್ದಾರೆ.

ವಿಶ್ವನಾಥ್ ಪತ್ನಿಗೆ ಬದಲಿ ನಿವೇಶನ: ಮುಡಾ ಅಧ್ಯಕ್ಷರ ಆರೋಪ

ಮೈಸೂರು: 'ವಿಧಾನ ಪರಿಷತ್ ಸದಸ್ಯ ಎಚ್. ವಿಶ್ವನಾಥ್ ಪತ್ನಿ ಶಾಂತಮ್ಮ ದೇವನೂರು ಅವರು ಮೂರನೇ ಹಂತದ ಬಡಾವಣೆಯಲ್ಲಿ ಬದಲಿ ನಿವೇಶನ ಪಡೆದಿದ್ದು, ಅದಕ್ಕೆ ಹೆಚ್ಚುವರಿ ಶುಲ್ಕವನ್ನೇ ಪಾವತಿಸಿಲ್ಲ' ಎಂದು ಮುಡಾ ಅಧ್ಯಕ್ಷ ಕೆ. ಮರಿಗೌಡ ಸೋಮವಾರ ಸುದ್ದಿಗೋಷ್ಠಿಯಲ್ಲಿ ದೂರಿದರು.

'ಶಾಂತಮ್ಮ ಅವರು 2017ರಲ್ಲಿ ದೇವನೂರು ಮೂರನೇ ಹಂತದಲ್ಲಿ 40X60 ಚ.ಅಡಿ ಅಳತೆಯ 2525 ಸಂಖ್ಯೆಯ ನಿವೇಶನ ಪಡೆದಿದ್ದರು. ನಂತರ ಅದನ್ನು ರಿಂಗ್ ರಸ್ತೆಗೆ ಸಮೀಪ ಇರುವ 307 ಸಂಖ್ಯೆಯ ನಿವೇಶನಕ್ಕೆ ಬದಲಿಸಿಕೊಂಡಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ, ವಿಧಾನಪರಿಷತ್ ಸದಸ್ಯರಾಗಿರುವವರು ಇನ್ನೊಬ್ಬರ ಬಗ್ಗೆ ಆರೋಪ ಮಾಡುವಾಗ ಎಚ್ಚರಿಕೆ ವಹಿಸಬೇಕು' ಎಂದು ಆಕ್ಷೇಪಿಸಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ನಿಯಮಗಳ ಅನುಸಾರವೇ ನಿವೇಶನ ಹಂಚಿಕೆ ಆಗಿದೆ. ಅದೇ ರೀತಿಯ ಪ್ರಕರಣವೊಂದರಲ್ಲಿ ನ್ಯಾಯಾಲಯವು ನೀಡಿದ ಆದೇಶವನ್ನು ಉಲ್ಲೇಖಿಸಿ ಮುಡಾ ನಿರ್ಣಯ ಕೈಗೊಂಡಿತ್ತು' ಎಂದು ಮರಿಗೌಡ ಹಾಗೂ ಶಾಸಕರಾದ ಕೆ. ಹರೀಶ್ ಗೌಡ, ರಮೇಶ್ ಬಂಡಿಸಿದ್ದೇಗೌಡ ಹಾಗೂ ವಿಧಾನ ಪರಿಷತ್ ಸದಸ್ಯ ಡಿ. ತಿಮ್ಮಯ್ಯ ಸುದ್ದಿಗೋಷ್ಠಿಯಲ್ಲಿ ಸಮರ್ಥಿಸಿಕೊಂಡರು. '50:50 ಅನುಪಾತದಲ್ಲಿ ಎಷ್ಟು ನಿವೇಶನಗಳನ್ನು ಹಂಚಲಾಗಿದೆ ಎಂಬ ಮಾಹಿತಿಯನ್ನು ಮುಂದಿನ ಮುಡಾ ಸಭೆಗೆ ಇಡಲಾಗುವುದು. ಯಾರೇ ಅಕ್ರಮ ಎಸಗಿದ್ದರೂ ಸರ್ಕಾರ ಕ್ರಮ ಕೈಗೊಳ್ಳಲಿದೆ' ಎಂದರು.

> **ಮುಡಾ ಹಗರಣದಲ್ಲಿ ಬೇರೆ ಪಕ್ಷದವರು ಭಾಗಿಯಾಗಿದ್ದಾರೆ ಎಂದು ಸಚಿವ ಎಚ್‌.ಸಿ.ಮಹದೇವಪ್ಪ ಆರೋಪಿಸಿದ್ದು, ಇದು ಮುಖ್ಯಮಂತ್ರಿಯನ್ನು ರಕ್ಷಿಸುವ ತಂತ್ರ**
> **ಜಗದೀಶ ಶೆಟ್ಟರ್** ಸಂಸದ

'ಎಸ್‌.ಟಿ. ಸೋಮಶೇಖರ್‌ಆರೋಪಿಸಿ ರುವಂತೆ ಯಾವ ಶಾಸಕರೂ ನಿವೇಶನ ಹಂಚಿಕೆಯಲ್ಲಿ ಪ್ರಭಾವ ಬೀರಿಲ್ಲ, ಒಂದೇ ಒಂದು ಇಂಚು ಭೂಮಿ ಪಡೆದಿಲ್ಲ. ಈ ವರ್ಷ ಜನವರಿಯಲ್ಲೇ ಮುಡಾ ಅಕ್ರಮಗಳ ಕುರಿತು ಎಲ್ಲ ಶಾಸಕರು ಸರ್ಕಾರಕ್ಕೆ ಪತ್ರ ಬರೆದಿದ್ದೆವು. ಮುಡಾದ ಈಗಿನ ಸಮಿತಿಯನ್ನು ರದ್ದುಪಡಿಸಿ ಕೇವಲ 3–4 ಸದಸ್ಯರ ಸಮಿತಿ ರಚಿಸಲು ಮುಂದಾದರೆ ನಮ್ಮ ಸಹಮತವಿದೆ' ಎಂದು ಸುದ್ದಿಗೋಷ್ಠಿಯಲ್ಲಿದ್ದ ಶಾಸಕರು ಹೇಳಿದರು.

'ಗ್ಯಾರಂಟಿ ಅನುಕೂಲ'
ಸಮೀಕ್ಷೆಯ ಸಾರ

ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನೆ ಅಡಿಯಲ್ಲಿ ಬೇಳೆಕಾಳುಗಳು, ಅಡುಗೆ ಎಣ್ಣೆ ಮತ್ತು ಇತರ ಆಹಾರ ಪದಾರ್ಥಗಳನ್ನೂ ಒದಗಿಸಿದರೆ ಉತ್ತಮ ಎಂದು 76 ಲಕ್ಷಕ್ಕೂ ಹೆಚ್ಚು ಜನರು ಅಭಿಪ್ರಾಯಪಟ್ಟಿದ್ದಾರೆ. ಗ್ಯಾರಂಟಿ ಯೋಜನೆಗಳ ಕುರಿತು ಸರ್ಕಾರವು ನಡೆಸಿದ ಸಮೀಕ್ಷೆಯಲ್ಲಿ ಯೋಜನೆಯ ಫಲಾನುಭವಿಗಳು ಈ ಮಾತನ್ನು ಹೇಳಿದ್ದಾರೆ

84.5 ಲಕ್ಷ ಸಮೀಕ್ಷೆಯಲ್ಲಿ ಸಂದರ್ಶಿಸಲಾದ ಅನ್ನಭಾಗ್ಯ ಯೋಜನೆಯ ಫಲಾನುಭವಿಗಳ ಸಂಖ್ಯೆ

76.07 ಲಕ್ಷ ಅನ್ನಭಾಗ್ಯದಲ್ಲಿ ಬೇಳೆಕಾಳು, ಅಡುಗೆ ಎಣ್ಣೆ ಮತ್ತು ಇತರ ಆಹಾರ ಪದಾರ್ಥಗಳನ್ನು ಒದಗಿಸಿ ಎಂದವರ ಸಂಖ್ಯೆ

ಸಮೀಕ್ಷೆ ವಿವರ: 72,435 ಅಂಗನವಾಡಿ ಕಾರ್ಯಕರ್ತೆಯರು, 42,417 ಆಶಾ ಕಾರ್ಯಕರ್ತೆಯರು, ಬಿಬಿಎಂಪಿಯ 2,233 ಸಮೀಕ್ಷಾ ಸಿಬ್ಬಂದಿ, ನಗರ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯ 581 ಸಮೀಕ್ಷಾ ಸಿಬ್ಬಂದಿಯನ್ನು ಬಳಸಿಕೊಂಡು ಈ ಸಮೀಕ್ಷೆ ನಡೆಸಲಾಗಿದೆ

ಗೃಹಜ್ಯೋತಿ

ಗೃಹಜ್ಯೋತಿ ಯೋಜನೆಯ ಒಟ್ಟು 1.50 ಕೋಟಿ ಫಲಾನುಭವಿಗಳಲ್ಲಿ 67.84 ಲಕ್ಷ ಜನರನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ


66.48 ಲಕ್ಷ ಗೃಹಜ್ಯೋತಿ ಯೋಜನೆಯಿಂದ ತಮ್ಮ ಜೀವನ ಸುಧಾರಿಸಿದೆ ಎಂದವರ ಸಂಖ್ಯೆ

19.67 ಲಕ್ಷ ಯೋಜನೆಯಿಂದ ತಮ್ಮ ಅಧ್ಯಯನಕ್ಕೆ ಹೆಚ್ಚು ಅನುಕೂಲವಾಗಿದೆ ಎಂದ ವಿದ್ಯಾರ್ಥಿಗಳು

22.38 ಲಕ್ಷ ಯೋಜನೆಯಿಂದ ತಮಗೆ ಹಣ ಉಳಿಯುತ್ತಿದೆ ಎಂದವರ ಸಂಖ್ಯೆ

ಗೃಹಲಕ್ಷ್ಮಿ

ಯೋಜನೆ ಅಡಿ ಒದಗಿಸುತ್ತಿರುವ ಹಣವನ್ನು ದಿನಸಿ, ಔಷಧ, ಮಕ್ಕಳ ಶಿಕ್ಷಣ ವೆಚ್ಚ ಮತ್ತು ಇತರ ವೆಚ್ಚಗಳಿಗಾಗಿ ಬಳಸುತ್ತಿದ್ದೇವೆ ಎಂದು ಫಲಾನುಭವಿ ಮಹಿಳೆಯರು ಸಮೀಕ್ಷೆಯಲ್ಲಿ ಉತ್ತರಿಸಿದ್ದಾರೆ. 1.22 ಕೋಟಿ ಮಹಿಳೆಯರು ಈ ಯೋಜನೆ ಅಡಿ ನೋಂದಣಿ ಮಾಡಿಕೊಂಡಿದ್ದಾರೆ. 77.21 ಲಕ್ಷದಷ್ಟು ಮಹಿಳೆಯರನ್ನು ಸಮೀಕ್ಷೆಗೆ ಒಳಪಡಿಸಲಾಗಿತ್ತು



ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಗಳ ಸಮಜಾಯಿಷಿ

ಮುಖ್ಯಮಂತ್ರಿಗಳ ಪತ್ನಿಗೆ ನಿವೇಶನ 'ಸುಂದರಮ್ಮ' ಪ್ರಕರಣವೇ ಕಾರಣ

ಪ್ರಜಾವಾಣಿ ವಾರ್ತೆ

ಮೈಸೂರು: 'ಮೈಸೂರಿನ ಶ್ರೀರಾಂಪುರದ ಸುಂದರಮ್ಮ ಹಾಗೂ ಮುಡಾ ವಿರುದ್ಧದ ಪ್ರಕರಣದಲ್ಲಿ ಹೈಕೋರ್ಟ್ ನೀಡಿದ ತೀರ್ಪು ಆಧರಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಪಾರ್ವತಿ ಅವರಿಗೆ ಬದಲಿ ನಿವೇಶನ ನೀಡಲಾಯಿತು' ಎಂದು ನಗರಾಭಿವೃದ್ಧಿ ಇಲಾಖೆಯ, ಹೆಸರು ಬಹಿರಂಗ ಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಶ್ರೀರಾಂಪುರದ ಸರ್ವೆ ಸಂಖ್ಯೆ 128/1 ರಲ್ಲಿ 2 ಎಕರೆ 17 ಗುಂಟೆ ಜಮೀನನ್ನು ಮುಡಾ ಭೂಸ್ವಾಧೀನ ಪಡಿಸಿಕೊಳ್ಳದೆಯೇ ಬಡಾವಣೆ ನಿರ್ಮಿಸಲು ಹೊರಟಿತ್ತು. ಅದನ್ನು ಪ್ರಶ್ನಿಸಿ ಭೂ ಮಾಲೀಕರಾದ ಸುಂದರಮ್ಮ ನ್ಯಾಯಾಲಯದ ಮೆಟ್ಟಿಲು ಏರಿದ್ದು, ಜಮೀನು ಡಿನೋಟಿಫೈಗೆ ಮನವಿ ಮಾಡಿದ್ದರು. ಆದರೆ ಮುಡಾ ಒಪ್ಪಿಗೆ ಸೂಚಿಸಲಿಲ್ಲ.

ರಾಜ್ಯಪಾಲ, ಮುಖ್ಯ ನ್ಯಾಯಮೂರ್ತಿಗೆ ಶ್ರೀವತ್ಸ ಮನವಿ

ಮುಡಾದಲ್ಲಿನ ಅಕ್ರಮ ನಿವೇಶನಗಳ ಹಂಚಿಕೆ ವಿರುದ್ಧ ಕಾನೂನು ಕ್ರಮಕ್ಕೆ ಕೋರಿ ಮೈಸೂರಿನ ಕೆ.ಆರ್. ಕ್ಷೇತ್ರದ ಶಾಸಕ ಟಿ.ಎಸ್. ಶ್ರೀವತ್ಸ ರಾಜ್ಯಪಾಲರು ಹಾಗೂ ಹೈಕೋರ್ಟ್ ನ್ಯಾಯಮೂರ್ತಿಗಳಿಗೆ ಸೋಮವಾರ ಮನವಿ ಸಲ್ಲಿಸಿದ್ದಾರೆ. ' ನಿವೇಶನಗಳ ಅಕ್ರಮ ಹಂಚಿಕೆ ಮೂಲಕ ಮುಡಾ ಹಾಗೂ ರಾಜ್ಯ ಸರ್ಕಾರಕ್ಕೆ ಸಾಕಷ್ಟು ನಷ್ಟ ಉಂಟು ಮಾಡಲಾಗಿದೆ. ಈ ಸಮಗ್ರ ತನಿಖೆ ನಡೆಸಿ ನ್ಯಾಯ ಎತ್ತಿ ಹಿಡಿಯಬೇಕು. ಈ ಬಗ್ಗೆ ಅಗತ್ಯ ದಾಖಲೆಗಳನ್ನು ಒದಗಿಸಲು ಕಾಲಾವಕಾಶ ನೀಡಬೇಕು' ಎಂದು ಅವರು ಮನವಿಯಲ್ಲಿ ಕೋರಿದ್ದಾರೆ.

'ಭೂಮಾಲೀಕರ ಕೋರಿಕೆಯನ್ನು ಪರಿಗಣಿಸುವಂತೆ ನ್ಯಾಯಾಲಯ ಸೂಚಿಸಿದ್ದು, ಅದನ್ನು ಅಧಿಕಾರಿಗಳು ಗಂಭೀರವಾಗಿ ಪರಿಗಣಿಸಲಿಲ್ಲ. ಕಡೆಗೆ ಅಧಿಕಾರಿಗಳ ತಲೆದಂಡದ ಮಟ್ಟಕ್ಕೆ ಪ್ರಕರಣ ಹೋಯಿತು. ಈಗಾಗಲೇ ಅಭಿವೃದ್ಧಿಪಡಿಸಿದ್ದ 2.17 ಎಕರೆ ಜಮೀನನ್ನು ಮರಳಿ ಮಾಲೀಕರಿಗೆ ಹಸ್ತಾಂತರಿಸುವಂತೆ ನ್ಯಾಯಾಲಯವು 2020ರ ಜನವರಿಯಲ್ಲಿ ಆದೇಶಿಸಿತ್ತು' ಎಂದು ಅಧಿಕಾರಿಗಳು ಹೇಳುತ್ತಾರೆ.

'ಪಾರ್ವತಿ ಅವರ ಪ್ರಕರಣವೂ ಅದೇ ರೀತಿಯದ್ದಾಗಿದ್ದು, ಇಡೀ ಜಮೀನನ್ನೇ ಬಿಟ್ಟುಕೊಡಬೇಕಾದ ಪರಿಸ್ಥಿತಿ ಬರಬಹುದು. ಅದರಿಂದ ಇನ್ನಷ್ಟು ಜನ ನ್ಯಾಯಾಲಯದ ಮೆಟ್ಟಿಲು ಏರಬಹುದು ಎಂಬ ಕಾರಣಕ್ಕೆ ಅಧಿಕಾರಿಗಳ ತಂಡವು ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ, ಬದಲಿ ನಿವೇಶನಕ್ಕೆ ಒಪ್ಪಿಸಿತು' ಎಂದು ಅಧಿಕಾರಿ ಸಮಜಾಯಿಷಿ ನೀಡಿದ್ದಾರೆ.

ಬಿ.ಸಿ.ಪಾಟೀಲ ಅಳಿಯ ಆತ್ಮಹತ್ಯೆ

ಒಂದನೇ ಪುಟದಿಂದ...

ಮಕ್ಕಳಿರಲಿಲ್ಲ ಎಂಬ ಕೊರಗು: 'ಪ್ರತಾಪ್ ಹಾಗೂ ಮಗಳು ಸೌಮ್ಯಾ ಮದುವೆ 2008ರಲ್ಲಿ ಆಗಿತ್ತು. ಅವರು ನನಗೆ ಅಳಿಯ ಮಾತ್ರವಲ್ಲ, ಮಗನೂ ಆಗಿದ್ದರು. ನಮ್ಮ ಜಮೀನು, ವ್ಯವಹಾರ, ರಾಜಕೀಯ ಸಂಗತಿ ಎಲ್ಲವನ್ನೂ ಅವರೇ ನೋಡಿಕೊಳ್ಳುತ್ತಿದ್ದರು' ಎಂದು ಬಿ.ಸಿ. ಪಾಟೀಲ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

'ದಂಪತಿಗೆ ಮಕ್ಕಳು ಇರಲಿಲ್ಲ. ಪ್ರತಾಪ್‌ಗೆ ಆ ಕೊರಗು ಇತ್ತು. ಮದ್ಯ ವ್ಯಸನಿಯಾಗಿದ್ದ ಅವರು, ಈಚೆಗೆ ಆರೋಗ್ಯದಲ್ಲಿ ಸಮಸ್ಯೆ ಕಾಣಿಸಿಕೊಂಡಿದ್ದರಿಂದ ಚಿಕಿತ್ಸೆ ಪಡೆದು ಗುಣಮುಖರಾಗಿದ್ದರು' ಎಂದು ಅವರು ತಿಳಿಸಿದರು.

'ಹಿರೇಕೆರೂರಿನಲ್ಲಿ ನಮ್ಮ ಮನೆಯಲ್ಲಿಯೇ ವಾಸವಿದ್ದ ಪ್ರತಾಪ್ ಸೋಮವಾರ ಕತ್ತಲಗೆರೆಗೆ ಹೋಗಿ ಬರುವುದಾಗಿ ತೆರಳಿದ್ದರು. ಅವರ ಸಹೋದರ ಪ್ರಭುದೇವ್ ಕರೆ ಮಾಡಿ ಪ್ರತಾಪ್ ವಿಷ ಸೇವಿಸಿರುವ ವಿಷಯ ತಿಳಿಸಿದರು. ಇದಕ್ಕೂ ಮೊದಲು ಪ್ರತಾಪ್ ಫೋನ್ ಸ್ವಿಚ್ಡ್ ಆಫ್ ಆಗಿದ್ದರಿಂದ ಅವರ ಲೊಕೇಶನ್ ಪತ್ತೆ ಕಷ್ಟವಾಯಿತು. ನಂತರ ಫೋನ್ ಆನ್ ಮಾಡಿಕೊಂಡಿದ್ದ ಅವರಿಗೆ ನಾನೂ ಕರೆ ಮಾಡಿ ಮಾತಾಡಿದ್ದೆ, ಅವರ ಮಾತು ಅಸ್ಪಷ್ಟವಾಗಿತ್ತು. ಶಿವಮೊಗ್ಗ ಹಾಗೂ ದಾವಣಗೆರೆ ಪೊಲೀಸರ ನೆರವಿನಿಂದ ಲೊಕೇಶನ್ ಪತ್ತೆ ಮಾಡಿದೆವು. ಪ್ರಭುದೇವ್ ಸ್ಥಳಕ್ಕೆ ತೆರಳಿ ಆಸ್ಪತ್ರೆಗೆ ಕರೆದೊಯ್ದಿದ್ದರು' ಎಂದು ಮಾಹಿತಿ ನೀಡಿದರು.

> **ವೈಯಕ್ತಿಕ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಂಡಿರಬಹುದು. ಡೆತ್‌ನೋಟ್ ಪತ್ತೆಯಾಗಿಲ್ಲ. ಮೊಬೈಲ್ ಫೋನ್ ವಶಕ್ಕೆ ಪಡೆಯಲಾಗಿದ್ದು, ತನಿಖೆ ಮುಂದುವರಿದಿದೆ.**
> **ಉಮಾ ಪ್ರಶಾಂತ್,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ದಾವಣಗೆರೆ

ಪ್ರತಾಪ್ ಕುಟುಂಬದವರ ಅಪೇಕ್ಷೆಯಂತೆ ಅಂತ್ಯಕ್ರಿಯೆ ಕತ್ತಲಗೆರೆಯಲ್ಲಿಯೇ ಮಂಗಳವಾರ ಮಧ್ಯಾಹ್ನ ನಡೆಯಲಿದೆ ಎಂದು ಅವರು ಹೇಳಿದರು.

ಮೆಗ್ಗಾನ್ ಆಸ್ಪತ್ರೆಗೆ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ಬಿ.ವೈ.ರಾಘವೇಂದ್ರ, ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ, ಪ್ರಣವಾನಂದ ಸ್ವಾಮೀಜಿ ಭೇಟಿ ನೀಡಿದ್ದರು.

'ಪ್ರಜಾವಾಣಿ'ಯ ಒಳನೋಟದ ವರದಿಗೆ ಸ್ಪಂದನೆ

ಅಂಗನವಾಡಿ ಕೇಂದ್ರ ಸ್ಥಳಾಂತರ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಶಿಥಿಲಗೊಂಡು ಅವ್ಯವಸ್ಥೆಯ ಗೂಡಾಗಿದ್ದ ಇಲ್ಲಿನ ದಿಡ್ಡಿ ಓಣಿಯಲ್ಲಿರುವ ಅಂಗನವಾಡಿ ಕೇಂದ್ರವನ್ನು ಸೋಮವಾರ ಸ್ಥಳಾಂತರ ಮಾಡಲಾಗಿದೆ.

'ಪ್ರಜಾವಾಣಿ'ಯ ಭಾನುವಾರದ ಸಂಚಿಕೆಯ ಒಳನೋಟದಲ್ಲಿ 'ಅಂಗನವಾಡಿ: ಸಮಸ್ಯೆ ನೂರು' ತಲೆಬರಹದಲ್ಲಿ ವಿಶೇಷ ವರದಿ ಹಾಗೂ ದಿಡ್ಡಿ ಓಣಿಯ ಅಂಗನವಾಡಿಯ ದುಸ್ಥಿತಿಯ ಚಿತ್ರ ಪ್ರಕಟವಾಗಿತ್ತು.

ಮೇಲಧಿಕಾರಿಗಳ ಸೂಚನೆ ಮೇರೆಗೆ ಕೊಪ್ಪಳ ಸಹಾಯಕ ಶಿಶು ಅಭಿವೃದ್ಧಿ ಯೋಜನಾಧಿಕಾರಿ ರೂಪಾ ಗಂಧದ ಹಾಗೂ ವಲಯದ ಹಿರಿಯ ಮೇಲ್ವಿಚಾರಕಿ ಭುವನೇಶ್ವರಿ ಕೇಂದ್ರಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಬೇರೆ ಕಡೆ ಇದ್ದ ಕೇಂದ್ರವನ್ನು ಎರಡು ತಿಂಗಳ ಹಿಂದೆ ಶಿಥಿಲ ಕಟ್ಟಡಕ್ಕೆ ಸ್ಥಳಾಂತರಿಸಲಾಗಿತ್ತು. ಈ ಎರಡೂ ಕಟ್ಟಡಗಳ ಮಾಲೀಕರು ಒಬ್ಬರೇ ಇದ್ದು ಕೇಂದ್ರವನ್ನು ಸ್ಥಳಾಂತರ ಮಾಡಿದ ಬಗ್ಗೆ ಅಂಗನವಾಡಿ ಕಾರ್ಯಕರ್ತೆ ಮೇಲಧಿಕಾರಿಗೆ ಮಾಹಿತಿ ನೀಡಿರಲಿಲ್ಲ ಎನ್ನುವ ವಿಷಯವೂ ಬಹಿರಂಗವಾಗಿದೆ.

ಕೇಂದ್ರಕ್ಕೆ ತೆರಳಿದ ಅಧಿಕಾರಿಗಳು ಅಲ್ಲಿಯೇ ಬಾಲವಿಕಾಸ ಸಮಿತಿ ಸಭೆ ನಡೆಸಿ ಸಮೀಪದ ಸರ್ಕಾರಿ ಹಿರಿಯ ಪ್ರಾಥಮಿಕ ಉರ್ದು ಶಾಲೆಗೆ ದಿಡ್ಡಿಕೇರಿಯ ಅಂಗನವಾಡಿ ಕೇಂದ್ರವನ್ನು ಸ್ಥಳಾಂತರಿಸಿದರು. 'ನಿವೇಶನ ಗುರುತಿಸಿದ್ದು, ಕಟ್ಟಡ ಕಾಮಗಾರಿ ಪ್ರಾರಂಭಿಸಲಾಗುವುದು' ಎಂದಿದ್ದಾರೆ.



ಸ್ಥಳಾಂತರ ಮಾಡಿದ ಕೊಪ್ಪಳದ ದಿಡ್ಡಿ ಓಣಿಯ ನೂತನ ಅಂಗನವಾಡಿ ಕೇಂದ್ರಕ್ಕೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅಧಿಕಾರಿಗಳು ಭೇಟಿ ನೀಡಿದರು

ಡೆಂಗಿ ಹಾವಳಿ: ಕಾರಿಡಾರ್‌ನಲ್ಲಿ ಬೆಡ್

ಒಂದನೇ ಪುಟದಿಂದ...

'ಮಳೆಗಾಲ ಶುರುವಾದಾಗಿನಿಂದ ಡೆಂಗಿ ಹಾಗೂ ಇತರೆ ಆರೋಗ್ಯ ಸಮಸ್ಯೆ ಹೆಚ್ಚಾಗಿದೆ. ಗಂಭೀರ ಸಮಸ್ಯೆ ಇರುವ ಬಡವರು ಆಸ್ಪತ್ರೆಗೆ ಬಂದಾಗ ಬೆಡ್ ಭರ್ತಿ ನೆಪದಲ್ಲಿ ಅವರನ್ನು ವಾಪಸ್ಸು ಕಳುಹಿಸಲಾಗುವುದಿಲ್ಲ. ವಾರ್ಡ್ ಸಾಲದಿದ್ದರೂ ಕಾರಿಡಾರ್‌ನಲ್ಲಿ ಬೆಡ್ ಇಟ್ಟು ಚಿಕಿತ್ಸೆ ನೀಡಲಾಗುತ್ತಿದೆ' ಎಂದು ಆಸ್ಪತ್ರೆಯ ವೈದ್ಯರೊಬ್ಬರು ಹೇಳಿದರು.

ಜಾಗ ಖಾಲಿ ಇದ್ದರೂ ಬಳಕೆಗೆ ಹಿಂದೇಟು: ತೀವ್ರ ನಿಗಾ ಘಟಕದ ವಾರ್ಡ್ ಎದುರು ಆಯುಷ್ ಹಾಗೂ ದಂತ ವಿಭಾಗದ ವಾರ್ಡ್‌ಗಳಿವೆ. ಸದ್ಯ ಅಲ್ಲಿ ಒಬ್ಬ ರೋಗಿಯೂ ಇಲ್ಲ. ಈ ಎರಡೂ ವಾರ್ಡ್‌ಗಳನ್ನು ಡೆಂಗಿ ಹಾಗೂ ಜ್ವರದ ರೋಗಿಗಳಿಗೆ ಚಿಕಿತ್ಸೆಗಾಗಿ ಬಳಸಲು ವೈದ್ಯರು ಹಿಂದೇಟು ಹಾಕುತ್ತಿದ್ದಾರೆ.

ಜಿಲ್ಲಾಸ್ಪತ್ರೆಗೆ ಭೇಟಿ ನೀಡಿದ್ದ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ, 'ಆಯುಷ್ ಹಾಗೂ ದಂತ ವಿಭಾಗದ ಖಾಲಿ ವಾರ್ಡ್‌ಗಳನ್ನು ಡೆಂಗಿ ರೋಗಿಗಳಿಗೆ ಚಿಕಿತ್ಸೆ ನೀಡಲು ಬಳಸಿ' ಎಂದು ಸೂಚನೆ ನೀಡಿದ್ದರು. ಅಷ್ಟಾದರೂ ವಾರ್ಡ್‌ಗಳು ಬಳಕೆಯಾಗುತ್ತಿಲ್ಲ. ಇದರಿಂದಾಗಿ ಕಾರಿಡಾರ್‌ನಲ್ಲಿ ರೋಗಿಗಳಿಗೆ ಬೆಡ್ ಹಾಕಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಜಿಲ್ಲಾ ಶಸ್ತ್ರ ಚಿಕಿತ್ಸಕ ಡಾ. ಪಿ.ಆರ್. ಹಾವನೂರ, 'ದಂತ ವಿಭಾಗದಲ್ಲಿ ಶಿಬಿರ ನಡೆಯುತ್ತಿದ್ದು, ಅವರಿಗೆ ಜಾಗ ಬೇಕು. ಆಯುಷ್ ವಿಭಾಗದಲ್ಲಿರುವ ಜಾಗವನ್ನು ಬಳಕೆ ಮಾಡಿಕೊಳ್ಳಲು ಪ್ರಯತ್ನಿಸಲಾಗುತ್ತಿದೆ. ಅದಕ್ಕೂ ಮುನ್ನ ಆಯುಷ್ ವಿಭಾಗದವರಿಗೆ ಬೇರೆ ಕಟ್ಟಡ ಹುಡುಕಬೇಕಿದೆ. ಈ ಬಗ್ಗೆ ಹಿರಿಯ ಅಧಿಕಾರಿಗಳ ಜೊತೆ ಚರ್ಚಿಸಲಾಗುವುದು' ಎಂದರು.

ಇದೇ ಜಿಲ್ಲಾಸ್ಪತ್ರೆಯ ಕಟ್ಟಡದ ಚಾವಣಿ ಕಳೆದ ವರ್ಷ ಮಳೆಗಾಲದ ಸಂದರ್ಭದಲ್ಲಿ ಸೋರುತ್ತಿತ್ತು. ಇದೇ ವಿಚಾರದಲ್ಲಿ ಎಂಜಿನಿಯರ್ ಅಮಾನತಾಗಿತ್ತು. ಚಾವಣಿ ದುರಸ್ತಿ ಹಾಗೂ ಮತ್ತೊಂದು ಮಹಡಿ ನಿರ್ಮಾಣದ ಕಾಮಗಾರಿ ನಡೆಯುತ್ತಿದ್ದು, ಅದು ಸಹ ನಿಧಾನಗತಿಯಲ್ಲಿದೆ.

ಡೆಂಗಿ: 197 ಪ್ರಕರಣ ದೃಢ, ಒಬ್ಬರ ಸಾವು

ಬೆಂಗಳೂರು: ರಾಜ್ಯದಲ್ಲಿ ಸೋಮವಾರ 197 ಡೆಂಗಿ ಪ್ರಕರಣಗಳು ದೃಢಪಟ್ಟಿದ್ದು, ಒಬ್ಬರು ಮೃತಪಟ್ಟಿದ್ದಾರೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಒಬ್ಬರು ಮೃತಪಟ್ಟಿದ್ದು, ಈವರೆಗೆ ಡೆಂಗಿ ಪೀಡಿತರಲ್ಲಿ ಮೃತಪಟ್ಟವರ ಸಂಖ್ಯೆ ಏಳಕ್ಕೇರಿದೆ.

ಡೆಂಗಿ ಪತ್ತೆ ಸಂಬಂಧ 24 ಗಂಟೆಗಳ ಅವಧಿಯಲ್ಲಿ 892 ಪರೀಕ್ಷೆಗಳನ್ನು ನಡೆಸಲಾಗಿತ್ತು. ಹೊಸದಾಗಿ ಡೆಂಗಿ ಪೀಡಿತರಾದವರಲ್ಲಿ ಒಂದು ವರ್ಷದೊಳಗಿನ ಒಂದು ಮಗು, 18 ವರ್ಷದೊಳಗಿನ 63 ಮಂದಿ ಹಾಗೂ 18 ವರ್ಷ ದಾಟಿದ 133 ಮಂದಿ ಸೇರಿದ್ದಾರೆ.

ಸದ್ಯ ರಾಜ್ಯದ ವಿವಿಧ ಆಸ್ಪತ್ರೆಗಳಲ್ಲಿ 303 ಡೆಂಗಿ ರೋಗಿಗಳು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ. ಈ ವರ್ಷ ವರದಿಯಾದ ಒಟ್ಟು ಡೆಂಗಿ ಪ್ರಕರಣಗಳ ಸಂಖ್ಯೆ 7,362ಕ್ಕೆ ಏರಿಕೆಯಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಹೊಸದಾಗಿ 95 ಪ್ರಕರಣಗಳು ದೃಢಪಟ್ಟಿವೆ. ಇದರಿಂದಾಗಿ ಒಟ್ಟು ಪ್ರಕರಣಗಳ ಸಂಖ್ಯೆ 2,083ಕ್ಕೆ ತಲುಪಿದೆ. ಡೆಂಗಿ ಪೀಡಿತರಲ್ಲಿ ಸದ್ಯ 135 ಮಂದಿ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ.

9 ತಿಂಗಳ ಮಗು ಸಾವು: ಡೆಂಗಿ ಶಂಕೆ

ಶಿರಾಳಕೊಪ್ಪ: 9 ತಿಂಗಳ ಮಗುವೊಂದು ಕಳೆದ ಶನಿವಾರ ಶಿವಮೊಗ್ಗದ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದು, ಡೆಂಗಿ ಶಂಕೆ ವ್ಯಕ್ತವಾಗಿದೆ.

ಪಟ್ಟಣದ ಕಾನಕೇರಿಯ ನಿವಾಸಿ ಖಾನಿ ಜಾವೇದ್ ಅವರ ಗಂಡು ಮಗು ಕೌಸೇನ್‌ನನ್ನು ತೀವ್ರ ಜ್ವರದ ಕಾರಣ ಕಳೆದ ವಾರ ಶಿವಮೊಗ್ಗದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮಗುವಿಗೆ ಡೆಂಗಿ ಲಕ್ಷಣಗಳಿದ್ದವು ಎಂದು ಪಾಲಕರು ಹೇಳಿದ್ದು, ತಾಲ್ಲೂಕು ವೈದ್ಯಾಧಿಕಾರಿ ಅದನ್ನು ಖಚಿತಪಡಿಸಿಲ್ಲ.

'ಮಗುವಿಗೆ ಡೆಂಗಿ ಇರಬಹುದು ಎಂದೇ ಆಸ್ಪತ್ರೆಗೆ ಸೇರಿಸಿದ್ದೆವು. ಶನಿವಾರ ಮೃತಪಟ್ಟಿದೆ' ಎಂದು ಖಾನಿ ಜಾವಿದ್ ತಿಳಿಸಿದರು.

'ಡೆಂಗಿಯಿಂದ ಮಗು ಮೃತಪಟ್ಟಿರುವ ಬಗ್ಗೆ ಯಾವುದೇ ಅಧಿಕೃತ ಮಾಹಿತಿ ಲಭಿಸಿಲ್ಲ' ಎಂದು ತಾಲ್ಲೂಕು ಆರೋಗ್ಯ ಅಧಿಕಾರಿ ನವೀದ್ ಖಾನ್ ತಿಳಿಸಿದರು.

'ಗಣಿ ಗುತ್ತಿಗೆ ರದ್ದತಿಗೆ ಶಿಫಾರಸು ಮಾಡಲು ನ್ಯಾಯಮೂರ್ತಿಗೆ ಪತ್ರ'

ಪ್ರಜಾವಾಣಿ ವಾರ್ತೆ

ಧಾರವಾಡ: 'ಕುದುರೆಮುಖ ಕಬ್ಬಿಣ ಅದಿರು ಕಂಪೆನಿ (ಕೆಐಒಸಿಎಲ್) ಹಾಗೂ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಂಪನಿಗೆ (ವಿಐಎಸ್‌ಎಲ್) ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ನೈಸರ್ಗಿಕ ಅರಣ್ಯ ಪ್ರದೇಶದಲ್ಲಿ ಗಣಿ ಗುತ್ತಿಗೆ ನೀಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಿದ್ಧವಾಗಿದ್ದು, ಗುತ್ತಿಗೆ ಪ್ರಸ್ತಾವ ರದ್ದುಪಡಿಸುವಂತೆ ಸುಪ್ರೀಂ ಕೋರ್ಟ್‌ಗೆ ಶಿಫಾರಸು ಮಾಡಬೇಕು ಎಂದು ಮೇಲ್ವಿಚಾರಣಾ ಪ್ರಾಧಿಕಾರದ ನ್ಯಾಯಮೂರ್ತಿ ಬಿ.ಸುದರ್ಶನ ರೆಡ್ಡಿ ಅವರಿಗೆ ಪತ್ರ ಬರೆಯಲಾಗಿದೆ' ಎಂದು ಸಮಾಜ ಪರಿವರ್ತನಾ ಸಮುದಾಯದ ಸ್ಥಾಪಕ ಅಧ್ಯಕ್ಷ (ಎಸ್‌ಪಿಎಸ್) ಎಸ್.ಆರ್.ಹಿರೇಮಠ ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಎಸ್‌ಪಿಎಸ್ ಮತ್ತು ಜನ ಸಂಗ್ರಾಮ ಪರಿಷತ್ (ಜೆಎಸ್‌ಪಿ) ವತಿಯಿಂದ ಪತ್ರ ಬರೆಯಲಾಗಿದೆ. ಸೆಂಟ್ರಲ್ ಎಂಪವರ್ಡ್ ಕಮಿಟಿ (ಸಿಇಸಿ) ಮತ್ತು ಮೇಲ್ವಿಚಾರಣಾ ಪ್ರಾಧಿಕಾರ ಸಂಸ್ಥೆಗಳು ಬಳ್ಳಾರಿ, ಹೊಸಪೇಟೆ ಮತ್ತು ಸಂಡೂರು ಪ್ರದೇಶದಲ್ಲಿನ ವಾಸ್ತವ ಕಬ್ಬಿಣ ಅದಿರು ನಿಕ್ಷೇಪ, ಸಂಪನ್ಮೂಲ ಪ್ರಮಾಣದ ಬಗ್ಗೆ ಕರಾರುವಾಕ್ ಮಾಹಿತಿ ಪಡೆದುಕೊಳ್ಳಬೇಕು. ಅದನ್ನು ಸುಪ್ರೀಂ ಕೋರ್ಟ್‌ಗೆ ತಾವು ಸಲ್ಲಿಸುವ ಜಂಟಿ ವರದಿಯಲ್ಲಿ ಉಲ್ಲೇಖಿಸಬೇಕು. ಸರ್ಕಾರವು ಕೆಐಒಸಿಎಲ್, ವಿಐಎಸ್‌ಎಲ್‌ಗೆ ನೀಡಬೇಕೆಂದಿರುವ ಗಣಿ ಗುತ್ತಿಗೆ ರದ್ದುಪಡಿಸುವಂತೆ ಶಿಫಾರಸು ಮಾಡಬೇಕು ಎಂದು ಮನವಿ ಮಾಡಿದ್ದೇವೆ' ಎಂದರು.

'ಗಣಿಗಾರಿಕೆ ನಡೆದರೆ 450 ಹೆಕ್ಟೇರ್ ನೈಸರ್ಗಿಕ ಅರಣ್ಯ ಪ್ರದೇಶದಲ್ಲಿನ 99 ಸಾವಿರ ವೃಕ್ಷಗಳು ಹಾಗೂ 60.7 ಹೆಕ್ಟೇರ್ ನೈಸರ್ಗಿಕ ಅರಣ್ಯ ಪ್ರದೇಶದ 29 ಸಾವಿರ ವೃಕ್ಷಗಳ ಹನನವಾಗುತ್ತವೆ. ಅರಣ್ಯದಲ್ಲಿ ಗಣಿ ಗುತ್ತಿಗೆ ನೀಡಬಾರದು ಅರಣ್ಯಾಧಿಕಾರಿಗಳು (ಡಿಸಿಎಫ್, ಪಿಸಿಸಿಎಫ್) ಅಭಿಪ್ರಾಯ ವ್ಯಕ್ತಪಡಿಸಿ ವರದಿ ನೀಡಿದ್ದಾರೆ' ಎಂದು ತಿಳಿಸಿದರು.

'ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕೆ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅವರು ತರಾತುರಿಯಲ್ಲಿ ಗಣಿ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ತೀರ್ಮಾನ ಕೈಗೊಂಡಿದ್ದಾರೆ. ಸಂಬಂಧಿಸಿದ ಕಡತವನ್ನು ಅವರು ವಿವರವಾಗಿ ಪರಿಶೀಲಿಸಿಲ್ಲ. ಕುಮಾರಸ್ವಾಮಿ ಅವರ ಜೊತೆ ಚರ್ಚೆಗೆ ಸಿದ್ಧನಿದ್ದೇನೆ. ಗಣಿಗಾರಿಕೆಯಿಂದ ಆಗುವ ಮಾರಕದ ಕುರಿತು ದಾಖಲೆ ನೀಡುತ್ತೇನೆ' ಎಂದರು.

'ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನ ಸ್ವಾಮಿಮಲೈ ಬ್ಲಾಕ್‌ನ ದೇವದಾರಿ ಗುಡ್ಡ ಪ್ರದೇಶದಲ್ಲಿ ಅರಣ್ಯ ತಿರುವಳಿಗೆ ಗುತ್ತಿಗೆ ಪತ್ರ ಮಾಡಿಕೊಳ್ಳದಂತೆ, ಅರಣ್ಯ ಜಾಗವನ್ನು ಹಸ್ತಾಂತರಿಸದಂತೆ ಅರಣ್ಯ ಸಚಿವರು ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿರುವುದು ಸ್ವಾಗತಾರ್ಹ' ಎಂದರು.

ಸುದ್ದಿಗೋಷ್ಠಿಯಲ್ಲಿ ಜೆಎಸ್‌ಪಿಯ ಲಕ್ಷ್ಮಣ ಬಕ್ಕಾಯಿ, ಶಮಿ ಮುಲ್ಲಾ ಪಾಲ್ಗೊಂಡಿದ್ದರು.

'ಅನರ್ಹ ಬಿಪಿಎಲ್ ಕಾರ್ಡು ರದ್ದು'

ಒಂದನೇ ಪುಟದಿಂದ..

ಜಿಲ್ಲಾಧಿಕಾರಿಗಳು, ಜಿಲ್ಲಾ ವೈದ್ಯಾಧಿಕಾರಿಗಳು ತಾಲ್ಲೂಕು ಮಟ್ಟದ ಅಧಿಕಾರಿಗಳ ಜೊತೆ ಸಭೆ ಮಾಡಿ ಕ್ಷಿಪ್ರವಾಗಿ ಕೆಲಸ ಮಾಡಬೇಕು' ಎಂದು ಸೂಚಿಸಿದರು.

'ಜನಸಂಪರ್ಕ ಸಭೆಗಳಲ್ಲಿ 20 ಸಾವಿರ ಅರ್ಜಿಗಳು ಬರುತ್ತವೆ. ನೀವು ಸರಿಯಾಗಿ ಕೆಲಸ ಮಾಡಿದ್ದರೆ ಇಷ್ಟೊಂದು ಸಂಖ್ಯೆಯ ಅರ್ಜಿಗಳು ನನ್ನ ಬಳಿಗೆ ಏಕೆ ಬರುತ್ತವೆ? ನಿಮ್ಮಿಂದ ಪರಿಹಾರ ಸಿಕ್ಕಿಲ್ಲವೆಂದು ಜನ ನನ್ನ ಬಳಿಗೆ ಬಂದಿದ್ದಾರೆ. ಜನರ ಸಮಸ್ಯೆಗಳ ಅರ್ಜಿಗಳು ಸಕಾರಾತ್ಮಕವಾಗಿ, ಗುಣಾತ್ಮಕವಾಗಿ ವಿಲೇವಾರಿ ಆಗದೇ ಇದ್ದರೆ, ನಿಮ್ಮ ವಿರುದ್ಧ ಕ್ರಮ ಖಚಿತ' ಎಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು. ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಪಿಂಚಣಿ ಅರ್ಜಿಗಳು ಬಾಕಿ ಇವೆ ಎನ್ನುವ ಪಟ್ಟಿ ಪ್ರಸ್ತಾಪಿಸಿದ ಮುಖ್ಯಮಂತ್ರಿ, 'ಕಾಲಮಿತಿಯೊಳಗೆ ಇತ್ಯರ್ಥ ಮಾಡಬೇಕು. ಪಿಂಚಣಿಗಳ ವಿಲೇ ಅವಧಿ ಸದ್ಯ 45 ದಿನ ಇದೆ. ಅದನ್ನು 30ಕ್ಕೆ ಇಳಿಸಲಾಗುವುದು' ಎಂದರು.

91 ಸಾವಿರ ಎಕರೆ ಜಮೀನು ಒತ್ತುವರಿ: 'ರಾಜ್ಯದಲ್ಲಿ 1.40 ಕೋಟಿ ಎಕರೆ ಸರ್ಕಾರಿ ಜಮೀನು ಇದ್ದು, ಲ್ಯಾಂಡ್ ಬೀಟ್ ಮೊಬೈಲ್ ತಂತ್ರಾಂಶದ ಮೂಲಕ ದತ್ತಾಂಶ ಸೃಜಿಸಲಾಗಿದೆ. ಒಟ್ಟು 91 ಸಾವಿರ ಎಕರೆ ಜಮೀನು ಒತ್ತುವರಿ ಆಗಿರುವುದನ್ನು ಗುರುತಿಸಲಾಗಿದೆ. ಆಗಸ್ಟ್ ತಿಂಗಳಿನಿಂದ ಸರ್ವೇಯರ್‌ಗಳ ಲಭ್ಯತೆ ನೋಡಿಕೊಂಡುಒತ್ತುವರಿ ತೆರವು ಮಾಡಲು ಕ್ರಮ ಕೈಗೊಳ್ಳಲಾಗುವುದು. ಇತರ ಇಲಾಖೆಯವರೂ ತಮ್ಮ ಜಮೀನು ಎಲ್ಲಿದೆ ಹಾಗೂ ಒತ್ತುವರಿ ಆಗಿದೆಯೇ ಎಂಬ ಕುರಿತು ಪರಿಶೀಲಿಸಲು ಅವಕಾಶವಿದೆ' ಎಂದು ಸಭೆಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಮಾಹಿತಿ ನೀಡಿದರು.

ಕಲಬುರಗಿಯಲ್ಲಿ ಸಿ.ಎಂ ಜನಸ್ಪಂದನ

'ಜನಸ್ಪಂದನ ಕಾರ್ಯಕ್ರಮವನ್ನು ಎಲ್ಲ ಜಿಲ್ಲೆಗಳಲ್ಲಿ ಆರಂಭಿಸಬೇಕು. ವಿಧಾನ ಮಂಡಲ ಅಧಿವೇಶನದ ಮುಗಿದ ಬಳಿಕ ಜಿಲ್ಲಾ ಜನಸ್ಪಂದನ ಕಾರ್ಯಕ್ರಮ ನಡೆಸಲು ಕ್ರಮ ಕೈಗೊಳ್ಳಬೇಕು. ಜಿಲ್ಲಾ ಉಸ್ತುವಾರಿ ಸಚಿವರು ತಪ್ಪದೇ ಜನಸ್ಪಂದನಾ ಸಭೆಗಳನ್ನು ಮಾಡಬೇಕು. ಜಿಲ್ಲಾಧಿಕಾರಿಗಳು ಸ್ವೀಕರಿಸುವ ಅರ್ಜಿಗಳನ್ನು ಆದಷ್ಟು ಬೇಗ ವಿಲೇ ಮಾಡಬೇಕು. 40,702 ಅರ್ಜಿಗಳನ್ನು ವಿಲೇ ಮಾಡಲಾಗಿದ್ದು, ಇನ್ನೂ ಎಂಟು ಸಾವಿರ ಅರ್ಜಿಗಳು ವಿಲೇವಾರಿಗೆ ಬಾಕಿಯಿದೆ. ಅಧಿವೇಶನ ಮುಗಿದ ಬಳಿಕ ಮುಂದಿನ ತಿಂಗಳು ಕಲಬುರಗಿಯಲ್ಲಿ ರಾಜ್ಯಮಟ್ಟದ ಜನಸ್ಪಂದನ ಕಾರ್ಯಕ್ರಮ ಆಯೋಜಿಸಲಾಗುವುದು' ಎಂದು ಸಿದ್ದರಾಮಯ್ಯ ಹೇಳಿದರು.

'ಡೀಮ್ಡ್ ಅರಣ್ಯ: ಸಂಪುಟ ಸಭೆಗೆ ವರದಿ'

'ಯಾವುದೇ ಜಮೀನನ್ನು ತಪ್ಪಾಗಿ ಡೀಮ್ಡ್ ಅರಣ್ಯ ಪಟ್ಟಿಗೆ ಸೇರಿಸಿದ್ದರೆ, ಅಂಥದ್ದನ್ನು ಗುರುತಿಸಲು ಕಂದಾಯ ಹಾಗೂ ಅರಣ್ಯ ಇಲಾಖೆ ಅಧಿಕಾರಿಗಳು ಎರಡು ತಿಂಗಳ ಒಳಗಾಗಿ ಜಂಟಿ ಸಮೀಕ್ಷೆ ನಡೆಸಿ, ವರದಿಯನ್ನು ಸಂಪುಟದ ಮುಂದೆ ಮಂಡಿಸಬೇಕು' ಎಂದು ಮುಖ್ಯಮಂತ್ರಿ ಸೂಚಿಸಿದರು.

ಮುಖ್ಯಾಂಶಗಳು

- ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಪಿಂಚಣಿ ಅರ್ಜಿ ಬಾಕಿ ಇವೆ ಎನ್ನುವ ಪಟ್ಟಿ ಪ್ರಸ್ತಾಪ
- ಡೆಂಗಿ ನಿಯಂತ್ರಣಕ್ಕೆ ಕ್ಷಿಪ್ರ ಕ್ರಮ ಕೈಗೊಳ್ಳಲು ಮುಖ್ಯಮಂತ್ರಿ ಸೂಚನೆ

ಎಮ್ಮೇಹಟ್ಟಿ: ಸಂತ್ರಸ್ತ ಕುಟುಂಬಗಳಿಗೆ ಶಿವರಾಜಕುಮಾರ್, ಗೀತಾ ಸಾಂತ್ವನ

ಅಪಘಾತದಲ್ಲಿ ಮೃತಪಟ್ಟವರ ಕುಟುಂಬಕ್ಕೆ ಆರ್ಥಿಕ ನೆರವು

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಹಾವೇರಿ ಬಳಿ ಜೂನ್ 29ರಂದು ನಡೆದ ಅಪಘಾತದಲ್ಲಿ ಮೃತಪಟ್ಟ ಭದ್ರಾವತಿ ತಾಲ್ಲೂಕಿನ ಎಮ್ಮೇಹಟ್ಟಿಯ 13 ಜನರ ಕುಟುಂಬಕ್ಕೆ ಹಾಗೂ ಇಬ್ಬರು ಗಾಯಾಳುಗಳಿಗೆ ನಟ ಶಿವರಾಜಕುಮಾರ್ ಹಾಗೂ ಗೀತಾ ದಂಪತಿ ಸೋಮವಾರ ವೈಯಕ್ತಿಕವಾಗಿ ₹ 13 ಲಕ್ಷ ಪರಿಹಾರ ವಿತರಿಸಿದರು.

ಮಳೆಯ ನಡುವೆಯೇ ಎಮ್ಮೇಹಟ್ಟಿಯ ಮೃತರ ಮನೆಗಳಿಗೆ ಭೇಟಿ ನೀಡಿದ ಶಿವರಾಜಕುಮಾರ್ ಮತ್ತು ಗೀತಾ ಕುಟುಂಬಸ್ಥರ ಅಳಲು ಆಲಿಸಿ, ಕಂಬನಿ ಮಿಡಿದರು. ಅಪಘಾತದಲ್ಲಿ ಮೃತಪಟ್ಟವರ ಕುಟುಂಬಗಳ ಸದ್ಯದ ಸ್ಥಿತಿಗತಿ, ಬದುಕಿ ಉಳಿದವರ ಪರಿಸ್ಥಿತಿಯ ಬಗ್ಗೆಯೂ ಗ್ರಾಮಸ್ಥರಿಂದ ಮಾಹಿತಿ ಪಡೆದರು.

ಸಾವಿಗೀಡಾದ 13 ಜನರ ಕುಟಂಬದವರಿಗೆ ಒಟ್ಟು ₹ 10 ಲಕ್ಷ ಹಾಗೂ ಶಿವಮೊಗ್ಗದ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ಇಬ್ಬರಿಗೆ ಚಿಕಿತ್ಸಾ ವೆಚ್ಚವಾಗಿ ತಲಾ ₹ 1.5 ಲಕ್ಷ ನೀಡಿದರು.



ಭದ್ರಾವತಿ ತಾಲ್ಲೂಕಿನ ಎಮ್ಮೇಹಟ್ಟಿಗೆ ಸೋಮವಾರ ಭೇಟಿ ನೀಡಿದ ಗೀತಾ ಹಾಗೂ ಶಿವರಾಜಕುಮಾರ್ ದಂಪತಿ ಅಪಘಾತದಲ್ಲಿ ಮೃತಪಟ್ಟವರ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು

ಈ ವೇಳೆ ಮಾತನಾಡಿದ ಶಿವರಾಜಕುಮಾರ್, 'ಹಣ ಕೊಟ್ಟ ತಕ್ಷಣ ಅವರ ಬದುಕಿಗೆ ಆಸರೆ ಆಗುವುದಿಲ್ಲ. ಕುಟುಂಬಸ್ಥರಿಗೆ ಶಾಶ್ವತ ನೆರವು ಕೊಡುವ ಅಗತ್ಯವಿದೆ. ಆ ನಿಟ್ಟಿನಲ್ಲಿ ಮೃತರ ಮಕ್ಕಳ ಶಿಕ್ಷಣಕ್ಕೆ ನೆರವು ನೀಡುವೆ' ಎಂದು ಹೇಳಿದರು.

ಸಂತ್ರಸ್ತ ಕುಟುಂಬಗಳಿಗೆ ನೆರವು ಹಾಗೂ ಗಾಯಾಳುಗಳಿಗೆ ಚಿಕಿತ್ಸೆ ಕೊಡಿಸುವಲ್ಲಿ ಗ್ರಾಮಸ್ಥರು ತೋರಿದ ಕಾಳಜಿಯನ್ನು ಗೀತಾ ಶಿವರಾಜಕುಮಾರ್ ಇದೇ ವೇಳೆ ಶ್ಲಾಘಿಸಿದರು. ಕುಟುಂಬದ ಎಲ್ಲ ಸದಸ್ಯರನ್ನು ಕಳೆದುಕೊಂಡಿರುವ ಅಂಗವಿಕಲೆ ಅರ್ಪಿತಾ ಭವಿಷ್ಯಕ್ಕೆ ನೆರವಾಗುವ ಭರವಸೆ ನೀಡಿದರು.

ಶಿವರಾಜಕುಮಾರ್ ಹಾಗೂ ಗೀತಾ ದಂಪತಿಯನ್ನು ವೀಕ್ಷಿಸಲು ಗ್ರಾಮದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದರು. ಈ ವೇಳೆ ನೂಕುನುಗ್ಗಲು ಉಂಟಾಯಿತು.

ಕೆಲಸ ಕೊಡಿಸಲು ಮನವಿ: 'ಪತಿಯೇ ನನಗೆ ಆಸರೆಯಾಗಿದ್ದರು. ಈಗ ನಾನು ಮೂರು ತಿಂಗಳ ಬಾಣಂತಿ. ಮಗನ ಭವಿಷ್ಯಕ್ಕೆ ನನಗೆ ಉದ್ಯೋಗ ಬೇಕಿದೆ ಕೊಡಿಸಿ' ಎಂದು ಅರುಣ್ ಎಂಬುವರ ಪತ್ನಿ ಮನವಿ ಮಾಡಿದರು.

ಭದ್ರಾವತಿ ಶಾಸಕ ಬಿ.ಕೆ. ಸಂಗಮೇಶ್ವರ, ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಆರ್.ಪ್ರಸನ್ನಕುಮಾರ್, ಪಕ್ಷದ ಜಿಲ್ಲಾ ಹಿಂದುಳಿದ ವರ್ಗಗಳ ಸಮಿತಿ ಪ್ರಧಾನ ಕಾರ್ಯದರ್ಶಿ ಜಿ.ಡಿ.ಮಂಜುನಾಥ್, ಭದ್ರಾವತಿ ತಾಲ್ಲೂಕು ಮರಾಠಾ ಸಮಾಜದ ಅಧ್ಯಕ್ಷ ಲೋಕೇಶ್‌ರಾವ್, ಕಾಂಗ್ರೆಸ್ ಮುಖಂಡರಾದ ಡಾ.ಶ್ರೀನಿವಾಸ ಕರಿಯಣ್ಣ, ಕಲಗೋಡು ರತ್ನಾಕರ, ಅನಿಲ್‌ಕುಮಾರ್ ತಡಕಲ್, ಹನುಮಂತು, ಉಮೇಶ್, ಜಿತೇಂದ್ರಗೌಡ, ಹಬೀಬ್‌ವುಲ್ಲಾ ಇದ್ದರು.


ಮನೆಯವರ ಸಾವು ಬಾಲಕಿಗೆ ಗೊತ್ತಿಲ್ಲ

ಅಪಘಾತದಲ್ಲಿ ಟೆಂಪೊ ಟ್ರಾವೆಲರ್ ಮಾಲೀಕ ನಾಗೇಶರಾವ್, ಪತ್ನಿ ವಿಶಾಲಾಕ್ಷಿ, ಪುತ್ರ ಆದರ್ಶ, ಅತ್ತೆ ಸುಭದ್ರಮ್ಮ ಮೃತಪಟ್ಟಿದ್ದಾರೆ. ಗಾಯಗೊಂಡಿದ್ದ 16 ವರ್ಷದ ಪುತ್ರಿ ಅರ್ಪಿತಾ ಚಿಕಿತ್ಸೆ ಪಡೆದು ಮನೆಗೆ ಮರಳಿದ್ದಾರೆ. ಆದರೆ ಅಪಘಾತದ ಶಾಕ್‌ನಿಂದ ಹೊರಗೆ ಬಂದಿಲ್ಲ.

ಅರ್ಪಿತಾ ಹುಟ್ಟಿನಿಂದಲೇ ಅಂಗವಿಕಲೆ. ಮತ್ತೊಬ್ಬರ ನೆರವಿನಿಂದಲೇ ಓಡಾಡಬೇಕಿದೆ. ಅಪಘಾತದಲ್ಲಿ ಕುಟುಂಬದ ಎಲ್ಲರೂ ಸಾವಿಗೀಡಾದ ವಿಚಾರ ಆಕೆಗೆ ಸೋಮವಾರವೂ ಗೊತ್ತಾಗಿರಲಿಲ್ಲ. ಸಂಬಂಧಿಕರು ಹೇಳಿರಲಿಲ್ಲ. ಮನೆಯವರೆಲ್ಲ ಆಸ್ಪತ್ರೆಯಲ್ಲಿದ್ದಾರೆ ಎಂದು ಹೇಳಿರುವುದಾಗಿ ದೊಡ್ಡಪ್ಪ ರಂಗಸ್ವಾಮಿ ಕಂಬನಿ ಮಿಡಿದರು.

ವಿಷಯ ತಿಳಿದು ಮರುಗಿದ ಗೀತಾ ಶಿವರಾಜಕುಮಾರ್, ಅರ್ಪಿತಾ ಕೈ ಹಿಡಿದುಕೊಂಡು ನೆರವಾಗುವ ಭರವಸೆ ನೀಡಿದರು.

ಕ್ಷೇಮ ಕುಶಲ





ಡೆಂಗಿಗೆ ಸೊಳ್ಳೆಗಳೇ ಬಲ

ಡಾ. ಕುಶ್ವಂತ್ ಕೋಳಿಬೈಲು

ಕೆಲವು ಕಾಯಿಲೆಗಳಿಗೂ ಮತ್ತು ಭೂಮಿಯ ಮೇಲೆ ಮನುಷ್ಯನ ನಡವಳಿಕೆಗಳಿಗೂ ನೇರವಾದ ಸಂಬಂಧವಿದೆ. ಬ್ಯಾಕ್ಟೀರಿಯಾ ಮತ್ತು ವೈರಸ್‌ಗಳಿಂದ ಬರುವ ಹೆಚ್ಚಿನ ಸಾಂಕ್ರಾಮಿಕ ಕಾಯಿಲೆಗಳು ಈಗ ಉತ್ತಮ ಆ್ಯಂಟಿಬಯಾಟಿಕ್ ಮತ್ತು ಲಸಿಕೆಗಳ ಕಾರಣದಿಂದ ಕಡಿಮೆಯಾಗಿವೆ. ಸಾಂಕ್ರಾಮಿಕ ಕಾಯಿಲೆಗಳ ಪೈಕಿ ಮಾರಣಾಂತಿಕ ಕಾಯಿಲೆಗಳಾದ ಸಿಡುಬು ಮುಂತಾದ ಕೆಲವು ರೋಗಗಳು ಭೂಮಿಯ ಮೇಲಿಂದ ಕಣ್ಮರೆಯಾಗಿಸುವಲ್ಲಿ ವೈದ್ಯಕೀಯ ತಂತ್ರಜ್ಞಾನವು ಯಶಸ್ವಿಯಾಗಿವೆ. ಆದರೆ ಕಳೆದ ಐವತ್ತು ವರ್ಷಗಳಲ್ಲಿ 'ಫ್ಲೇವಿ' ವೈರಸ್ ಸಮೂಹಕ್ಕೆ ಸೇರಿದ 'ಡೆಂಗಿ' ಎಂಬ ವೈರಸ್ ಉಂಟು ಮಾಡುವ ಡೆಂಗಿ ಕಾಯಿಲೆಯು ಸುಮಾರು ಮೂವತ್ತು ಪಟ್ಟು ಹೆಚ್ಚಾಗಿದೆ. ಪ್ರಪಂಚದ ಸುಮಾರು ನೂರಹತ್ತು ದೇಶಗಳಲ್ಲಿ ತಲೆನೋವಾಗಿರುವ ಈ ಕಾಯಿಲೆಯು ಸುಮಾರು ನಾಲ್ಕು ಕೋಟಿ ಜನರನ್ನು ಪ್ರತಿ ವರ್ಷ ಬಾಧಿಸುತ್ತದೆ. ಭಾರತದ ಕೋಲ್ಕತ್ತದಲ್ಲಿ 1964ನೇ ಇಸವಿಯಲ್ಲಿ ಮೊದಲ ಬಾರಿಗೆ ಪತ್ತೆಯಾದ ಡೆಂಗಿ ಇಂದು ಪ್ರತಿ ವರ್ಷ ಲಕ್ಷಾಂತರ ಭಾರತೀಯರಿಗೆ ಸೋಂಕನ್ನು ಉಂಟುಮಾಡುತ್ತಿದೆ. ಕೃಷಿ ಮತ್ತು ಕಟ್ಟಡ ಕಾಮಗಾರಿಯಲ್ಲಿ ಕೆಲಸ ಮಾಡುವವರನ್ನು ಹೆಚ್ಚಾಗಿ ಬಾಧಿಸುವ ಡೆಂಗಿ ವೈರಸ್ ಇಂದು ನಗರ ಮತ್ತು ಗ್ರಾಮೀಣ ಭಾಗಗಳಲ್ಲಿ ತನ್ನ ಸೋಂಕನ್ನು ಹರಡುತ್ತಿದೆ.

ಕಳೆದ ಐವತ್ತು ವರ್ಷಗಳಲ್ಲಿ ಹೆಚ್ಚಾದ ನಗರೀಕರಣ, ಪರಿಸರಮಾಲಿನ್ಯ, ಜಾಗತಿಕ ತಾಪಮಾನದ ಏರಿಕೆ, ಹೆಚ್ಚಾಗುತ್ತಿರುವ ಸ್ಲಮ್ ಪ್ರದೇಶಗಳು – ಮುಂತಾದ ಕಾರಣಗಳು ಡೆಂಗಿ ಪ್ರಕರಣಗಳು ಹೆಚ್ಚಾಗಲು ಕಾರಣವಾಗಿವೆ. ಡೆಂಗಿ ವೈರಸ್ಸನ್ನು ಹರಡುವ 'ಈಡೀಸ್ ಈಜಿಪ್ಟಿ' ಸೊಳ್ಳೆಗಳು ಹಡಗು ಅಥವಾ ವಿಮಾನದ ಮೂಲಕ ಪ್ರಪಂಚದ ಮೂಲೆ ಮೂಲೆಗೂ ತಲುಪಿದ್ದಿರಬೇಕು. ದಕ್ಷಿಣ ಅಮೆರಿಕ, ಆಫ್ರಿಕಾ ಮತ್ತು ದಕ್ಷಿಣ ಏಷ್ಯಾದ ದೇಶಗಳಲ್ಲಿ ಡೆಂಗಿ ಹರಡಲು ಇದು ಪ್ರಮುಖ ಪಾತ್ರವನ್ನು ವಹಿಸಿದ್ದಿರಬೇಕು. ಕಾಲುಗಳ ಮತ್ತು ಬೆನ್ನಿನ ಮೇಲೆ ಬಿಳಿಕಲೆಗಳಿರುವ 'ಈಡೀಸ್ ಈಜಿಪ್ಟಿ' ಎಂಬ ಪುಟ್ಟ ಸೊಳ್ಳೆಯು ಡೆಂಗಿ ಜ್ವರ ಮಾತ್ರವಲ್ಲದೆ ಚಿಕುನ್ ಗುನ್ಯಾ, ಹಳದಿಜ್ವರ ಮತ್ತು ಝಿಕಾ ವೈರಸ್ ಸೋಂಕನ್ನೂ ಹರಡುತ್ತದೆ. ಈ ಸೊಳ್ಳೆಯ ಒಟ್ಟು ಸಂಚಾರವು ಸುಮಾರು ಇನ್ನೂರು ಮೀಟರುಗಳ ಒಳಗಿದ್ದು, ಇದು ಅರಣ್ಯ ಮತ್ತು ನಗರಪರಿಸರ ಎರಡರಲ್ಲೂ ಜೀವಿಸಬಲ್ಲದು. ತಾಪಮಾನ ಕಡಿಮೆಯಾದಂತೆ ಈ ಸೊಳ್ಳೆಯ ಆಯುಷ್ಯವು ಕಡಿಮೆಯಾಗುವ ಕಾರಣ ಏರುತ್ತಿರುವ ಜಾಗತಿಕ ತಾಪಮಾನದ ಕಾರಣದಿಂದ ಈ ಸೊಳ್ಳೆಯ ಜೀವಿತಾವಧಿಯು ಹೆಚ್ಚಾಗುತ್ತಿದೆ. ಈ ಕಾರಣ ಡೆಂಗಿ ಪ್ರಕರಣಗಳು ಜಾಗತಿಕ ಮಟ್ಟದಲ್ಲಿ ಹೆಚ್ಚಾಗುತ್ತಿವೆ. ಬೆಳೆಯುತ್ತಿರುವ ನಗರಗಳಲ್ಲಿ ಸದಾ ಕಾಲ ನಡೆಯುವ ಕಟ್ಟಡ ಕಾಮಗಾರಿಯ ಪ್ರದೇಶಗಳಲ್ಲಿ ನಿಲ್ಲುವ ನೀರಿನ ಜಾಗಗಳು ಈ ಸೊಳ್ಳೆಗಳ ಆಶ್ರಯತಾಣಗಳಾಗುತ್ತಿವೆ.

ಆಕಾಲಿಕ ಮಳೆ ಬಂದ ನಂತರ ನೀರು ತುಂಬಿಕೊಳ್ಳುವ ಪ್ರದೇಶಗಳಲ್ಲಿಯೂ ಈ ಸೊಳ್ಳೆಗಳು ಹೆಚ್ಚಾದ ಸಂತಾನೋತ್ಪತ್ತಿಯನ್ನು ಮಾಡುತ್ತವೆ. ಆದುದರಿಂದಲೇ ಜೂನ್ ತಿಂಗಳಿಂದ ಹಿಡಿದು ಸೆಪ್ಟೆಂಬರ್ ತಿಂಗಳ ತನಕ ಭಾರತದಲ್ಲಿ ಡೆಂಗಿ ಪ್ರಕರಣಗಳು ಹೆಚ್ಚಾಗಿ ಕಂಡುಬರುತ್ತವೆ.

ಕಳಪೆ ಚರಂಡಿ ವ್ಯವಸ್ಥೆ, ಶುಚಿತ್ವದ ಕೊರತೆಯಿರುವ ಕೊಳಚೆ ಪ್ರದೇಶಗಳು ಕೂಡ ಈಡೀಸ್ ಈಜಿಪ್ಟಿ ಸೊಳ್ಳೆಗಳಿಗೆ ಸಹಕಾರಿಯಾಗುವ ಜಾಗ. ಈ ಕಾರಣಗಳಿಂದ ಡೆಂಗಿರೋಗವನ್ನು ತಡೆಗಟ್ಟುವಲ್ಲಿ ಅರೋಗ್ಯ ಇಲಾಖೆಗಿಂತ ಹೆಚ್ಚಿನ ಜವಾಬ್ದಾರಿ ನಗರಪಾಲಿಕೆಯ ಮೇಲಿರುತ್ತದೆ. ಈಡೀಸ್ ಈಜಿಪ್ಟಿ ಸೊಳ್ಳೆಯು ಡೆಂಗಿರೋಗಿಯ ರಕ್ತವನ್ನು ಹೀರಿದ ಸುಮಾರು ಹತ್ತರಿಂದ ಹದಿನಾಲ್ಕು ದಿನಗಳಲ್ಲಿ ಸೊಳ್ಳೆಯ ದೇಹದಲ್ಲಿ ಡೆಂಗಿ ವೈರಸ್ ಉತ್ಪತ್ತಿಯಾಗುತ್ತದೆ. ತದನಂತರ ಆ ಸೊಳ್ಳೆಯು ಆರೋಗ್ಯವಂತರಿಗೆ ಕಚ್ಚುವ ಮೂಲಕ ಅವರ ದೇಹದೊಳಗೆ ಡೆಂಗಿ ವೈರಸ್ಸನ್ನು ಸೇರಿಸಿ ಡೆಂಗಿ ಜ್ವರವನ್ನು ಉಂಟುಮಾಡಬಲ್ಲದು.

ಡೆಂಗಿ ಒಂದು ವೈರಲ್ ಕಾಯಿಲೆಯಾಗಿರುವ ಕಾರಣ. ವೈರಸ್ ಇಡೀ ದೇಹವನ್ನು ವ್ಯಾಪಿಸಿ ತೀವ್ರವಾದ ಜ್ವರ, ಮೈಕೈ ನೋವು ಮತ್ತು ತಲೆನೋವನ್ನು ಉಂಟುಮಾಡಬಲ್ಲದು. ವಾಂತಿ ಮತ್ತು ಹೊಟ್ಟೆನೋವು ಕಂಡು ಬರುವ ಡೆಂಗಿರೋಗಿಗಳು ಹೆಚ್ಚಿನ ಅಪಾಯಕ್ಕೆ ತುತ್ತಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಡೆಂಗಿರೋಗಿಗಳಿಗೆ ಎಲ್ಲಿಯ ತನಕ ತೀವ್ರಪ್ರಮಾಣದ ಜ್ವರವಿರುತ್ತದೆಯೊ ಅಲ್ಲಿಯ ತನಕ ಅವರಲ್ಲಿ ರಕ್ತಸ್ರಾವ ಅಥವಾ ತೀವ್ರವಾದ ಅಸ್ವಸ್ಥತೆಗೆ ಗುರಿಯಾಗುವುದಿಲ್ಲ. ಡೆಂಗಿಜ್ವರ ನಿಂತ ನಂತರದ ಎರಡು ಮೂರು ದಿನಗಳು ರೋಗಿಯ ಆರೋಗ್ಯದ ದೃಷ್ಟಿಯಿಂದ ಅತ್ಯಂತ ನಿರ್ಣಾಯಕ ದಿನಗಳಾಗಿರುತ್ತದೆ. ಶೇ 90ರಷ್ಟು ಜನರು ಯಾವುದೇ ಚಿಕಿತ್ಸೆಯಿಲ್ಲದೆ ಸುಧಾರಿಸಿಕೊಳ್ಳಬಲ್ಲರು. ಅದರೆ ಉಳಿದವರ ದೇಹದಲ್ಲಿ ರಕ್ತನಾಳಗಳು ರಕ್ತವನ್ನು ಒಳಗಡೆ ಹಿಡಿದಿಟ್ಟುಕೊಳ್ಳುವುದರಲ್ಲಿ ವಿಫಲವಾಗುವ ಕಾರಣ, ಅಂತಹ ರೋಗಿಗಳಲ್ಲಿ ರಕ್ತದೊತ್ತಡ ತೀವ್ರಗತಿಯಲ್ಲಿ ಕುಸಿಯಬಹುದು. ರಕ್ತನಾಳಗಳ ಸೋರಿಕೆಯ ಜೊತೆ ಜೊತೆಗೆ ಪ್ಲೇಟ್‌ಲೆಟ್ ಕಣಗಳು ಕಡಿಮೆಯಾಗುವುದರಿಂದ ದೇಹದೊಳಗೆ ರಕ್ತಸ್ರಾವವಾಗಬಹುದು. ಇಂತಹ ರೋಗಿಗಳನ್ನು ತೀವ್ರ ನಿಗಾ ಘಟಕದಲ್ಲಿರಿಸಿ ಸೂಕ್ತ ಪ್ರಮಾಣದ ನೀರಿನಾಂಶವನ್ನು ನೀಡಿ ಅವರ ದೇಹದೊಳಗೆ ರಕ್ತದ ಪ್ರಮಾಣ ಮತ್ತು ರಕ್ತದೊತ್ತಡವನ್ನು ನಿಯಂತ್ರಣದಲ್ಲಿಡಬೇಕು. ಹೆಚ್ಚಿನ ರೋಗಿಗಳು ಕಡೆ ಗಳಿಗೆಯಲ್ಲಿ ರಕ್ತದೊತ್ತಡ ತೀವ್ರವಾಗಿ ಕುಸಿದಿರುವ ಸಂದರ್ಭಗಳಲ್ಲಿ ಆಸ್ಪತ್ರೆಗೆ ತಲುಪುವ ಕಾರಣದಿಂದ ಡೆಂಗಿಗೆ ಬಲಿಯಾಗುತ್ತಾರೆ.

ಡಯಾಬಿಟಿಸ್, ರಕ್ತದೊತ್ತಡ, ಲಿವರ್ ಸಂಬಂಧಿ ಕಾಯಿಲೆಗಳನ್ನು ಹೊಂದಿರುವವರು; ಗರ್ಭಿಣಿಯರು ಮತ್ತು ಚಿಕ್ಕಮಕ್ಕಳಲ್ಲಿ ಡೆಂಗಿ ಹೆಚ್ಚು ಮಾರಣಾಂತಿಕವಾಗಬಲ್ಲದು. ಡೆಂಗಿ ವೈರಸ್ಸಿನಲ್ಲಿ ನಾಲ್ಕು ಪ್ರಬೇಧಗಳಿರುವ ಕಾರಣ ಈ ವೈರಲ್ ಕಾಯಿಲೆಗೆ ಸೂಕ್ತವಾದ ಲಸಿಕೆ ಇನ್ನು ಲಭ್ಯವಿಲ್ಲ. ಈಡೀಸ್ ಈಜಿಪ್ಟಿ ಸೊಳ್ಳೆಯು ಹಗಲಿನ ವೇಳೆ ಕಚ್ಚುವ ಕಾರಣದಿಂದ ರಾತ್ರಿಯ ವೇಳೆ ಮಾತ್ರ ಕಾಯಿಲ್ ಅಥವಾ ಸೊಳ್ಳೆಪರದೆ ಬಳಸುವವರು ಸುರಕ್ಷಿತರಲ್ಲ. ಮಳೆಗಾಲ ಬಂತೆಂದರೆ ಡೆಂಗಿ ಹರಡುವ ಸೊಳ್ಳೆಯೂ ಬಂತೆಂಬ ಅರ್ಥವಿರುವ ಕಾರಣ ಡೆಂಗಿ ಕಾಣಿಸಿಕೊಂಡ ಪ್ರದೇಶದಲ್ಲಿ ಜನರು ಹೆಚ್ಚು ಎಚ್ಚರಿಕೆಯಿಂದ ಇರುವುದು ಅತ್ಯಗತ್ಯ! ❖



ಧೈರ್ಯದ ಪರಿ ಪರಿಧಿ

ರಘು ವಿ.

ಧೈರ್ಯವೆಂಬುದು ಬದುಕಿನ ಮೂಲ ಬಂಡವಾಳ. ಮಗುವಾಗಿ ಮೊದಲ ಹೆಜ್ಜೆಯಿಂದ ಮೊದಲುಗೊಂಡು ಸಾವಿನ ಬಾಗಿಲು ಬಡಿಯುವವರೆಗೆ ಗಟ್ಟಿ ಗುಂಡಿಗೆಯಿಂದ ಬದುಕನ್ನು ಎದುರಿಸುವ ಪ್ರಯತ್ನವನ್ನು ಪ್ರತಿಯೊಬ್ಬ ಮನುಷ್ಯನೂ ಮಾಡುತ್ತಾನೆ. ಧೈರ್ಯವನ್ನು ಕುರಿತು ಕೆಲವು ಮುಖ್ಯ ಅಂಶಗಳನ್ನು ಹೀಗೆ ಪಟ್ಟಿ ಮಾಡಬಹುದು:

- ಧೈರ್ಯವು ಅತ್ಯಂತ ಶ್ರೇಷ್ಠ ಗುಣ. ಇದು ಮನುಷ್ಯನಿಗೆ ಕಷ್ಟಗಳನ್ನು ಎದುರಿಸಲು ಮತ್ತು ತನ್ನ ನಂಬಿಕೆಗಳಿಗಾಗಿ ನಿಲ್ಲಲು ಸಹಾಯ ಮಾಡುತ್ತದೆ.
- ಭಯ, ಅನಿಶ್ಚಿತತೆ ಅಥವಾ ಭೀತಿಯನ್ನು ಎದುರಿಸುವ ಸಾಮರ್ಥ್ಯವಾಗಿದೆ. ಧೈರ್ಯವು ಸಾಮಾಜಿಕ ಬದಲಾವಣೆ, ವೈಜ್ಞಾನಿಕ ಆವಿಷ್ಕಾರ ಮತ್ತು ವೈಯಕ್ತಿಕ ಬೆಳವಣಿಗೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ.ಧೈರ್ಯವು ತನ್ನ ಮಿತಿಗಳನ್ನು ಹೊಂದಿದೆ. ವಿವೇಚನೆಯಿಲ್ಲದ ಧೈರ್ಯವು ಅಪಾಯಕಾರಿಯೂ ಆಗಬಹುದು. ಧೈರ್ಯವನ್ನು ಜ್ಞಾನ ಮತ್ತು ವಿವೇಕಗಳೊಂದಿಗೆ ಬೆಳೆಸಬೇಕು.ಕೇವಲ ಧೈರ್ಯವೊಂದೇ ಯಶಸ್ಸನ್ನು ಖಾತ್ರಿಪಡಿಸುವುದಿಲ್ಲ. ಇದು ಇತರ ಗುಣಗಳು ಮತ್ತು ಕೌಶಲಗಳೊಂದಿಗೆ ಪೂರಕವಾಗಿರಬೇಕು.

ಧೈರ್ಯವನ್ನು ಕುರಿತು ವೇದ, ಉಪನಿಷತ್ತು, ಭಗವದ್ಗೀತೆಯಂಥ ಪ್ರಾಚೀನ ಸಾಹಿತ್ಯದಲ್ಲೂ ಉಲ್ಲೇಖಿಸಲಾಗಿದೆ. ಅದು ಹೇಗೆ ಬದುಕನ್ನು ಕಟ್ಟಿಕೊಡುತ್ತದೆ ಎಂಬುದನ್ನು ಪರಿಪರಿಯಾಗಿ ಹೇಳಲಾಗಿದೆ. ಗೀತೆಯಂತೂ ಅರ್ಜುನನಿಗೆ ಧೈರ್ಯ ತುಂಬಲು ಮಾಡಿದ ಯಶಸ್ವಿ ಪ್ರಯತ್ನವೇ ಸರಿ. ಬಹಳ ಜನರು ಜೀವನದ ಸೊಗಸನ್ನು ಅದರ ಪೂರ್ಣ ಸೊಬಗನ್ನು ಆಸ್ವಾದಿಸಲು ಸೋಲುವ ಕಾರಣ ಅವರು ಧೈರ್ಯಶಾಲಿಗಳಾಗಿಲ್ಲದಿರುವುದು. ಅಮೆರಿಕದ ಪ್ರಸಿದ್ಧ ಕವಿ ರಾಲ್ಫ್ ವಾಲ್ಡೊ ಎಮರ್ಸನ್, 'ಪ್ರತಿಯೊಬ್ಬ ಮನುಷ್ಯನೂ ಧೈರ್ಯಶಾಲಿಯೇ. ಆದರೆ ಅವನು ವಂಚಿತನಾಗುವುದು ಏಕೆಂದರೆ ಈ ಧೈರ್ಯದ ಪುಷ್ಟಿಯನ್ನು ಅವನು ಇತರರಿಂದ ಬಯಸುತ್ತಾನೆ' ಎಂದು ಹೇಳಿದ್ದಾನೆ. ಎಂದರೆ ಧೈರ್ಯವು ಆರ್ಜಿತಗುಣವೇ ಹೊರತು ಆರೋಪಿತ ಗುಣವಾಗಲಾರದು. ಚಿಂತಕ ಮತ್ತು ಲೇಖಕ ರಾಯ್ ಟಿ ಬೆನೆಟ್ ತನ್ನ 'ದಿ ಲೈಟ್ ಇನ್ ದಿ ಹಾರ್ಟ್' ಕೃತಿಯಲ್ಲಿ, 'ಇದು ನಿಮ್ಮ ಬದುಕು. ನಿಮಗೆ ಬೇಕಾದಂತೆ ಬದುಕಲು ಯಾರ ಅಪ್ಪಣೆಯೂ ಬೇಕಿಲ್ಲ. ನೀವು ಹೃದಯಪೂರ್ವಕವಾಗಿ ಬದುಕುವ ಧೈರ್ಯಶಾಲಿಗಳಾಗಿ' ಎನ್ನುತ್ತಾನೆ.

ಬೆನೆಟ್‌ನ ಮಾತುಗಳಿಗೆ ಸಂವಾದಿಯಾಗಿ ಸ್ವಾಮಿ ವಿವೇಕಾನಂದರ ಮಾತುಗಳನ್ನೂ ನೋಡಬಹುದು; ಅವರೆನ್ನುತ್ತಾರೆ: 'ನೀವೊಂದು ಕಾರ್ಯವನ್ನು ಕೈಗೆತ್ತಿಕೊಂಡರೆ, ಯಾವುದೇ ಕಾರಣಕ್ಕೂ ಅದನ್ನು ಬಿಡಬೇಡಿ. ನಿಮ್ಮ ಹೃದಯದ ಮಾತುಗಳನ್ನು ಆಲಿಸಿ ಮತ್ತು ಪಾಲಿಸಿ, ಬೇರೆಯವರ ಮಾತುಗಳನ್ನಲ್ಲ.' ಸ್ವಾಮಿ ವಿವೇಕಾನಂದರ ಉಕ್ತಿಗಳಂತೂ ಧೀರತೆಯ ದುಂದುಭಿಯಂತೆ ಮೊಳಗುತ್ತವೆ. ಅವರೆಂದೂ ಹೇಡಿತನವನ್ನು ಒಪ್ಪಲಿಲ್ಲ. 'ನಾಯಕನಂತೆ ಬೆಳಗು. ಯಾವಾಗಲೂ ಹೇಳು, 'ನನಗೆ ಭಯವೆಂಬುದಿಲ್ಲ'; ಮತ್ತು ಎಲ್ಲರಿಗೂ ಸಾರು, 'ಭಯ ಪಡಬೇಡಿ'.' ನಿರ್ಭೀತಿ ಎಂಬುದು ಲೌಕಿಕಕ್ಕೆ ಅನ್ವಯವಾಗುವಂತೆ ಆಧ್ಯಾತ್ಮಿಕ ಜೀವನಕ್ಕೂ ಅನ್ವಯ ಎನ್ನುತ್ತಾರೆ, ಸ್ವಾಮೀಜಿ.

'ಧೈರ್ಯಶಾಲಿಗಳಾಗಿ! ಬಲಶಾಲಿಗಳಾಗಿ! ನಿರ್ಭಯರಾಗಿರಿ! ಆಧ್ಯಾತ್ಮಿಕ ಜೀವನಕ್ಕೆ ಬಂದಮೇಲೆ ಜೀವನಪರ್ಯಂತ ಹೋರಾಟವೇ. ಸಾವೇ ಎದುರಾದರೂ ಹೆದರದೆ ಹೋರಾಡಿ. ಹೆದರಿಕೆಯಿಂದ 'ಸಾಯದಿರಿ', ಹೋರಾಡುತ್ತ 'ಸಾಯಿರಿ'.'

ಸ್ವಾಮೀಜಿ ಅವರ ಪ್ರಕಾರ ಧೈರ್ಯವು ಆಂತರಿಕ ಶಕ್ತಿ ಮತ್ತು ನೈತಿಕ ದೃಢತೆಯೊಂದಿಗೆ ಸಂಬಂಧವನ್ನು ಹೊಂದಿದೆ. ಮಹಾತ್ಮ ಗಾಂಧಿ ಅವರ ಮಾತಿನಂತೆ, ಶಕ್ತಿಯು ದೈಹಿಕ ಸಾಮರ್ಥ್ಯದಿಂದ ಬರುವುದಿಲ್ಲ, ಬದಲಾಗಿ ಅಜೇಯ ಇಚ್ಛಾಶಕ್ತಿಯಿಂದ ಬರುತ್ತದೆ. ಹೀಗಿದ್ದಾಗ ಮಾತ್ರ ಮನುಷ್ಯ ಧೈರ್ಯಶಾಲಿಯಾಗುತ್ತಾನೆ. ರವೀಂದ್ರನಾಥ ಟ್ಯಾಗೋರ್ ಪ್ರಕಾರ, ಧೈರ್ಯಶಾಲಿಯಾಗಿರುವುದು ಎಂದರೆ ಭಯರಹಿತನಾಗಿರುವುದಲ್ಲ; ಬದಲಾಗಿ ನಮ್ಮ ಭಯಗಳನ್ನು ಎದುರಿಸುವುದಾಗಿದೆ. ಚರಿತ್ರೆ ಎಂಬುದು ಇಂತಹ ಕೆಲವು ಧೈರ್ಯವಂತರ ಗಾಥೆಯೇ ಆಗಿರುತ್ತದೆ ಎಂಬುದು ಗಮನೀಯ.ಧೈರ್ಯಶಾಲಿಯಾಗಿರಬೇಕು ಎಂಬುದೇನೋ ನಿಜ. ಆದರೆ ಧೈರ್ಯವು ತನ್ನದೇ ಆದ ಮಿತಿಗಳನ್ನೂ ಹೊಂದಿದೆ. ಹಿತೋಪದೇಶದಲ್ಲಿ ಹೇಳಿರುವಂತೆ, ಯೋಚಿಸದ ಧೈರ್ಯವು ಮರಣಕ್ಕೆ ಕೂಡ ಕಾರಣವಾಗಬಹುದು. ಧೈರ್ಯವು ಬುದ್ಧಿವಂತಿಕೆ ಮತ್ತು ಎಚ್ಚರಿಕೆಯ ಪರಿಗಣನೆಯೊಂದಿಗೆ ಸಮತೋಲನಗೊಳ್ಳಬೇಕು ಎನ್ನುತ್ತಾನೆ, ಚಾಣಕ್ಯ. ಅವನೆನ್ನುತ್ತಾನೆ: 'ಸರ್ಪ, ರಾಜ, ಹುಲಿ, ಕಣಜ, ಹಸುಗೂಸು ಮತ್ತು ಇತರರು ಸಾಕಿದ ನಾಯಿ – ಇವುಗಳನ್ನು ನಿದ್ರೆಯಿಂದ ಎಬ್ಬಿಸಬಾರದು.' ಎಂದರೆ ಧೈರ್ಯವಿದೆ ಎಂದು ಈ ಬಗೆಯ ಹುಂಬತನದ ಕಾರ್ಯಗಳಿಗೆ ಕೈಯಿಕ್ಕಬಾರದೆಂಬ ತಾತ್ಪರ್ಯ. ಪಂಚತಂತ್ರದ ಅನೇಕ ಕಥೆಗಳು ಧೈರ್ಯ ಮತ್ತು ವಿವೇಕದ ಸೂಕ್ಷ್ಮ ವಿವೇಚನೆಗಳನ್ನೊಳಗೊಂಡ ಭಾಷ್ಯಗಳಾಗಿವೆ. ಈ ಬಗೆಯ ಸಮತೋಲನವನ್ನು ಕುರಿತ ಕಗ್ಗದ ಪದ್ಯ ಹೀಗಿದೆ: 'ತನ್ನ ಶಕ್ತಿಯನಳೆದು, ತನ್ನ ಗುಣಗಳ ಬಗೆದು, ಸನ್ನಿವೇಶದ ಸೂಕ್ಷ್ಮವರಿತು, ಧೃತಿದಳೆದು, ತನ್ನ ಕರ್ತವ್ಯಪರಿಧಿಯ ಮೀರದುಜ್ಜುಗಿಸೆ ಪುಣ್ಯಶಾಲಿಯ ಪಾಡು – ಮಂಕುತಿಮ್ಮ.' ಧೃತಿಯನ್ನು ತಳೆಯುವ ಪೂರ್ವಭಾವಿಯಲ್ಲಿ, ತನ್ನ ಶಕ್ತಿಯನ್ನು ಅಳೆದು, ಗುಣಗಳನ್ನು ಎಣಿಸಿ, ಸನ್ನಿವೇಶದ ಸೂಕ್ಷ್ಮವನ್ನು ತಿಳಿದು ಕಾರ್ಯಕೈಗೊಂಡು ಯಶಸ್ವಿಯಾಗುವುದು ಪುಣ್ಯಶಾಲಿಯ (ಯಶಸ್ವೀ ಪುರುಷ) ಲಕ್ಷಣ ಎನ್ನುತ್ತದೆ, ಕಗ್ಗ. ಈ ಬಗೆಯಲ್ಲಿ ಧೈರ್ಯ ಮತು ಅದರ ಪರಿಧಿಯನ್ನು ಅರಿತ ವಿವೇಕಯುತ ಬಾಳು ನಮ್ಮದಾಗಬೇಕು. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ಗಣಿತ

ಸಮಾಂತರ ಶ್ರೇಢಿ

3) 24, 21, 18 .... ಈ ಸಮಾಂತರ ಶ್ರೇಢಿಯ ಎಷ್ಟು ಪದಗಳ ಮೊತ್ತ 78 ಆಗಿದೆ?

ಪರಿಹಾರ: $a = 24, \quad d = 21-24 = -3, \quad S_n = 78$

ನಾವು n ಕಂಡುಹಿಡಿಯಬೇಕಾಗಿದೆ

$$S_n = \frac{n}{2}[2a+(n-1)d]$$

$$78 = \frac{n}{2}[48+(n-1)(-30)]$$

$$\Rightarrow = \frac{n}{2}[51-3n]$$

$$3n^2 - 51n + 156 = 0$$

$$n^2 - 17 + 52 = 0$$

$$(n - 4)(n - 13) = 0$$

$\therefore \quad n = 4$ ಅಥವಾ 13

nನ ಎರಡೂ ಮೌಲ್ಯಗಳು ಸ್ವೀಕಾರಾರ್ಹ, ಆದ್ದರಿಂದ ಪದಗಳ ಸಂಖ್ಯೆ 4 ಅಥವಾ 13.

4) ಮೊತ್ತ ಕಂಡುಹಿಡಿಯಿರಿ:

(i) ಮೊದಲ 1000 ಧನ ಪೂರ್ಣಾಂಕಗಳು

(ii) ಮೊದಲ n ಧನ ಪೂರ್ಣಾಂಕಗಳು

ಪರಿಹಾರ:(i) $S = 1 + 2 + 3 + \ldots + 1000$ ಆಗಿರಲಿ

$S_n = \frac{n}{2}[a+l]$ ಸಮಾಂತರ ಶ್ರೇಢಿಯ ಮೊದಲ n ಪದಗಳ ಮೊತ್ತ ಕಂಡುಹಿಡಿಯುವ ಸೂತ್ರ ಉಪಯೋಗಿಸಿದಾಗ ನಮಗೆ

$$S_{1000} = \frac{1000}{2}[1+1000] = 500x1001 = 500500$$

ಹಾಗಾದರೆ ಮೊದಲ 1000 ಪೂರ್ಣಾಂಕಗಳ ಮೊತ್ತವು 500500

(ii) $S_n = 1 + 2 + 3 + \ldots + n$ ಆಗಿರಲಿ

ಇಲ್ಲಿ $a = 1$ ಮತ್ತು ಕೊನೆಯ ಪದ $l = n$ ಆಗಿದೆ

ಆದ್ದರಿಂದ $S_n = \frac{n(1+n)}{2}$ ಅಥವಾ $S_n = \frac{n(n+1)}{2}$

ಹಾಗಾದರೆ ಮೊದಲ ಧನ ಪೂರ್ಣಾಂಕಗಳ ಮೊತ್ತವು

$$S_n = \frac{n(n+1)}{2}$$ ಆಗಿದೆ

5) n ನೇ ಪದ $a_n = 3 + 2n$ ಇರುವ ಸಂಖ್ಯಾ ಸರಣಿಯ ಮೊದಲ 24 ಪದಗಳ ಮೊತ್ತ ಕಂಡುಹಿಡಿಯಿರಿ.

ಪರಿಹಾರ: ಅಂದರೆ $a_n = 3 + 2n$

ಆದರೆ $a_1 = 3 + 2 = 5$

$a_2 = 3 + 2x\ 2 = 7$

$a_3 = 3 + 2\ x\ 3 = 3 + 6 = 9$

ಆ ಸಂಖ್ಯಾ ಸರಣಿ 5, 7, 9, 11 ....

ಇಲ್ಲಿ, 7 – 5 = 9 – 7 = 11 – 9 = 2 ....

ಆದ್ದರಿಂದ ಇದು ಸಾಮಾನ್ಯ ವ್ಯತ್ಯಾಸ $d = 2$ ಇರುವ ಸಮಾಂತರ ಶ್ರೇಢಿಯನ್ನು ಉಂಟು ಮಾಡುತ್ತದೆ.

S_{24} ನ್ನು ಕಂಡುಹಿಡಿಯಲು $n = 24, \quad a = 5, \quad d = 2$

ಆದ್ದರಿಂದ,

$$S_{24} = \frac{24}{2}[2x5+(24-1)x2 = 12(10+46) = 672$$

ಆದ್ದರಿಂದ ಆ ಸಂಖ್ಯಾ ಸರಣಿಯ ಮೊದಲ 24 ಪದಗಳ ಮೊತ್ತವು 672 ಆಗಿದೆ.

6) ಟೆಲಿವಿಷನ್ ಸೆಟ್‌ಗಳ ತಯಾರಕರೊಬ್ಬರು ಮೂರನೇ ವರ್ಷದಲ್ಲಿ 600 ಸೆಟ್‌ಗಳನ್ನು ಮತ್ತು ಏಳನೇ ವರ್ಷದಲ್ಲಿ 700 ಸೆಟ್‌ಗಳನ್ನು ತಯಾರಿಸುತ್ತಾರೆ. ಪ್ರತಿ ವರ್ಷ ಅವರ ಉತ್ಪಾದನೆ ಸ್ಥಿರವಾದ ಸಂಖ್ಯೆಯಿಂದ ಹೆಚ್ಚಾಗುತ್ತದೆ ಎಂದು ಭಾವಿಸಿ.

(i) ಮೊದಲ ವರ್ಷದ ಉತ್ಪಾದನೆ (ii) 10ನೇ ವರ್ಷದ ಉತ್ಪಾದನೆ

(iii) 7 ವರ್ಷಗಳ ಒಟ್ಟು ಉತ್ಪಾದನೆಗಳನ್ನು ಕಂಡುಹಿಡಿಯಿರಿ

ಪರಿಹಾರ: (i) ಉತ್ಪಾದನೆ ಪ್ರತಿವರ್ಷ ಒಂದು ಸ್ಥಿರವಾದ ಸಂಖ್ಯೆಯ ಪ್ರಕಾರ ಹೆಚ್ಚಾಗುವ ಕಾರಣ 1ನೇ, 2ನೇ 3ನೇ .... ವರ್ಷಗಳಲ್ಲಿ ಉತ್ಪಾದಿಸುವ ಟೆಲಿವಿಷನ್ ಸೆಟ್‌ಗಳ ಸಂಖ್ಯೆ ಸಮಾಂತರ ಶ್ರೇಢಿಯನ್ನುಂಟು ಮಾಡುತ್ತದೆ.

n ನೇ ವರ್ಷದಲ್ಲಿ ಉತ್ಪಾದಿಸಿದ ಟೆಲಿವಿಷನ್ ಸೆಟ್‌ಗಳ ಸಂಖ್ಯೆಯನ್ನು a_n ಎಂದು ಸೂಚಿಸುವ

ಆದರೆ $a_3 = 600$ ಮತ್ತು $a_7 = 700$

ಅಥವಾ $a + 2d = 600$

ಮತ್ತು $a + 6d = 700$

ಈ ಸಮೀಕರಣಗಳನ್ನು ಬಿಡಿಸಿದಾಗ $d = 25$ ಮತ್ತು $a=550$ ಪಡೆಯುತ್ತೇವೆ. ಆದ್ದರಿಂದ ಮೊದಲ ವರ್ಷದಲ್ಲಿ ಉತ್ಪಾದಿಸಿದ ಟೆಲಿವಿಷನ್ ಸೆಟ್‌ಗಳ ಸಂಖ್ಯೆ = 550

ii) ಈಗ $a_{10} = a + 9d = 550 + 9 \times 25 = 775$

ಆದ್ದರಿಂದ 10ನೇ ವರ್ಷದಲ್ಲಿ ಉತ್ಪಾದಿಸಿದ ಟೆಲಿವಿಷನ್ ಸೆಟ್‌ಗಳ ಸಂಖ್ಯೆ = 775

iii) $S_7 = 72$

$$S_n = \frac{n}{2}[2a+(n-1)d]$$

$$78 = \frac{7}{2}[2x550+(7-1)(25)]$$

$$\Rightarrow = \frac{7}{2}[1100+50]$$

$$= 4375$$

ಹೀಗೆ 7 ವರ್ಷಗಳಲ್ಲಿ ಉತ್ಪಾದಿಸಿದ ಒಟ್ಟು ಟೆಲಿವಿಷನ್ ಸೆಟ್‌ಗಳ ಸಂಖ್ಯೆ = 4375

ಅಭ್ಯಾಸ – 5.3

1. ಕೆಳಗಿನ ಸಮಾಂತರ ಶ್ರೇಢಿಗಳ ಮೊತ್ತವನ್ನು ಕಂಡುಹಿಡಿಯಿರಿ

i) 2, 7, 12 ...... ರ 10 ಪದಗಳವರೆಗೆ

ii) –37, –33, –29 ...... ರ 12 ಪದಗಳವರೆಗೆ

iii) 0.6, 1.7, 2.5 ..... ರ 100 ಪದಗಳವರೆಗೆ

(iv) $\frac{1}{15}, \frac{1}{12}, \frac{1}{10}$ .... ರ 100 ಪದಗಳವರೆಗೆ

ಪರಿಹಾರ: (i) 2, 7, 12 ...... ರ 10 ಪದಗಳವರೆಗೆ

ಇಲ್ಲಿ $a = 2 \quad d = 7-2 = 5 \quad n = 10$

$$S_n = \frac{n}{2}[2a+(n-1)d]$$

$$S_{10} = \frac{10}{2}[2x2+(10-1)5]$$

$$S_{10} = 5[4+45] = 245$$

2, 7, 12 .... ರ 10 ಪದಗಳವರೆಗೆ ಸಮಾಂತರ ಶ್ರೇಢಿಗಳ ಮೊತ್ತ 245

ii) –37, –33, –29 ...... ರ 12 ಪದಗಳವರೆಗೆ

ಇಲ್ಲಿ $a = -37 \quad d = -33 - (-37) = 4 \quad n = 12$

ನಮಗೆ ಗೊತ್ತಿರುವಂತೆ

$$S_n = \frac{n}{2}[2a+(n-1)d]$$

$$S_{12} = \frac{12}{2}[2(-37)+(12-1)4]$$

$$S_{12} = 6[-74+44]$$

$$= 6(-30) = -180$$

–37, –33, –29 ...... ರ 12 ಪದಗಳವರೆಗಿನ ಸಮಾಂತರ ಶ್ರೇಢಿಗಳ ಮೊತ್ತ= –180

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC PHYSICS

Chapter – 2

ELECTROSTATIC POTENTIAL AND CAPACITANCE

39. Write a short note on Van de Graaff Generator.

Soln:- Van de Graaff Generator is an electrostatic high voltage generator which can generate a few million volt potential difference. It is simply known as High Voltage generator. It is designed by Robert J. Van de Graff.

Purpose– It is basically an arrangement for producing a very high potential difference of the order of several million volt say about 20 million volt. (i.e., 20 MV)

Uses – (i) The beam of the positively charged accelerated particles are used to trigger the nuclear reactions.

(ii) It is used to accelerate charged particles like duetrons and protons.

(iii) Accelerated particle beams are used to break atoms for various experiments in physics.

(iv) In medicine, beams of positively charged particles are used to treat cancer.

Principle – The principle of van de Graaff generator is that large amount of charge can be placed on the outer surface of a spherical shell to increase its potential to very high value.

Explanation - Let a small charged conducting shell of radius r be located inside a larger charged conducting shell of radius R. If they are connected together with a conductor, then charge q from the small shell will move to the outer surface of the bigger shell irrespective of its own charge Q.

Potential difference $= V_{(r)} - V_{(R)}$

$$= \frac{q}{4\pi\epsilon_0}\left(\frac{1}{r} - \frac{1}{R}\right)$$

Hence, the potential of the outer shell increases considerably.

Thus, a large amount of charge can be collected on the outer shell.

Construction and working – It consists of a large conducting spherical shell (S) of few meter radius supported on an insulated stand of height of many meter.


A belt made of insulated fabric runs over two pulleys P_1 and P_2. Pulley P_1 and the belt are run by an electric motor.

A spray comb C_1 (made of metallic needles) is connected to high voltage rectifier (H.V.R) which is earthed.

A collecting comb C_2 (made of metallic needles) facing the belt is connected to the spherical shell S.

Let spray comb C_1 be charged to high +ve potential which sprays + ve charge to the belt which in turn becomes positively charged (sharp teeth of the comb has very high charge density which sets up corona discharging action, thus setting up a sort of wind of positive charges). Since belt is moving up, so it carries this positive charge upward.

Opposite charge appears on the teeth of collecting comb C_2 by induction from the belt. As a result of this, positive charge appears on the outer surface of shell S. As the belt is moving continuously, so the charge on the shell S increases continuously.



Consequently, the potential of the shell (S) rises to a very high value. When the charge on the spherical shell is very high, leakage due to ionisation of surrounding air also increases.

To prevent the leakage, the generator is enclosed in an earthed steel tank filled with air (or methane or nitrogen) under pressure.

Now the charged particles at the top of the tube (T) are at very high potential with respect to the lower end of the tube which is earthed. Thus, these particles are accelerated downward and hit the target after emerging from the tube.

The energy required by a charge q is = qV, where V is the potential of the spherical shell S.

40. It is advised to be inside a car or a bus than to stand under a tree during thunder storm. Why?

Ans:- During thunder storm, a strong electric field exists in the atmosphere.A car or a bus can be*(Contd)*

ಜೆಎಂಎಂ ನೇತೃತ್ವದ ಸರ್ಕಾರಕ್ಕೆ 45 ಶಾಸಕರ ಬೆಂಬಲ

ವಿಶ್ವಾಸಮತ ಗೆದ್ದ ಹೇಮಂತ್ ಸೊರೇನ್

ರಾಂಚಿ (ಪಿಟಿಐ): ಮುಖ್ಯಮಂತ್ರಿ ಹೇಮಂತ್ ಸೊರೇನ್ ನೇತೃತ್ವದ ಸರ್ಕಾರವು ಸೋಮವಾರ ಸದನದಲ್ಲಿ ವಿಶ್ವಾಸಮತ ಸಾಬೀತುಪಡಿಸಿತು. ನಾಮ ನಿರ್ದೇಶಿತ ಸದಸ್ಯ ಗಲೆನ್ ಜೋಸೆಫ್ ಗಾಲ್‌ಸ್ಟೀನ್ ಸೇರಿದಂತೆ 45 ಶಾಸಕರು ಜೆಎಂಎಂ ನೇತೃತ್ವದ ಸರ್ಕಾರದ ಪರವಾಗಿ ಮತ ಚಲಾಯಿಸಿದರು.

ಸದಸ್ಯರ ತಲೆ ಎಣಿಕೆ ಪ್ರಕ್ರಿಯೆ ಆರಂಭಿಸುತ್ತಿದ್ದಂತೆಯೇ ಬಿಜೆಪಿ ಮತ್ತು ಎಜೆಎಸ್‌ಯು ಶಾಸಕರು ಸಭಾತ್ಯಾಗ ಮಾಡಿದರು.

ವಿಶ್ವಾಸಮತ ಗೆದ್ದ ನಂತರ ಮಾತನಾಡಿದ ಸೊರೇನ್, 'ಆಡಳಿತಾರೂಢ ಮೈತ್ರಿ ಸರ್ಕಾರದ ಒಗ್ಗಟ್ಟು ಮತ್ತು ಬಲ ಪ್ರದರ್ಶನಕ್ಕೆ


ಹೇಮಂತ್ ಸೊರೇನ್

ಮತ್ತೊಮ್ಮೆ ಎಲ್ಲರೂ ಸಾಕ್ಷಿಯಾಗಿದ್ದಾರೆ. ಸ್ಪೀಕರ್ ಮತ್ತು ಮಿತ್ರ ಪಕ್ಷಗಳ ಶಾಸಕರಿಗೆ ಧನ್ಯವಾದಗಳು' ಎಂದು ಹೇಳಿದರು.

'ರಾಜ್ಯದ ಅಭಿವೃದ್ಧಿಗಾಗಿ ಬಿಜೆಪಿ ಯಾವುದೇ ಕಾರ್ಯಸೂಚಿಯನ್ನು ಹೊಂದಿಲ್ಲ. ಇತ್ತೀಚೆಗೆ ನಡೆದ ಲೋಕ ಸಭಾ ಚುನಾವಣೆಯಲ್ಲಿ ದೇಶದ ಜನರು ಬಿಜೆಪಿಯ ಮುಖಕ್ಕೆ ಕನ್ನಡಿ ಹಿಡಿದಿದ್ದಾರೆ. ಮುಂಬರುವ ಚುನಾವಣೆಯಲ್ಲಿ ಜೆಎಂಎಂ ನೇತೃತ್ವದ ಮೈತ್ರಿಯಿಂದ ಬಿಜೆಪಿಯು ಪ್ರಬಲ ವಿರೋಧವನ್ನು ಎದುರಿಸಲಿದೆ' ಎಂದರು.

ಸೊರೇನ್ ಸಂಪುಟ ಸೇರಿದ ಚಂಪೈ

ರಾಂಚಿ (ಪಿಟಿಐ): ಮುಖ್ಯಮಂತ್ರಿ ಹೇಮಂತ್ ಸೊರೇನ್ ನೇತೃತ್ವದ ಜಾರ್ಖಂಡ್ ಸರ್ಕಾರದ ಸಂಪುಟ ಸದಸ್ಯರಾಗಿ ರಾಜ್ಯದ ಮಾಜಿ ಮುಖ್ಯಮಂತ್ರಿ ಚಂಪೈ ಸೊರೇನ್ ಮತ್ತು ಇತರ 10 ಶಾಸಕರು ಸೋಮವಾರ ಪ್ರಮಾಣ ವಚನ ಸ್ವೀಕರಿಸಿದರು.

ರಾಜಭವನದಲ್ಲಿ ಮುಖ್ಯಮಂತ್ರಿ ಉಪಸ್ಥಿತಿಯಲ್ಲಿ ನಡೆದ ಕಾರ್ಯಕ್ರಮ ದಲ್ಲಿ ಜಾರ್ಖಂಡ್ ರಾಜ್ಯಪಾಲ ಸಿ.ಪಿ.ರಾಧಾಕೃಷ್ಣನ್ ಅವರು ಪ್ರಮಾಣ ವಚನ ಬೋಧಿಸಿದರು.

ಜಾರ್ಖಂಡ್‌ನ 13ನೇ ಮುಖ್ಯಮಂತ್ರಿಯಾಗಿ ಹೇಮಂತ್ ಸೊರೇನ್ ಅವರು ಜುಲೈ 4ರಂದು ಪ್ರಮಾಣ ವಚನ ಸ್ವೀಕರಿಸಿದರು. ಅದರ ಮುನ್ನಾದಿನ ಚಂಪೈ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. 12 ಮಂದಿ ಸದಸ್ಯರನ್ನು ಒಳಗೊಂಡಿರುವ ಜಾರ್ಖಂಡ್ ಸಂಪುಟದಲ್ಲಿ, ಕಾಂಗ್ರೆಸ್ ಶಾಸಕರಾದ ಇರ್ಫಾನ್ ಅನ್ಸಾರಿ, ದೀಪಕ್ ಪಾಂಡೆ ಸಿಂಗ್, ಬೈದ್ಯನಾಥ್ ರಾಮ್ ಅವರು ಹೊಸಮುಖಗಳು.

ಉಗ್ರರ ದಾಳಿ: ಐವರು ಯೋಧರು ಹುತಾತ್ಮ

ಕಥುವಾ/ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಕಥುವಾ ಜಿಲ್ಲೆಯಲ್ಲಿ ಸೇನಾ ವಾಹನದ ಮೇಲೆ ಸೋಮವಾರ ಭಯೋತ್ಪಾದಕರು ನಡೆಸಿದ ದಾಳಿಯಲ್ಲಿ ಐವರು ಯೋಧರು ಹುತಾತ್ಮರಾಗಿದ್ದು, ಆರು ಮಂದಿ ಗಾಯಗೊಂಡಿದ್ದಾರೆ.

ಮಧ್ಯಾಹ್ನ 3.30ರ ವೇಳೆಗೆ ಮಚೇಡಿ-ಕಿಂಡ್ಲಿ-ಮೊಲ್ಹಾರ್ ರಸ್ತೆಯಲ್ಲಿ ಯೋಧರು ಗಸ್ತು ತಿರುಗುತ್ತಿದ್ದಾಗ ಭಯೋತ್ಪಾದಕರು ಗ್ರೆನೇಡ್ ಮತ್ತು ಗುಂಡಿನ ದಾಳಿ ನಡೆಸಿದ್ದಾರೆ. 10 ಮಂದಿ ಯೋಧರು ಗಾಯಗೊಂಡಿದ್ದರು, ಅವರಲ್ಲಿ ಐವರು ಮೃತಪಟ್ಟಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಈ ವೇಳೆ ಭದ್ರತಾ ಸಿಬ್ಬಂದಿ ಪ್ರತಿದಾಳಿ ನಡೆಸಿದ್ದರು. ಭಯೋತ್ಪಾದಕರು ಪರಾರಿಯಾಗಿ, ಅರಣ್ಯದೊಳಗೆ ಅವಿತುಕೊಂಡಿದ್ದಾರೆ. ಮೂರು ಅಥವಾ ಅದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿರುವ ಶಸ್ತ್ರ ಸಜ್ಜಿತ ಉಗ್ರರು ಗಡೆಯಾಚೆಯಿಂದ ನುಸುಳಿ ಬಂದಿರುವ ಶಂಕೆ ಇದೆ. ಉಗ್ರರ ವಿರುದ್ಧದ ಕಾರ್ಯಾಚರಣೆಗೆ ಹೆಚ್ಚಿನ ಸಂಖ್ಯೆಯಲ್ಲಿ ಯೋಧರನ್ನು ನಿಯೋಜಿಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉಗ್ರರ ವಿರುದ್ಧ ನಡೆಯುತ್ತಿರುವ ಕಾರ್ಯಾಚರಣೆಯ ಉಸ್ತುವಾರಿಯನ್ನು ಪೊಲೀಸ್ ಮಹಾನಿರ್ದೇಶಕ ಆರ್.ಆರ್. ಸ್ವೈನ್ ಅವರು ವಹಿಸಿಕೊಂಡಿದ್ದಾರೆ.

ದಾಳಿ ನಡೆದ ಪ್ರದೇಶದಲ್ಲಿ ಇತ್ತೀಚೆಗೆ ಭಯೋತ್ಪಾದನೆ ಚಟುವಟಿಕೆಗಳು ಹೆಚ್ಚಾಗಿದ್ದ ಕಾರಣ ಸೇನೆಯನ್ನು ಗಸ್ತು ನಡೆಸಲು ನಿಯೋಜಿಸಲಾಗಿತ್ತು. ಈ ವೇಳೆ ಯೋಧರ ಮೇಲೆ ಉಗ್ರರು ಹೊಂಚು ದಾಳಿ ನಡೆಸಿದ್ದಾರೆ.

ಕಳೆದ ನಾಲ್ಕು ವಾರಗಳಲ್ಲಿ ಕಥುವಾದಲ್ಲಿ ನಡೆದ ಎರಡನೇ ಭಯೋತ್ಪಾದಕ ದಾಳಿ ಇದಾಗಿದ್ದು, ಜೂನ್ 12 ಮತ್ತು 13ರಂದು ಸೇನಾ ಕಾರ್ಯಾಚರಣೆ ವೇಳೆ ನಡೆದ ಗುಂಡಿನ ಚಕಮಕಿಯಲ್ಲಿ ಒಬ್ಬ ಸಿಆರ್‌ಪಿಎಫ್ ಯೋಧ ಮತ್ತು ಇಬ್ಬರು ಭಯೋತ್ಪಾದಕರು ಮೃತಪಟ್ಟಿದ್ದರು.

ಅಂತಿಮ ವಿಧಿ: ಭಯೋತ್ಪಾದಕರೊಂದಿಗಿನ ಎನ್‌ಕೌಂಟರ್‌ನಲ್ಲಿ ಹುತಾತ್ಮರಾದ ಸೇನಾ ಯೋಧ ಪ್ರವೀಣ್ ಜಂಜಾಲ್ ಅವರ ಅಂತಿಮ ವಿಧಿಗಳನ್ನು ಸೋಮವಾರ ಅವರ ಹುಟ್ಟೂರಾದ ಅಕೋಲಾದ ಮೋರ್ಗಾಂವ್ ಭಾಕ್ರೆ ಗ್ರಾಮದಲ್ಲಿ ಸಕಲ ಸೇನಾ ಗೌರವಗಳೊಂದಿಗೆ ನಡೆಸಲಾಯಿತು.

ಮಹುವಾ ಕಮೆಂಟ್: 'ಎಕ್ಸ್'ಗೆ ವಿವರ ಕೇಳಿದ ಪೊಲೀಸರು

ನವದೆಹಲಿ (ಪಿಟಿಐ): ರಾಷ್ಟ್ರೀಯ ಮಹಿಳಾ ಆಯೋಗದ (ಎನ್‌ಸಿಡಬ್ಲ್ಯು) ಅಧ್ಯಕ್ಷೆ ರೇಖಾ ಶರ್ಮ ಅವರ ಕುರಿತು ಸಂಸದೆ ಮಹುವಾ ಮೊಯಿತ್ರಾ ಅವರು ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಹೇಳಿಕೆ ನೀಡಿ ಬಳಿಕ ಅದನ್ನು ಅಳಿಸಿ ಹಾಕಿದ್ದರ ಕುರಿತು ವಿವರಗಳನ್ನು ನೀಡುವಂತೆ ದೆಹಲಿ ಪೊಲೀಸರು 'ಎಕ್ಸ್' ಅನ್ನು ಕೋರಿದ್ದಾರೆ.


ಮಹುವಾ

ಉತ್ತರಪ್ರದೇಶದ ಹಾಥರಸ್‌ನಲ್ಲಿ ಭೀಕರ ಕಾಲ್ತುಳಿತ ಸಂಭವಿಸಿರುವ ಸ್ಥಳಕ್ಕೆ ಭೇಟಿ ನೀಡಿದ ವಿಡಿಯೊವನ್ನು ರೇಖಾ ಶರ್ಮ ಅವರು 'ಎಕ್ಸ್'ನಲ್ಲಿ ಹಂಚಿಕೊಂಡಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ್ದ ಮಹುವಾ, 'ರೇಖಾ ತನ್ನ ಬಾಸ್‌ನ ಪೈಜಾಮವನ್ನು ಹಿಡಿದುಕೊಳ್ಳುವಲ್ಲೇ ನಿರತರಾಗಿದ್ದರು' ಎಂದು ಕಾಮೆಂಟ್ ಮಾಡಿದ್ದರು. ಬಳಿಕ ಅದನ್ನು ತೆಗೆದು ಹಾಕಿದ್ದರು. ಈ ಬಗ್ಗೆ ಎಫ್‌ಐಆರ್ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ರಾಜ್ಯಕ್ಕೆ ಬರೀ 2.19 ಟಿಎಂಸಿ ಅಡಿ ನೀರು!

ಒಂದನೇ ಪುಟದಿಂದ...

ಉಳಿದ ನೀರು ಕೆಳಭಾಗದಲ್ಲಿರುವ ರಾಜ್ಯಗಳಿಗೆ ಹರಿದು ಹೋಗಲಿದೆ. ಇದರಿಂದ ರಾಜ್ಯಕ್ಕೆ ಅನ್ಯಾಯವಾಗಲಿದೆ ಎಂಬುದು ಕರ್ನಾಟಕ ರಾಜ್ಯದ ತಕರಾರು.

ಈ ಯೋಜನೆಯ ಅನುಷ್ಠಾನಕ್ಕೆ ಮುನ್ನ ರಾಜ್ಯಗಳು ಕರಡು ಒಪ್ಪಂದಕ್ಕೆ ಸಹಿ ಹಾಕಬೇಕಿದೆ. ಜಲ ಅಭಿವೃದ್ಧಿ ಸಂಸ್ಥೆಯು ಕರಡು ಒಪ್ಪಂದವನ್ನು ರಾಜ್ಯಗಳಿಗೆ ಕಳುಹಿಸಿದೆ. ಈ ಒಪ್ಪಂದಕ್ಕೆ ಸಹಿ ಹಾಕಲು ಕರ್ನಾಟಕ ನಿರಾಕರಿಸಿದೆ. ಐತಿಹಾಸಿಕ ಕಾರಣಗಳಿಂದಾಗಿ ಕೃಷ್ಣಾ ಹಾಗೂ ಕಾವೇರಿ ಕಣಿವೆಗೆ ಹೆಚ್ಚಿನ ನೀರು ಹಂಚಿಕೆಯಾಗಬೇಕು. ದಕ್ಷಿಣದ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಬರಪೀಡಿತ ಪ್ರದೇಶ ಹೆಚ್ಚು ಇರುವುದು ಕರ್ನಾಟಕದಲ್ಲೇ. ಹೀಗಾಗಿ, ಹೆಚ್ಚುವರಿ ನೀರಿನಲ್ಲಿ ರಾಜ್ಯಕ್ಕೆ ಶೇ 50ರಷ್ಟು ಪಾಲು ನೀಡಬೇಕು ಎಂದು ರಾಜ್ಯ ಪಟ್ಟು ಹಿಡಿದಿದೆ.

ಸಂಕ್ಷಿಪ್ತ ಸುದ್ದಿ

ದೇಣಿಗೆ: ಶರದ್ ಪವಾರ್ ಬಣಕ್ಕೆ ಅನುಮತಿ



ನವದೆಹಲಿ (ಪಿಟಿಐ): ಶರದ್ ಪವಾರ್ ನೇತೃತ್ವದ ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷವು (ಎನ್‌ಸಿಪಿ) ಸಾರ್ವಜನಿಕರಿಂದ ದೇಣಿಗೆ ಸಂಗ್ರಹಿಸಲು ಚುನಾವಣಾ ಆಯೋಗವು ಸೋಮವಾರ ಅನುಮತಿ ನೀಡಿದೆ.

ಪಕ್ಷದ ಕಾರ್ಯಾಧ್ಯಕ್ಷೆ ಸುಪ್ರಿಯಾ ಸುಳೆ ನೇತೃತ್ವದ ಎಂಟು ಮಂದಿ ಸದಸ್ಯರನ್ನೊಳಗೊಂಡ ನಿಯೋಗವು, ಆಯೋಗದ ಅಧಿಕಾರಿಗಳನ್ನು ಭೇಟಿ ಮಾಡಿ ಈ ಕುರಿತು ಮನವಿ ಸಲ್ಲಿಸಿತ್ತು. ಮುಂಬರುವ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಆಯೋಗ ಈ ನಿರ್ಧಾರ ಕೈಗೊಂಡಿದೆ.

ಪುರಿ: ರಥಯಾತ್ರೆ ವೇಳೆ ಇಬ್ಬರ ಸಾವು

ಪುರಿ (ಒಡಿಶಾ) (ಪಿಟಿಐ): ಒಡಿಶಾದ ಪ್ರಸಿದ್ಧ ಪುರಿ ಜಗನ್ನಾಥ ರಥ ಯಾತ್ರೆಯ ಸಂದರ್ಭದಲ್ಲಿ ಭಾರಿ ಜನಸಂದಣಿ ಉಂಟಾದ ಕಾರಣ ಎರಡು ಪ್ರತ್ಯೇಕ ಘಟನೆಗಳಲ್ಲಿ ಇಬ್ಬರು ಮೃತಪಟ್ಟಿದ್ದು, 130 ಜನರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಭಾನುವಾರ ರಥ ಯಾತ್ರೆ ಸಂದರ್ಭದಲ್ಲಿ ಕಾಲ್ತುಳಿತದಂತಹ ಪರಿಸ್ಥಿತಿ ನಿರ್ಮಾಣವಾದ ಕಾರಣ ಬೋಲಾಂಗಿರ್ ಜಿಲ್ಲೆಯ ನಿವಾಸಿಯೊಬ್ಬರು ಉಸಿರುಗಟ್ಟಿ ಸಾವಿಗೀಡಾಗಿದ್ದಾರೆ ಎಂದು ಆರೋಗ್ಯಾಧಿಕಾರಿಗಳು ತಿಳಿಸಿದರು.

ಮುಖ್ಯಮಂತ್ರಿ ಮೋಹನ್ ಚರಣ್ ಮಾಝಿ ಅವರು ಮೃತರ ಕುಟುಂಬಕ್ಕೆ ₹4 ಲಕ್ಷ ಪರಿಹಾರ ಘೋಷಿಸಿದ್ದಾರೆ.

ದೆಹಲಿ ವಿ.ವಿ ಭಗವದ್ಗೀತೆ ಪಠ್ಯ?

ನವದೆಹಲಿ (ಪಿಟಿಐ): ದೆಹಲಿ ವಿಶ್ವವಿದ್ಯಾಲಯದ ಹಿಂದೂ ಅಧ್ಯಯನ ಕೇಂದ್ರದಲ್ಲಿ ವಿದ್ಯಾರ್ಥಿಗಳಿಗೆ ವೈದಿಕ ಶಿಕ್ಷಣ, ಉಪನಿಷತ್, ಧರ್ಮ ಇತ್ಯಾದಿ ವಿಷಯಗಳನ್ನು ಪರಿಚಯಿಸಲು ಸಿದ್ಧತೆ ನಡೆದಿದೆ.

ಪಠ್ಯಕ್ರಮವನ್ನು ವಿಸ್ತರಿಸಿ ವಿದ್ಯಾರ್ಥಿಗಳಿಗೆ ಹೆಚ್ಚಿನ ಆಯ್ಕೆಗೆ ಅವಕಾಶ ನೀಡುವ ಉದ್ದೇಶದಿಂದ ಈ ಕ್ರಮಕ್ಕೆ ಮುಂದಾಗಿದೆ. ನೂತನ ಪಠ್ಯಕ್ರಮವನ್ನು ಪರಿಚಯಿಸುವ ಪ್ರಸ್ತಾವವನ್ನು ವಿಶ್ವವಿದ್ಯಾಲಯದ ಅಕಾಡೆಮಿಕ್ ಕೌನ್ಸಿಲ್ ಮುಂದಿಡಲಾಗಿದೆ. ಕೌನ್ಸಿಲ್ ಸಭೆ ಜುಲೈ 12ಕ್ಕೆ ನಿಗದಿಯಾಗಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಪ್ರಜಾವಾಣಿ ಮಂಗಳವಾರ • ಜುಲೈ 9, 2024

ಅಭಿಮತ



ಸುಭಾಷಿತ

ಕಠಿಣ ಪರಿಶ್ರಮ, ಪಟ್ಟುಹಿಡಿದು ಕೆಲಸ ಮಾಡುವುದು ಮತ್ತು ಪ್ರಾಮಾಣಿಕತೆಯು ನಾವು ಹೆಚ್ಚಾಗಿ ಗಮನಹರಿಸದ ಮೂರು ಸಾಮಾನ್ಯ ಸಂಗತಿಗಳು. ನನ್ನ ಪ್ರಕಾರ ಯಶಸ್ಸಿನ ಚಾಲಕಶಕ್ತಿಗಳು ಇವೇ. - ಅಜೀಂ ಪ್ರೇಮ್‌ಜಿ

ರೈತರ ಆತ್ಮಹತ್ಯೆ ತಡೆಯಲು ಸರ್ಕಾರ ತಕ್ಷಣ ಕಾರ್ಯತತ್ಪರವಾಗಲಿ

ಹದಿನೈದು ತಿಂಗಳ ಅವಧಿಯಲ್ಲಿ ರಾಜ್ಯದಲ್ಲಿ 1,182 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಮಾಹಿತಿ ಇರುವ ವರದಿಯನ್ನು ಕಂದಾಯ ಇಲಾಖೆಯು ಮುಖ್ಯಮಂತ್ರಿಯವರು ಸೋಮವಾರ ನಡೆಸಿದ ಸಭೆ ಮುಂದೆ ಮಂಡಿಸಿದೆ. ಈ ಅಂಕಿ ಅಂಶವನ್ನು ಪ್ರಸ್ತಾಪಿಸಿದ ಸಿದ್ದರಾಮಯ್ಯ ಅವರು, 'ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ಪರಿಹಾರ ಒದಗಿಸುವಲ್ಲಿ ವಿಳಂಬ ಸಲ್ಲದು. ರೈತರ ಸಭೆ ನಡೆಸಿ, ಅವರಲ್ಲಿ ಜಾಗೃತಿ ಹಾಗೂ ಆತ್ಮವಿಶ್ವಾಸ ಮೂಡಿಸುವ ಕೆಲಸವನ್ನು ಮಾಡಬೇಕಿದೆ' ಎಂದು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ಇದು ಸಕಾಲಿಕವಾದ ಕ್ರಮ. ಆದರೆ, ಕೃಷಿಕರು ಹೀಗೆ ಸಾಲುಸಾಲಾಗಿ ಸಾವಿನತ್ತ ಮುಖ ಮಾಡಿರುವುದು ಅಭಿವೃದ್ಧಿಪಥದಲ್ಲಿ ಮುಂಚೂಣಿಯಲ್ಲಿರುವುದಾಗಿ ಬಿಂಬಿತವಾಗಿರುವ ನಾಡಿಗೆ ಶೋಭೆ ತರುವ ಸಂಗತಿಯಲ್ಲ. ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬರುತ್ತಿದ್ದಂತೆಯೇ ಐದು 'ಗ್ಯಾರಂಟಿ'ಗಳನ್ನು ಅನುಷ್ಠಾನ ಮಾಡುವತ್ತ ಹೆಜ್ಜೆ ಇಟ್ಟಿತು. ಅನ್ನಭಾಗ್ಯ ಯೋಜನೆಯಡಿ 5 ಕೆ.ಜಿ. ಅಕ್ಕಿ ಹಾಗೂ ಇನ್ನು 5 ಕೆ.ಜಿ. ಅಕ್ಕಿಯ ಮೌಲ್ಯದ ನಗದು, 200 ಯೂನಿಟ್‌ವರೆಗೆ ಉಚಿತ ವಿದ್ಯುತ್, ಪ್ರತಿ ಕುಟುಂಬದ ಯಜಮಾನಿಗೆ ತಿಂಗಳಿಗೆ ₹2 ಸಾವಿರ, ಮಹಿಳೆಯರಿಗೆ ಬಸ್ ಪ್ರಯಾಣ ಉಚಿತವಾಗಿ ಸಿಕ್ಕಿತು. ಇದರಿಂದಾಗಿ, ಕುಟುಂಬ ನಿರ್ವಹಣೆಯ ಹೊರೆ ದೊಡ್ಡಮಟ್ಟದಲ್ಲಿ ಕಡಿಮೆಯಾಯಿತು ಎಂದು ಸರ್ಕಾರವೇ ಅನೇಕ ಬಾರಿ ಹೇಳಿಕೊಂಡಿದೆ. 'ಗ್ಯಾರಂಟಿ'ಗಳು ಜಾರಿಯಾದ ಬಳಿಕವೂ ರೈತರು ಆತ್ಮಹತ್ಯೆ ಹಾದಿ ಹಿಡಿದಿದ್ದಾರೆ ಎಂದಾದರೆ ಆಳುವವರು ಎಚ್ಚರಗೊಳ್ಳಬೇಕಾದ ತುರ್ತು ಇದೆ ಎಂದು ಅರ್ಥ. ಮಳೆ ಕೈಕೊಟ್ಟಿದ್ದರಿಂದಾಗಿ ಬಿತ್ತಿದ ಬೀಜ ಹಾಗೂ ಸುರಿದ ಗೊಬ್ಬರಕ್ಕೆ ಮಾಡಿದ್ದ ವೆಚ್ಚದ ಹೊರೆ, ಕೆಲವೆಡೆ ಬೆಳೆ ಕೈಗೆ ಬಂದರೂ ಸಿಗದ ಉತ್ತಮ ಬೆಲೆಯಿಂದಾಗಿ ಸಾಲ ತೀರಿಸಲಾಗದ ದುರ್ದಿನಗಳನ್ನು ನೆನೆದು ಆತ್ಮಹತ್ಯೆ ಕಡೆ ರೈತರು ಮುಖ ಮಾಡಿದ್ದಾರೆ ಎಂದರೆ ಅದು ಸಾವುಗಳಿಗೆ ನೀಡುವ ಸರಳ ಕಾರಣವಾದೀತು. ಪ್ರದೇಶವಾರು ಸಾವಿನ ವಿವರಗಳನ್ನು ಗಮನಿಸಿದರೆ ತೀವ್ರ ಬರದಿಂದ ಕಂಗೆಟ್ಟ ಜಿಲ್ಲೆಗಳಲ್ಲಿ ಆತ್ಮಹತ್ಯೆ ಸಂಖ್ಯೆ ಕಡಿಮೆ ಇದೆ. ನೀರಾವರಿ ಸೌಕರ್ಯವಿರುವ ಬೆಳಗಾವಿ, ಹಾವೇರಿ, ಧಾರವಾಡ ಜಿಲ್ಲೆಗಳಲ್ಲೇ ಮರಣಕ್ಕೆ ಶರಣಾದ ರೈತರ ಸಂಖ್ಯೆ ತಲಾ 100ಕ್ಕೂ ಮಿಗಿಲಾಗಿದೆ. ಇದನ್ನು ಅವಲೋಕಿಸಿದರೆ ಆತ್ಮಹತ್ಯೆಗೆ ಬರ ಮಾತ್ರ ಕಾರಣವಲ್ಲ; ಸಾವಿನ ಮನೆಯಲ್ಲಿ ಅದರಾಚೆಗಿನ ಅಂದಾಜಿಗೂ ನಿಲುಕದ ಸಮಸ್ಯೆಗಳ ಸುಳಿ ಇರುವುದು ಸ್ಪಷ್ಟ.



ರೈತರನ್ನು ಆತ್ಮಹತ್ಯೆಗೆ ದೂಡುವ ಕಾರಣಗಳ ಬಗ್ಗೆ ಅಧ್ಯಯನ ನಡೆಸಿ, ಸಾವಿನ ದವಡೆಯಿಂದ ಹೊರತರುವ ಸಂಕಲ್ಪವನ್ನು ಸರ್ಕಾರ ಮಾಡಬೇಕು

ರೈತರ ಸಮಸ್ಯೆಗಳಿಗೆ ದೀರ್ಘಕಾಲೀನ ಪರಿಹಾರ ಕ್ರಮಗಳನ್ನು ಕೈಗೊಳ್ಳದ ವಿನಾ ಆತ್ಮಹತ್ಯೆಗಳನ್ನು ತಡೆಯುವುದು ಕಷ್ಟಸಾಧ್ಯ. ರೈತರ ಆತ್ಮಹತ್ಯೆಯ ಪ್ರಕರಣಗಳಲ್ಲಿ ನಗದು ರೂಪದಲ್ಲಿ ನೀಡುವ ಪರಿಹಾರಕ್ಕಿಂತ, ಆತ್ಮಹತ್ಯೆಗೆ ನಿಖರ ಕಾರಣಗಳನ್ನು ಪತ್ತೆಹಚ್ಚಿ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು ಆದ್ಯತೆಯಾಗಬೇಕಿದೆ. ಅಲ್ಲದೆ, ನೊಂದ ರೈತರನ್ನು ಜೀವನ್ಮುಖಿಗಳಾಗಿಸುವತ್ತ ಪ್ರೇರಣೆ ಹಾಗೂ ಪ್ರೋತ್ಸಾಹ ನೀಡುವ ಕೆಲಸ ಕೃಷಿ, ಕಂದಾಯ ಇಲಾಖೆಗಳು ಹಾಗೂ ಕೃಷಿ–ತೋಟಗಾರಿಕೆ ವಿಶ್ವವಿದ್ಯಾಲಯಗಳಿಂದ ಆಗಬೇಕಾಗಿದೆ. ರೈತರಿಗೆ ಶೂನ್ಯ ಬಡ್ಡಿದರದಲ್ಲಿ ₹3 ಲಕ್ಷದವರೆಗೆ ಬೆಳೆಸಾಲ ನೀಡುವ ಯೋಜನೆ ಜಾರಿಯಲ್ಲಿದೆ. ಸಾಲದ ಗರಿಷ್ಠ ಮಿತಿಯನ್ನು ₹5 ಲಕ್ಷದವರೆಗೆ ವಿಸ್ತರಿಸುವ ಘೋಷಣೆ ಮಾಡಲಾಗಿದೆಯಾದರೂ ಅದು ಅನುಷ್ಠಾನವಾಗಿಲ್ಲ. ಸರ್ಕಾರ ಹೇಳುವಂತೆ ₹3 ಲಕ್ಷದವರೆಗೆ ಶೂನ್ಯ ಬಡ್ಡಿದರದಲ್ಲಿ ಸಾಲ ಸಿಗುತ್ತದೆ ಎಂದಾದರೆ, ಸಾಲದ ಬಾಧೆಯಿಂದ ಮರಣಕ್ಕೆ ಕೊರಳೊಡ್ಡುವ ದುಃಸ್ಥಿತಿ ರೈತಾಪಿ ವರ್ಗಕ್ಕೆ ಏಕೆ ಬಂತು? ಅಂದರೆ, ಸಾಲ ನೀಡುವಾಗಲೂ ಜಾತಿ, ಪಕ್ಷದ ಪ್ರಭಾವ ಪ್ರಧಾನವಾಗುತ್ತವೆಯೇ ವಿನಾ ಅರ್ಹ ರೈತರಿಗೆ ಸಾಲ ಸಿಗುತ್ತಿಲ್ಲ ಎಂಬ ದೂರಿನಲ್ಲಿ ಸತ್ಯಾಂಶ ಇದ್ದಂತಿದೆ. ಸಾಲಕ್ಕೆ ದುಬಾರಿ ಬಡ್ಡಿ ಹಾಕುವವರನ್ನು ಶಿಕ್ಷೆಗೆ ಗುರಿಪಡಿಸಲು ಕಾನೂನುಗಳೇನೋ ಇವೆ. ಅವುಗಳ ಪರಿಣಾಮಕಾರಿ ಅನುಷ್ಠಾನದ ಕೊರತೆಯೂ ರೈತರ ಪಾಲಿಗೆ ಉರುಳಾಗುತ್ತಿದೆ ಎಂಬುದನ್ನು ಅಲ್ಲಗಳೆಯಲಾಗದು. ಸಾವಿನ ಸಂಖ್ಯೆಯನ್ನು ಮುಂದಿಟ್ಟು ರಾಜಕೀಯ ಲಾಭಕ್ಕಾಗಿ ಮೇಲಾಟ ನಡೆಸುವುದರ ಬದಲಿಗೆ ಆಡಳಿತ–ವಿರೋಧ ಪಕ್ಷಗಳು ಕೂಡಿ ರೈತರ ಸಂಕಷ್ಟಗಳನ್ನು ವಿಧಾನಮಂಡಲದಲ್ಲಿ ಚರ್ಚಿಸಿ, ಶಾಶ್ವತ ಪರಿಹಾರ ಸೂತ್ರವನ್ನು ರೂಪಿಸಬೇಕಾಗಿದೆ. ಕಾಂಗ್ರೆಸ್ ನೇತೃತ್ವದ ಈ ಹಿಂದಿನ ಸರ್ಕಾರದ ಅವಧಿಯಲ್ಲಿ ಕೃಷಿ ಸಚಿವರಾಗಿದ್ದ ಕೃಷ್ಣ ಬೈರೇಗೌಡ ಅವರು, ರೈತರೊಂದಿಗೆ ಆಪ್ತ ಸಮಾಲೋಚನೆ ನಡೆಸಲು ಸಹಾಯವಾಣಿಯನ್ನು ತಮ್ಮ ಇಲಾಖೆಯ ಅಧೀನದಲ್ಲಿ ಆರಂಭಿಸಿದ್ದರು. ದಿಕ್ಕುಗಾಣದೆ ಹತಾಶೆಯಲ್ಲಿದ್ದ ರೈತರಲ್ಲಿ ವಿಶ್ವಾಸ ತುಂಬುವ ಪ್ರಯತ್ನ ನಡೆದಿತ್ತು. ಆಪ್ತ ಸಮಾಲೋಚನೆಯಂತಹ ಕ್ರಮಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿಸುವುದು ಅಗತ್ಯ. ಆತ್ಮಹತ್ಯೆಗೆ ದೂಡುವ ಸಾಮಾಜಿಕ, ಆರ್ಥಿಕ ಹಾಗೂ ಕೌಟುಂಬಿಕ ಆಯಾಮಗಳ ಬಗ್ಗೆ ವೈಜ್ಞಾನಿಕ ಅಧ್ಯಯನ ನಡೆಸಿ, ರೈತರನ್ನು ಸಾವಿನ ದವಡೆಯಿಂದ ಹೊರತರುವ ಸಂಕಲ್ಪವನ್ನು ಸರ್ಕಾರ ಮಾಡಬೇಕು. ಇಲ್ಲದಿದ್ದರೆ, ರೈತರ ಬಗೆಗಿನ ಕಳಕಳಿ ಒಣ ಭಾಷಣ, ಕಾಗದದ ಮೇಲಷ್ಟೇ ಉಳಿಯುವ ಆದೇಶಗಳಿಗೆ ಸೀಮಿತವಾಗಿಬಿಡುತ್ತದೆ.

ಬಯಲುಸೀಮೆಯ ಜೀವನಾಡಿ; ಮಲೆನಾಡು, ಕರಾವಳಿಯ ಜನರಿಗೆ ನಷ್ಟದ ಬಾಬತ್ತು

ಹೈನುಗಾರಿಕೆ: ಲಾಭ– ನಷ್ಟದ ಆಚೆಗಿನ ಲೆಕ್ಕ



ವಿಶ್ಲೇಷಣೆ

ಡಾ. ಮುರಳೀಧರ ಕಿರಣಕೆರೆ

ಸ್ವಯಂಸೇವಾ ಸಂಸ್ಥೆಯೊಂದರ ಅಧ್ಯಕ್ಷರು ಕರೆ ಮಾಡಿದ್ದರು. ಅವರು ಕೃಷಿಕರೂ ಹೌದು. 'ಕೃಷಿಕರ ಒಕ್ಕೂಟದ ಸಭೆಯಿದೆ. ಅವರಿಗೆ ಹೈನುಗಾರಿಕೆಯ ಮಹತ್ವವನ್ನು ಮನದಟ್ಟು ಮಾಡಿಸಬಹುದೇ? ನಮ್ಮಲ್ಲಿ ಬಹುತೇಕರು ಹಸು-ಕರುಗಳನ್ನು ಸಾಕಲು ಕಷ್ಟವೆಂದು ಈಗಾಗಲೇ ಮಾರಿಬಿಟ್ಟಿದ್ದಾರೆ. ಉಳಿದವರಲ್ಲೂ ಪಶು ಸಾಕಣೆಯಲ್ಲಿ ಆಸಕ್ತಿ ಕಡಿಮೆ ಆಗುತ್ತಿದೆ. ಇದು ಕೃಷಿಯ ಮೇಲಷ್ಟೇ ಅಲ್ಲ, ಕೃಷಿಕರ ಸ್ವಾಸ್ಥ್ಯದ ಮೇಲೂ ಪರಿಣಾಮ ಬೀರುತ್ತಿದೆ. ಈ ಕುರಿತು ರೈತರೊಂದಿಗೆ ಸಂವಾದ ಕಾರ್ಯಕ್ರಮ ಮಾಡೋಣ ಅಂತ ಅನ್ನಿಸಿದೆ' ಎಂದರು. ರೈತರು ಪಶುಪಾಲನೆಯಿಂದ ವಿಮುಖವಾಗುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದರು. ಅವರ ಮಾತಿನಲ್ಲಿ ರೈತರಲ್ಲಿ ಇಂದು ಮನೆಮಾಡಿರುವ ಮನಃಸ್ಥಿತಿಯ ಜೊತೆಗೆ ಭವಿಷ್ಯದ ಬಗ್ಗೆ ಆತಂಕವೂ ಎದ್ದು ಕಾಣುತ್ತಿತ್ತು!

ನಮ್ಮ ಕೃಷಿಕರು ಸಾಂಪ್ರದಾಯಿಕ ಜಾನುವಾರು ಸಾಕಣೆಯಿಂದ ದೂರ ಸರಿಯುತ್ತಿರುವುದರ ನಡುವೆಯೂ ಕರ್ನಾಟಕ ಹಾಲು ಮಹಾಮಂಡಲವು (ಕೆಎಂಎಫ್) ಹಾಲು ಸಂಗ್ರಹಣೆಯಲ್ಲಿ ದಾಖಲೆ ನಿರ್ಮಿಸಿದೆ. ಕಳೆದ ತಿಂಗಳ ಕೊನೆಯಲ್ಲಿ ಕೆಎಂಎಫ್‌ನ ನಿತ್ಯದ ಹಾಲು ಸಂಗ್ರಹಣೆಯು ಒಂದು ಕೋಟಿ ಲೀಟರ್ ದಾಟಿ ಇತಿಹಾಸ ಸೃಷ್ಟಿಸಿದೆ. ಹಾಲು ಉತ್ಪಾದಕರ ಸಹಕಾರ ಸಂಘಗಳು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿರುವ ಸ್ಥಳಗಳಲ್ಲಿ ಹಾಲು ಉತ್ಪಾದನೆ ಹೆಚ್ಚುತ್ತಿದೆ. ಇಲ್ಲೆಲ್ಲ ಹಲವು ರೈತರು ಹೈನುಗಾರಿಕೆಯನ್ನೇ ಮುಖ್ಯ ಕಸುಬಾಗಿಸಿಕೊಂಡಿದ್ದಾರೆ. ಸರ್ಕಾರದ ಐದು ರೂಪಾಯಿ ಪ್ರೋತ್ಸಾಹಧನದ ಕಾರಣಕ್ಕೆ ತಕ್ಕಮಟ್ಟಿಗೆ ಉತ್ತಮ ಆದಾಯವನ್ನೂ ಪಡೆಯುತ್ತಿದ್ದಾರೆ. ನಮ್ಮ ರಾಜ್ಯದಾದ್ಯಂತ 25 ಲಕ್ಷಕ್ಕೂ ಅಧಿಕ ಹೈನುಗಾರರು ಹಾಲಿನ ಸೊಸೈಟಿಗಳಿಗೆ ಹಾಲು ಹಾಕುವುದರ ಮೂಲಕ ನಮ್ಮ ಕಾಲದ ಕ್ಷೀರ ಕ್ರಾಂತಿಗೆ ಕಾರಣರಾಗಿದ್ದಾರೆ.

ಒಂದೆಡೆ ಹಾಲು ಉತ್ಪಾದನೆ ಏರುಮುಖದಲ್ಲಿದೆ, ಮತ್ತೊಂದೆಡೆ ಸಾಕಣೆ ಕಷ್ಟವೆಂದು ಗೋಪಾಲಕರು ಹಸು–ಕರುಗಳನ್ನು ಮಾರುತ್ತಿರುವುದೂ ಇದೆ. ಹೌದು, ಕೃಷಿಕರು ಪಶುಪಾಲನೆಯಲ್ಲಿ ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ. ಅದರಲ್ಲೂ ಮಲೆನಾಡು, ಕರಾವಳಿ ಭಾಗದಲ್ಲಿ ಈ ಪ್ರವೃತ್ತಿ ತೀವ್ರವಾಗಿದೆ. ಈ ಪ್ರದೇಶಗಳಲ್ಲಿ ಹಸು–ಕರುಗಳನ್ನು ಸಾಕುವುದು ರಾಜ್ಯದ ಇತರೆಡೆಗಳಿಗೆ ಹೋಲಿಸಿದರೆ ಕಷ್ಟಕರವೂ ಹೌದು. ಇದಕ್ಕೆ ಪ್ರಮುಖ ಕಾರಣ ಪ್ರತಿ ಮಳೆಗಾಲದಲ್ಲೂ ಇಲ್ಲಿನ ಮೇಲ್ಮಣ್ಣು ಕೊಚ್ಚಿಕೊಂಡು ಹೋಗಿ ಭೂಮಿ ಬರಡಾಗುವುದು. ಭೂಮಿಯಲ್ಲಿ ಫಲವತ್ತತೆ ಉಳಿಯುತ್ತಿಲ್ಲ. ಇಂತಹ ಮಣ್ಣಿನಲ್ಲಿ ಬೆಳೆದ ಮೇವಿನಲ್ಲಿ ಸಹಜವಾಗಿಯೇ ಲವಣಾಂಶಗಳ ಕೊರತೆ ಇರುತ್ತದೆ. ಜೊತೆಗೆ ಇಲ್ಲಿ ಬಳಸುವ ಭತ್ತದ ಹುಲ್ಲು ಹಸುಗಳಿಗೆ ಬಹಳ ಒಳ್ಳೆಯ ಆಹಾರವೇನೂ ಅಲ್ಲ. ಇದರಲ್ಲಿ ನಾರಿನಾಂಶ ಹೊರತುಪಡಿಸಿದರೆ ಇತರ ಪೌಷ್ಟಿಕಾಂಶಗಳ ತೀವ್ರ ಕೊರತೆ ಇದೆ.

ಹಾಗಾಗಿ ರಾಗಿ, ಜೋಳದ ಮೇವಿನ ಜೊತೆ ತುಲನೆ ಮಾಡಿ ನೋಡಿದರೆ, ಭತ್ತದ ಹುಲ್ಲು ಒಳ್ಳೆಯ ಆಹಾರ ಅನ್ನಿಸುವುದಿಲ್ಲ. ಭತ್ತದ ಹುಲ್ಲಿನಲ್ಲಿರುವ ಕೊರತೆ ಸರಿದೂಗಿಸಲು ಪಶುಆಹಾರ (ಹಿಂಡಿ) ಹೆಚ್ಚು ಬಳಸಿದರೆ ನಿರ್ವಹಣೆಯ ವೆಚ್ಚ ಏರಿ ಹೈನುಗಾರಿಕೆ ನಷ್ಟ ತರುತ್ತದೆ! ಮಲೆನಾಡು ಗಿಡ್ಡದಂತಹ ಸ್ಥಳೀಯ ಹಸುಗಳನ್ನು ಹೊರಗೆ ಬಿಟ್ಟು ಮೇಯಿಸಲು ಜಾಗದ ಕೊರತೆ, ಅತಿಕ್ರಮಣದಿಂದಾಗಿ ಗೋಮಾಳಗಳು ಕಣ್ಮರೆಯಾಗಿರುವುದು, ಹಸಿರು ಮೇವಿನ ಕೊರತೆ, ಪಶು ಆಹಾರದ ಬೆಲೆ ದಿನದಿನಕ್ಕೂ ಏರುತ್ತಿರುವುದು, ಗದ್ದೆ-ತೋಟಗಳಲ್ಲಿ ಹಸಿರು ಹುಲ್ಲು ಇದ್ದರೂ ಕೊಯ್ದು ತಂದು ಹಾಕಲು ಕಾರ್ಮಿಕರ ಕೊರತೆ, ಪಶು ಸಾಕಣೆಯಲ್ಲಿ ಯುವಜನಾಂಗದ ನಿರಾಸಕ್ತಿ, ಜಾನುವಾರುಗಳಿರುವ ಕೃಷಿ ಕುಟುಂಬದ ಯುವಕರನ್ನು ವರಿಸಲು ಯುವತಿಯರು ಹಿಂದೇಟು ಹಾಕುತ್ತಿರುವುದು, ದನ–ಕರುಗಳು ಇದ್ದರೆ ಕೆಲಸ ಜಾಸ್ತಿ, ಆರಾಮವಾಗಿ ಸುತ್ತಾಡಲು ತೊಡಕು ಎಂಬ ಭಾವನೆ... ಹೀಗೆ ಜಾನುವಾರು ಸಾಕಣೆಯಿಂದ ದೂರ ಸರಿಯಲು ಕಾರಣಗಳು ಹತ್ತಾರು.

ಅದರಲ್ಲೂ ಪ್ರಮುಖ ಕಾರಣ ಇಲ್ಲಿ ಲಾಭವೆಂಬುದೇ ಇಲ್ಲ, ಇದು ಪೂರ್ಣವಾಗಿ ಲುಕ್ಸಾನಿನ ಬಾಬತ್ತು ಎಂಬ ನಂಬಿಕೆಯೊಂದು ಮಲೆನಾಡು, ಕರಾವಳಿ ಭಾಗದಲ್ಲಿ ಬಹಳ ವ್ಯಾಪಕವಾಗಿದೆ. ಆದರೆ, ಬಯಲುಸೀಮೆಯ ರೈತರು ಹೈನುಗಾರಿಕೆಯ ಮೂಲಕವೇ ಜೀವನ ಕಂಡುಕೊಂಡಿರುವುದೂ ಇದೆ. ಹಲವಾರು ಮಂದಿ ಕೃಷಿಕರು ಉಪಕಸುಬಾಗಿಯೂ ಹೈನುಗಾರಿಕೆಯನ್ನು ಆಶ್ರಯಿಸಿದ್ದಾರೆ. ಹೈನುಗಾರಿಕೆ ಎಂಬುದು ನಷ್ಟದ ಕಸುಬು ಎಂದು ಸಾರಾಸಗಟಾಗಿ ಹೇಳುವವರು ಜಮಾ-ಖರ್ಚಿನ ಲೆಕ್ಕಾಚಾರದಲ್ಲಿ ಎಡವುತ್ತಿರುವುದು ಸ್ಪಷ್ಟ. ಎಮ್ಮೆ, ದನಗಳಿಂದ ಸಿಗುವ ಹಾಲನ್ನು ಮಾತ್ರ ಆದಾಯವೆಂದು ಪರಿಗಣಿಸುತ್ತಿರುವುದರಿಂದ ಲೆಕ್ಕ ತಪ್ಪಾಗುತ್ತಿದೆ. ಹಿಂಡಿ, ಮೇವಿಗೆಂದು ಮಾಡುವ ಖರ್ಚಿಗೆ ಹೋಲಿಸಿದರೆ ಹಾಲಿನಿಂದ ದೊರಕುವ ಆದಾಯ ಸ್ವಲ್ಪ ಕಡಿಮೆ ಇರಬಹುದು. ಜೊತೆಗೆ ಇತರೆ ಆದಾಯದ ಮೂಲಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಮನೆಯಲ್ಲೇ ಉತ್ಪಾದಿಸುವ ತಾಜಾ ಹಾಲನ್ನು ಮಕ್ಕಳು ಸೇರಿದಂತೆ ಮನೆಮಂದಿ ಉಪಯೋಗಿಸುವುದರಿಂದ ಆರೋಗ್ಯಕ್ಕಾಗುವ ಗಳಿಕೆ, ಹೈನೋತ್ಪನ್ನಗಳಾದ ಮೊಸರು, ಮಜ್ಜಿಗೆ, ತುಪ್ಪವನ್ನು ನಿತ್ಯ ಬಳಸುವುದರಿಂದ ಶರೀರಕ್ಕೆ ಸಿಗುವ ಅಗತ್ಯ ಪೋಷಕಾಂಶಗಳನ್ನು ಹಲವರು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿಲ್ಲ.



ಅದರಲ್ಲೂ ತುಪ್ಪವು ಆರೋಗ್ಯದ ದೃಷ್ಟಿಯಲ್ಲಿ ತುಂಬಾ ಮಹತ್ವವಿರುವ ಹೈನು ಪದಾರ್ಥ. ದೇಹದಲ್ಲಿನ ಕೆಟ್ಟ ಕೊಲೆಸ್ಟ್ರಾಲ್ (ಎಲ್‌ಡಿಎಲ್) ಕಡಿಮೆ ಮಾಡಿ, ದೇಹಕ್ಕೆ ಅಗತ್ಯವಿರುವ ಉತ್ತಮ ಕೊಬ್ಬಿನ (ಎಚ್‌ಡಿಎಲ್) ಪ್ರಮಾಣ ಹೆಚ್ಚಿಸುವ ಸಾಮರ್ಥ್ಯ ತುಪ್ಪಕ್ಕಿರುವುದರಿಂದ ಹೃದಯ, ರಕ್ತನಾಳಗಳು, ಮಾಂಸಖಂಡ, ಮೂಳೆಗಳ ಆರೋಗ್ಯಕ್ಕೆ ಇದು ಸಹಕಾರಿ ಎಂದು ಆಯುರ್ವೇದಶಾಸ್ತ್ರ ಹೇಳುತ್ತದೆ.


ಜಾನುವಾರುಗಳಿಂದ ಸಿಗುವ ಸಗಣಿ ಒಂದು ಉತ್ಕೃಷ್ಟ ಗೊಬ್ಬರ. ಅದನ್ನು ಬಳಸಿದಾಗ ಮಣ್ಣಿಗೆ ಅಗತ್ಯ ಸಾವಯವ ಅಂಶ ಸೇರಿ ಉಪಯುಕ್ತ ಸೂಕ್ಷ್ಮಾಣು ಜೀವಿಗಳು ವೃದ್ಧಿಯಾಗುವುದಲ್ಲದೆ ಬೆಳೆಯ ಇಳುವರಿ ಹೆಚ್ಚುತ್ತದೆ. ಸಗಣಿ ಗೊಬ್ಬರಕ್ಕೆ ನೀರು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯ ಜಾಸ್ತಿ. ಗಂಜಲ (ಗೋಮೂತ್ರ) ಮಣ್ಣಿನ ಫಲವತ್ತತೆ ವೃದ್ಧಿಸುವ ಜೊತೆಗೆ ಕೀಟನಾಶಕ ಸೇರಿದಂತೆ ಹಲವು ರೂಪದಲ್ಲಿ ಬಳಕೆಯಲ್ಲಿದೆ. ಸಗಣಿ, ಗಂಜಲ, ದ್ವಿದಳ ಧಾನ್ಯಗಳ ಹಿಟ್ಟು, ಬೆಲ್ಲದಿಂದ ತಯಾರಿಸುವ ಜೀವಾಮೃತವನ್ನು ಬೆಳೆಗಳಿಗೆ ಉಣಿಸಿ ಉತ್ತಮ ಫಸಲು ಪಡೆಯುತ್ತಿರುವ ರೈತರ ಸಂಖ್ಯೆ ದೊಡ್ಡದಿದೆ. ಹಲವರು ಗೋಬರ್ ಗ್ಯಾಸ್ ಘಟಕ ನಿರ್ಮಿಸಿಕೊಂಡು ಎಲ್‌ಪಿಜಿಯಂತಹ ಇಂಧನಗಳ ಬಳಕೆ ತಗ್ಗಿಸಿದ್ದಾರೆ. ಗೋವುಗಳ ಸಾಂಗತ್ಯದಿಂದ ಸಿಗುವ ಸಂತೋಷ, ನೆಮ್ಮದಿ, ಖುಷಿಯಂತಹ ಹಿತಾನುಭವಗಳು ಮಾನಸಿಕ ಆರೋಗ್ಯ ವೃದ್ಧಿಸುತ್ತವೆ. ಪಶುಪಾಲನೆಯು ಮಕ್ಕಳಲ್ಲಿ ದಯೆ, ಅನುಕಂಪ, ಪ್ರೀತಿ, ಕಾಳಜಿಯಂತಹ ಗುಣಗಳನ್ನು ಬಿತ್ತಲು ಸಹಕಾರಿ. ನಿತ್ಯ ಮೈತೊಳೆಯುವುದು, ಹಿಂಡಿ-ಹುಲ್ಲು ಹಾಕುವುದು, ಹಾಲು ಕರೆಯುವುದು, ಕೊಟ್ಟಿಗೆಯ ಸ್ವಚ್ಛತೆ ನಿರ್ವಹಣೆ ಎಂದೆಲ್ಲಾ ಸದಾ ಚಟುವಟಿಕೆಯಿಂದಿರಬೇಕಾದ ಅನಿವಾರ್ಯದಿಂದ ಶರೀರಕ್ಕೂ ವ್ಯಾಯಾಮ ಸಿಗುತ್ತದೆ.

ಹೌದು, ಹೈನುಗಾರಿಕೆಯ ಈ ಎಲ್ಲಾ ಉಪಯೋಗಗಳನ್ನು ಪರಿಗಣಿಸಿದರೆ ಇದು ಖಂಡಿತ ಲಾಭದಾಯಕ ಎಂಬುದು ಖಚಿತವಾಗುತ್ತದೆ. ಹಾಗಂತ ಇದನ್ನು ಒಂದು ಉದ್ಯಮವಾಗಿಯೋ ಕಸುಬಾಗಿಯೋ ಎಲ್ಲೆಡೆ ದೊಡ್ಡ ಪ್ರಮಾಣದಲ್ಲಿ ಮಾಡಲು ಕಷ್ಟಸಾಧ್ಯವಾದರೂ ಮನೆಗೆ ಒಂದೋ ಎರಡೋ ಹಸುಗಳನ್ನು ಕಟ್ಟಿಕೊಂಡು ಸರಳವಾಗಿ ಪಶುಪಾಲನೆ ಮಾಡುವುದು ಕಷ್ಟವಲ್ಲ. ಜಮೀನಿನಲ್ಲಿ ಒಂದಷ್ಟು ಜಾಗವನ್ನು ಹಸಿರು ಮೇವಿಗಾಗಿಯೇ ಮೀಸಲಿಡುವುದು, ಮನೆ, ತೋಟದ ಬೇಲಿ ಸಾಲುಗಳಲ್ಲಿ ಗೊಬ್ಬರದ ಗಿಡ, ಹಾಲುವಾಣ, ಅಗಸೆ, ನುಗ್ಗೆಯಂತಹ ಮೇವಿನ ಮರಗಳನ್ನು ಬೆಳೆಸಿಕೊಳ್ಳುವುದರಿಂದ ಪಶು ಆಹಾರದ ವೆಚ್ಚವನ್ನು ಖಂಡಿತ ಮಿತಗೊಳಿಸಬಹುದು. ಜೊತೆಗೆ ಕೊಟ್ಟಿಗೆಯಲ್ಲಿ ಗಾಳಿ, ಬೆಳಕು, ಸ್ವಚ್ಛತೆ ಚೆನ್ನಾಗಿರುವಂತೆ ನೋಡಿಕೊಂಡಾಗ ರಾಸುಗಳ ಸ್ವಾಸ್ಥ್ಯವೂ ಚೆನ್ನಾಗಿರುತ್ತದೆ.

'ಮಣ್ಣಿನಲ್ಲಿ ಬೆಳೆದ ಬೆಳೆ ಮಾನವನಿಗೆ, ಬೆಳೆಯ ತ್ಯಾಜ್ಯ ಜಾನುವಾರುಗಳಿಗೆ, ಜಾನುವಾರುಗಳ ತ್ಯಾಜ್ಯ ಮರಳಿ ಮಣ್ಣಿಗೆ' ಎಂಬುದು ಸಾವಯವ ನಿಯಮ. ಈ ದಿಸೆಯಲ್ಲಿ ರೈತರು ಚಿಂತಿಸಿ ಸಣ್ಣ ಪ್ರಮಾಣದಲ್ಲಾದರೂ ಪಶುಪಾಲನೆ ಮಾಡುವುದು ಕುಟುಂಬದ ಸ್ವಾಸ್ಥ್ಯದ ಜೊತೆಗೆ ಪ್ರಕೃತಿಯ ಸಾವಯವ ಚಕ್ರದ ಚಲನೆಗೂ ಸಹಕಾರಿ.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ
ಸರ್ಕಾರಿ ಪಶು ಆಸ್ಪತ್ರೆ, ತೀರ್ಥಹಳ್ಳಿ

ಚುರುಮುರಿ



ಭಯಸ್ಕರ ವ್ಯಾಕರಣ

• ಡಿ.ಎಸ್. ಲಿಂಗರಾಜು

ತುರೇಮಣೆ, ಯಂಟಪ್ಪಣ್ಣ ವ್ಯಾಕರಣ ಪುಸ್ತಕ ಓದ್ತಾ ಕುಂತುದ್ರು. 'ಇದೇನ್ಸಾ ಕುಡಿಯೋ ವಯಸ್ಸಲ್ಲಿ ನಡಿಯೋದನ್ನ ಕಲೀತಾ ಇದ್ದೀರಿ! ನಿಮಗ್ಯಾಕೆ ವ್ಯಾಕರಣದ ಹುಚ್ಚು?' ಅಂತಂದೆ.

'ವಯಸ್ಸಾಯ್ತಾ ಆಯ್ತಾ ಜೀವನದ ಗ್ರಾಮರ್ ತಿಳಕಬಕು ಕಲಾ! ಅಜ್ಜ-ಅಜ್ಜಿ, ಅಪ್ಪ-ಅಮ್ಮ ಅಂದ್ರೆ ಅರ್ಥಾಗದ ಹಳೆಗನ್ನಡ. ಅತ್ತೆ-ಸೊಸೆ ಅನ್ನೋದು ವಿರುದ್ಧಾರ್ಥಕ ಪದಗಳು. ಮಾವ ಅಂದ್ರೆ ಸಂಜ್ಞಾ ಸೂಚನೆ ಮಾತ್ರ. ಮಗ-ಮಗಳು ಸ್ವರಗಳು. ಕಾಸು ಕೊಡದಿದ್ದಾಗ ದೀರ್ಘಸ್ವರವಾಗುತ್ತೆ' ಎಂದು ಯಂಟಪ್ಪಣ್ಣ ವಿವರಿಸಿತು.

'ಹೆಂಡ್ತಿಗೆ ಸಿಟ್ಟು ಬಂದ್ರೆ ಕ್ರಿಯಾಪದ. ಸ್ನೇಹಿತರು ಅಂದ್ರೆ ಕಾರ್ಯ-ಕಾರಣ ಸಂಬಂಧ ಸೂಚಕ ವಿಭಕ್ತಿ ಪ್ರತ್ಯಯಗಳು. ನಾನು ಅಲ್ಪಪ್ರಾಣ!' ತುರೇಮಣೆ ಗ್ರಾಮರಿಗೆ ನಗು ತಡೆಯಲಾಗಲಿಲ್ಲ.

'ಸಾ ಹಿಂಗೇ ರಾಜಕೀಯದ ವ್ಯಾಕರಣವೂ ಇರುತ್ತಾ' ಎಂದು ಕೇಳಿದೆ.

'ರಾಜಕೀಯದೇಲಿ ವ್ಯಾಕರಣವೇ ಮುಖ್ಯ ಕನೋ! ಸಂಧಿ ಅಂದ್ರೆ ಪಕ್ಷ-ಪಕ್ಷಗಳು ಜೊತೆಗೂಡಿ ಮಾಡಿಕೊಳ್ಳೋ ಒಳಒಪ್ಪಂದ. ಸಮುಚ್ಚಯ ಪದ ಅಂದ್ರೆ ಡಿಸಿಎಂಗಳ ಸಂಖ್ಯಾ ಸೂಚಕ. ನಾಮಪದಗಳಲ್ಲಿ ಸಿಎಂ ರೂಢನಾಮ, ಡಿಸಿಎಂ ಅಂಕಿತನಾಮ. ಮಂತ್ರಿಗಳ ಬಣ್ಣದ ಮಾತೇ ಶಬ್ದಾಲಂಕಾರ' ತುರೇಮಣೆ ಮಾತಿಗೆ ಯಂಟಪ್ಪಣ್ಣ ಸೇರಿಸಿತು.

'ರಾಜಕಾರಣಿಗಳು ಅರಿಷಡ್ವರ್ಗಗಳಾದ ಸೆಟಲ್ಮೆಂಟ್, ಬೇನಾಮಿ, ಭ್ರಷ್ಟಾಚಾರ, ಅಕ್ರಮ, ಅಧಿಕಾರ ಮದ, ಲೋಭಗಳನ್ನೆಲ್ಲಾ ಅರಿತು ಆಚರಿಸಬೇಕು. ಆಗಾಗ ಕೇಳಿಬರೋ ಆರೋಪಕ್ಕೆ ಸಿಟ್ಟಾಗಿ ಬೈಯ್ದಾಡೋದು ಜಿಹ್ವಾಮೂದಲೀಯ ಪದ. ವಿರೋಧ ಪಕ್ಷಗಳು ಅಂದ್ರೆ ವಿರುದ್ಧಾರ್ಥಕ ಪದಗಳು! ದ್ವಂದ್ವಾರ್ಥ ಪದಗಳಂದ್ರೆ ಉದಾಹರಣೆಗೆ ಸೈಟು. ಕ್ರಿಯಾಪದಗಳಂದ್ರೆ ಹಂಚಿಕೆ, ಬದಲಿ, ರೀ-ಡೂ ಧನಾಗಮ ಪದಗಳು' ಎಂದು ತುರೇಮಣೆ ದೀರ್ಘವಾಗಿ ವಿವರಿಸಿದರು.

'ಇದು ರಾಜಕೀಯ ಭಯಸ್ಕರ ವ್ಯಾಕರಣ ಅಂದಂಗಾತು' ಅಂತ ಚಿಂತೆಗೆ ಬಿದ್ದೆ.

ದಿನದ ಟ್ವೀಟ್


ನಾವು ಮಾಡಿದ ತಪ್ಪೇನು?



ದೇಶದ ನಗರಗಳಲ್ಲೆಲ್ಲ ನೀರು ತುಂಬಿಕೊಂಡಿರುವುದು ಏಕೆ? ನಗರ ಯೋಜನೆಯಲ್ಲಿ ನಾವು ಮಾಡಿರುವ ತಪ್ಪು ಏನು?

ಫೇಯ್ ಡಿಸೋಜಾ, ಪತ್ರಕರ್ತೆ

ಕಿಡಿನುಡಿ



ಬಳಕೆಯಲ್ಲಿಲ್ಲದ ಶಸ್ತ್ರಾಸ್ತ್ರ ಪಡೆಯಲು ಮೋದಿ ಅವರು ಮಾಸ್ಕೊಗೆ ತೆರಳಿದ್ದಾರೆ. ಈ ಶಸ್ತ್ರಾಸ್ತ್ರಗಳನ್ನು ರಷ್ಯಾದ ಹಿರಿಯ ಪಾಲುದಾರ ಚೀನಾಕ್ಕೆ ಎಂಟು ವರ್ಷಗಳ ಹಿಂದೆಯೇ ಮಾರಲಾಗಿತ್ತು. ಈಗ ಅವು ಬಳಕೆಯಲ್ಲಿಲ್ಲ. ರಷ್ಯಾದ ಆಧುನಿಕ ಶಸ್ತ್ರಾಸ್ತ್ರಗಳು ಚೀನಾಕ್ಕೆ ಸಿಗುತ್ತಿವೆ; ಆದರೆ ಮೋದಿ ಅವರಿಗೆ ಸಿಗುತ್ತಿಲ್ಲ. ಇದನ್ನು ಸಂಸತ್ತಿನಲ್ಲಿ ಪ್ರಸ್ತಾಪಿಸಬೇಕು.

ಸುಬ್ರಮಣಿಯನ್ ಸ್ವಾಮಿ, ಬಿಜೆಪಿ ಮುಖಂಡ

25 ವರ್ಷಗಳ ಹಿಂದೆ

ಶುಕ್ರವಾರ, 9-7-1999

• **ಲೇಹ್–ಶ್ರೀನಗರ ಹೆದ್ದಾರಿ ಮುಕ್ತ**

ನವದೆಹಲಿ, ಜುಲೈ 8– ಕಾರ್ಗಿಲ್ ಕಾರ್ಯಾಚರಣೆಯಲ್ಲಿ ಅಭೂತಪೂರ್ವ ಯಶಸ್ಸು ಸಾಧಿಸಿರುವ ಭಾರತೀಯ ಸೇನೆ, ಒಂದೂವರೆ ತಿಂಗಳಿಂದ ಮುಚ್ಚಿದ್ದ ಲೇಹ್–ಶ್ರೀನಗರ ಹೆದ್ದಾರಿಯನ್ನು ಇಂದು ಸಾರ್ವಜನಿಕ ಸಂಚಾರಕ್ಕೆ ಮುಕ್ತಗೊಳಿಸಿತು.

ಪ್ರಮುಖ ಆಯಕಟ್ಟಿನ ಪ್ರದೇಶವಾದ ಟೈಗರ್ ಹಿಲ್ ಮತ್ತು ಜುಬಾರ್ ಹಿಲ್ ಪ್ರದೇಶವನ್ನು ಭಾರತೀಯ ಪಡೆ ವಶಪಡಿಸಿಕೊಂಡಿರುವುದರಿಂದ ದ್ರಾಸ್ ಹಾಗೂ ಬಟಾಲಿಕ್ ಮೂಲಕ ಹಾದುಹೋಗುವ ಈ ಹೆದ್ದಾರಿಯನ್ನು ಮುಕ್ತಗೊಳಿಸಲು ಸಾಧ್ಯವಾಯಿತು.

• **ಸಚಿವ ನಾಣಯ್ಯ ವಿರುದ್ಧ ಹಕ್ಕುಚ್ಯುತಿ ಆರೋಪ**

ಬೆಂಗಳೂರು, ಜುಲೈ 8– ಭಟ್ಕಳದ ಶಾಸಕ ಡಾ.ಯು. ಚಿತ್ತರಂಜನ್ ಅವರ ಕೊಲೆಗೆ ಸಂಬಂಧಿಸಿದಂತೆ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಜಗನ್ನಾಥ ಶೆಟ್ಟಿ ವಿಚಾರಣಾ ಆಯೋಗ ತನ್ನ ವರದಿ ಕೊಟ್ಟು ಎರಡೂವರೆ ವರ್ಷಗಳಾದರೂ ಆ ವರದಿಯನ್ನು ಸದನದ ಮುಂದೆ ಮಂಡಿಸದೆ ಕಾನೂನು ಸಚಿವ ಎಂ.ಸಿ. ನಾಣಯ್ಯ ಅವರು ಸದನದ ಹಕ್ಕುಚ್ಯುತಿ ಮಾಡಿದ್ದಾರೆ ಎಂದು ಬಿಜೆಪಿಯ ಡಾ.ಎಂ.ಪಿ. ಕರ್ಕಿ ಅವರು ಇಂದು ವಿಧಾನಸಭೆಯಲ್ಲಿ ಆರೋಪಿಸಿದರು.

ಈ ಸದನದ ಹಿಂದಿನ ಅಧಿವೇಶನದಲ್ಲಿ ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ಮೂರು ತಿಂಗಳಲ್ಲಿ ವರದಿ ಮಂಡಿಸಲಾಗುತ್ತದೆ ಎಂಬ ಆಶ್ವಾಸನೆಯನ್ನು ಕಾನೂನು ಸಚಿವರು ನೀಡಿದ್ದರು. ಆದರೆ ಈ ಸದನದ ಕಾರ್ಯಕಲಾಪಗಳು ನಾಳೆ ಮುಗಿಯುತ್ತವೆ. ಆದರೂ ಕಾನೂನು ಸಚಿವರು ವರದಿ ಮಂಡಿಸದೆ ಹಕ್ಕುಚ್ಯುತಿ ಮಾಡಿದ್ದಾರೆ ಎಂದು ತಮ್ಮ ವಾದವನ್ನು ಮಂಡಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 9-7-1974

• **ಭಾರತದ ಪ್ರಥಮ ಉಪಗ್ರಹ ನಗರದಲ್ಲಿ ಈಗ ಸಿದ್ಧ**

ಬೆಂಗಳೂರು, ಜುಲೈ 8– ಡಿಸೆಂಬರ್ ತಿಂಗಳಿನಲ್ಲಿ ರಷ್ಯದ ನೆಲೆಯೊಂದರಿಂದ ಹಾರಿಬಿಡಲಾಗುವ ಭಾರತದ ಉಪಗ್ರಹ ಇಲ್ಲಿ ಬಹುಮಟ್ಟಿಗೆ ಸಿದ್ಧವಾಗಿದೆ.

ಈವರೆಗೆ ಗಗನಕ್ಕೆ ಹೋಗಿರುವ ಆರೇಳು ರಾಷ್ಟ್ರಗಳ ಸುಮಾರು ಮುನ್ನೂರು ಉಪಗ್ರಹಗಳು ಸಂಗ್ರಹಿಸಿರುವ ಅಂಕಿ ಅಂಶಗಳಿಗಿಂತಲೂ ಹೊಸದಾದ ಅಂಕಿ ಅಂಶಗಳನ್ನು ಭಾರತದ ಉಪಗ್ರಹದ ಮೂಲಕ ಸಂಗ್ರಹಿಸುವ ಉದ್ದೇಶ ಹೊಂದಲಾಗಿದೆ ಎಂದು ತುಮಕೂರು ರಸ್ತೆಯ ಪೀಣ್ಯದ 'ಇಸ್ರೊ' ಡೈರೆಕ್ಟರ್ ಡಾ.ಯು. ಆರ್. ರಾವ್‌ರವರು ತಿಳಿಸಿದರು.

• **ಲಿಂಗನಮಕ್ಕಿ: ನಿರೀಕ್ಷಿಸಿದಂತೆ ನೀರು ತುಂಬದೆ ಮತ್ತೆ ಆತಂಕ**

ಬೆಂಗಳೂರು, ಜುಲೈ 8– ಮಳೆ ಸುಮಾರಾಗಿ ಬರುತ್ತಿದೆಯಾದರೂ ಲಿಂಗನಮಕ್ಕಿ ಜಲಾಶಯದಲ್ಲಿ ನೀರು ನಿರೀಕ್ಷಿತ ಪ್ರಮಾಣದಲ್ಲಿ ತುಂಬುತ್ತಿಲ್ಲ ಎಂಬುದು ಮತ್ತೆ ಆತಂಕದ ವಿಷಯವಾಗಿದೆ. ನಿನ್ನೆ ಸಂಜೆಯಿಂದ ಇಂದು ಬೆಳಗಿನವರೆಗೆ ಸುಮಾರು ಐದೂವರೆ ಅಡಿಗಳಷ್ಟು ನೀರು ತುಂಬಿದರೂ ಬೆಳಗಿನಿಂದ ಸಂಜೆವರೆಗೆ ಜಲಾಶಯಕ್ಕೆ ಹರಿದ ನೀರು ಅರ್ಧ ಅಡಿ ಎತ್ತರದಷ್ಟು ಮಾತ್ರ.

ಸಂಗತ

ಪರೀಕ್ಷಾ ಪದ್ಧತಿಯ ಸುಧಾರಣೆ ಯಾವಾಗ?

ಭಾರತದಲ್ಲಿ ಪರೀಕ್ಷೆಯ ಒತ್ತಡಕ್ಕೆ ಸಂಬಂಧಿಸಿದ ಆತ್ಮಹತ್ಯೆಗಳು ಮತ್ತು ಆತ್ಮಹತ್ಯೆ ಪ್ರಯತ್ನಗಳ ಕುರಿತ ಕೆಲವು ಅಂಕಿ–ಅಂಶಗಳು ನಿಜಕ್ಕೂ ಗಾಬರಿ ಹುಟ್ಟಿಸುವಂತಿವೆ

• ಡಾ. ಲಕ್ಷ್ಮಣ ವಿ.ಎ.

ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶಕ್ಕಾಗಿ ಇತ್ತೀಚೆಗೆ ನಡೆದ ನೀಟ್ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಾಗಿರುವುದನ್ನು ಬಿಹಾರದ ನಾಲ್ವರು ಅಭ್ಯರ್ಥಿಗಳು ಸಿಬಿಐ ಎದಿರು ಒಪ್ಪಿಕೊಂಡಿದ್ದಾರೆ ಎಂದು ವರದಿಯಾಗಿದೆ. ಯುಜಿಸಿ–ನೆಟ್ ಪರೀಕ್ಷೆಯಲ್ಲಿ ಅಕ್ರಮಗಳು ನಡೆದಿವೆ ಎಂಬ ಕಾರಣಕ್ಕೆ, ನಡೆದಿದ್ದ ಪರೀಕ್ಷೆಗಳನ್ನು ರದ್ದುಪಡಿಸಲಾಯಿತು. ಗುಜರಾತ್‌ನಲ್ಲಿ ನಡೆದ ಕಿರಿಯ ಕ್ಲರ್ಕ್‌ಗಳ ನೇಮಕಾತಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಾದ ನಂತರ ಪರೀಕ್ಷೆಯನ್ನು ರದ್ದುಗೊಳಿಸಲಾಗಿದೆ. ಬಿಹಾರದಲ್ಲಿ ಕಾನ್‌ಸ್ಟೆಬಲ್ ನೇಮಕಾತಿ ಪರೀಕ್ಷೆ ಪ್ರಶ್ನೆಪತ್ರಿಕೆ ಸೋರಿಕೆಯಿಂದಾಗಿ ಆ ಪರೀಕ್ಷೆಯನ್ನು ಕೂಡ ರದ್ದುಗೊಳಿಸಲಾಗಿದೆ.

ಇವೆಲ್ಲವುಗಳನ್ನು ಗಮನಿಸಿದಾಗ, ಸರ್ಕಾರಿ ಹುದ್ದೆಗಳ ನೇಮಕಕ್ಕೆ ವಿವಿಧ ನೇಮಕಾತಿ ಪ್ರಾಧಿಕಾರಗಳು ನಡೆಸುವ ಹಾಗೂ ವಿವಿಧ ಕೋರ್ಸ್‌ಗಳಿಗೆ ಪ್ರವೇಶಕ್ಕೆ ನಡೆಸುವ ಪರೀಕ್ಷೆಗಳಲ್ಲಿ ಅಕ್ರಮಗಳು ನಡೆಯುವುದು ತೀರಾ ಮಾಮೂಲಿ ಸಂಗತಿ ಎನ್ನುವಂತಾಗಿದೆ. ಈ ಬಗೆಯ ಅಕ್ರಮಗಳಿಂದಾಗಿ, ಬಡ ಮತ್ತು ಪ್ರತಿಭಾವಂತ ಅಭ್ಯರ್ಥಿಗಳು ಸರ್ಕಾರಿ ಉದ್ಯೋಗದಿಂದ ವಂಚಿತರಾಗುತ್ತಿದ್ದಾರೆ. ಹಾಗೆಯೇ, ಅರ್ಹ ವಿದ್ಯಾರ್ಥಿಗಳು ತಮ್ಮ ಇಷ್ಟದ ಕೋರ್ಸ್‌ಗೆ ಸೇರಲು ಸಾಧ್ಯವಾಗದೆ ದುಃಖತಪ್ತರಾಗುತ್ತಿದ್ದಾರೆ.

ಪರೀಕ್ಷಾ ಕೇಂದ್ರಗಳ ಸುತ್ತಲಿನ ಅತಿ ಭದ್ರತೆಯು ವಿದ್ಯಾರ್ಥಿಗಳಲ್ಲಿ, ಅಭ್ಯರ್ಥಿಗಳಲ್ಲಿ ಅಭಯದ ಭಾವನೆ ಮೂಡಿಸುವ ಬದಲಿಗೆ, ಅಲ್ಲಿನ ಅತಿಶಿಸ್ತಿನ ಹುಬ್ಬು ಗಂಟಿಕ್ಕಿದ ಮುಖಗಳು, ಸಿ.ಸಿ.ಟಿ.ವಿ. ಕ್ಯಾಮೆರಾ ಕಣ್ಗಾವಲು ಪರೀಕ್ಷಾರ್ಥಿಗಳಲ್ಲಿ ವಿಲಕ್ಷಣ ಭಯ ಹುಟ್ಟಿಸುತ್ತಿವೆ. ವಿಷಯವೊಂದಕ್ಕೆ ಸಂಬಂಧಿಸಿದಂತೆ ವರ್ಷವಿಡೀ ಓದಿದ್ದನ್ನು, ಪರೀಕ್ಷಾ ಕೊಠಡಿಯಲ್ಲಿ ಕುಳಿತು ನಿರ್ದಿಷ್ಟ ಅವಧಿಯಲ್ಲಿ ಪರೀಕ್ಷೆಯೆಂಬ ಅಗ್ನಿದಿವ್ಯದ ಮೂಲಕ ಹಾಯ್ದು, ತಮ್ಮ ಸಾಮರ್ಥ್ಯವನ್ನು ಸಾಬೀತುಪಡಿಸುವ ಸವಾಲು ಅಭ್ಯರ್ಥಿಗಳ ಹಾಗೂ ವಿದ್ಯಾರ್ಥಿಗಳ ಮುಂದೆ ಇರುತ್ತದೆ.

ಪ್ರತಿ ಪರೀಕ್ಷೆಯ ಹಿಂದೆಯೂ ವಿದ್ಯಾರ್ಥಿಯ ಸೂಕ್ಷ್ಮ ಮಾನಸಿಕ ತಯಾರಿ, ಲಕ್ಷಾಂತರ ರೂಪಾಯಿಗಳ ಹಣ ಮತ್ತು ಪೋಷಕರ ಶ್ರಮವೂ ಸೇರಿರುತ್ತದೆ. ಇದರ ಜೊತೆಯಾಗಿ ಪೋಷಕರ ಒತ್ತಡ, ಪ್ರತಿಷ್ಠೆ, ಭದ್ರ ಭವಿಷ್ಯ, ಜವಾಬ್ದಾರಿ ಎಂಬ ಹೆಚ್ಚುವರಿ ದೇಶಾವರಿ ಮಾತುಗಳಂತೂ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಇನ್ನಷ್ಟು ಪ್ರಕ್ಷುಬ್ಧತೆಯನ್ನು ಸೃಷ್ಟಿಸಿಬಿಟ್ಟಿರುತ್ತವೆ. ಒಮ್ಮೆ ಪರೀಕ್ಷೆ ಮುಗಿದರೆ ಸಾಕು ಎನ್ನುವಂತಹ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳು, ಅಭ್ಯರ್ಥಿಗಳು ಇರುತ್ತಾರೆ. ಇಂತಹ ಪರಿಸ್ಥಿತಿಯ ನಡುವೆ, ಎಲ್ಲೋ ಯಾರೋ ಎಸಗುವ ಪರೀಕ್ಷಾ ಅಕ್ರಮದ ಫಲವಾಗಿ ಇಂಥದ್ದೇ ಮತ್ತೊಂದು ಪರೀಕ್ಷೆಯನ್ನು ಎದುರಿಸಬೇಕಾಗಿ ಬರುವುದು ಎಷ್ಟೊಂದು ಕಷ್ಟ ಎಂಬುದನ್ನು ಯಾರಾದರೂ ಸಹಜವಾಗಿ ಊಹಿಸಬಹುದು.

ಭಾರತದಲ್ಲಿ ಪರೀಕ್ಷೆಯ ಒತ್ತಡಕ್ಕೆ ಸಂಬಂಧಿಸಿದ ಆತ್ಮಹತ್ಯೆಗಳು ಮತ್ತು ಆತ್ಮಹತ್ಯೆ ಪ್ರಯತ್ನಗಳ ಕುರಿತ ಕೆಲವು ಅಂಕಿ–ಅಂಶಗಳು ಗಾಬರಿ ಹುಟ್ಟಿಸುವಂತಿವೆ. ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೊದಲ್ಲಿ ಲಭ್ಯವಿರುವ ಮಾಹಿತಿ ಪ್ರಕಾರ, 2014 ಮತ್ತು 2018ರ ನಡುವೆ, ಭಾರತದಲ್ಲಿ 134 ವಿದ್ಯಾರ್ಥಿಗಳ ಆತ್ಮಹತ್ಯೆಗಳು ವರದಿಯಾಗಿವೆ. 2019ರಲ್ಲಿ, ತಮಿಳುನಾಡಿನಲ್ಲಿ 27 ವಿದ್ಯಾರ್ಥಿಗಳು ಪರೀಕ್ಷೆಯ ಒತ್ತಡವನ್ನು ಕಾರಣವೆಂದು ಉಲ್ಲೇಖಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸೆಂಟರ್ ಫಾರ್ ಸೈನ್ಸ್ ಆ್ಯಂಡ್ ಎನ್ವಿರಾನ್‌ಮೆಂಟ್‌ನ 2020ರ ವರದಿಯು ಭಾರತದಲ್ಲಿ ಪ್ರತಿ ಗಂಟೆಗೆ ಒಬ್ಬ ವಿದ್ಯಾರ್ಥಿ ಆತ್ಮಹತ್ಯೆಗೆ ಯತ್ನಿಸುತ್ತಾನೆ, ವಿದ್ಯಾರ್ಥಿಗಳ ಪೈಕಿ ಶೇಕಡ 46ರಷ್ಟು ಮಂದಿ ಪರೀಕ್ಷೆಗಳಿಂದಾಗಿ ತೀವ್ರ ಒತ್ತಡ ಎದುರಿಸುತ್ತಾರೆ, ಶೇ 25ರಷ್ಟು ವಿದ್ಯಾರ್ಥಿಗಳು ಪರೀಕ್ಷೆಯ ಒತ್ತಡದ ಕಾರಣದಿಂದಾಗಿ ಆತ್ಮಹತ್ಯೆಯ ಕುರಿತು ಯೋಚಿಸುತ್ತಾರೆ ಎಂದು ಹೇಳಿದೆ.



ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಮೆಂಟಲ್ ಹೆಲ್ತ್ ಆ್ಯಂಡ್ ನ್ಯೂರೊಸೈನ್ಸ್ (ನಿಮ್ಹಾನ್ಸ್) 2018ರಲ್ಲಿ ನಡೆಸಿದ ಸಮೀಕ್ಷೆಯ ಪ್ರಕಾರ, ವಿದ್ಯಾರ್ಥಿಗಳ ಪೈಕಿ ಶೇ 12ರಷ್ಟು ಮಂದಿ ಆತ್ಮಹತ್ಯೆಯ ಆಲೋಚನೆ ಹೊಂದುತ್ತಾರೆ.

ಜರ್ನಲ್ ಆಫ್ ಇಂಡಿಯನ್ ಅಸೋಸಿಯೇಷನ್ ಫಾರ್ ಚೈಲ್ಡ್ ಆ್ಯಂಡ್ ಅಡೋಲಸೆಂಟ್ ಮೆಂಟಲ್ ಹೆಲ್ತ್‌ನಲ್ಲಿ ಪ್ರಕಟವಾದ ಅಧ್ಯಯನ ವರದಿಯ ಪ್ರಕಾರ ಪ್ರತಿ ಐದು ಮಂದಿ ವಿದ್ಯಾರ್ಥಿಗಳಲ್ಲಿ ಒಬ್ಬ ವಿದ್ಯಾರ್ಥಿಯು ಪರೀಕ್ಷೆಗೆ ಸಂಬಂಧಿಸಿದ ಒತ್ತಡ ಅನುಭವಿಸುತ್ತಾನೆ. ಪ್ರತಿ 10 ಮಂದಿಯಲ್ಲಿ ಒಬ್ಬ ಆತ್ಮಹತ್ಯೆಯ ಕಲ್ಪನೆ ಹೊಂದಿರುತ್ತಾನೆ. ಪ್ರತಿ ವರ್ಷ ನಡೆಸಲಾಗುವ ನೀಟ್ ಮತ್ತು ಜೆಇಇ ಹಾಗೂ ಇನ್ನಿತರ ರಾಷ್ಟ್ರೀಯ ಮಟ್ಟದ ಪರೀಕ್ಷೆಗಳಲ್ಲಿ ಉತ್ತರದ ರಾಜ್ಯಗಳಿಂದ ಇಂತಹ ಅಕ್ರಮಗಳು ವರದಿಯಾಗುತ್ತಲೇ ಇರುತ್ತವೆ. ನೀಟ್ ಪರೀಕ್ಷಾ ಪದ್ಧತಿಯನ್ನೇ ಕೈಬಿಡಬೇಕೆಂಬ ವಾದ ಈಗ ಮತ್ತಷ್ಟು ಬಲ ಪಡೆದಿದೆ.

ಈ ಹೊತ್ತಿನಲ್ಲಿ ಶಿಕ್ಷಣ ತಜ್ಞರು ಇದರ ಬಗ್ಗೆ ಹೆಚ್ಚಿನ ಗಮನಹರಿಸಬೇಕಾದ ಅನಿವಾರ್ಯ ಇದೆ. ಪ್ರಾಮಾಣಿಕವಾಗಿ ಪರೀಕ್ಷೆ ಎದುರಿಸಿದವರ ಪಾಲಿಗೆ ಈ ಅಕ್ರಮಗಳು ಇಡೀ ಶೈಕ್ಷಣಿಕ ವ್ಯವಸ್ಥೆಯ ಮೇಲೆ ಅಪನಂಬಿಕೆ ಹುಟ್ಟಿಸುವಂತಹವು. ಇಂತಹ ಪ್ರಕರಣಗಳು ವಿದ್ಯಾರ್ಥಿಗಳ ಆತ್ಮವಿಶ್ವಾಸವನ್ನೇ ಉಡುಗಿಸಿ ತಮ್ಮ ಭವಿಷ್ಯದ ಬಗ್ಗೆ ಭ್ರಮನಿರಸನ ಮೂಡಿಸುವ ಅಪಾಯವಿದೆ. ಈ ಅಕ್ರಮಗಳನ್ನು ತಡೆಯುವ ಗುರುತರ ಜವಾಬ್ದಾರಿ ಸರ್ಕಾರದ ಮೇಲಿದೆ. ಇಲ್ಲವಾದರೆ ಇಂತಹ ಅಕ್ರಮಗಳ ದೂರಗಾಮಿ ದುಷ್ಪರಿಣಾಮವನ್ನು ಊಹಿಸಲೂ ಭಯವಾಗುತ್ತದೆ.

ವಾಚಕರ ವಾಣಿ

ರಾಜಕೀಯ ಬೀಗರೊಂದಿಗೆ ಸಮಾರಾಧನೆ

ಚಿಕ್ಕಬಳ್ಳಾಪುರ ಕ್ಷೇತ್ರದ ಸಂಸದ, ಬಿಜೆಪಿಯ ಡಾ.ಕೆ.ಸುಧಾಕರ್ ಅವರಿಗೆ ಅಭಿನಂದನೆ ಸಲ್ಲಿಸಲು ನೆಲಮಂಗಲದಲ್ಲಿ ಬಿಜೆಪಿ-ಜೆಡಿಎಸ್ ಭಾನುವಾರ ಹಮ್ಮಿಕೊಂಡಿದ್ದ 'ಮೈತ್ರಿ ಹಬ್ಬ'ದಲ್ಲಿ 'ಮದ್ಯ ಸಮಾರಾಧನೆ' ನಡೆದು ಜನರು ನಶೆಯಲ್ಲಿ ತೇಲಾಡಿದರೆಂಬ ಸುದ್ದಿ (ಪ್ರ.ವಾ., ಜುಲೈ 8) ಓದಿ ಆಘಾತವಾಯಿತು. ಅದಕ್ಕೂ ಮಿಗಿಲಾಗಿ, ಆ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಸಂಸದ ಸುಧಾಕರ್ ಮತ್ತು ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು 'ಕಾರ್ಯಕ್ರಮದ ನಂತರ ಅಲ್ಲೇನು ನಡೆಯಿತೆಂಬುದು ಗೊತ್ತಿಲ್ಲ' ಎಂದಿರುವುದು ಪಲಾಯನವಾದ. ಅವರಿಬ್ಬರ ಮಾತುಗಳು ನೈತಿಕವಾಗಿ ಬೇಜವಾಬ್ದಾರಿಯವು.

ಬಿಜೆಪಿಯವರು ಮಾತುಮಾತಿಗೂ ದೇವರು, ಸನಾತನಧರ್ಮ ಎನ್ನುವುದಿದೆ. ಅವರು ಈಗ ತಮ್ಮ ಹೊಸ 'ರಾಜಕೀಯ ಬೀಗರಾದ' ಜೆಡಿಎಸ್ ಜೊತೆಗೂಡಿ ಸಾರ್ವಜನಿಕವಾಗಿ ಇಂಥದ್ದೊಂದು 'ಮದ್ಯ ಸಮಾರಾಧನೆ'ಯನ್ನು ಬೌನ್ಸರ್‌ಗಳನ್ನು ಇಟ್ಟುಕೊಂಡು ನಡೆಸಿರುವುದು ನೈತಿಕ ಅಧಃಪತನಕ್ಕೆ ಸಾಕ್ಷಿ. ಈ ಕೆಟ್ಟ ಕಾರ್ಯಕ್ರಮವನ್ನು ಆಯೋಜಿಸಿದ್ದಕ್ಕಾಗಿ ಬಿಜೆಪಿ ಮುಖಂಡರು ರಾಜ್ಯದ ಜನರ ಕ್ಷಮೆ ಕೇಳಬೇಕು.

ಆರ್.ಎಸ್. ಅಯ್ಯರ್, ತುಮಕೂರು

ಪ್ರಜಾತಂತ್ರದ ಮತ್ತೊಂದು ಮಜಲು!

ನೆಲಮಂಗಲದಲ್ಲಿ ಬಿಜೆಪಿ-ಜೆಡಿಎಸ್ 'ಮೈತ್ರಿ ಹಬ್ಬ'ದ ಕಾರ್ಯಕ್ರಮದಲ್ಲಿ ಮದ್ಯ ಸಮಾರಾಧನೆ ಸುದ್ದಿ ಓದಿ ಸಖೇದಾಶ್ಚರ್ಯವಾಯಿತು. ಚುನಾವಣೆ ಪೂರ್ವದಲ್ಲಿ ನಡೆಯುತ್ತಿದ್ದ ಇಂಥ ಸಮಾರಾಧನೆಗಳು ಈಗ ಚುನಾವಣೆಯ ನಂತರಕ್ಕೂ ವಿಸ್ತರಣೆ ಕಂಡಿರುವುದು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆ ಒಂದು ಮಜಲು ಮೇಲಕ್ಕೆ ಏರಿರುವುದನ್ನು ತೋರಿಸುತ್ತಿದೆ ಎಂದು ಭಾವಿಸೋಣವೇ?!

ಅದೂ ಪೊಲೀಸರ ಸಮಕ್ಷಮದಲ್ಲಿ, ಅವರ ಸಹಾಯ, ಸಹಕಾರದೊಂದಿಗೆ ಇದು ನಡೆದಿದೆ. ಸಮಾರಂಭದಲ್ಲಿ ಎರಡು ಟ್ರಕ್ ಮದ್ಯ ತ್ವರಿತವಾಗಿ ವಿಲೇವಾರಿಯಾಗಿದೆ. ಇಂತಹ 'ಮೈತ್ರಿ ಸಮಾವೇಶ'ಗಳು ರಾಜ್ಯದ ಅಲ್ಲಲ್ಲಿ ನಡೆದಲ್ಲಿ ಅಬಕಾರಿ ಇಲಾಖೆಗೆ ತನ್ನ ವಾರ್ಷಿಕ ವರಮಾನ ಸಂಗ್ರಹದ ಗುರಿ ತಲುಪಲು ತುಂಬಾ ಸಹಾಯವಾಗಬಹುದು! ಅಭಿವೃದ್ಧಿ ಕಾರ್ಯಗಳಿಗೆ ಸಂಪನ್ಮೂಲ ಒಗ್ಗೂಡಿಸಲು ಹೆಣಗಾಡುತ್ತಿರುವ ರಾಜ್ಯ ಸರ್ಕಾರಕ್ಕೂ ಇದೊಂದು ಒಳ್ಳೆಯ ಬೆಳವಣಿಗೆಯಾಗಿ ಕಾಣಬಹುದು! ಇದು ರಾಷ್ಟ್ರ ಮಟ್ಟದಲ್ಲಿ ವಿಸ್ತರಣೆ ಆದರೆ ನಮ್ಮ ದೇಶವು ಜಗತ್ತಿನ ತೃತೀಯ ಆರ್ಥಿಕ ಶಕ್ತಿಯಾಗಿ ತ್ವರಿತವಾಗಿ ಹೊರಹೊಮ್ಮಲೂ ಸಹಾಯವಾಗಬಹುದು!

ವೆಂಕಟೇಶ ಮಾಚಕನೂರ, ಧಾರವಾಡ

ರಿಷಿ ಸುನಕ್ ನಡೆ ಮಾದರಿಯಾಗಲಿ

ಬ್ರಿಟನ್ನಿನ ಚುನಾವಣೆಯಲ್ಲಿ ಕನ್ಸರ್ವೇಟಿವ್ ಪಾರ್ಟಿಯ ಪ್ರಧಾನಿ ಅಭ್ಯರ್ಥಿ ರಿಷಿ ಸುನಕ್ ಸೋತ ಬಳಿಕ ತಮ್ಮ ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿ 'ಜನರು ಬ್ರಿಟನ್ ದೇಶದ ಅಭಿವೃದ್ಧಿಗಾಗಿ ಹೊಸ ಸರ್ಕಾರವನ್ನು ಆಯ್ಕೆ ಮಾಡಿರುವುದನ್ನು ಸ್ವಾಗತಿಸುತ್ತೇನೆ. ಅಧಿಕಾರಾವಧಿಯಲ್ಲಿ ಜನರ ನಿರೀಕ್ಷೆಯನ್ನು ತಲುಪಲು ಸಾಧ್ಯವಾಗದ್ದಕ್ಕೆ ಕ್ಷಮೆ ಕೋರುತ್ತೇನೆ' ಎಂದರು. ಜನರು ಲೇಬರ್ ಪಾರ್ಟಿಯ ಕೀರ್ ಸ್ಟಾರ್ಮರ್ ಅವರನ್ನು ಪ್ರಧಾನಿಯನ್ನಾಗಿ ಆಯ್ಕೆ ಮಾಡಿದ್ದಕ್ಕೆ ಇದೇ ವೇಳೆ ಶುಭ ಕೋರಿದರು. ತಮ್ಮ ಪಕ್ಷ ಸೋತ ನೋವಿನಲ್ಲಿ ಗೆದ್ದವರನ್ನು ಜರಿಯುವುದು, ಸೋತ ಇತರ ಅಭ್ಯರ್ಥಿಗಳ ಲೇವಡಿ, ಚುನಾವಣೆಯಲ್ಲಿ ಹಣ, ಜಾತಿ, ಧರ್ಮ, ಕುಟುಂಬ ರಾಜಕಾರಣ ಮೇಲುಗೈಯಾಗಿದೆ ಎಂಬ ಆರೋಪಗಳನ್ನು ಮಾಡಲಿಲ್ಲ. ಸುನಕ್ ಅವರ ಈ ನಡೆ ಭಾರತದ ರಾಜಕಾರಣಿಗಳಿಗೆ ಒಂದು ಮಾದರಿಯಾಗಬೇಕಿದೆ.

ಸುರೇಂದ್ರ ಪೈ, ಭಟ್ಕಳ

ಜಾತಿಯ ಹೆಸರೇ 'ಸಾಮಾಜಿಕ ಬಂಡವಾಳ'

ಮೋದೂರು ಮಹೇಶಾರಾಧ್ಯ ಅವರು ನನ್ನ ಲೇಖನಕ್ಕೆ ಪ್ರತಿಕ್ರಿಯೆ ಬರೆದಿದ್ದಾರೆ (ಪ್ರ.ವಾ. ಜುಲೈ 6). ಅವರ ಪ್ರಕಾರ 'ಶುದ್ಧ ಸಸ್ಯಹಾರಿ' ಪದ ಶುದ್ಧ ಜಾತಿಸೂಚಕವಲ್ಲ. ಬದಲಾಗಿ, ಅದು ಸಸ್ಯಾಹಾರ ಮಾತ್ರ ಸಿಗುತ್ತದೆ ಎನ್ನುವುದರ ಸೂಚಕ. ಇಂದು ಆಹಾರ ಪದ್ಧತಿ ಮತ್ತು ಜಾತಿ ವಿಂಗಡಣೆಯ ಕಾಲ ಮುಗಿದುಹೋಗಿದೆ ಎಂದೂ ಅವರು ಹೇಳಿದ್ದಾರೆ.

ಆದರೆ ವಾಸ್ತವ ಬೇರೆಯೇ ಇದೆ. ಉದಾಹರಣೆಗೆ, ಪ್ರಬಲ ಜಾತಿಗಳ ಹೆಸರು ಹೊತ್ತ ನೂರಾರು ಹೋಟೆಲುಗಳನ್ನು ನಾವು ಎಲ್ಲಾ ಕಡೆ ಕಾಣಬಹುದು. ಆ ಹೆಸರಿನ ಕಾರಣಕ್ಕೆ ಅವುಗಳಿಗೆ ಬ್ರ್ಯಾಂಡ್ ಮೌಲ್ಯ ಇರುತ್ತದೆ. ಇದರ ಅರ್ಥ ನಮ್ಮ ಸಮಾಜದಲ್ಲಿ ಕೆಲವು ಜಾತಿಗಳ ಹೆಸರು ಕೂಡ 'ಸಾಮಾಜಿಕ ಬಂಡವಾಳವಾಗಿ' ಕೆಲಸ ಮಾಡುತ್ತಿರುತ್ತದೆ ಎಂಬುದು. ಆದರೆ ತಳ ಸಮುದಾಯಗಳ ಹೆಸರು ಇಟ್ಟು ನಾವು ಹೋಟೆಲ್ ಉದ್ಯಮ ನಡೆಸಲು ಸಾಧ್ಯವಿದೆಯೇ? ಹಾಗೆ ನಡೆಸುತ್ತಿರುವ ಎಷ್ಟು ಉದಾಹರಣೆಗಳು ನಮ್ಮ ನಡುವೆ ಇವೆ? ಈ ಪ್ರಶ್ನೆ ಕೇಳಿಕೊಂಡರೆ ವಾಸ್ತವ ಅರಿವಿಗೆ ಬರುತ್ತದೆ.

ನಾವು ಬಳಸುವ ಪ್ರತಿ ಪದವೂ ಸಾಮಾಜಿಕ ವಾಸ್ತವದ ಪ್ರತಿಬಿಂಬವಷ್ಟೇ ಆಗಿರುವುದಿಲ್ಲ; ಅದು ಒಪ್ಪಿತ ಸಾಮಾಜಿಕ ವಾಸ್ತವವನ್ನು ಮರು-ನಿರ್ಮಿಸುವ, ಸಮರ್ಥಿಸುವ ಕೆಲಸವನ್ನೂ ಮಾಡುತ್ತಿರುತ್ತದೆ. ಭಾರತದಲ್ಲಿ ಜಾತಿಯು 'ಸಾಮಾಜಿಕ ವಾಸ್ತವ'. ಅದು ನಿಂತಿರುವುದೇ ಶುದ್ಧ-ಅಶುದ್ಧವೆಂಬ ತಾತ್ವಿಕತೆಯ ಮೇಲೆ. ಹಾಗಾಗಿ ನಾವು ಶುದ್ಧ ಎಂಬ ಪದವನ್ನು ಯಾವ ಸ್ವರೂಪದಲ್ಲಿ ಬಳಸಿದರೂ ಅದು ಜಾತಿ ಎಂಬ ಸಾಮಾಜಿಕ ವಾಸ್ತವವನ್ನು ಗಟ್ಟಿಗೊಳಿಸುತ್ತಿರುತ್ತದೆ. ಹಾಗಾಗಿ ಈ ಕಾಲಕ್ಕೆ ಪ್ರಜ್ಞಾಪೂರ್ವಕವಾಗಿ ಈ ಮಾದರಿಯ ಪದಗಳ ಬಳಕೆ ಕಡಿಮೆ ಮಾಡಬೇಕು. ಉದಾಹರಣೆಗೆ. ಶುದ್ಧ ಸಸ್ಯಾಹಾರ ಎನ್ನುವ ಬದಲು 'ಶುಚಿಯಾದ ಸಸ್ಯಾಹಾರ' ಎಂದು ಬಳಸಬಹುದು ಅನ್ನಿಸುತ್ತದೆ. ಪೆರಿಯಾರ್ ನಡೆಸಿದ ಕ್ರಾಂತಿಯ ಕಾರಣಕ್ಕೆ ಸಾವಿರಾರು ಜನ ಜಾತಿಸೂಚಕ ಹೆಸರುಗಳ ಬಳಕೆ ಬಿಟ್ಟ ಉದಾಹರಣೆ ನಮ್ಮ ಮುಂದಿದೆ.

ರಾಜ್ಯಸಭೆಯ ಸಭಾಪತಿಯ ಮಾತನ್ನು ಜಾತಿ ನೆಲೆಯಲ್ಲಿ ನೋಡಬಾರದು ಎಂದು ಮಹೇಶಾರಾಧ್ಯ ಹೇಳಿದ್ದಾರೆ. ಆದರೆ ತಳಸಮುದಾಯದಿಂದ ಬಂದ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಆ ಮಾತು ವರ್ಣವ್ಯವಸ್ಥೆಯ ಅಲೋಚನಾ ಕ್ರಮದಿಂದ ಮಾತ್ರ ಹುಟ್ಟಿರಲು ಸಾಧ್ಯ ಅನ್ನಿಸಿರುವುದರಿಂದ ಅವರ ಭಾವವನ್ನು ಗುರುತಿಸುವಷ್ಟು ಸೂಕ್ಷ್ಮತೆಯನ್ನೂ ನಾವು ಹೊಂದಬೇಕಿದೆ. 'ನೊಂದವರ ನೋವ ನೋಯದವರೆತ್ತ ಬಲ್ಲರು' ಎಂಬ ಅಕ್ಕಮಹಾದೇವಿ ಅವರ ವಚನದ ಮಾತು ಮತ್ತೆ ನೆನಪಾಗುತ್ತಿದೆ.

ಕಿರಣ್ ಎಂ. ಗಾಜನೂರು, ಕಲಬುರಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

‘ದೇವರ ನಾಡ’ಲ್ಲಿ ಆತಂಕ ತಂದ ‘ಮಿದುಳು ತಿನ್ನುವ ಅಮೀಬಾ’



‘ಮಿದುಳು ತಿನ್ನುವ ಅಮೀಬಾ’ ಸೋಂಕು ಎಂದು ಆಡು ಮಾತಿನಲ್ಲಿ ಕರೆಯಲಾಗುವ ಅಮೀಬಿಕ್ ಮೆನಿಂಗೊಎನ್ಸೆಫಲೈಟಿಸ್ ಎಂಬ ಕಾಯಿಲೆ ನೆರೆಯ ಕೇರಳ ರಾಜ್ಯದಲ್ಲಿ ಆತಂಕ ಸೃಷ್ಟಿಸಿದೆ. ಎರಡು ತಿಂಗಳ ಅವಧಿಯಲ್ಲಿ ನಾಲ್ಕು ಪ್ರಕರಣಗಳು ದೃಢಪಟ್ಟಿದ್ದು, ಮೂವರು ಮೃತಪಟ್ಟಿದ್ದಾರೆ. ಬಲು ಅಪರೂಪವಾದ ಈ ಕಾಯಿಲೆಗೆ ತುತ್ತಾದ ವ್ಯಕ್ತಿ ಬದುಕುಳಿಯುವ ಸಾಧ್ಯತೆ ತುಂಬಾ ಕಡಿಮೆ. ಈ ಸೋಂಕು ಏನು? ಹೇಗೆ ಬರುತ್ತದೆ? ಜಾಗತಿಕ ಸ್ಥಿತಿ ಗತಿ ಏನು? ಅದರಿಂದ ಪಾರಾಗುವುದು ಹೇಗೆ ಮತ್ತಿತರ ವಿಚಾರಗಳನ್ನು ಇಲ್ಲಿ ಚರ್ಚಿಸಲಾಗಿದೆ...



ಮುನ್ನೆಚ್ಚರಿಕೆಗಳೇನು?

- ಕಲುಷಿತ ಕೆರೆ, ಕುಂಟೆ, ನದಿಗಳಲ್ಲಿ ಸ್ನಾನ ಮಾಡಬಾರದು
- ಮಲಿನವಾಗಿರುವ ನೀರಿನಲ್ಲಿ ಈಜಬಾರದು
- ನೀರಿನ ಥೀಮ್ ಪಾರ್ಕ್ ಮತ್ತು ಈಜು ಕೊಳಗಳನ್ನು ಕ್ಲೋರಿನ್ ಬಳಸಿ ಶುಚಿಗೊಳಿಸುತ್ತಿರಬೇಕು
- ಈಜಾಡುವ ಮಕ್ಕಳು ಮೂಗಿಗೆ ಕ್ಲಿಪ್ ಬಳಸುವುದು ಉತ್ತಮ
- ಮೂಗಿನ ಹೊಳ್ಳೆಗಳನ್ನು ಸ್ವಚ್ಛಗೊಳಿಸಲು ಕುದಿಸಿ ಆರಿಸಿದ ನೀರು ಬಳಕೆ

ಮಕ್ಕಳಲ್ಲಿ ಜಾಸ್ತಿ



ಈ ಕಾಯಿಲೆ ಮಕ್ಕಳಲ್ಲಿ ಹೆಚ್ಚು ಕಂಡು ಬರುತ್ತದೆ. ಅದರಲ್ಲೂ 10ರಿಂದ 18 ವರ್ಷದೊಳಗಿನ ಮಕ್ಕಳಲ್ಲಿ ಹೆಚ್ಚು ದೃಢಪಟ್ಟಿದೆ. ಆದರೆ, 5 ತಿಂಗಳ ಮಗುವಿನಿಂದ ಹಿಡಿದು (ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 20 ವರ್ಷಗಳ ಹಿಂದೆ ವರದಿಯಾಗಿದೆ) ವೃದ್ಧರವರೆಗೂ ಇದು ಕಾಡಬಹುದು.

ಈ ಸೋಂಕು ಸಾಂಕ್ರಾಮಿಕವಲ್ಲ. ಸೋಂಕಿತ ವ್ಯಕ್ತಿಯ ಸಂಪರ್ಕಕ್ಕೆ ಬರುವುದರಿಂದ ಹರಡುವುದಿಲ್ಲ. ಅಮೀಬಾ ಇರುವ ನೀರನ್ನು ಕುಡಿಯುವುದರಿಂದಲೂ ಹರಡುವುದಿಲ್ಲ

ಪ್ರಜಾವಾಣಿ ವಾರ್ತೆ

ಎರಡು ತಿಂಗಳ ಅವಧಿಯಲ್ಲಿ ಅಪರೂಪವಾದ ಮತ್ತು ಪ್ರಾಣಕ್ಕೆ ಎರವಾಗುವ ‘ಮಿದುಳು ತಿನ್ನುವ ಅಮೀಬಾ’ ಸೋಂಕಿಗೆ ಕೇರಳದಲ್ಲಿ ಮೂವರು ಮಕ್ಕಳು ಬಲಿಯಾಗಿದ್ದಾರೆ. ಇದೇ ಸೋಂಕಿನಿಂದ ಬಳಲುತ್ತಿರುವ ಮತ್ತೊಬ್ಬ ಬಾಲಕ ಕೋಯಿಕ್ಕೋಡ್‌ನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ಈ ಕಾಯಿಲೆಯ ವೈಜ್ಞಾನಿಕ ಹೆಸರು ಪ್ರೈಮರಿ ಅಮೀಬಿಕ್ ಮೆನಿಂಗೊಎನ್ಸೆಫಲೈಟಿಸ್ (Primary Amoebic meningoencephalitis-PAM). ನೆಗ್ಲೇರಿಯಾ ಫೌಲೆರಿ (Naegleria fowleri) ಎಂಬ ಅಮೀಬಾದಿಂದ (ಏಕಕೋಶ ಜೀವಿ) ಬರುವ ಈ ಕಾಯಿಲೆಯನ್ನು ಗೆದ್ದವರ ಸಂಖ್ಯೆ ಕ್ಷೀಣ.

ಕೇರಳದಲ್ಲಿ ಈ ಸೋಂಕು ಹೊಸದಲ್ಲ. ಹಿಂದೆಯೂ ವರದಿಯಾಗಿವೆ. ಆದರೆ, ಕಡಿಮೆ ಅವಧಿಯಲ್ಲಿ ಹೆಚ್ಚು ಪ್ರಕರಣಗಳು ದೃಢಪಟ್ಟಿರಲಿಲ್ಲ.

ಮೇ 21ರಂದು ಮಲಪ್ಪುರಂ ಜಿಲ್ಲೆಯಲ್ಲಿ ಐದು ವರ್ಷದ ಬಾಲಕಿ ಈ ಸೋಂಕಿನಿಂದಾಗಿ ಮೃತಪಟ್ಟಿದ್ದಳು. ಜೂನ್ 25ರಂದು ಕಣ್ಣೂರಿನಲ್ಲಿ 13 ವರ್ಷದ ಬಾಲಕಿ ಕೊನೆಯುಸಿರು ಎಳೆದಿದ್ದಳು. ಜುಲೈ 3ರಂದು ಕೋಯಿಕ್ಕೋಡ್‌ನಲ್ಲಿ 14 ವರ್ಷದ ಬಾಲಕ ಸೋಂಕಿಗೆ ಬಲಿಯಾಗಿದ್ದ.

ಕೋಯಿಕ್ಕೋಡ್ ಜಿಲ್ಲೆಯ ಪಯ್ಯೋಳಿಯ 14 ವರ್ಷದ ಬಾಲಕನಿಗೆ ಸೋಂಕು ತಗುಲಿದ್ದು, ಜುಲೈ 1ರಂದು ಆಸ್ಪತ್ರೆಗೆ ದಾಖಲಾಗಿದ್ದಾನೆ. ಆತನ ಆರೋಗ್ಯ ಸ್ಥಿರವಾಗಿದೆ ಎಂದು ವೈದ್ಯರು ಮಾಹಿತಿ ನೀಡಿದ್ದಾರೆ.

ನಾಲ್ಕು ಪ್ರಕರಣಗಳು ವರದಿಯಾಗುತ್ತಲೇ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರು ಎಲ್ಲ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆಯನ್ನೂ ನೀಡಿದ್ದಾರೆ.

ಕೇರಳದೊಂದಿಗೆ ಗಡಿ ಹಂಚಿಕೊಂಡಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆರೋಗ್ಯ ಇಲಾಖೆ ಮುನ್ನೆಚ್ಚರಿಕೆ ವಹಿಸಿದೆ.

ಏನಿದು ‘ಮಿದುಳು ತಿನ್ನುವ ಅಮೀಬಾ’ ಸೋಂಕು?

ಮಿದುಳಿಗೆ ಹಾನಿ ಮಾಡುವಂತಹ ನೆಗ್ಲೇರಿಯಾ ಫೌಲೆರಿ ಎನ್ನುವ ಹೆಸರಿನ ಪರಾವಲಂಬಿ ಏಕಕೋಶ ಜೀವಿಯಿಂದ ಬರುವ ಸೋಂಕು. ಇದು ಸಾಮಾನ್ಯವಾಗಿ ಕಲುಷಿತಗೊಂಡ ಕೆರೆ, ಕುಂಟೆ, ನದಿಗಳ ಬೆಚ್ಚನೆಯ ನೀರಿನಲ್ಲಿ ಅಭಿವೃದ್ಧಿ ಹೊಂದುತ್ತದೆ. ನಿರ್ವಹಣೆಯ ಕೊರತೆ ಇರುವ ಈಜುಕೊಳಗಳಲ್ಲಿಯೂ ಕಂಡುಬರುತ್ತದೆ. ಈಜಾಡುವಾಗ, ಮೇಲಿನಿಂದ ನೀರಿನೊಳಗೆ ಧುಮುಕಿದಾಗ ಮತ್ತು ಇತರ ಸಂದರ್ಭಗಳಲ್ಲಿ ಮೂಗಿನ ಮೂಲಕ ಮನುಷ್ಯನ ದೇಹ ಪ್ರವೇಶಿಸುವ ಈ ಜೀವಿ ಮಿದುಳು ಸೇರಿ ಗಂಭೀರ ಹಾಗೂ ಪ್ರಾಣಕ್ಕೆ ಕುತ್ತು ತರುವಂತಹ ಸೋಂಕಿಗೆ ಕಾರಣವಾಗುತ್ತದೆ. ಮಿದುಳಿನ ಜೀವಕೋಶಗಳಿಗೆ ಹಾನಿ ಮಾಡಿ, ಮಿದುಳು ಮತ್ತು ಬೆನ್ನುಹುರಿಯ ಸುತ್ತಲಿನ ಪೊರೆಗಳಲ್ಲಿನ ಉರಿಯೂತ ಮತ್ತು ಮಿದುಳಿನ ಉರಿಯೂತಕ್ಕೆ ಕಾರಣವಾಗುತ್ತದೆ.

ಸೋಂಕಿತರಾದವರ ಪೈಕಿ ಶೇ 97 ಮಂದಿ ಜೀವ ಕಳೆದುಕೊಂಡಿದ್ದಾರೆ ಎಂದು ಇದುವರೆಗಿನ ಅಂಕಿ ಅಂಶಗಳು ಹೇಳುತ್ತವೆ. ಸಾಮಾನ್ಯವಾಗಿ, ಸೋಂಕು ಕಾಣಿಸಿಕೊಂಡ ನಂತರದ 18 ದಿನಗಳ ಒಳಗೆ ಸಾವು ಸಂಭವಿಸುತ್ತಿರುವುದು ಇದುವರೆಗಿನ ಪ್ರಕರಣಗಳ ಸಾಮಾನ್ಯ ಲಕ್ಷಣವಾಗಿದೆ.

ದೇಹದಲ್ಲಿ ಸೋಂಕು ಅತ್ಯಂತ ವೇಗವಾಗಿ ವ್ಯಾಪಿಸುವ ಮೂಲಕ ನರಗಳ ಮೇಲೆ ಗಂಭೀರ ಪರಿಣಾಮಗಳನ್ನು ಉಂಟುಮಾಡುತ್ತದೆ. ಸೋಂಕನ್ನು ಆರಂಭಿಕ ಹಂತದಲ್ಲಿಯೇ ಪತ್ತೆ ಮಾಡಿದರೆ, ಸೋಂಕಿತನ ಜೀವ ಉಳಿಸಬಹುದು.

ರೋಗ ಲಕ್ಷಣ

ವೈರಲ್ ಜ್ವರದ ಲಕ್ಷಣಗಳು

ಜ್ವರ, ತಲೆ ನೋವು, ವಾಂತಿ, ಸುಸ್ತು, ಕುತ್ತಿಗೆ ನೋವು

ನರಸಂಬಂಧಿ ಲಕ್ಷಣಗಳು

ತೀವ್ರ ತಲೆನೋವು, ಏಕಾಗ್ರತೆಯ ಕೊರತೆ, ಮಾನಸಿಕ ಅಸ್ಥಿರತೆ, ಗೊಂದಲ, ಭ್ರಮಾಧೀನ ಮನಸ್ಥಿತಿ, ಕೋಮಾಗೆ ಜಾರುವುದು

ಕೇರಳದಲ್ಲೇ ಹೆಚ್ಚು ಪ್ರಕರಣ

ಕೇರಳದಲ್ಲಿ ಕಳೆದ ವರ್ಷವೂ ಈ ಕಾಯಿಲೆಗೆ 15 ವರ್ಷದ ಬಾಲಕ (ಅಳಪ್ಪುಳ ಜಿಲ್ಲೆ) ಮೃತಪಟ್ಟಿದ್ದ. 2016ರಲ್ಲಿ ಅಳಪ್ಪುಳ ಜಿಲ್ಲೆಯಲ್ಲಿ. 2019 ಮತ್ತು 2020ರಲ್ಲಿ ಮಲಪ್ಪುರಂ ಜಿಲ್ಲೆಯಲ್ಲಿ ಮತ್ತು 2020ರಲ್ಲಿ ಕೋಯಿಕ್ಕೋಡ್ ಮತ್ತು 2022ರಲ್ಲಿ ತ್ರಿಶೂರ್ ಜಿಲ್ಲೆಗಳಲ್ಲಿ ಪ್ರಕರಣ ದೃಢಪಟ್ಟಿತ್ತು.

ಕೇರಳದ ಪರಿಸರ ಮತ್ತು ವಾತಾವರಣವು ನೆಗ್ಲೇರಿಯಾ ಫೌಲೆರಿಯ ಬೆಳವಣಿಗೆಗೆ ಪೂರಕವಾಗಿರುವುದರಿಂದ ಈ ಕಾಯಿಲೆ ಹೆಚ್ಚು ವರದಿಯಾಗುತ್ತದೆ ಎಂದು ಹೇಳುತ್ತಾರೆ ತಜ್ಞರು. ರಾಜ್ಯದಲ್ಲಿರುವ ಹೆಚ್ಚು ಉಷ್ಣಾಂಶ ಮತ್ತು ತೇವಾಂಶದಿಂದ ಕೂಡಿದ ವಾತಾವರಣ ಅಮೀಬಾದ ಬೆಳವಣಿಗೆಗೆ ಹೇಳಿಮಾಡಿಸಿದಂತಿದೆ. ಮಳೆಗಾಲದಲ್ಲಿ ನದಿಗಳು, ಕೆರೆ, ಹಳ್ಳಗಳು ತುಂಬಿ ಹರಿಯುತ್ತವೆ. ಜನರು ನದಿ, ಕೆರೆ, ಹಳ್ಳಗಳಂತಹ ನೈಸರ್ಗಿಕ ಜಲಮೂಲಗಳನ್ನು ಸ್ನಾನ ಮಾಡಲು, ಬಟ್ಟೆ, ಪಾತ್ರೆ ತೊಳೆಯಲು ಸೇರಿದಂತೆ ಇನ್ನಿತರ ಸಾಂಪ್ರದಾಯಿಕ ಚಟುವಟಿಕೆಗಳಿಗೆ ಬಳಸುತ್ತಾರೆ. ಹೀಗಾಗಿ ಕಲುಷಿತಗೊಂಡ ನೀರಿಗೆ ಜನರು ಹೆಚ್ಚು ತೆರೆದುಕೊಳ್ಳುತ್ತಾರೆ. ಇದು ಪ್ರಾಣ ಘಾತುಕವಾದ ಕಾಯಿಲೆಗೆ ಕಾರಣವಾಗುತ್ತದೆ.

ಕೇರಳ ಬಿಟ್ಟರೆ, ಭಾರತದಲ್ಲಿ ಪಶ್ಚಿಮ ಬಂಗಾಳದಲ್ಲಿ ಈ ಕಾಯಿಲೆ ಹೆಚ್ಚು ವರದಿಯಾಗಿದೆ. ಈ ವರ್ಷಾರಂಭದಲ್ಲಿ ಕೋಲ್ಕತ್ತದಲ್ಲಿ 40 ವರ್ಷದ ವ್ಯಕ್ತಿಯೊಬ್ಬರಲ್ಲಿ ದೃಢಪಟ್ಟಿತ್ತು. ಕಳೆದ ವರ್ಷವೂ ಒಬ್ಬ ಬಾಲಕ ಮೃತಪಟ್ಟಿದ್ದ. 2015ರಲ್ಲಿ ಬಾಲಕನೊಬ್ಬ ಸೋಂಕಿನಿಂದಾಗಿ ಪ್ರಾಣ ಕಳೆದುಕೊಂಡಿದ್ದ. 2016ರಲ್ಲಿ ಸೋಂಕಿಗೆ ತುತ್ತಾಗಿದ್ದ 14 ವರ್ಷದ ಬಾಲಕ ಗುಣಮುಖನಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಗಿದ್ದ.

ತಾಪಮಾನ ಏರಿಕೆಯೂ ಕಾರಣ

ಜಗತ್ತಿನ ಹಲವೆಡೆ ‘ಮಿದುಳು ತಿನ್ನುವ ಅಮೀಬಾ’ ಸೋಂಕು ಕಾಣಿಸಿಕೊಂಡಿದೆ. ಮುಖ್ಯವಾಗಿ, ತಾಪಮಾನದ ಏರಿಕೆ, ನಿಂತ ಹಾಗೂ ಕಲುಷಿತ ನೀರು, ಜಲಮೂಲಗಳು ಕಲುಷಿತಗೊಳ್ಳುತ್ತಿರುವುದು ಅದಕ್ಕೆ ಮುಖ್ಯ ಕಾರಣ. ಈ ಅಮೀಬಾ ಬೆಚ್ಚಗಿನ ನೀರಿನಲ್ಲಿ ಹೆಚ್ಚು ಕ್ರಿಯಾಶೀಲ ಆಗಿರುತ್ತದೆ. 40ರಿಂದ 45 ಡಿಗ್ರಿ ಸೆಲ್ಸಿಯಸ್‌ನಷ್ಟು ಬಿಸಿ ಇರುವ ನೀರಿನಲ್ಲೂ ಇದು ಬದುಕಬಲ್ಲದು. ಉಪ್ಪು ನೀರಿನಲ್ಲಿ ಇದು ಬದುಕುವುದಿಲ್ಲ.

ಆಸ್ಟ್ರೇಲಿಯಾದಲ್ಲಿ ಪತ್ತೆ

ಈ ಸೋಂಕು ಮೊದಲು ಪತ್ತೆಯಾಗಿದ್ದು ಆಸ್ಟ್ರೇಲಿಯಾದಲ್ಲಿ. ಅಡಿಲೇಡ್‌ನಲ್ಲಿ 1961–65ರ ಅವಧಿಯಲ್ಲಿ ನಾಲ್ವರು ಈ ಕಾಯಿಲೆಯಿಂದ ಮೃತಪಟ್ಟಿದ್ದರು. ಫೌಲರ್ ಮತ್ತು ಕಾರ್ಟರ್ ಎಂಬುವವರು ಈ ಕಾಯಿಲೆಗೆ ಕಾರಣವಾಗುವ ನೆಗ್ಲೇರಿಯಾ ಫೌಲೆರಿ ಅಮೀಬಾವನ್ನು ಗುರುತಿಸಿದ್ದರು.

ರೋಗ ಪತ್ತೆ ಹೇಗೆ?



3ರಿಂದ 7 ದಿನಗಳಲ್ಲಿ ಪಕ್ವ ಸ್ಥಿತಿ ಮುಟ್ಟುತ್ತದೆ

ಸೋಂಕಿತನ ಸೂಕ್ಷ್ಮ ಪರಿಶೀಲನೆ, ಸೆರೆಬ್ರೊಸ್ಪೈನಲ್ ಫ್ಲೂಯಿಡ್ ಅನಾಲಿಸಿಸ್ (ಸಿಎಸ್‌ಎಫ್) (ಬೆನ್ನುಹುರಿಯಲ್ಲಿನ ದ್ರವದ ಪರೀಕ್ಷೆ), ಪಾಲಿಮರೇಸ್ ಚೈನ್ ರಿಯಾಕ್ಷನ್ (ಪಿಸಿಆರ್) ಮುಂತಾದ ವಿಧಾನಗಳ ಮೂಲಕ ರೋಗ ಪತ್ತೆ ಮಾಡಲಾಗುತ್ತದೆ.

ಜಾಗತಿಕ ಚಿತ್ರಣ

ಅಮೆರಿಕದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್‌ನ ನ್ಯಾಷನಲ್ ಲೈಬ್ರೆರಿ ಆಫ್ ಮೆಡಿಸಿನ್ ಪೋರ್ಟಲ್‌ನಲ್ಲಿ ಈ ಕಾಯಿಲೆಗೆ ಸಂಬಂಧಿಸಿದಂತೆ ಕೆಲವು ಅಧ್ಯಯನ ವರದಿಗಳು ಪ್ರಕಟವಾಗಿವೆ. ಈ ಸೋಂಕಿನ ಕುರಿತು ಜಾಗತಿಕ ಚಿತ್ರಣದ ಬಗ್ಗೆ ವಿಶ್ಲೇಷಣೆಯೂ ಇದೆ. ಅದರಲ್ಲಿ 2018ರವರೆಗಿನ ಅಂಕಿ ಅಂಶಗಳನ್ನು ತೆಗೆದುಕೊಳ್ಳಲಾಗಿದೆ. 2020ರಲ್ಲಿ ಈ ವರದಿ ಪ್ರಕಟವಾಗಿದೆ.

ಅದರ ಪ್ರಕಾರ, ಅಂಟಾರ್ಕ್ಟಿಕಾ ಬಿಟ್ಟು ಉಳಿದ ಖಂಡಗಳ 33 ರಾಷ್ಟ್ರಗಳಲ್ಲಿ ಈ ಕಾಯಿಲೆ ಕಾಣಿಸಿಕೊಂಡಿದೆ. ಅಮೆರಿಕದಲ್ಲಿ ಹೆಚ್ಚು ಪ್ರಕರಣಗಳು ವರದಿಯಾಗಿವೆ. ಆಸ್ಟ್ರೇಲಿಯಾ, ಪಾಕಿಸ್ತಾನ, ಭಾರತದಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣ ದೃಢಪಟ್ಟಿವೆ.

381 ವರದಿಯಲ್ಲಿ ಉಲ್ಲೇಖಿಸಲಾದ ಪ್ರಕರಣಗಳು

182 ದೃಢಪಟ್ಟ ಪ್ರಕರಣಗಳು

89 ಸಂಭಾವ್ಯ ಪ್ರಕರಣಗಳು

110 ಶಂಕಿತ ಪ್ರಕರಣಗಳು



ಎಲ್ಲಿ, ಎಷ್ಟು?

156	ಅಮೆರಿಕ	33	ಮೆಕ್ಸಿಕೊ
41	ಪಾಕಿಸ್ತಾನ	26	ಭಾರತ

ಆಧಾರ: ಪಿಟಿಐ, ಅಮೆರಿಕದ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್‌ನ ನ್ಯಾಷನಲ್ ಲೈಬ್ರೆರಿ ಆಫ್ ಮೆಡಿಸಿನ್‌ನಲ್ಲಿ ಪ್ರಕಟವಾದ ಅಧ್ಯಯನ ವರದಿಗಳು, ಆಸ್ಟ್ರೇಲಿಯಾ ಆರೋಗ್ಯ ಇಲಾಖೆ

ಸಿನಿ ಬಿಟ್ಸ್



ಜುಲೈ 12ಕ್ಕೆ ರಣಗಲ್ ಮೊದಲ ತುಣುಕು

ಶಿವರಾಜ್‌ಕುಮಾರ್

ಇದೇ ಶುಕ್ರವಾರ (ಜುಲೈ 12) ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ಜನ್ಮದಿನ. ಅಂದು ‘ಭೈರತಿ ರಣಗಲ್’ ಸಿನಿಮಾದ ಮೊದಲ ತುಣುಕು ಬಿಡುಗಡೆಯಾಗಲಿದೆ.

ಇತ್ತೀಚೆಗಷ್ಟೇ ಚಿತ್ರದ ಚಿತ್ರೀಕರಣ ಪೂರ್ಣಗೊಂಡಿತ್ತು. ಗೀತಾ ಶಿವರಾಜ್‌ಕುಮಾರ್ ಹಾಗೂ ಶಿವರಾಜ್‌ಕುಮಾರ್ ಅವರ ಸಮ್ಮುಖದಲ್ಲಿ ಚಿತ್ರತಂಡ ಕುಂಬಳಕಾಯಿ ಒಡೆದಿತ್ತು. ‘ಮಫ್ತಿ’ ಚಿತ್ರದ ಪ್ರೀಕ್ವೆಲ್ ಆಗಿರುವ ‘ಭೈರತಿ ರಣಗಲ್’ ಸಿನಿಮಾದ ಆಡಿಯೊ ಹಕ್ಕುಗಳನ್ನು ಆನಂದ್ ಆಡಿಯೊ ಖರೀದಿಸಿದೆ. ಗೀತಾ ಶಿವರಾಜ್‌ಕುಮಾರ್ ಅವರು ತಮ್ಮ ‘ಗೀತಾ ಪಿಕ್ಚರ್ಸ್’ ಲಾಂಛನದಲ್ಲಿ ನಿರ್ಮಾಣ ಮಾಡಿರುವ ‘ಭೈರತಿ ರಣಗಲ್’ ಸಿನಿಮಾಗೆ ನರ್ತನ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

ರವಿ ಬಸ್ರೂರು ಅವರ ಸಂಗೀತ ನಿರ್ದೇಶನ, ನವೀನ್ ಕುಮಾರ್ ಐ ಛಾಯಾಚಿತ್ರಗ್ರಹಣ, ಗುಣ ಅವರ ಕಲಾನಿರ್ದೇಶನ, ಚೇತನ್ ಡಿಸೋಜಾ ಅವರ ಸಾಹಸ ನಿರ್ದೇಶನ ಚಿತ್ರಕ್ಕಿದೆ. ‘ಮಫ್ತಿ’ ಚಿತ್ರದಲ್ಲಿದ್ದ ‘ಭೈರತಿ ರಣಗಲ್’ ಪಾತ್ರದ ಹಿನ್ನೆಲೆ ಈ ಸಿನಿಮಾದಲ್ಲಿದ್ದು, ‘ಭೈರತಿ ರಣಗಲ್’ ಪಾತ್ರದ ಕಥೆ ಇದರಲ್ಲಿದೆ. ಲಾಯರ್ ಧಿರಿಸಿನಲ್ಲಿ ಶಿವರಾಜ್‌ಕುಮಾರ್ ಅವರ ಫಸ್ಟ್‌ಲುಕ್ ಈಗಾಗಲೇ ಬಿಡುಗಡೆಯಾಗಿದ್ದು, ಚಿತ್ರದ ಕಥೆಯ ಬಗ್ಗೆ ಸಣ್ಣ ಸುಳಿವು ನೀಡಿದೆ. ಚಿತ್ರದಲ್ಲಿ ರುಕ್ಮಿಣಿ ವಸಂತ್, ರಾಹುಲ್ ಬೋಸ್, ಅವಿನಾಶ್ , ದೇವರಾಜ್, ಮಧು ಗುರುಸ್ವಾಮಿ, ಛಾಯಾ ಸಿಂಗ್, ಬಾಬು ಹಿರಣ್ಣಯ್ಯ ಮುಂತಾದ ಕಲಾವಿದರು ನಟಿಸಿದ್ದಾರೆ.

ಬಿಗ್ ಬಜೆಟ್ ಚಿತ್ರ ‘ಕೃಷ್ಣಂ ಪ್ರಣಯ ಸಖಿ’



ಗಣೇಶ್

ಗಣೇಶ್ ನಟನೆಯ 41ನೇ ಸಿನಿಮಾ ‘ಕೃಷ್ಣಂ ಪ್ರಣಯ ಸಖಿ’ ಆಗಸ್ಟ್ 15ರಂದು ಬಿಡುಗಡೆಯಾಗುತ್ತಿದ್ದು, ಚಿತ್ರತಂಡ ಪ್ರಚಾರ ಆರಂಭಿಸಿದೆ. ಪ್ರಚಾರದ ಅಂಗವಾಗಿ ನಡೆಸಿದ ಸುದ್ದಿಗೋಷ್ಠಿಯಲ್ಲಿ ‘ಇದು ನನ್ನ ಈವರೆಗಿನ ವೃತ್ತಿ ಜೀವನದ ಬಿಗ್ ಬಜೆಟ್ ಸಿನಿಮಾ’ ಎಂದಿದ್ದಾರೆ ಗಣೇಶ್.

‘ದಂಡುಪಾಳ್ಯ’ ಚಿತ್ರದ ನಿರ್ದೇಶಕ ಶ್ರೀನಿವಾಸರಾಜು ಚಿತ್ರದ ಕಥೆ ಹೇಳಲು ಬರುತ್ತಿದ್ದಾರೆ ಎಂದಾಗ, ಅವರು ನನ್ನ ಜಾನರ್ ಬದಲಾಯಿಸುವ ಕಥೆ ಮಾಡಿರಬಹುದು ಅಂದುಕೊಂಡೆ. ಆದರೆ ಆರಂಭದಲ್ಲೇ ಅವರು ಎಂಟು ನಾಯಕಿಯರು ಸಿನಿಮಾದಲ್ಲಿದ್ದಾರೆ ಎಂದಾಗ ‘ಓ ಇದು ನನ್ನ ಜಾನರ್‌ನ ಚಿತ್ರ’ ಎಂದೆನಿಸಿತು. ‘ಕೃಷ್ಣಂ ಪ್ರಣಯ ಸಖಿ’ ಉತ್ತಮ ಕಥಾಹಂದರ ಹೊಂದಿರುವ ಚಿತ್ರ. ಕನ್ನಡ ಚಿತ್ರರಂಗದ ಹಿರಿಯ ನಟರೊಂದಿಗೆ ಈ ಚಿತ್ರದಲ್ಲಿ ನಟಿಸಿದ್ದು ಸಂತೋಷವಾಗಿದೆ. ಅದ್ದೂರಿಯಾಗಿ ಸಿನಿಮಾ ನಿರ್ಮಾಣವಾಗಿದೆ’ ಎಂದಿದ್ದಾರೆ ಗಣೇಶ್.

ತ್ರಿಶೂಲ್ ಎಂಟರ್‌ಟೇನ್ಮೆಂಟ್ ಲಾಂಛನದಲ್ಲಿ ಪ್ರಶಾಂತ್ ಜಿ. ರುದ್ರಪ್ಪ ಸಿನಿಮಾ ನಿರ್ಮಾಣ ಮಾಡಿದ್ದಾರೆ. ನಾಯಕಿಯರಾದ ಮಾಳವಿಕಾ ನಾಯರ್ ಹಾಗೂ ಶರಣ್ಯ ಶೆಟ್ಟಿ, ಶ್ರೀನಿವಾಸಮೂರ್ತಿ, ಸಾಧು ಕೋಕಿಲ, ರಂಗಾಯಣ ರಘು, ಶಿವಧ್ವಜ್, ಗಿರಿ ಮುಂತಾದವರು ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ಶರಣ್ಯ ಶೆಟ್ಟಿ


ಗುಂಡಣ್ಣ



ಒಳ್ಳೆಯತನ

ನುಡಿ ಬೆಳಗು





ಪಿ. ಚಂದ್ರಿಕಾ

ಓಶೋ ಅವರನ್ನು ಒಬ್ಬ ಕೇಳಿದ, ‘ಒಳ್ಳೆಯತನವನ್ನು ಕಂಡುಕೊಳ್ಳುವುದು ಹೇಗೆ? ಅದು ಮನುಷ್ಯನ ಮುಖದಿಂದ ಅಳೆಯಲಾಗುವುದಿಲ್ಲ. ಎಷ್ಟೋ ವೇಳೆ ಒಳ್ಳೆಯತನದ ಸೋಗಿನಿಂದ ಕೆಟ್ಟತನ ಮರೆಯಾಗಿರುತ್ತದೆ. ಇಂಥಾ ಅನುಭವಗಳೇ ಹೆಚ್ಚಿರುವಾಗ ಇದನ್ನು ಕಂಡುಕೊಳ್ಳುವುದು ಹೇಗೆ’ ಎಂದು.

ಓಶೋ ನಗುತ್ತಾ, ‘ಒಳ್ಳೆಯತನ ಕಾಣುವ ವಸ್ತು ಎನ್ನುವುದೆಂದು ನೀನು ನಿರ್ಧಾರ ಮಾಡಿದ್ದೀಯಾ?’ ಎಂದರು. ಅದಕ್ಕೆ ಪ್ರಶ್ನೆ ಕೇಳಿದವ, ‘ಕಾಣದೆ ನಾವು ಕಂಡುಕೊಳ್ಳುವುದು ಹೇಗೆ ಕಣ್ಣಿಗೆ ಕಾಣುವ ಸತ್ಯಗಳನ್ನು ತಾನೆ ನಾವು ನಂಬಬೇಕಿರುವುದು’ ಎಂದ. ಓಶೋಗೆ ಅವನ ಪ್ರಶ್ನೆಯಲ್ಲಿ ಮಹತ್ವದ್ದನ್ನು ಹುಡುಕುವ ತವಕ. ಕೇಳಿದರು, ‘ಹಾಗಾದರೆ ಎಲ್ಲವನ್ನು ಕಂಡೇ ನಿರ್ಧಾರ ಮಾಡುತ್ತೀಯಾ ಎನ್ನುವುದಾದರೆ ಕಾಣುವ ಮೊದಲಿನ ಪಯಣದ ಬಗ್ಗೆ ನೀನು ಎಂದೂ ಯೋಚಿಸಿಲ್ಲವೆ?’ ಎಂದರು. ಪ್ರಶ್ನೆ ಕೇಳಿದವ ಮಂಕಾದ- ತಾನು ಕೇಳಿದ ಪ್ರಶ್ನೆ ಸರಿಯಿಲ್ಲವೇ ಎಂದು.

ಓಶೋಗೆ ಅವನ ಗೊಂದಲ ಅರ್ಥವಾಯಿತು. ಅವರು ಅವನನ್ನು ಕುರಿತು, ‘ನೀನು ಒಂದು ಸುಂದರ ಉದ್ಯಾನವನದತ್ತ ಹೊರಟಿದ್ದೀಯ. ನಿನಗೆ ಮೊದಲು ಆಗುವ ಅನುಭವ ತಣ್ಣನೆಯ ಗಾಳಿ. ಅದು ನಿನ್ನನ್ನು ತೀಡಿ ಇಲ್ಲೇ ಮುಂದೆ ಉದ್ಯಾನವನವಿದೆ ಎಂದು ಹೇಳುತ್ತದೆ. ಇನ್ನೂ ಸ್ವಲ್ಪ ದೂರ ಹೋಗು ಹೂಗಳ ಹಿತವಾದ ಪರಿಮಳ ನಿನ್ನ ನಾಸಿಕಾಗ್ರವನ್ನು ತಾಕುತ್ತದೆ. ಆಗ ನಿನಗೆ ಗೊತ್ತಾಗುತ್ತದೆ ಮುಂದೆ ಉದ್ಯಾನವನದಲ್ಲಿ ಹೂಗಳು ಅರಳಿವೆ ಎಂದು. ಇನ್ನೂ ಸ್ವಲ್ಪ ದೂರಕ್ಕೆ ದುಂಬಿಗಳ ಝೇಂಕಾರ ಕೇಳಿ ಅರಳಿದ ಹೂಗಳು ವಾಸನಾಭರಿತ ಮಾತ್ರವಲ್ಲ ಅವು ಮಧುವಿನಿಂದಲೂ ಕೂಡಿವೆ ಎಂದು. ಹೀಗೆ ಮುಂದೆ ಹೋದರೆ ಉದ್ಯಾನವನ ನಿನ್ನ ಕಣ್ಣಿಗೆ ಗೋಚರವಾಗುತ್ತದೆ. ಆ ಹಸಿರು ರಾಶಿಯಲ್ಲಿ ಕಣ್ಣಿಗೆ ಹಬ್ಬವೆನ್ನಿಸುವಂತೆ ಅರಳಿರುವ ಹೂಗಳು, ಖುಷಿ ಖುಷಿಯಿಂದ ಜೇನನ್ನು ಹೀರುವ ದುಂಬಿ-ಜೇನ್ನೊಣಗಳ ಹಿಂಡು ಎಲ್ಲವೂ ಒಟ್ಟಿಗೆ ಕಂಡು ಮನಸ್ಸು ಹಿಗ್ಗುತ್ತದೆ ಅಲ್ಲವೆ? ಎಂದು ಕೇಳಿದರು.

ಪ್ರಶ್ನೆ ಕೇಳಿದವ ನಿಜ ಎನ್ನುವಂತೆ ತಲೆ ಆಡಿಸಿ, ‘ನಿಜ. ಆದರೆ, ಒಳ್ಳೆಯತನ ಉದ್ಯಾನವನದಂತೆ ದೃಗ್ಗೋಚರವಲ್ಲ ಅಲ್ಲವೇ’ ಎಂದ. ನಕ್ಕ ಓಶೋ ಹೇಳಿದರು, ‘ಪ್ರಿಯಮಿತ್ರ ಕಾಣುವುದು ಎಂದರೆ ಕಣ್ಣಳತೆ ಎಂದು ಭಾವಿಸುವುದು ತಪ್ಪು. ಕಂಡುಕೊಳ್ಳುವುದು ಒಂದು ಪಯಣ ಎಂದು ನಂಬು. ಒಂದು ತೋಟವನ್ನು ಹುಡುಕುವುದು ನಿನ್ನ ಲಕ್ಷ್ಯವೇ ಆಗಿದ್ದರೆ, ನಿನ್ನೊಳಪ್ರಜ್ಞೆ ಜಾಗೃತವಾಗಿ ಅದಕ್ಕೆ ಸಂಬಧಿಸಿದ್ದು ನಿನಗೆ ತಾನಾಗೇ ಗೋಚರವಾಗುತ್ತಾ ಹೋಗುತ್ತದೆ. ಹಾಗೆ ಒಳ್ಳೆಯತನವನ್ನು ಲಕ್ಷ್ಯ ಮಾಡಿದರೆ ಅದೂ ತಾನಾಗೇ ತೆರೆದುಕೊಳ್ಳುತ್ತಾ ಹೋಗುತ್ತದೆ. ನಿನ್ನ ಗಮನ ಯಾವುದೆಂದು ನೀನು ಗುರಿ ಮಾಡಿಕೊಳ್ಳುತ್ತೀಯೋ ಆ ಜಗತ್ತಿನ ಎಲ್ಲವೂ ನಿನ್ನ ಅವಗಾಹನೆಗೆ ಬಂದೇ ಬರುತ್ತದೆ. ಕೆಟ್ಟತನದ ಕಟುತ್ವ ಒಳ್ಳೆಯತನಕ್ಕಿರುವುದಿಲ್ಲ. ಹಾಗಾಗಿ ಪಯಣ ಅನಿವಾರ್ಯ. ಗಾಳಿ ತಳ್ಳುವ ತನಕವೂ ಆಕಾಶ ಮೋಡಗಳಿಂದ ಮರೆಯಾಗೇ ಇರುತ್ತದೆ. ಜಗತ್ತಿನ ಎಲ್ಲವೂ ಪಯಣ ಎನ್ನುವುದನ್ನು ಅರ್ಥ ಮಾಡಿಕೋ. ಒಳ್ಳೆಯತನ ಮಾತ್ರವಲ್ಲ, ನಿನ್ನ ಒಳಗೂ ನಿನಗೆ ಸಿಗುತ್ತದೆ’ ಎನ್ನುತ್ತಾರೆ.

ಹೌದು, ಬೇಕೆನ್ನುವುದನ್ನು ಕಂಡುಕೊಳ್ಳುವುದು ನಮ್ಮ ಜವಾಬ್ದಾರಿ. ಅದಕ್ಕಾಗಿ ನಮ್ಮನ್ನು ನಾವು ಹದಗೊಳಿಸಿಕೊಳ್ಳಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಮಂಗಳವಾರ ಜುಲೈ 9, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ತೃತೀಯ ಗಂ. 06-09 ನಕ್ಷತ್ರ: ಆಶ್ಲೇಷ ಗಂ. 07-53 ಯೋಗ: ಸಿದ್ಧಿ(ಆಸ್ರಿಕ್) ಗಂ. 26-26 ಕರಣ: ಗರ ಗಂ. 06-09, ಮಿಥುನ ಮಾಸದ 24 ನೇ ದಿನ, ಮಳೆನಕ್ಷತ್ರ: ಪುನರ್ವಸು 2.

ರಾಹುಕಾಲ : ಮಧ್ಯಾಹ್ನ 03-00 – 04-30

ಸೂರ್ಯೋದಯ : 06-14 ಸೂರ್ಯಾಸ್ತ : 06-58

ಮುಸ್ಲಿಂ ದಿನಾಂಕ : 02 ಮೊಹರಮ್

ಅದೃಷ್ಟ ಸಂಖ್ಯೆ : 8, 6

ಮೇಷ: ಆಹಾರದಲ್ಲಿನ ವ್ಯತ್ಯಾಸದಿಂದಾಗಿ ಕಾಯಿಲೆಗಳನ್ನು ಏಕಕಾಲದಲ್ಲಿ ಅನುಭವಿಸುವಂತೆ ಆಗುವುದು. ಈ ದಿನದ ತಪ್ಪುಗಳಿಗೆ ಸಣ್ಣ ವಯಸ್ಸಿನಿಂದಾಗಿ ಈ ಕ್ಷಣಕ್ಕೆ ಕ್ಷಮೆ ಸಿಗಬಹುದು.

ವೃಷಭ: ಸಂಸಾರದ ಘನತೆ ಹೆಚ್ಚಿಸುವುದಕ್ಕೆ ಸಾಹಸ ಪಡುತ್ತಿರುವ ನಿಮಗೆ ಹೆಂಡತಿ ಮಕ್ಕಳು ನೆರವಾಗುವರು. ಕ್ಲಿಪ್ತ ಸಮಯಕ್ಕೆ ಬೇಕಾದ ವಸ್ತುಗಳು ಇಲ್ಲದಿದ್ದರೂ ಸ್ನೇಹಿತರಿಂದ ಬಂದೊದಗುತ್ತದೆ.

ಮಿಥುನ: ಕೆಲವು ಸಮಯದಲ್ಲಿ ಅಜ್ಞಾನದಿಂದ ಮಾಡಿದ ತಪ್ಪು ಕೆಲಸವು ಭವಿಷ್ಯದ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತದೆ. ಕಾಯಿಲೆಗೆಂದು ತೆಗೆದುಕೊಂಡ ಔಷಧಿಯು ಅನಾರೋಗ್ಯಕ್ಕೆ ದಾರಿಯಾಗಬಹುದು.

ಕರ್ಕಾಟಕ: ರಾಜಕಾರಣದ ರಹಸ್ಯ ಮಾತುಕತೆಗಳಲ್ಲಿ ಸ್ಥಾನ ಪ್ರಮುಖವಾಗಿರುವುದು. ಆರಾಧ್ಯ ದೇವತೆ ಅಭೀಷ್ಟವನ್ನು ನೆರವೇರಿಸುವುದರಿಂದ ಹರಕೆ ತೀರಿಸುವಿರಿ. ಪ್ರಾರ್ಥನೆಯ ಪರಿಣಾಮ ವಧು ದೊರೆಯುವಳು.

ಸಿಂಹ: ಹಲವು ದಿನಗಳ ಬಿಗುವಾದ ದಿನಚರಿಯ ನಂತರ ಹಳೆಯ ದಿನಚರಿಗೆ ಮರಳುವಿರಿ. ಬ್ಯಾಂಕ್ ಉದ್ಯಮವನ್ನು ಮಾಡುವ ಸಾಮರ್ಥ್ಯ ಇದೆ ಎಂದು ಧೈರ್ಯವಿದ್ದರಷ್ಟೇ ಪರೀಕ್ಷೆ ಕಟ್ಟುವ ಸಾಹಸ ಮಾಡಿ.

ಕನ್ಯಾ: ಮಗಳ ಮಾತಿಗೆ ಬೆಲೆ ಕೊಟ್ಟು ಆಕೆಯ ಇಚ್ಛೆಯಂತೆಯೇ ಆಗಲು ಬಿಟ್ಟರೂ ಮನಸ್ಸಿಗೆ ನೋವು ಮಾಡಬಹುದು. ಸಹೋದ್ಯೋಗಿಗಳೊಂದಿಗೆ ಉತ್ತಮ ಸಂಬಂಧ ಕಾಪಾಡಿಕೊಳ್ಳಿ. ಕೆಲಸಗಳಲ್ಲಿ ಪ್ರವೀಣತೆ ಪಡೆಯುವಿರಿ.

ತುಲಾ: ವಿದ್ವಜ್ಜನರ ಎದುರು ಮಾತನಾಡುವ ಬದಲು ಮೌನವೇ ಗೌರವವನ್ನು ಹೆಚ್ಚುಗೊಳಿಸುತ್ತದೆ. ವೃತ್ತಿಯಲ್ಲಿ ಜವಾಬ್ದಾರಿಯು ಇರುವುದರಿಂದ ವೈಯಕ್ತಿಕ ಜೀವನದಲ್ಲಿನ ಗಮನ ಕಡಿಮೆ ಆಗುವುದು.

ವೃಶ್ಚಿಕ: ಅಳಿಯನ ಸಹಾಯದಿಂದಾಗಿ ಹೊಸ ನಿವೇಶನ ಖರೀದಿಸುವಿರಿ. ಆಲಸ್ಯದ ಕಾರಣವಾಗಿ ನಿತ್ಯದ ಕೆಲಸಗಳು ನಿಂತು ಹೋಗುವ ಸಾಧ್ಯತೆ ಇದೆ. ಗಾರ್ಮೆಂಟ್ ಉದ್ಯಮದವರು ಲಾಭ ಹೊಂದಲಿದ್ದೀರಿ.

ಧನು: ಮಾದಕ ವಸ್ತುಗಳ ವ್ಯಸನಕ್ಕೆ ಒಳಗಾದವರನ್ನು ಆ ಜಾಲದಿಂದ ಹೊರತರಲು ವಿಧ ವಿಧವಾದ ಪ್ರಯತ್ನ ನಡೆಸುವಿರಿ. ಸ್ವಾರ್ಥದಿಂದ ವ್ಯವಹರಿಸಿದ್ದರಿಂದ ಪಶ್ಚಾತಾಪ ಪಡುವಂತಾಗುವುದು. ಆಹಾರ ಸೇವನೆಗೆ ಮಿತಿಯಿರಲಿ.

ಮಕರ: ದೇವರ ಕೃಪೆಯಿಂದಾಗಿ ವ್ಯವಹಾರ ಕ್ಷೇತ್ರದಲ್ಲಿ ಆಗಬೇಕಾದ ಅನಾಹುತಗಳು ನಿವಾರಣೆಯಾಗುತ್ತದೆ. ಕಾಗದ ಪತ್ರಗಳಿಗೆ ಓದಿಯೇ ಸಹಿ ಹಾಕುವುದನ್ನು ಅಭ್ಯಸಿಸಿಕೊಳ್ಳಿರಿ. ಅನವಶ್ಯಕ ವಸ್ತು ಖರೀದಿ ಮಾಡದಿರಿ.

ಕುಂಭ: ಇಷ್ಟವೆಂದು ಅಧಿಕವಾಗಿ ಸೇವಿಸಿದ ಆಹಾರವು ಅನಾರೋಗ್ಯಕ್ಕೆ ಎಡೆಮಾಡಿಕೊಡುತ್ತದೆ. ಮಾತಿನಂತೆ ನಡೆಯದ ಮಕ್ಕಳ ಮೇಲೆ ಬೇಸರವಾಗುತ್ತದೆ. ಸಂಜೆಯ ಸಮಯದಲ್ಲಿ ಅನಾರೋಗ್ಯ ಕಾಡಲಿದೆ.

ಮೀನ: ಪುರುಷ ಸ್ತ್ರೀಯರ ನಡುವಿನ ಅಂತರವನ್ನು ಮನೆಯಲ್ಲಿ ಕಡಿಮೆ ಮಾಡುವ ಸರ್ವ ಪ್ರಯತ್ನ ಮಾಡುವಿರಿ. ಚಿನ್ನಾಭರಣ, ಬೆಳ್ಳಿಯ ಸಾಮಗ್ರಿಗಳನ್ನು ಖರೀದಿಸುವ ಸಾಧ್ಯತೆ ಇದೆ. ವ್ಯಸನಗಳಿಂದ ಮುಕ್ತಿ ಪಡೆಯುವಿರಿ.

ಪದಬಂಧ 5736


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಬೇರೆಯ ದೇಹ (4)
3.ಕಾಡಿನ ಪುಷ್ಪವಿದು (4)
5.ಹೊಟ್ಟೆಕಿಚ್ಚು ಈ ರೀತಿ ವ್ಯಕ್ತವಾಗಿದೆ (3)
6.ಈತ ತಿರುಪೆ ಬೇಡುವವನು (3)
8.ನೀರಿನ ಅಧಿದೇವತೆ (3)
9.ಒಳ್ಳೆಯ ಗುಣದಿಂದ ಕೂಡಿರುವವನು (3)
10.ಇಟ್ಟಿಗೆ ಹತ್ತಿರವಿರುವ ಮರದ ತುಂಡು (3)
11.ದೇವರಿಗೆ ಮಾಡುವ ಸೇವೆಯ ನಿರ್ಧಾರ (3)
12.ಹಿಗ್ಗು ಹೀಗೆ ಬಂದಿದೆ (3)
14.ಕಂಬದ ಹತ್ತಿರ ಸುರಿಸಿದ ಕಣ್ಣೀರು (3)
16.ಆನಾಂದಾನುಭವಕ್ಕೆ ಉಂಟಾದ ಅಡ್ಡಿ (4)
17. ನಡುವಿರುವ ಮಾವನಿಂದಾದ ಶೇಖರಣೆ! (4)

ಮೇಲಿಂದ ಕೆಳಕ್ಕೆ

1.ಪತಿಯೊಡನೆ ಕಾಣಿಸಿದ ಕಾಲಾಳು (3)
2.ಈತ ನರಕಾಧಿಪತಿ (2)
3.ವಠಾರದಲ್ಲಿರುವ ಮದುವೆ ಗಂಡು (2)
4.ವೃಕ್ಷದ ಹತ್ತಿರ ಸಂಭವಿಸಿದ ಸಾವು (3)
7.ಕಿವಿಯಿಂದ ಕಿವಿಗೆ ಹರಡುವ ಮಾತು (5)
8. ಈ ರೀತಿ ಗುಂಪುಗಳಾಗಿ ವಿಂಗಡಿಸು (5)
11.ಹರನನ್ನು ಸ್ತುತಿಸಿರುವ ಶೂರ (3)
13.ಹೊಸದಾಗಿ ಕಾಣುತ್ತಿರುವ ಧಾನ್ಯ (3)
14.ಶ್ರೀ ಕೃಷ್ಣನ ಸೋದರ ಮಾವ (2)
15.ಯಜಮಾನಿ ನುಡಿದಿರುವ ಸತ್ಯ (2)



5735ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:

1.ಪರಿಕರ 3.ಮೋಸಗಾರ 5.ಸಮಕ್ಷ 7.ರಾಣಿ 8.ತಡ 10.ಅದಿರು 11.ಸಿಂಬಳ 13.ಷರಾ 15.ಪಾತಿ 16.ಗಡಸು 18.ರತ್ನಪಡಿ 19.ಮಧುಕರಿ

ಮೇಲಿಂದ ಕೆಳಕ್ಕೆ:

1.ಪರಾಜಿತ 2.ರಸ 3.ಮೋಕ್ಷ 4.ರಮಣಿ 6.ಮಸೀದಿ 7.ರಾಜಾರೋಷ 9.ಡಕಾಯಿತಿ 12.ಬಗ್ಗಡ 14.ರಾಯಭಾರಿ 15.ಪಾಮರ 16.ಗಡಿ 17.ಸುಮ

ಸುಡೊಕು 6121

			4		2		7	
3		6				2		5
	2	4		5			8	
8		5						1
			5	9	3		2	
7		2		6		5		4
				2		8		7
2		7					6	
			7		9	4		2


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6120 ಸುಡೊಕು

5	3	4	9	8	2	1	7	6
1	7	6	3	4	5	9	8	2
9	8	2	1	6	7	3	4	5
7	2	3	5	9	8	6	1	4
6	5	9	7	1	4	2	3	8
4	1	8	2	3	6	5	9	7
2	9	5	8	7	1	4	6	3
3	6	7	4	2	9	8	5	1
8	4	1	6	5	3	7	2	9

ಷೇರುಪೇಟೆ ವಹಿವಾಟು 36



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,323
ಇಂದಿನ ಅಂತ್ಯ	24,320
▼	3
ದಿನದ ಕನಿಷ್ಠ	24,240

ವಿನಿಮಯ ದರ

$ ಡಾಲರ್	83.50
£ ಪೌಂಡ್	107.03
€ ಯುರೊ	90.49
¥ ಯೆನ್ (100ಕ್ಕೆ)	52

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹565
12 ಕ್ಕೆ	₹76
ಮೈಸೂರು	
100ಕ್ಕೆ	₹570

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1540 (1560)
ಸೋಯಾ (ರಿಫೈನ್ಡ್)	₹975 (980)
ಸೂರ್ಯಕಾಂತಿ (ರಿಫೈನ್ಡ್)	₹970 (970)
ಪಾಮೋಲಿನ್	₹915 (918)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹255-453
ದ್ವಿತಳಿ (ಬಿ.ವಿ)	₹280-592

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	18000-28500
ಹೊಸತು	28500-38000
ಹಳತು	38000-46000
ಚಿತ್ರದುರ್ಗ	
ಅಪಿ	50119-50559
ಬೆಟ್ಟೆ	34629-35099
ಕೆಂಪುಗೋಟು	28600-29000
ರಾಶಿ	49639-50069
ಕಾರ್ಕಳ	
ಹೊಸತು	25000-38000
ಕುಮಟ	
ಚಿಪ್ಪು	25699-28029
ಕೋಕ	14029-24599
ಫ್ಯಾಕ್ಟರಿ	10169-20899
ಹಳೆಚಾಲಿ	34639-37399
ಹೊಸಚಾಲಿ	30399-35029
ಸಾಗರ	
ಬಿಳಿಗೋಟು	12109-26600
ಚಾಲಿ	20189-34109
ಕೋಕ	12989-27899
ಕೆಂಪುಗೋಟು	24069-33199
ರಾಶಿ	38899-51001
ಸಿಪ್ಪೆಗೋಟು	12669-18439
ಶಿವಮೊಗ್ಗ	
ಬೆಟ್ಟೆ	50500-53899
ಗೊರಬಲು	22568-33609
ರಾಶಿ	32809-51621
ಸರಕು	53000-76863
ಸಿದ್ದಾಪುರ	
ಬಿಳಿಗೋಟು	26000-29889
ಚಾಲಿ	32109-35899
ಕೋಕ	24399-26819
ಕೆಂಪುಗೋಟು	26899-27119
ರಾಶಿ	43222-46899
ತಟ್ಟಿಬೆಟ್ಟೆ	33800-37700
ಶಿರಸಿ	
ಬೆಟ್ಟೆ	30299-39389
ಬಿಳಿಗೋಟು	20009-30272
ಚಾಲಿ	32418-36501
ಕೆಂಪುಗೋಟು	22400-25299
ರಾಶಿ	43199-47639
ಯಲ್ಲಾಪುರ	
ಬಿಳಿಗೋಟು	24318-31169
ಚಾಲಿ	31212-35000
ಕೋಕ	7676-21900
ಕೆಂಪುಗೋಟು	24899-31119
ರಾಶಿ	45699-49799
ತಟ್ಟಿಬೆಟ್ಟೆ	34499-44909

ಪೇಟಿಎಂ ಷೇರಿನ ಮೌಲ್ಯ ಶೇ 8ರಷ್ಟು ಏರಿಕೆ

ನವದೆಹಲಿ (ಪಿಟಿಐ): ಪೇಟಿಎಂನ ಮಾತೃಸಂಸ್ಥೆಯಾದ ಒನ್‌97 ಕಮ್ಯುನಿಕೇಷನ್ ಲಿಮಿಟೆಡ್‌ನ ಷೇರಿನ ಮೌಲ್ಯ ಸೋಮವಾರ ಶೇ 8ರಷ್ಟು ಏರಿಕೆ ಆಗಿದೆ.

ಬಿಎಸ್‌ಇ ಮತ್ತು ಎನ್‌ಎಸ್‌ಇ ಯಲ್ಲಿ ಷೇರಿನ ಬೆಲೆ ಕ್ರಮವಾಗಿ ₹472.05 ಮತ್ತು ₹472.95ಕ್ಕೆ ಸ್ಥಿರಗೊಂಡಿತು. ಷೇರಿನ ಮೌಲ್ಯ ಏರಿಕೆಯಿಂದ ಕಂಪನಿಯ ಮಾರುಕಟ್ಟೆ ಮೌಲ್ಯಕ್ಕೆ ಒಂದೇ ದಿನ ₹2,279 ಕೋಟಿ ಸೇರ್ಪಡೆಯಾಗಿದ್ದು, ಕಂಪನಿಯ ಒಟ್ಟು ಎಂ–ಕ್ಯಾಪ್ ₹30,022 ಕೋಟಿಗೆ ಮುಟ್ಟಿದೆ.

ಪೇಟಿಎಂ ಸ್ಥಾಪಕ ವಿಜಯ್ ಶೇಖರ್ ಶರ್ಮಾ ಕಂಪನಿಯನ್ನು ₹8.34 ಲಕ್ಷ ಕೋಟಿಯನ್ನಾಗಿಸುವುದು (100 ಬಿಲಿಯನ್ ಡಾಲರ್) ಗುರಿಯಾಗಿದೆ ಎಂದು ಶನಿವಾರ ಹೇಳಿದ್ದರು. ಇದರಿಂದ ಷೇರಿನ ಮೌಲ್ಯ ಏರಿಕೆಯಾಗಿದೆ.

ಗ್ರಾಮೀಣ ಆರ್ಥಿಕತೆಗೂ ಉತ್ತೇಜನ: ಗೋಲ್ಡ್‌ಮನ್ ಸ್ಯಾಚ್ಸ್ ಸಂಸ್ಥೆ ನಿರೀಕ್ಷೆ

‘ಬಜೆಟ್: ಉದ್ಯೋಗ ಸೃಷ್ಟಿಗೆ ಆದ್ಯತೆ’

ಮುಂಬೈ (ರಾಯಿಟರ್ಸ್): ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ನೂತನ ಸರ್ಕಾರದ ಮೊದಲ ಬಜೆಟ್‌ನಲ್ಲಿ ಗ್ರಾಮೀಣ ಆರ್ಥಿಕತೆ ಮತ್ತು ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡುವ ನಿರೀಕ್ಷೆ ಇದೆ ಎಂದು ಅಮೆರಿಕದ ಗೋಲ್ಡ್‌ಮನ್ ಸ್ಯಾಚ್ಸ್ ಸಂಸ್ಥೆಯು ಸೋಮವಾರ ಹೇಳಿದೆ.

ಪ್ರಸಕ್ತ ಹಣಕಾಸು ವರ್ಷದ ಪೂರ್ಣ ಪ್ರಮಾಣದ ಬಜೆಟ್ ಅನ್ನು ಜುಲೈ 23ರಂದು ಮಂಡಿಸಲಾಗುವುದು ಎಂದು ಸರ್ಕಾರವು ಕಳೆದ ವಾರ ಹೇಳಿತ್ತು.

ಸರ್ಕಾರವು ಮಧ್ಯಂತರ ಬಜೆಟ್‌ನಲ್ಲಿ ನಿಗದಿಪಡಿಸಿದ ಜಿಡಿಪಿಯ ಶೇ 5.1ರಷ್ಟು, ವಿತ್ತೀಯ ಕೊರತೆ ಗುರಿಯ ಮಿತಿಯಲ್ಲಿ ಇರಲಿದೆ ಎಂದು ಗೋಲ್ಡ್‌ಮನ್ ಸ್ಯಾಚ್ಸ್‌ನ ಅರ್ಥಶಾಸ್ತ್ರಜ್ಞರು ನಿರೀಕ್ಷಿಸಿದ್ದಾರೆ.

ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಸಾಲ, ಜಾಗತಿಕ ಸಾಮರ್ಥ್ಯ ಕೇಂದ್ರಗಳನ್ನು ವಿಸ್ತರಿಸುವುದು; ಸೇವಾ ರಫ್ತಿನ ಮೇಲೆ ನಿರಂತರ ಗಮನ ಮತ್ತು ದೇಶೀಯ ಆಹಾರ ಪೂರೈಕೆ ಸರಪಳಿಗೆ ಒತ್ತು ನೀಡುವ ಮೂಲಕ ಉದ್ಯೋಗ ಸೃಷ್ಟಿಗೆ ಆದ್ಯತೆ ನೀಡುವ ನಿರೀಕ್ಷೆಯಿದೆ ಎಂದು ಸಂಸ್ಥೆಯ ಭಾರತದ ಮುಖ್ಯ ಅರ್ಥಶಾಸ್ತ್ರಜ್ಞ ಶಾಂತನು ಸೇನ್‌ಗುಪ್ತ ಹೇಳಿದ್ದಾರೆ.



ಈ ವರ್ಷ ನಡೆದ ಸಾರ್ವತ್ರಿಕ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷವು (ಬಿಜೆಪಿ) ಬಹುಮತ ಗಳಿಸುವಲ್ಲಿ ವಿಫಲವಾಯಿತು. ಮಿತ್ರಪಕ್ಷಗಳ ಸಹಾಯದಿಂದ ಮತ್ತೆ ಅಧಿಕಾರಕ್ಕೆ ಏರಿದೆ. ನಿರುದ್ಯೋಗ ಮತ್ತು ಹಣದುಬ್ಬರವು ಮತದಾರರಿಗೆ ಪ್ರಮುಖ ವಿಷಯವಾದವು ಎಂದು ಮತಗಟ್ಟೆ ಸಮೀಕ್ಷೆಗಳು ಹೇಳಿವೆ.

ಭಾರತದ ಆರ್ಥಿಕತೆಯು ಈ ವರ್ಷ ಶೇ 7.2ರಷ್ಟು ವೇಗವಾಗಿ ಬೆಳೆಯುತ್ತಿರುವುದನ್ನು ನೋಡಿದರೆ, ಉದ್ಯೋಗ ಸೃಷ್ಟಿಯಲ್ಲಿ ಹಿಂದುಳಿಯಬೇಕಾಗುತ್ತದೆ. ಶೇ 7ರ ಜಿಡಿಪಿ ಬೆಳವಣಿಗೆ ಮುಂದಿನ ದಶಕದಲ್ಲಿ ಉದ್ಯೋಗ ಅಗತ್ಯವನ್ನು ಪೂರೈಸಲು ಸಾಧ್ಯವಾಗುವುದಿಲ್ಲ ಎಂದು ಸಿಟಿ ಸಮೂಹದ ಮುಖ್ಯ ಅರ್ಥಶಾಸ್ತ್ರಜ್ಞ ಸಮೀರನ್ ಚಕ್ರವರ್ತಿ ಕಳೆದ ವಾರ ಹೇಳಿದ್ದರು. ಆರ್ಥಿಕತೆಯ ವೇಗವು ಪ್ರತಿ ವರ್ಷ 80–90 ಲಕ್ಷ ಉದ್ಯೋಗ ಸೃಷ್ಟಿಸುತ್ತದೆ. ಆದರೆ, ವಾರ್ಷಿಕ 1.1 ಕೋಟಿಯಿಂದ 1.2 ಕೋಟಿ ಉದ್ಯೋಗ ಒದಗಿಸಬೇಕಾಗಿದೆ ಎಂದು ಹೇಳಿದ್ದಾರೆ.

ವಾಣಿಜ್ಯ ವಿಮಾನ ತಯಾರಿಕೆಯ ಜೊತೆಗೆ ಆಟಿಕೆಗಳು, ಜವಳಿ ಮತ್ತು ಉಡುಪು ತಯಾರಿಕೆಯಂತಹ ವಲಯಗಳಿಗೆ ಬಜೆಟ್‌ನಲ್ಲಿ ಹಣಕಾಸಿನ ಪ್ರೋತ್ಸಾಹ ನೀಡಿದರೆ, ಕಾರ್ಮಿಕರ ಸಂಖ್ಯೆ ಹೆಚ್ಚಳವಾಗಲಿದೆ ಎಂಬ ನಿರೀಕ್ಷೆ ಇದೆ ಎಂದೂ ಮತಗಟ್ಟೆ ಸಮೀಕ್ಷೆಗಳಲ್ಲಿ ಅಭಿಪ್ರಾಯ ವ್ಯಕ್ತವಾಗಿತ್ತು.

ದೇಶೀಯ ಮೌಲ್ಯ ಸೇರ್ಪಡೆ ಹೆಚ್ಚು ಮಾಡುವುದು ಮತ್ತು ಸ್ಪಷ್ಟ ಉದ್ಯೋಗ ಗುರಿಯತ್ತ ಗಮನ ಕೇಂದ್ರೀಕರಿಸುವ ಮೂಲಕ ಉತ್ಪಾದನಾ ಸಂಬಂಧಿತ ಪ್ರೋತ್ಸಾಹ ಯೋಜನೆ ವಿಸ್ತರಿಸುವ ಕುರಿತು ಸರ್ಕಾರವು ಆಲೋಚಿಸಬಹುದು ಎಂದು ‘ಸಿಟಿ’ ತನ್ನ ವರದಿಯಲ್ಲಿ ಹೇಳಿದೆ.

ಪ್ರಮುಖ ಬೆಳೆಗಳ ದೇಶೀಯ ಉತ್ಪಾದನೆ ಹೆಚ್ಚಿಸಲು ಕೃಷಿ ಮೂಲಸೌಕರ್ಯ ಮತ್ತು ಪ್ರೋತ್ಸಾಹದ ಮೇಲೆ ಗಮನ ಕೇಂದ್ರೀಕರಿಸುವುದನ್ನು ‘ಗೋಲ್ಡ್‌ಮನ್’ ನಿರೀಕ್ಷಿಸುತ್ತಿದೆ.

ರಷ್ಯಾಕ್ಕೆ ಬಂದಿಳಿದ ಪ್ರಧಾನಿ ನರೇಂದ್ರ ಮೋದಿ

ಪುಟಿನ್ ಜೊತೆ ಇಂದು ಮಾತುಕತೆ

ಮಾಸ್ಕೋ (ಪಿಟಿಐ): ಉಕ್ರೇನ್ ಮೇಲೆ ರಷ್ಯಾ ಸೇನಾ ಆಕ್ರಮಣದ ನಂತರ ಇದೇ ಮೊದಲ ಬಾರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಎರಡು ದಿನಗಳ ಭೇಟಿಗಾಗಿ ಸೋಮವಾರ ರಷ್ಯಾ ರಾಜಧಾನಿ ಮಾಸ್ಕೋಗೆ ಬಂದಿಳಿದರು. ಮಂಗಳವಾರ ರಷ್ಯಾ ಅಧ್ಯಕ್ಷ ವ್ಲಾದಿಮರ್ ಪುಟಿನ್ ಜೊತೆಗೆ ಇಂಧನ, ವ್ಯಾಪಾರ, ರಕ್ಷಣಾ ಕ್ಷೇತ್ರಗಳ ದ್ವಿಪಕ್ಷೀಯ ಸಂಬಂಧ ವೃದ್ಧಿ ಕುರಿತು ಮಾತುಕತೆ ನಡೆಸಲಿದ್ದಾರೆ.

ಇಲ್ಲಿನ ವಿಮಾನ ನಿಲ್ದಾಣಕ್ಕೆ ಬಂದಿಳಿದ ಮೋದಿ ಅವರಿಗೆ ಸೇನಾಪಡೆಯಿಂದ ಗೌರವವಂದನೆ ಸಲ್ಲಿಸಲಾಯಿತು. ನಂತರ ಅವರನ್ನು ರಷ್ಯಾದ ಚೊಚ್ಚಲ ಉಪಪ್ರಧಾನಿ ಡೆನಿಸ್ ಮಂಟ್ರೊವ್ ಅವರು ಬರಮಾಡಿಕೊಂಡರು. ನಂತರ, ಇಬ್ಬರೂ ಒಂದೇ ಕಾರಿನಲ್ಲಿ ಪ್ರಧಾನಿ ಮೋದಿ ಅವರು ತಂಗಲಿದ್ದ ಹೋಟೆಲ್‌ನತ್ತ ತೆರಳಿದರು. ಅಲ್ಲಿಗೆ ಬಂದಿಳಿದ ಇಬ್ಬರನ್ನೂ, ರಷ್ಯಾದ ಕಲಾವಿದರು ಹಿಂದಿ ಹಾಡುಗಳಿಗೆ ನೃತ್ಯ ಮಾಡಿ, ಸ್ವಾಗತಿಸಿದರು.

2019ರ ಬಳಿಕ ಮೋದಿ ಅವರು ರಷ್ಯಾಕ್ಕೆ ಮೊದಲ ಬಾರಿ ಭೇಟಿ ನೀಡುತ್ತಿದ್ದಾರೆ. ಸೋಮವಾರ ರಾತ್ರಿ ಪ್ರಧಾನಿ ಮೋದಿ ಅವರಿಗಾಗಿಯೇ ಪುಟಿನ್ ಖಾಸಗಿ ಔತಣಕೂಟ ಏರ್ಪಡಿಸಿದ್ದರು. ಮಂಗಳವಾರ ಮಾಸ್ಕೋದಲ್ಲಿ 22ನೇ ಭಾರತ–ರಷ್ಯಾ ಶೃಂಗಸಭೆ ನಡೆಯಲಿದೆ.

‘ಎರಡೂ ದೇಶಗಳ ನಡುವಿನ ಪಾಲುದಾರಿಕೆಯನ್ನು ಮುಂದಕ್ಕೆ ಕೊಂಡೊಯ್ಯಲು ಪ್ರಧಾನಿ ನರೇಂದ್ರ ಮೋದಿ ಅವರು ಅಧ್ಯಕ್ಷ ವ್ಲಾದಿಮರ್ ಪುಟಿನ್ ಜೊತೆಗೆ ಮಹತ್ವದ ಚರ್ಚೆ ನಡೆಸಲಿದ್ದಾರೆ. ರಷ್ಯಾದಲ್ಲಿರುವ ಭಾರತೀಯ ಸಮುದಾಯದವರ ಜೊತೆಗೂ ಸಂವಾದ ನಡೆಸಲಿದ್ದಾರೆ’ ಎಂದು ಭಾರತೀಯ ವಿದೇಶಾಂಗ ಇಲಾಖೆಯ ವಕ್ತಾರ ರಣ್‌ಧೀರ್ ಜೈಸ್ವಾಲ್ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.



ರಷ್ಯಾ ರಾಜಧಾನಿ ಮಾಸ್ಕೋಗೆ ಸೋಮವಾರ ಬಂದಿಳಿದ ಪ್ರಧಾನಿ ನರೇಂದ್ರ ಮೋದಿ ಅವರು ಸೇನಾ ಪಡೆಯಿಂದ ಗೌರವವಂದನೆ ಸ್ವೀಕರಿಸಿದರು– ಪಿಟಿಐ ಚಿತ್ರ

ಮೋದಿ ಬೆಂಬಲದ ನಿರೀಕ್ಷೆಯಲ್ಲಿ ಭಾರತೀಯ ಸಂಜಾತರು

ಮಾಸ್ಕೊ (ಪಿಟಿಐ): ಪ್ರಧಾನಿ ನರೇಂದ್ರ ಮೋದಿಯವರ ಮಾಸ್ಕೊ ಭೇಟಿಯನ್ನು ರಷ್ಯಾದಲ್ಲಿರುವ ಭಾರತೀಯ ಸಮುದಾಯವು ಕುತೂಹಲದಿಂದ ಎದುರು ನೋಡುತ್ತಿದ್ದು, ಹಿಂದೂ ದೇಗುಲ ನಿರ್ಮಾಣ, ಭಾರತೀಯ ಶಾಲೆ ಆರಂಭ ಸೇರಿದಂತೆ ಭಾರತಕ್ಕೆ ನೇರ ವಿಮಾನಯಾನದ ಸಂಪರ್ಕ ಜಾಲವನ್ನು ಹೆಚ್ಚಿಸಲು ಬೆಂಬಲ ಕೋರಲಿದೆ.

ರಷ್ಯಾದಲ್ಲಿರುವ ಭಾರತೀಯ ಸಂಜಾತರು ಮೋದಿ ಅವರ ಮಾಸ್ಕೊ ಭೇಟಿಯ ಬಗ್ಗೆ ಉತ್ಸಾಹದಿಂದ ಇದ್ದಾರೆ.

‘ಭಾರತೀಯ ಸಮುದಾಯಕ್ಕೆ ಕೆಲವೊಂದು ಕೊರತೆ ಕಾಡುತ್ತಿದೆ. ರಷ್ಯಾದಲ್ಲಿ ಹಿಂದೂ ದೇಗುಲ ನಿರ್ಮಾಣಗೊಳ್ಳಬೇಕಿದೆ. ಈ ಬೇಡಿಕೆಯನ್ನು ನಾವು ಭಾರತದ ಪ್ರಧಾನಿ ಮೂಲಕ ಸಲ್ಲಿಸುತ್ತೇವೆ. ಏರೋಫ್ಲಾಟ್ ಏರ್‌ಲೈನ್ಸ್ ಮಾತ್ರ ನೇರ ಸಂಪರ್ಕದ ವಿಮಾನಯಾನ ಸೇವೆ ಹೊಂದಿದೆ. ಇದರಲ್ಲಿ ಕೆಲವು ತೊಂದರೆಗಳಿವೆ. ಆದ್ದರಿಂದ ಏರ್ ಇಂಡಿಯಾ ಸೇರಿದಂತೆ ಇತರ ವಿಮಾನಯಾನ ಸಂಸ್ಥೆಗಳು ರಷ್ಯಾಗೆ ನೇರ ವಿಮಾನಯಾನ ಸಂಪರ್ಕ ಕಲ್ಪಿಸಿದರೆ ಅನುಕೂಲಕಾರಿಯಾಗಲಿದೆ’ ಎಂದು ರಷ್ಯಾದಲ್ಲಿ ವಾಸಿಸುತ್ತಿರುವ ಪಟ್ನಾದ ರಾಕೇಶ್ ಕುಮಾರ್ ಶ್ರೀವಾಸ್ತವ ತಿಳಿಸಿದರು.

ಹಿಂದೂ ದೇಗುಲ ನಿರ್ಮಾಣ, ಕೆಲವೊಂದು ಸರಕುಗಳನ್ನು ಆಮದು ಮಾಡಿಕೊಳ್ಳುವಾಗ ಅನುಭವಿಸುತ್ತಿರುವ ತೊಂದರೆ ನಿವಾರಣೆಗೆ ಮಾರ್ಗೋಪಾಯ ಅಗತ್ಯವಿದೆ ಎಂಬ ಬೇಡಿಕೆಗಳೂ ಭಾರತ ಮೂಲದವರಿಂದ ಕೇಳಿಬಂದಿವೆ.

‘ಶಾಂತಿಯುತ ಹಾಗೂ ಪ್ರದೇಶವಾರು ಸ್ಥಿರತೆಯ ವಿಷಯದಲ್ಲಿ ಭಾರತವು ಪ್ರಮುಖ ಪಾತ್ರ ವಹಿಸಲು ಬಯಸುತ್ತದೆ’ ಎಂದು ದೆಹಲಿಯಲ್ಲಿ ವಿಮಾನ ಏರುವ ಮುನ್ನ ಪ್ರಧಾನಿ ಮೋದಿ ಹೇಳಿಕೆ ನೀಡಿದ್ದರು.

ಶೃಂಗಸಭೆಯ ಬಳಿಕ ಜುಲೈ 9ರಂದು ಮೋದಿ ಅವರು ಆಸ್ಟ್ರಿಯಾಕ್ಕೆ ಪ್ರಯಾಣ ಬೆಳೆಸಲಿದ್ದಾರೆ. 40 ವರ್ಷದ ಬಳಿಕ ಭಾರತದ ಪ್ರಧಾನಿಯೊಬ್ಬರು ಈ ದೇಶಕ್ಕೆ ಭೇಟಿ ನೀಡುತ್ತಿದ್ದಾರೆ.

ಟಿ.ವಿ ಟವರ್‌ನಲ್ಲಿ ಹಾರಿದ ರಾಷ್ಟ್ರಧ್ವಜ: ಮೋದಿ ಅವರು ಮಾಸ್ಕೋಗೆ ಬಂದಿಳಿಯುತ್ತಿದ್ದಂತೆಯೇ ಅತ್ಯಂತ ಪ್ರಸಿದ್ಧ ‘ಒಸ್ಟಾನಿಕೊನೊ ಟಿವಿ ಟವರ್’ನಲ್ಲಿ ಭಾರತ– ರಷ್ಯಾ ರಾಷ್ಟ್ರಧ್ವಜಗಳು ಹಾರಲು ಆರಂಭಿಸಿದವು. ಯುರೋಪ್‌ನ ಅತಿ ಎತ್ತರದ ಹಾಗೂ ವಿಶ್ವದ ನಾಲ್ಕನೇ ಅತಿ ಎತ್ತರದ ಟವರ್(1,771 ಅಡಿ) ಇದಾಗಿದ್ದು, 1967ರಲ್ಲಿ ಸೋವಿಯತ್‌ನ ಖ್ಯಾತ ಎಂಜಿನಿಯರ್ ನಿಕೊಲಾಯಿ ನಿಕಿಟಿನ್ ಅದನ್ನು ಸ್ಥಾಪಿಸಿದರು. ಇದು ಮಾಸ್ಕೋದ ಹೆಗ್ಗುರುತಾಗಿದ್ದು, ಹೆಚ್ಚಿನ ಪ್ರವಾಸಿಗರನ್ನು ಸೆಳೆಯುತ್ತಿದೆ.

ಗೂಗಲ್ ಮ್ಯಾಪ್ ಬದಲು ಓಲಾ ಮ್ಯಾಪ್ ಬಳಸಿ: ಭವೀಶ್

ನವದೆಹಲಿ (ಪಿಟಿಐ): ‘ಗೂಗಲ್ ಮ್ಯಾಪ್ ಬಳಕೆ ನಿಲ್ಲಿಸಿ, ಒಂದು ವರ್ಷ ಓಲಾ ಮ್ಯಾಪ್‌ನ ಉಚಿತ ಬಳಕೆದಾರರಾಗಿ’ –ಹೀಗೆಂದು ಭಾರತೀಯ ಡೆವಲಪರ್‌ಗಳಿಗೆ ಓಲಾ ಸಂಸ್ಥಾಪಕ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭವೀಶ್ ಅಗರ್ವಾಲ್ ಅವರು ಮನವಿ ಮಾಡಿದ್ದಾರೆ.

‘ಪಾಶ್ಚಿಮಾತ್ಯರು ಅಭಿವೃದ್ಧಿಪಡಿಸಿದ ಆ್ಯಪ್‌ಗಳನ್ನು ನಾವು ಸುದೀರ್ಘ ಅವಧಿಯಿಂದ ಬಳಸುತ್ತಿದ್ದೇವೆ. ಆದರೆ, ಇಲ್ಲಿನ ಬೀದಿಗಳ ಹೆಸರುಗಳು, ನಗರದಲ್ಲಿ ಆಗಿಂದಾಗ್ಗೆ ಆಗುತ್ತಿರುವ ಬದಲಾವಣೆ, ಸಂಚಾರ ದಟ್ಟಣೆ, ಗುಣಮಟ್ಟವಲ್ಲದ ರಸ್ತೆಗಳು ಸೇರಿದಂತೆ ಇನ್ನಿತರ ಸವಾಲುಗಳು ಅವರಿಗೆ ಅರ್ಥವಾಗುವುದಿಲ್ಲ. ಕೃತಕ ಬುದ್ಧಿಮತ್ತೆಯ ಸಹಕಾರದೊಂದಿಗೆ ಓಲಾ ಅಭಿವೃದ್ಧಿಪಡಿಸಿರುವ ಮ್ಯಾಪ್ ಈ ಸವಾಲುಗಳನ್ನು ಮೆಟ್ಟಿ ನಿಂತಿದೆ’ ಎಂದು ತಮ್ಮ ‘ಎಕ್ಸ್’ ಪೋಸ್ಟ್‌ನಲ್ಲಿ ಭವೀಶ್ ಅಗರ್ವಾಲ್ ಬರೆದುಕೊಂಡಿದ್ದಾರೆ.

ಓಲಾ ಸಂಸ್ಥೆಯು ಮೈಕ್ರೋಸಾಫ್ಟ್‌ನ ಅಝೂರ್ ಕ್ಲೌಡ್ ಜೊತೆಗಿನ ನಂಟು ಕಡಿದುಕೊಂಡು, ತನ್ನದೇ ‘ಕೃತ್ರಿಮ್ ಎಐ’ ಸಂಸ್ಥೆಯ ಸೇವೆ ಬಳಸುವುದಾಗಿ ಇದೇ ವರ್ಷದ ಮೇ ತಿಂಗಳಿನಲ್ಲಿ ಘೋಷಿಸಿತ್ತು. ಕಳೆದ ವಾರವಷ್ಟೇ ಓಲಾ ಕ್ಯಾಬ್‌ಗಳು ಪೂರ್ಣವಾಗಿ ಗೂಗಲ್ ಮ್ಯಾಪ್ ಸೇವೆಯಿಂದ ಹೊರಬಂದಿದ್ದು, ತನ್ನದೇ ಆದ ಓಲಾ ಮ್ಯಾಪ್ ಬಳಸುತ್ತಿವೆ ಎಂದು ಕಂಪನಿ ಹೇಳಿತ್ತು.

16 ಕೀಟಗಳ ಸೇವನೆಗೆ ಸಿಂಗಪುರ ಸರ್ಕಾರ ಅನುಮತಿ

ಸಿಂಗಪುರ (ಪಿಟಿಐ): ಜೀರುಂಡೆ, ಮಿಡತೆ, ರೇಷ್ಮೆಹುಳು ಸೇರಿದಂತೆ 16 ಬಗೆಯ ಕೀಟಗಳನ್ನು ಮನುಷ್ಯರು ಸೇವಿಸಬಹುದು ಎಂದು ಸಿಂಗಪುರ ಆಹಾರ ಕಾವಲು ಸಂಸ್ಥೆಯು ಸೋಮವಾರ ಅನುಮೋದನೆ ನೀಡಿದೆ. ಚೀನಾ–ಭಾರತ ಸೇರಿದಂತೆ ಜಾಗತಿಕ ಆಹಾರ ಪಟ್ಟಿಗೂ ಇವುಗಳನ್ನು ಸೇರ್ಪಡೆಗೊಳಿಸಿದೆ.

‘ಬಹು ನಿರೀಕ್ಷಿತ ಘೋಷಣೆಯಿಂದ ಕೀಟಗಳನ್ನು ಬೆಳೆಸಿ, ಸಿಂಗಪುರಕ್ಕೆ ಪೂರೈಕೆ ಮಾಡುವ ಚೀನಾ, ಥಾಯ್‌ಲೆಂಡ್, ವಿಯೆಟ್ನಾಂ ದೇಶಗಳ ಉದ್ಯಮಕ್ಕೆ ಹೆಚ್ಚಿನ ಸಂತಸ ತಂದಿದೆ’ ಎಂದು ‘ದಿ ಸ್ಟ್ರೇಟ್ ಟೈಮ್ಸ್’ ಪತ್ರಿಕೆ ವರದಿ ಮಾಡಿದೆ.

ಉಕ್ರೇನ್ ಮೇಲೆ ರಷ್ಯಾ ಕ್ಷಿಪಣಿ ದಾಳಿ: 13 ಮಂದಿ ಸಾವು

ಕೀವ್ (ಎಪಿ): ರಷ್ಯಾವು ಉಕ್ರೇನ್ ಮೇಲೆ ಎರಡು ಪ್ರತ್ಯೇಕ ಕ್ಷಿಪಣಿ ದಾಳಿ ನಡೆಸಿದ್ದು, ಕನಿಷ್ಠ 13 ಮಂದಿ ಮೃತಪಟ್ಟಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ರಷ್ಯಾದ ಕ್ಷಿಪಣಿಗಳು ಉಕ್ರೇನ್‌ನ ಅತಿ ದೊಡ್ಡ ಮಕ್ಕಳ ಆಸ್ಪತ್ರೆಯೆನಿಸಿದ ‘ಒಖ್ಮಾಡಿಟ್’ಗೆ ಅಪ್ಪಳಿಸಿದ್ದು, ಇದರ ಪರಿಣಾಮ ಕೀವ್‌ನ ಕನಿಷ್ಠ ಮೂವರು ಮೃತರಾಗಿದ್ದಾರೆ ಮತ್ತು ಮಧ್ಯ ಉಕ್ರೇನ್‌ನ ಕ್ರಿವ್ವಿ ರಿಹ್ ನಗರದ ಮೇಲೆ ನಡೆದ ಮತ್ತೊಂದು ದಾಳಿಯಲ್ಲಿ ಕನಿಷ್ಠ 10 ಮಂದಿ ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದು ಹಲವು ತಿಂಗಳಲ್ಲಿಯೇ ಕೀವ್‌ನಲ್ಲಿ ನಡೆದ ಅತಿದೊಡ್ಡ ಸ್ಫೋಟವಾಗಿದ್ದು, ರಷ್ಯಾದ ಅತ್ಯಾಧುನಿಕ ಶಸ್ತ್ರಾಸ್ತ್ರಗಳಲ್ಲಿ ಒಂದಾದ ಕಿಂಜಲ್ ಹೈಪರ್‌ಸಾನಿಕ್ ಕ್ಷಿಪಣಿ ದಾಳಿಯನ್ನೂ ಒಳಗೊಂಡಿದೆ ಎಂದು ಉಕ್ರೇನ್ ವಾಯುಪಡೆ ತಿಳಿಸಿದೆ.

‘ರಷ್ಯಾವು ವಿಭಿನ್ನ ಬಗೆಯ 40ಕ್ಕೂ ಹೆಚ್ಚು ಕ್ಷಿಪಣಿಗಳನ್ನು ಬಳಸಿ ಐದು ನಗರಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುತ್ತಿದೆ’ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ಸುದ್ದಿ 2 ನಿಮಿಷ

‘ಭಾರತದ ವ್ಯಾಪಾರ ಪರಿಸರಕ್ಕೆ ಹೊಂದಿಕೊಳ್ಳುವ ಅಗತ್ಯವಿದೆ’

ನವದೆಹಲಿ (ಪಿಟಿಐ): ಭಾರತದಲ್ಲಿ ಕಾರ್ಯನಿರ್ವಹಿಸುತ್ತಿರುವ ತೈವಾನ್‌ನ ಸಂಸ್ಥೆಗಳು ಸೇರಿದಂತೆ ಎಲ್ಲ ವಿದೇಶಿ ಕಂಪನಿಗಳು ಭಾರತದ ವ್ಯಾಪಾರ ಪರಿಸರಕ್ಕೆ ಹೊಂದಿಕೊಳ್ಳುವ ಅಗತ್ಯವಿದೆ ಎಂದು ತೈವಾನ್ ಎಕ್ಸ್‌ಟರ್ನಲ್ ಟ್ರೇಡ್ ಡೆವಲಪ್‌ಮೆಂಟ್ ಕೌನ್ಸಿಲ್ (ಟಿಎಐಟಿಆರ್‌ಎ) ಅಧ್ಯಕ್ಷ ಜೇಮ್ಸ್ ಸಿ.ಎಫ್. ಹುವಾಂಗ್ ಸೋಮವಾರ ಹೇಳಿದ್ದಾರೆ.

ತಮಿಳುನಾಡಿನಲ್ಲಿ ಇರುವ ಫಾಕ್ಸ್‌ಕಾನ್ ಘಟಕದಲ್ಲಿ ವಿವಾಹಿತೆಯರ ನೇಮಕಾತಿ ವಿಷಯದಲ್ಲಿ ತಾರತಮ್ಯ ನೀತಿ ಅನುಸರಿಸಲಾಗುತ್ತಿದೆ ಎನ್ನುವ ಆರೋಪದ ಇರುವುದರಿಂದ, ಟಿಎಐಟಿಆರ್‌ಎ ಈ ಹೇಳಿಕೆ ನೀಡಿದೆ.



ತೈವಾನ್‌ನ ಪ್ರತಿ ಕಂಪನಿಯು ಭಾರತಕ್ಕೆ ಉತ್ತಮ ನಂಬಿಕೆಯೊಂದಿಗೆ ಬರುತ್ತದೆ. ಎಲ್ಲ ನೌಕರರ ಹಕ್ಕುಗಳ ರಕ್ಷಣೆಗೆ ತೈವಾನ್ ನಿರಂತರವಾಗಿ ನಿಯಮಗಳನ್ನು ಪಾಲಿಸುತ್ತದೆ ಎಂದು ಹುವಾಂಗ್ ಹೇಳಿದ್ದಾರೆ.

ತೈವಾನ್ ಉದ್ಯಮವು, ಭಾರತದ ಆರ್ಥಿಕತೆಯ ಅಭಿವೃದ್ಧಿಗೆ ಕೊಡುಗೆ ನೀಡಲು ಉತ್ಸುಕವಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರ ‘ಮೇಕ್ ಇನ್ ಇಂಡಿಯಾ’ ಮತ್ತು ‘ಡಿಜಿಟಲ್ ಇಂಡಿಯಾ’ ನೀತಿಗಳನ್ನು ಬೆಂಬಲಿಸುತ್ತದೆ ಎಂದಿದ್ದಾರೆ.

ಭಾರತ ಮತ್ತು ತೈವಾನ್ ನಡುವಿನ ದ್ವಿಪಕ್ಷೀಯ ವ್ಯಾಪಾರವು 2023ರಲ್ಲಿ ₹66,802 ಕೋಟಿ ಆಗಿದ್ದು, ಈ ವರ್ಷದ ಮೊದಲಾರ್ಧದಲ್ಲಿ (ಜನವರಿ-ಜೂನ್) ವ್ಯಾಪಾರವು ಶೇ 28ರಷ್ಟು ಪ್ರಗತಿ ಸಾಧಿಸಿದೆ ಎಂದು ಹೇಳಿದ್ದಾರೆ.

ಉದ್ಯೋಗಿಗಳ ಸಂಖ್ಯೆ ಶೇ 3.31ರಷ್ಟು ಏರಿಕೆ: ಆರ್‌ಬಿಐ

ಮುಂಬೈ (ಪಿಟಿಐ): ಕೃಷಿ, ವ್ಯಾಪಾರ ಮತ್ತು ಹಣಕಾಸು ಸೇವೆಗಳು ಸೇರಿದಂತೆ 27 ವಲಯಗಳಲ್ಲಿ ಉದ್ಯೋಗಿಗಳ ಸಂಖ್ಯೆ 2022–23ರ ಹಣಕಾಸು ವರ್ಷದಲ್ಲಿ 59.66 ಕೋಟಿ ಮುಟ್ಟಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸೋಮವಾರ ಹೇಳಿದೆ.

2021–22ರ ಇದೇ ಅವಧಿಯಲ್ಲಿ ಈ ವಲಯದಲ್ಲಿ 57.75 ಕೋಟಿ ಉದ್ಯೋಗಿಗಳಿದ್ದರು. ಇದಕ್ಕೆ ಹೋಲಿಸಿದರೆ ಶೇ 3.31ರಷ್ಟು ಏರಿಕೆಯಾಗಿದೆ ಎಂದು ತಿಳಿಸಿದೆ.

ಕೆಎಲ್‌ಇಎಂಎಸ್ (ಬಂಡವಾಳ (ಕೆ), ಕಾರ್ಮಿಕ, ಇಂಧನ, ವಸ್ತು ಮತ್ತು ಸೇವೆಗಳು) ದತ್ತಾಂಶವನ್ನು ಆರ್‌ಬಿಐ ತನ್ನ ವೆಬ್‌ಸೈಟ್‌ನಲ್ಲಿ ಅಪ್‌ಡೇಟ್ ಮಾಡಿದೆ. ನಿರ್ಮಾಣ, ವ್ಯಾಪಾರ, ಸಾರಿಗೆ ಮತ್ತು ಸಂಗ್ರಹಣೆಯು ಪ್ರಮುಖ ಉದ್ಯೋಗ ಒದಗಿಸುವ ವಿಭಾಗಗಳಾಗಿವೆ ಎಂದು ಅಂಕಿ–ಅಂಶಗಳು ಹೇಳಿವೆ.

ಮುಂಬೈ ಧಾರಣೆ (ಶೇಂಗಾ)

08-07-2024

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	10000-10100
ದಪ್ಪ ಗುಜರಾತ್(ಹೊಸ)	10800-10900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1550 (1570)
ಒಂದು ವಾರದ ಡೆಲಿವರಿ	1545 (1565)
ಸೋಯಾ ಕಚ್ಚಾ	925 (930)
ಪಾಮ್ ವಾರದ ಡೆಲಿವರಿ	913 (916)
ಸೂರ್ಯಕಾಂತಿ ಎಣ್ಣೆ ಕಚ್ಚಾ	925 (925)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹72,400 (72,950)
ಬೆಳ್ಳಿ ಕೆ.ಜಿ ₹91,700 (91,950)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹203
ಆರ್‌ಎಸ್‌ಎಸ್-5	₹195.50
ಗುಡ್ ಲಾಟ್	₹182.50

(ಪ್ರತಿ ಕೆ.ಜಿಗೆ)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8000-10952
ದಾವಣಗೆರೆ	₹6823-6823
ಮಧುಗಿರಿ	₹8400-9000
ತುರುವೇಕೆರೆ	₹9000-9200

ಸಂಕ್ಷಿಪ್ತ ಸುದ್ದಿ

ಮರ್ಸಿಡೀಸ್ ಬೆಂಜ್: 9,262 ವಾಹನ ಮಾರಾಟ

ನವದೆಹಲಿ (ಪಿಟಿಐ): ಜರ್ಮನಿಯ ಐಷಾರಾಮಿ ಕಾರು ತಯಾರಕ ಕಂಪನಿ ಮರ್ಸಿಡೀಸ್ ಬೆಂಜ್ ಇಂಡಿಯಾ ಪ್ರಸಕ್ತ ವರ್ಷದ ಜನವರಿಯಿಂದ ಜೂನ್‌ವರೆಗೆ 9,262 ವಾಹನಗಳನ್ನು ಮಾರಾಟ ಮಾಡಿದೆ ಎಂದು ಕಂಪನಿ ಸೋಮವಾರ ತಿಳಿಸಿದೆ.

2023ರ ಇದೇ ಅವಧಿಯಲ್ಲಿ 8,528 ಕಾರುಗಳು ಮಾರಾಟವಾಗಿದ್ದವು. ಈ ಮಾರಾಟಕ್ಕೆ ಹೋಲಿಸಿದರೆ ಶೇ 9ರಷ್ಟು ಏರಿಕೆಯಾಗಿದೆ. ವಾಹನಗಳಿಗೆ ಉತ್ತಮ ಬೇಡಿಕೆ ಇದ್ದು, ಹಲವು ಮಾದರಿಗಳ ಲಭ್ಯತೆಯಿಂದಾಗಿ ಮಾರಾಟದಲ್ಲಿ ಏರಿಕೆಯಾಗಿದೆ ಎಂದು ಕಂಪನಿ ಹೇಳಿದೆ.

2024ರ ದ್ವಿತೀಯಾರ್ಧದಲ್ಲಿ ಹೊಸದಾಗಿ 6 ಮಾದರಿಯ ಕಾರುಗಳನ್ನು ಬಿಡುಗಡೆ ಮಾಡಲು ಯೋಜಿಸಲಾಗಿದೆ ಎಂದೂ ಕಂಪನಿ ತಿಳಿಸಿದೆ.

ಬಿವೈಡಿ ಇಂಡಿಯಾ: ರಾಜೀವ್ ಚೌಹಾಣ್ ನೇಮಕ

ನವದೆಹಲಿ (ಪಿಟಿಐ): ಬಿವೈಡಿ ಇಂಡಿಯಾದ ವಿದ್ಯುತ್ ಚಾಲಿತ ಪ್ರಯಾಣಿಕ ವಾಹನ ವಿಭಾಗದ ಉಪಾಧ್ಯಕ್ಷರಾಗಿ ರಾಜೀವ್ ಚೌಹಾಣ್ ಅವರನ್ನು ನೇಮಿಸಲಾಗಿದೆ ಎಂದು ವಾಹನ ತಯಾರಕ ಕಂಪನಿ ಬಿವೈಡಿ ಇಂಡಿಯಾ ಸೋಮವಾರ ತಿಳಿಸಿದೆ.

ನಿವೃತ್ತರಾಗುತ್ತಿರುವ ಸಂಜಯ್ ಗೋಪಾಲಕೃಷ್ಣನ್ ಅವರಿಂದ ಚೌಹಾಣ್ ಅಧಿಕಾರ ವಹಿಸಿಕೊಂಡರು.


ಬೆಳ್ಳಿ ಧಾರಣೆ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ಚಿನ್ನ ಮತ್ತು ಬೆಳ್ಳಿ ಧಾರಣೆಯು ಏರಿಕೆ ಕಂಡಿದೆ.

ಬೆಳ್ಳಿ ಧಾರಣೆಯು ಕೆ.ಜಿಗೆ ₹870ರಷ್ಟು ಹೆಚ್ಚಳವಾಗಿ, ₹94,270ಕ್ಕೆ ಮುಟ್ಟಿದೆ. 10 ಗ್ರಾಂ ಚಿನ್ನದ ದರವು ₹100 ಏರಿಕೆಯಾಗಿ, ₹73,410ರಂತೆ ಮಾರಾಟವಾಗಿದೆ.

ಚುನಾವಣೆಯಿಂದ ಹಿಂದೆ ಸರಿಯುವಂತೆ ಬೈಡನ್‌ಗೆ ಆಗ್ರಹ

ವಾಷಿಂಗ್ಟನ್ (ಪಿಟಿಐ): ನವೆಂಬರ್ 5ರಂದು ನಡೆಯಲಿರುವ ಅಮೆರಿಕ ಅಧ್ಯಕ್ಷೀಯ ಚುನಾವಣಾ ಕಣದಿಂದ ಹಾಲಿ ಅಧ್ಯಕ್ಷ ಜೋ ಬೈಡನ್ ಅವರು ಹಿಂದೆ ಸರಿಯಬೇಕು ಎಂದು ಡೆಮಾಕ್ರಟಿಕ್ ಪಕ್ಷದ ಕನಿಷ್ಠ ಐದು ಸಂಸದರು ಭಾನುವಾರ ಆಗ್ರಹಿಸಿದ್ದಾರೆ ಎಂದು ಹಲವು ಮಾಧ್ಯಮಗಳು ವರದಿ ಮಾಡಿವೆ.



ಜೋ ಬೈಡನ್

ಡೆಮಾಕ್ರಟಿಕ್ ಪಕ್ಷದ ಸಂಸದರಾದ ಜೆರಿ ನಾಡ್ಲೆರ್, ಮಾರ್ಕ್ ಟಕಾನೊ, ಜೊ ಮೊರೆಲ್, ಟೆಡ್ ಲಿಯು ಹಾಗೂ ಆಡಂ ಸ್ಮಿತ್ ಜೂನ್ 27ರಂದು ಅಟ್ಲಾಂಟದಲ್ಲಿ ನಡೆದ ಸಂವಾದದಲ್ಲಿ ಜೋ ಬೈಡನ್ ಅವರ ಕೆಟ್ಟ ಪ್ರದರ್ಶನದ ಬಗ್ಗೆ ಚರ್ಚಿಸಿದ್ದರು. ರಿಪಬ್ಲಿಕನ್ ಪಕ್ಷದ ಅಧ್ಯಕ್ಷೀಯ ಅಭ್ಯರ್ಥಿ ಡೊನಾಲ್ಡ್ ಟ್ರಂಪ್ ವಿರುದ್ಧ ನಡೆದ ಸಭೆಯಲ್ಲಿ ಈ ರೀತಿ ಚರ್ಚಿಸಲಾಗಿತ್ತು.

ಸ್ವತಃ ಬೈಡನ್ ತಮ್ಮ ಪ್ರದರ್ಶನವನ್ನು ‘ಕೆಟ್ಟ ರಾತ್ರಿ’ ಎಂದು ಬಣ್ಣಿಸಿದ್ದಾರೆ. ಅವರ ಪ್ರಖ್ಯಾತಿ ಕಡಿಮೆಯಾಗುತ್ತಿದ್ದು, ಅವರ ಪಕ್ಷದವರೇ ಬೈಡನ್ ಆರೋಗ್ಯ ಸ್ಥಿತಿ ಮತ್ತು ಮುಂದಿನ ನಾಲ್ಕು ವರ್ಷ ದೇಶವನ್ನು ಆಳುವ ಅವರ ಸಾಮರ್ಥ್ಯವನ್ನು ಪ್ರಶ್ನಿಸಲು ಆರಂಭಿಸಿದ್ದಾರೆ. ಆದರೆ, ಬೈಡನ್ ಅವರು ತಾವೇ ಸ್ಪರ್ಧೆ ಮಾಡುವುದಾಗಿ ಪ್ರತಿಪಾದಿಸುತ್ತಿದ್ದು, ನವೆಂಬರ್‌ನಲ್ಲಿ ಟ್ರಂಪ್ ವಿರುದ್ಧ ಚುನಾವಣೆಯಲ್ಲಿ ಗೆಲುವು ಸಾಧಿಸುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಸಂಸದರಿಗೆ ಪತ್ರ

ವಾಷಿಂಗ್ಟನ್ (ಎಪಿ): ಅಧ್ಯಕ್ಷ ಜೋ ಬೈಡನ್ ಅವರು ಡೆಮಾಕ್ರಟಿಕ್ ಸಂಸದರಿಗೆ ಪತ್ರ ಬರೆದಿದ್ದು, ಚುನಾವಣೆಯಲ್ಲಿ ಹಿಂದೆ ಸರಿಯುವಂತೆ ನೀಡಿದ ಹೇಳಿಕೆಗಳ ವಿರುದ್ಧ ಪ್ರತಿಕ್ರಿಯಿಸಿದ್ದಾರೆ. ಚುನಾವಣೆಯಲ್ಲಿ ನಿಲ್ಲಬಾರದು ಎಂಬ ಸಂಸದರ ಆಂತರಿಕ ನಾಟಕವನ್ನು ‘ಅಂತ್ಯ’ ಮಾಡುವಂತೆ ಕರೆ ನೀಡಿದ್ದಾರೆ. ಎರಡು ಪುಟಗಳ ಪತ್ರವನ್ನು ಅವರು ಬರೆದಿದ್ದಾರೆ.

ರೈಲು ಸಂಚಾರ, ವಿಮಾನ ಹಾರಾಟಕ್ಕೆ ತೊಡಕು • ಆರು ಗಂಟೆಗಳಲ್ಲಿ 30 ಸೆಂ.ಮೀ ಮಳೆ

ಭಾರಿ ಮಳೆಗೆ ತತ್ತರಿಸಿದ ಮುಂಬೈ

ಮುಂಬೈ (ಪಿಟಿಐ): ಮುಂಬೈನ ಕೆಲವು ಪ್ರದೇಶಗಳಲ್ಲಿ ಭಾನುವಾರ ಮಧ್ಯರಾತ್ರಿಯಿಂದ ಸೋಮವಾರ ಬೆಳಿಗ್ಗೆ 7ರವರೆಗಿನ ಆರು ಗಂಟೆಗಳ ಅವಧಿಯಲ್ಲಿ 30 ಸೆಂ.ಮೀಗೂ ಹೆಚ್ಚು ಪ್ರಮಾಣದ ಮಳೆಯಾಗಿದೆ. ಇದರಿಂದಾಗಿ ಕೇಂದ್ರ ರೈಲ್ವೆ ವಿಭಾಗದ ಉಪನಗರ ರೈಲು ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಗಿತ್ತು. ಹಳಿಗಳು ಮುಚ್ಚಿಹೋಗುವಷ್ಟು ನೀರು ನಿಂತಿತ್ತು. ಸುಮಾರು 50 ವಿಮಾನಗಳ ಹಾರಾಟ ರದ್ದಾಗಿತ್ತು.

ಕೇಂದ್ರ ರೈಲ್ವೆಯ ಪ್ರಮುಖ ಮಾರ್ಗ ಛತ್ರಪತಿ ಶಿವಾಜಿ ಮಹಾರಾಜ್ ಟರ್ಮಿನಲ್ ಅನ್ನು ಕೆಲವು ಗಂಟೆಗಳ ಕಾಲ ಸ್ಥಗಿತಗೊಳಿಸಲಾಗಿತ್ತು. ಮುಂಬೈ ನಗರದ ಜೀವನಾಡಿಯಾಗಿರುವ ರೈಲ್ವೆ ಸಂಚಾರದಲ್ಲಿ ಕೂಡ ಅಡಚಣೆ ಉಂಟಾಗಿತ್ತು. 10 ನಿಮಿಷ ತಡವಾಗಿ ರೈಲುಗಳ ಸಂಚಾರವಾಗುತ್ತಿತ್ತು. ಇದರಿಂದ, ರೈಲು ನಿಲ್ದಾಣಗಳಲ್ಲಿ ಭಾರಿ ಜನರು ಜಮಾವಣೆಗೊಳ್ಳುವಂತೆ ಆಯಿತು.

'ಹಳಿಗಳ ಮೇಲೆ ನೀರು ನಿಂತಿದ್ದ ಕಾರಣ, ರೈಲುಗಳ ಸಂಚಾರದಲ್ಲಿ ವ್ಯತ್ಯಯಗಳಾಗಿವೆ. ಹೆಚ್ಚು ಸಾಮರ್ಥ್ಯದ ಪಂಪ್‌ಗಳನ್ನು ಬಳಸಿಕೊಂಡು ಹಳಿಗಳ ಮೇಲೆ ಹರಿಯುತ್ತಿದ್ದ ನೀರನ್ನು ಖಾಲಿ ಮಾಡಲಾಯಿತು' ಎಂದು ಪಶ್ಚಿಮ ರೈಲ್ವೆಯ ವಕ್ತಾರರು ತಿಳಿಸಿದ್ದಾರೆ.

ಮುಂಬೈ ವಿಮಾನ ನಿಲ್ದಾಣದಲ್ಲಿ ರನ್‌ವೇ ಕಾರ್ಯಾಚರಣೆಯಲ್ಲಿ ತೊಡಕು ಉಂಟಾಗಿತ್ತು. ಇದರಿಂದ 50 ವಿಮಾನಗಳ ಸಂಚಾರವು ರದ್ದಾಗಿದೆ. ಅಹಮದಾಬಾದ್, ಹೈದರಾಬಾದ್, ಇಂದೋರ್ ಸೇರಿದಂತೆ ಹಲವು ನಗರಗಳಿಗೆ ಈ ವಿಮಾನಗಳ ಮಾರ್ಗ ಬದಲಾಯಿಸಲಾಯಿತು. 'ಮುಂದಿನ 24 ಗಂಟೆಗಳಲ್ಲಿ ಮುಂಬೈನಲ್ಲಿ ಮಿತವಾದ ಹಾಗೂ ನಗರದ ಸುತ್ತಮುತ್ತಲ ಪ್ರದೇಶಗಳಲ್ಲಿ ಭಾರಿ ಮಳೆಯಾಗಲಿದೆ' ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಮಹಾರಾಷ್ಟ್ರದಾದ್ಯಂತ ಮಳೆಯಾಗುತ್ತಿದೆ.

ಮುಖ್ಯಾಂಶಗಳು

- ಅರುಣಾಚಲ ಪ್ರದೇಶದಲ್ಲಿ ಭೂಕುಸಿತ- ಹಲವು ಜಿಲ್ಲೆಗಳ ರಸ್ತೆ ಸಂಪರ್ಕ ಕಡಿತ
- ಸೋಮವಾರ ಚಾರ್‌ಧಾಮ್ ಯಾತ್ರೆಯನ್ನು ಪುನಃ ಆರಂಭಿಸಲಾಗಿದೆ
- ಅಸ್ಸಾಂನ ಕಾಜೀರಂಗ್ ರಾಷ್ಟ್ರೀಯ ಉದ್ಯಾನದಲ್ಲಿ 131 ವನ್ಯಮೃಗಗಳು ಮೃತ

ಎರಡೂ ಸದನಗಳ ಕಲಾಪ ಮುಂದೂಡಿಕೆ: ಮಹಾರಾಷ್ಟ್ರದ ವಿಧಾನಸಭೆ ಹಾಗೂ ವಿಧಾನ ಪರಿಷತ್‌ನ ಕಲಾಪವನ್ನು ಒಂದು ದಿನದ ಮಟ್ಟಿಗೆ ಸೋಮವಾರ ಮುಂದೂಡಲಾಯಿತು. ಸಚಿವಾಲಯದ ಸಿಬ್ಬಂದಿ, ಶಾಸಕರು, ಸಚಿವರು ಎಲ್ಲರೂ ಮಳೆಯಿಂದಾಗಿ ವಿಧಾನಸಭೆಗೆ ಹಾಜರಾಗಲು ಸಾಧ್ಯವಾಗದ ಕಾರಣ ಕಲಾಪವನ್ನು ಮುಂದೂಡಲಾಯಿತು.

ಬೆಳಿಗ್ಗೆ 11 ಗಂಟೆಗೆ ಕಲಾಪ ಆರಂಭಗೊಳ್ಳುತ್ತಿದ್ದಂತೆಯೇ, ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿಜಯ್ ವಡೆಟ್ಟಾವರ್ ಅವರು, 'ಕೋಟಿ ಕೋಟಿ ಹಣ ಸುರಿದರೂ ಮುಂಗಾರು ಪೂರ್ವ ಸಿದ್ಧತೆಗಳನ್ನು ಸರ್ಕಾರವು ಸರಿಯಾಗಿ ನಿರ್ವಹಿಸಿಲ್ಲ' ಎಂದರು. 'ನಾವೆಲ್ಲರೂ ಚುನಾವಣೆಯಲ್ಲಿ ತೊಡಗಿಕೊಂಡಿದ್ದೆವು. ಗುತ್ತಿಗೆದಾರರು ಮೋರಿಗಳ ಸ್ವಚ್ಛತೆ ಕೈಗೊಳ್ಳಬೇಕಿತ್ತು. ಮೋರಿಗಳಿಂದ ಎತ್ತಿದ ಕಸವನ್ನು ರಸ್ತೆ ಬದಿಯಲ್ಲಿಯೇ ಹಾಕಿದ್ದಾರೆ. ಮಳೆನೀರಿನಿಂದಾಗಿ ಆ ಕಸ ಮತ್ತೆ ಮೋರಿ ಸೇರಿದೆ' ಎಂದು ಬಿಜೆಪಿಯ ಆಶಿಶ್ ಶೋಲಾರ್ ಹೇಳಿದರು.

ಸಿಲುಕಿದ ವಿಪತ್ತು ನಿರ್ವಹಣಾ ಸಚಿವ: ಕಲಾಪದಲ್ಲಿ ಭಾಗಿಯಾಗಲು, ಪರಿಹಾರ ಹಾಗೂ ಪುನರ್‌ವಸತಿ ಮತ್ತು ವಿಪತ್ತು ನಿರ್ವಹಣಾ ಸಚಿವ ಅನಿಲ್ ಪಾಟೀಲ್ ಹಾಗೂ ಎನ್‌ಸಿಪಿ ಶಾಸಕ ಅಮೋಲ್ ಮಿಟ್ಕರಿ ಅವರು ಹೌರಾ–ಮುಂಬೈ ರೈಲಿನಲ್ಲಿ ಬರುತ್ತಿದ್ದರು. ಹಳಿ ಮೇಲೆ ನೀರು ನಿಂತ ಕಾರಣ, ಸುಮಾರು 2 ಗಂಟೆಗಳವರೆಗೆ ರೈಲು ನಿಂತೇ ಇತ್ತು. ಈ ವೇಳೆ ಇಬ್ಬರೂ ರೈಲಿನಿಂದ ಇಳಿದು, ಎರಡೂವರೆ ಕೀ.ಮೀ ನಡೆದು, ಹತ್ತಿರದ ಪೊಲೀಸ್ ಠಾಣೆಗೆ ತಲುಪಿದರು. ಸಚಿವ ಹಾಗೂ ಶಾಸಕ, ಹಳಿಗಳ ಮೇಲೆ ನಡೆದ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಇದೇ ರೈಲಿನಲ್ಲಿ ಹಲವು ಶಾಸಕರೂ ಇದ್ದರು ಎಂದು ಹೇಳಲಾಗಿದೆ.



ಮುಂಬೈನಲ್ಲಿ ರೈಲು ಹಳಿಗಳ ಮೇಲೆ ನೀರು ನಿಂತಿದ್ದರಿಂದ ಸಂಚಾರಕ್ಕೆ ಅಡಚಣೆ ಉಂಟಾಯಿತು —ಪಿಟಿಐ ಚಿತ್ರ

ಬಿಹಾರದಲ್ಲಿ ಸಿಡಿಲು: 12 ಸಾವು

ಪಟ್ನಾ: ಬಿಹಾರದ ಏಳು ಜಿಲ್ಲೆಗಳಲ್ಲಿ ಸಿಡಿಲಿನಿಂದಾಗಿ 12 ಮಂದಿ ಮೃತಪಟ್ಟಿದ್ದಾರೆ. ಕಳೆದ 10 ದಿನಗಳಲ್ಲಿ ವಿವಿಧ ಜಿಲ್ಲೆಗಳಲ್ಲಿ ಸಿಡಿಲಿನಿಂದ 40 ಜನರು ಮೃತಪಟ್ಟಿದ್ದರೆ, ಕಳೆದ ಎರಡು ದಿನಗಳಲ್ಲೇ 22 ಮಂದಿ ಸಾವಿಗೀಡಾಗಿದ್ದಾರೆ.

ರಾಜ್ಯದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು, ಮೃತರ ಕುಟುಂಬಗಳಿಗೆ ₹4 ಲಕ್ಷ ಪರಿಹಾರ ಘೋಷಿಸಿದ್ದಾರೆ. ಮನೆಯಿಂದ ಹೊರಬರದಂತೆ ಜನರಲ್ಲಿ ಮನವಿ ಮಾಡಿದ್ದಾರೆ.

'ಅಸ್ಸಾಂ: ಸಂಸತ್ತಿನಲ್ಲಿ ನಾನು ನಿಮ್ಮ ಸೈನಿಕನಾಗುವೆ'

ಗುವಾಹಟಿ/ಸಿಲ್‌ಚರ್: ಅಸ್ಸಾಂನಲ್ಲಿ ಪ್ರವಾಹ ಸ್ಥಿತಿಯು ಮುಂದುವರಿದಿದ್ದು, 28 ಜಿಲ್ಲೆಗಳ ಸುಮಾರು 23 ಲಕ್ಷ ಜನರು ಬಾಧಿತರಾಗಿದ್ದಾರೆ. ಪ್ರಮುಖ ನದಿಗಳು ಅಪಾಯಕಾರಿ ಮಟ್ಟವನ್ನು ಮೀರಿ ಹರಿಯುತ್ತಿವೆ. ಈ ಮಧ್ಯೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಸೋಮವಾರ ಅಸ್ಸಾಂನ ಕಛಾರ್ ಜಿಲ್ಲೆಯ ಫುಲರತಾಲ್‌ನಲ್ಲಿರುವ ನಿರಾಶ್ರಿತರ ಶಿಬಿರವೊಂದಕ್ಕೆ ಭೇಟಿ ನೀಡಿದ್ದಾರೆ.

'ನಾನು ಅಸ್ಸಾಂ ಜನರ ಪರವಾಗಿ 'ಸಂಸತ್ತಿನಲ್ಲಿ ನಿಮ್ಮ ಸೈನಿಕನಂತೆ' ಇರಲಿದ್ದೇನೆ. ಕೇಂದ್ರ ಸರ್ಕಾರವು ತ್ವರಿತವಾಗಿ ಸಾಧ್ಯವಿರುವ ಸಹಾಯವನ್ನು ಅಸ್ಸಾಂಗಾಗಿ ಮಾಡಬೇಕು' ಎಂದು ರಾಹುಲ್ ಅವರು 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ. ಲೋಕಸಭೆಯಲ್ಲಿ ಇಲ್ಲಿನ ಪ್ರವಾಹದ ಕುರಿತು ಮಾತನಾಡುವಂತೆ, ರಾಹುಲ್ ಅವರನ್ನು ಅಸ್ಸಾಂ ಕಾಂಗ್ರೆಸ್ ಮನವಿ ಮಾಡಿಕೊಂಡಿತು.

'ಅಸ್ಸಾಂ ಪ್ರವಾಹ ಸ್ಥಿತಿಗೆ ಸಂಬಂಧಿಸಿದಂತೆ ತಕ್ಷಣದ ಮತ್ತು ದೀರ್ಘಾವಧಿಯ ಪರಿಹಾರ ಯೋಜನೆಯೊಂದು ಬೇಕಿದೆ. ಅದು ಸಮಗ್ರವಾದ ಹಾಗೂ ಸಹಾನುಭೂತಿಯಿಂದ ಕೂಡಿರಬೇಕಿದೆ. ಪುನರ್‌ವಸತಿ ಹಾಗೂ ಪರಿಹಾರ ಸಂಬಂಧ ರಾಜ್ಯಕ್ಕೆ ತಕ್ಷಣದಲ್ಲಿ ಯೋಜನೆಯೊಂದು ಬೇಕಿದೆ. ಪ್ರತೀ ಬಾರಿಯು ತಲೆದೋರುವ ಪ್ರವಾಹಕ್ಕೆ ಸಂಬಂಧಿಸಿದಂತೆ, ಇಡೀ ಈಶಾನ್ಯ ರಾಜ್ಯಗಳನ್ನು ಒಳಗೊಳ್ಳುವ ಜಲ ನಿರ್ವಹಣಾ ಪ್ರಾಧಿಕಾರ ಸ್ಥಾಪನೆಯು ದೀರ್ಘಾವಧಿಯ ಕಾರ್ಯ ಯೋಜನೆಯಾಗಬೇಕು' ಎಂದರು.

> **ಪ್ರವಾಹ ಮುಕ್ತ ಅಸ್ಸಾಂ ರೂಪಿಸುವುದಾಗಿ ಬಿಜೆಪಿಯು ಮಾತು ಕೊಟ್ಟು ಅಧಿಕಾರಕ್ಕೆ ಬಂತು. ಆದರೆ ಈಗ ಮಾತಿಗೆ ತಪ್ಪಿದೆ**
> **ರಾಹುಲ್ ಗಾಂಧಿ,** ಲೋಕಸಭೆಯ ವಿರೋಧ ಪಕ್ಷದ ನಾಯಕ

> **ಪ್ರವಾಹ ಸಂಬಂಧಿತ ಪರಿಹಾರಕ್ಕಾಗಿ 5 ವರ್ಷಗಳಲ್ಲಿ ₹10,785 ಕೋಟಿ ನೀಡುವಂತೆ ಕೇಂದ್ರಕ್ಕೆ ಅಸ್ಸಾಂ ಮನವಿ ಮಾಡಿದೆ. ಆದರೆ, ಬಂದಿದ್ದು ಮಾತ್ರ ₹250 ಕೋಟಿ**
> **ಭೂಪೆನ್ ಬೋರಾ,** ಅಸ್ಸಾಂನ ಕಾಂಗ್ರೆಸ್ ಘಟಕದ ಅಧ್ಯಕ್ಷ

'ಅಂಗವಿಕಲರ ಬಗ್ಗೆ ಪೂರ್ವಗ್ರಹ ಸಲ್ಲ'

ನವದೆಹಲಿ (ಪಿಟಿಐ): ಚಲನಚಿತ್ರಗಳು ಮತ್ತು ದೃಶ್ಯ ಮಾಧ್ಯಮಗಳಲ್ಲಿ ಅಂಗವಿಕಲರನ್ನು ಪೂರ್ವಗ್ರಹ ಪೀಡಿತರಾಗಿ ಚಿತ್ರಿಸುವುದು ಅವರ ಬಗೆಗಿನ ತಾರತಮ್ಯ ಮತ್ತು ಅಸಮಾನತೆಯನ್ನು ಶಾಶ್ವತಗೊಳಿಸುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.



ಅಂಗವಿಲಕರ ಬಗ್ಗೆ ತಪ್ಪುಗ್ರಹಿಕೆ ಉಂಟುಮಾಡುವ ಚಿತ್ರಣ ನೀಡುವುದರಿಂದ ಮತ್ತು ಅವರನ್ನು ಗೇಲಿ ಮಾಡುವ ಭಾಷೆ ಬಳಸುವುದರಿಂದ ದೂರವಿರುವಂತೆ ಚಲನಚಿತ್ರ ನಿರ್ಮಾಪಕರಿಗೆ ಸೂಚಿಸಿತು.

ಅಂಗವಿಕರಿಗೆ ಸಂಬಂಧಿಸಿದ ಮಾಹಿತಿಗಳನ್ನು ಒದಗಿಸುವಾಗ ಬಳಸುವ ಭಾಷೆಯ ಬಗ್ಗೆ ಎಚ್ಚರ ವಹಿಸಬೇಕು. ಅವರನ್ನು ಅವಹೇಳನ ಮಾಡುವ ಹಾಗೂ ಮತ್ತಷ್ಟು ಕಡೆಗಣಿಸುವಂತಹ ಭಾಷೆಗಳನ್ನು ಬಳಸಬಾರದು ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಅವರಿದ್ದ ನ್ಯಾಯಪೀಠ ತಿಳಿಸಿತು.

ದೃಶ್ಯ ಮಾಧ್ಯಮಗಳು ಅಂಗವಿಕಲರ ಜೀವನದ ವಾಸ್ತವ ಅಂಶಗಳನ್ನು ಚಿತ್ರಿಸಲು ಶ್ರಮಿಸಬೇಕು. ಅವರು ಎದುರಿಸುತ್ತಿರುವ ಸವಾಲುಗಳನ್ನು ಮಾತ್ರವಲ್ಲದೆ ಅವರು ಸಾಧಿಸಿದ ಯಶಸ್ಸು, ಪ್ರತಿಭೆ ಮತ್ತು ಸಮಾಜಕ್ಕೆ ನೀಡಿರುವ ಕೊಡುಗೆಗಳನ್ನೂ ಚಿತ್ರಿಸಬೇಕು. ಈ ರೀತಿ ಮಾಡಿದರೆ, ಅವರ ಬಗೆಗಿನ ಪೂರ್ವಗ್ರಹಗಳನ್ನು ಹೋಗಲಾಡಿಸಲು ಸಾಧ್ಯವಾಗುತ್ತದೆ ಎಂದು ಅಭಿಪ್ರಾಯಪಟ್ಟಿತು.

ಹಿಂದಿ ಚಲನಚಿತ್ರ 'ಆಂಖ್ ಮಿಚೋಲಿ'ಯಲ್ಲಿ ಅಂಗವಿಕಲರನ್ನು ಅವಹೇಳನಕಾರಿಯಾಗಿ ಚಿತ್ರಿಸಲಾಗಿದೆ ಎಂದು ಆರೋಪಿಸಿ ನಿಪುನ್ ಮಲ್ಹೋತ್ರ ಎಂಬವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಪೀಠವು ಈ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದೆ.

ಬಂಗಾಳ ಸರ್ಕಾರಕ್ಕೆ 'ಸುಪ್ರೀಂ' ತರಾಟೆ

ಸಂದೇಶ್‌ಖಾಲಿ: ಸಿಬಿಐ ತನಿಖೆ ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): 'ಕೆಲವು ವ್ಯಕ್ತಿಗಳ ಹಿತಾಸಕ್ತಿಯನ್ನು ಕಾಪಾಡಲು ರಾಜ್ಯವು ಏಕೆ ಆಸಕ್ತಿ ವಹಿಸಬೇಕು' ಎಂದು ಪ್ರಶ್ನಿಸಿದ ಸುಪ್ರೀಂ ಕೋರ್ಟ್, ಪಶ್ಚಿಮ ಬಂಗಾಳ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿತು.



ಪಶ್ಚಿಮ ಬಂಗಾಳದ ಸಂದೇಶ್ ಖಾಲಿಯಲ್ಲಿ ಮಹಿಳೆಯರ ಮೇಲಿನ ಅಪರಾಧಗಳು ಮತ್ತು ಭೂಕಬಳಿಕೆ ಆರೋಪಗಳ ಬಗ್ಗೆ ಸಿಬಿಐ ತನಿಖೆಗೆ ನಿರ್ದೇಶಿಸಿದ್ದ ಕಲ್ಕತ್ತ ಹೈಕೋರ್ಟ್‌ನ ಆದೇಶ ಪ್ರಶ್ನಿಸಿ ಬಂಗಾಳ ಸರ್ಕಾರ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರಿಂ ಕೋರ್ಟ್ ಸೋಮವಾರ ವಜಾಗೊಳಿಸಿತು.

'ಇದು ಸಂದೇಶ್‌ಖಾಲಿಯಲ್ಲಿ ನಡೆದ ಘಟನೆಗಳಿಗೆ ಸಂಬಂಧಿಸಿದ್ದಾಗಿದೆ. ನೀವು (ರಾಜ್ಯ ಸರ್ಕಾರ) ಸಂತ್ರಸ್ತರಿಗೆ ನ್ಯಾಯ ಒದಗಿಸಲು ತಿಂಗಳುಗಳ ಕಾಲ ಏನೂ ಮಾಡಿಲ್ಲ' ಎಂದು ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಮತ್ತು ಕೆ.ವಿ.ವಿಶ್ವನಾಥನ್ ಅವರಿದ್ದ ಪೀಠವು ಬಂಗಾಳ ಸರ್ಕಾರದ ಪರ ಹಾಜರಿದ್ದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಅವರಿಗೆ ಹೇಳಿತು.

ಸಂದೇಶ್‌ಖಾಲಿಯಲ್ಲಿ ಮಹಿಳೆಯರನ್ನು ಗುರಿಯಾಗಿಸಿಕೊಂಡು ನಡೆದಿದೆ ಎನ್ನಲಾದ ದೌರ್ಜನ್ಯ ಹಾಗೂ ಜಮೀನು ಕಬಳಿಕೆ ಪ್ರಕರಣದ ಕುರಿತು ಸಿಬಿಐ ತನಿಖೆಗೆ ಕಲ್ಕತ್ತ ಹೈಕೋರ್ಟ್ ಏಪ್ರಿಲ್ 10ರಂದು ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ರಾಜ್ಯ ಸರ್ಕಾರ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ನಡೆಸಿತು.

'ಸಿಬಿಐ ತನಿಖೆ ನಡೆಸುವಂತೆ ಕಲ್ಕತ್ತ ಹೈಕೋರ್ಟ್ ನೀಡಿರುವ ನಿರ್ದೇಶನವನ್ನು ಸಂದೇಶ್‌ಖಾಲಿಯಲ್ಲಿ ಜಾರಿ ನಿರ್ದೇಶನಾಲಯದ ಅಧಿಕಾರಿಗಳ ಮೇಲಿನ ದಾಳಿಗೆ ಸಂಬಂಧಿಸಿದ ಎರಡು ಎಫ್‌ಐಆರ್‌ಗಳಿಗೆ ಸೀಮಿತಗೊಳಿಸಬಹುದು' ಎಂದು ಸಿಂಘ್ವಿ ಅವರು ನ್ಯಾಯಪೀಠಕ್ಕೆ ತಿಳಿಸಿದರು.

'ಹೈಕೋರ್ಟ್ ನೀಡಿರುವ ನಿರ್ದೇಶನವು ಪಡಿತರ ಹಗರಣಕ್ಕೂ ಅನ್ವಯವಾಗುತ್ತದೆ. ಆ ಹಗರಣಕ್ಕೆ ಸಂಬಂಧಿಸಿದಂತೆ 43 ಎಫ್‌ಐಆರ್‌ಗಳು ದಾಖಲಾಗಿವೆ' ಎಂಬುದನ್ನು ಪೀಠದ ಗಮನಕ್ಕೆ ತಂದರು.

'ಎಫ್‌ಐಆರ್‌ಗಳನ್ನು ನಾಲ್ಕು ವರ್ಷಗಳ ಹಿಂದೆಯೇ ದಾಖಲಿಸಲಾಗಿದೆ. ಆರೋಪಿಗಳು ಯಾರು, ಬಂಧನ ಯಾವಾಗ ನಡೆದಿದೆ' ಎಂದು ಪೀಠವು ಪ್ರಶ್ನಿಸಿತು. 'ಯಾವುದೋ ವ್ಯಕ್ತಿಗಳ ಹಿತಾಸಕ್ತಿ ಕಾಪಾಡಲು ಸರ್ಕಾರ ಏಕೆ ಆಸಕ್ತಿ ವಹಿಸಬೇಕು' ಎಂದು ಕೇಳಿದ ಪೀಠ, ಅರ್ಜಿಯನ್ನು ತಿರಸ್ಕರಿಸಿರುವುದಾಗಿ ಹೇಳಿತು.

ಹೈಕೋರ್ಟ್ ಆದೇಶವು ರಾಜ್ಯದ ಪೊಲೀಸ್ ಪಡೆ ಸೇರಿದಂತೆ ಇಡೀ ವ್ಯವಸ್ಥೆಯ ನೈತಿಕ ಸ್ಥೈರ್ಯವನ್ನು ಕುಂದಿಸಿದೆ ಎಂದು ಬಂಗಾಳ ಸರ್ಕಾರ ಸಲ್ಲಿಸಿದ್ದ ಅರ್ಜಿಯಲ್ಲಿ ತಿಳಿಸಿತ್ತು.

'ಪರಿಣಾಮ ಬೀರಿದ್ದರೆ ಮರುಪರೀಕ್ಷೆ'

ಒಂದನೇ ಪುಟದಿಂದ...

'ಪರೀಕ್ಷಾ ಅಕ್ರಮವು ವ್ಯವಸ್ಥಿತವಾಗಿ ನಡೆದಿದೆಯೇ, ಅಕ್ರಮವು ಸಂಪೂರ್ಣ ಪರೀಕ್ಷಾ ಪ್ರಕ್ರಿಯೆಯ ಮೇಲೆ ಪರಿಣಾಮ ಬೀರುವ ಸ್ವರೂಪದ್ದಾಗಿದೆಯೇ ಎಂಬುದು ಸ್ಪಷ್ಟವಾಗಬೇಕಿದೆ' ಎಂದೂ ಹೇಳಿತು.

ಪರೀಕ್ಷಾ ಅಕ್ರಮದ ಫಲಾನುಭವಿಗಳನ್ನು ಗುರುತಿಸಲು ಸಾಧ್ಯವಾದರೆ ಮರುಪರೀಕ್ಷೆಯ ಅಗತ್ಯವಿರುವುದಿಲ್ಲ. 23 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳಿಗೆ ಮರು ಪರೀಕ್ಷೆ ನಡೆಸುವುದು ಕಷ್ಟಕರ ಎಂಬುದನ್ನು ಗಮನಿಸಬೇಕು. ಪ್ರಶ್ನೆ ಪತ್ರಿಕೆ ಸೋರಿಕೆಯು ಸಾಮಾಜಿಕ ಮಾಧ್ಯಮಗಳ ಮೂಲಕ ನಡೆದಿದ್ದರೆ, ಅದು ದೊಡ್ಡ ಮಟ್ಟದಲ್ಲೇ ಆಗಿರುತ್ತದೆ. ಟೆಲಿಗ್ರಾಂ ಮತ್ತು ವಾಟ್ಸ್‌ಆ್ಯಪ್‌ನಲ್ಲಿ ಆಗಿದ್ದರೆ ಅದು ಕಾಳ್ಗಿಚ್ಚಿನಂತೆ ಹರಡಿರುತ್ತದೆ ಎಂಬುದನ್ನು ಪೀಠವು ಗಮನಿಸಿತು.

ಪ್ರಶ್ನೆ ಪತ್ರಿಕೆ ಸೋರಿಕೆ ಹೇಗಾಯಿತು ಎಂಬ ಕುರಿತ ತನಿಖಾ ವರದಿ ಒಳಗೊಂಡಂತೆ ಜುಲೈ 10ರ ಒಳಗಾಗಿ ಅಫಿಡವಿಟ್ ಸಲ್ಲಿಸುವಂತೆ ಎನ್‌ಟಿಎ, ಕೇಂದ್ರ ಸರ್ಕಾರ ಮತ್ತು ಸಿಬಿಐಗೆ ಪೀಠವು ನಿರ್ದೇಶಿತು.

ಪರೀಕ್ಷಾ ಅಕ್ರಮದಿಂದ ಪ್ರಯೋಜನ ಪಡೆದ ವಿದ್ಯಾರ್ಥಿಗಳನ್ನು ಪತ್ತೆಹಚ್ಚಲು ಸೈಬರ್ ವಿಧಿವಿಜ್ಞಾನ ಘಟಕದ ದತ್ತಾಂಶಗಳ ವಿಶ್ಲೇಷಣೆಯಿಂದ ಸಾಧ್ಯವೇ ಎಂಬುದನ್ನು ತಿಳಿಸುವಂತೆಯೂ ನಿರ್ದೇಶನ ನೀಡಿತು.

ನೀಟ್–ಯುಜಿ ಪರೀಕ್ಷೆಯ 'ಪವಿತ್ರತೆ'ಯನ್ನು ಖಾತರಿಪಡಿಸುವ ಬಗ್ಗೆ ಕಳವಳ ವ್ಯಕ್ತಪಡಿಸಿದ ಸುಪ್ರೀಂ ಕೋರ್ಟ್, ಭವಿಷ್ಯದಲ್ಲಿ ಇಂತಹ ಘಟನೆಗಳು ಪುನರಾವರ್ತನೆಯಾಗದಂತೆ ನೋಡಿಕೊಳ್ಳಲು ತಜ್ಞರನ್ನು ಒಳಗೊಂಡ ಸಮಿತಿ ರಚಿಸುವುದನ್ನು ಕೇಂದ್ರ ಸರ್ಕಾರ ಪರಿಗಣಿಸುವುದು ಅಗತ್ಯ ಎಂದು ಹೇಳಿತು.

ಪೀಠ ಹೇಳಿದ್ದು...

- ಪರೀಕ್ಷೆಯ 'ಪವಿತ್ರತೆ'ಗೆ ಧಕ್ಕೆಯಾಗಿರುವುದರಲ್ಲಿ ಅನುಮಾನ ಇಲ್ಲ.
- 23 ಲಕ್ಷ ವಿದ್ಯಾರ್ಥಿಗಳ ಭವಿಷ್ಯದ ವಿಷಯ ಇದಾಗಿರುವುದರಿಂದ ಮರುಪರೀಕ್ಷೆಗೆ ಆದೇಶಿಸುವ ಮೊದಲು, ಪ್ರಶ್ನೆ ಪತ್ರಿಕೆ ಸೋರಿಕೆಯ ವ್ಯಾಪ್ತಿ ಬಗ್ಗೆ ತಿಳಿದುಕೊಳ್ಳಬೇಕಿದೆ.
- ಪ್ರಶ್ನೆಪತ್ರಿಕೆ ಸೋರಿಕೆಯ ಫಲಾನುಭವಿಗಳನ್ನು ಗುರುತಿಸಲು ನಿರ್ದಾಕ್ಷಿಣ್ಯವಾಗಿ ಕ್ರಮವಹಿಸಬೇಕು.
- ಅಕ್ರಮದ ಹಿಂದಿರುವ ತಪ್ಪಿತಸ್ಥರನ್ನು ಪತ್ತೆಹಚ್ಚಲು ಸಾಧ್ಯವಾಗದಿದ್ದರೂ ಮರು ಪರೀಕ್ಷೆಗೆ ಆದೇಶಿಸಬೇಕಾಗುತ್ತದೆ.
- ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಾವು ಸ್ವಯಂ ನಿರಾಕರಣೆಯಲ್ಲಿರಬಾರದು. ಸ್ವಯಂ ನಿರಾಕರಣೆ ಸಮಸ್ಯೆಯನ್ನು ಇನ್ನಷ್ಟು ಹೆಚ್ಚಿಸುತ್ತಿದೆ.

ಬಿಎಂಡಬ್ಲ್ಯು ಅಪಘಾತ: ಲುಕ್‌ಔಟ್ ನೋಟಿಸ್ ಜಾರಿ

ಮುಂಬೈ (ಪಿಟಿಐ): ವರ್ಲಿಯಲ್ಲಿ ಭಾನುವಾರ ಸಂಭವಿಸಿದ ಬಿಎಂಡಬ್ಲ್ಯು ಕಾರು ಅಪಘಾತ ಪ್ರಕರಣಕ್ಕೆ ಸಂಬಂಧಿಸಿದಂತೆ ತಲೆಮರೆಸಿಕೊಂಡಿರುವ ಆರೋಪಿ ವಿರುದ್ಧ ಲುಕ್‌ಔಟ್ ನೋಟಿಸ್ (ಎಲ್‌ಒಸಿ) ಹೊರಡಿಸಲಾಗಿದೆ ಎಂದು ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

'ಆರೋಪಿ ಮಿಹಿರ್ ಶಾ ದೇಶದಿಂದ ಪಲಾಯನ ಮಾಡುವ ಸಾಧ್ಯತೆ ಇರುವುದರಿಂದ, ಆತನ ವಿರುದ್ಧ ಭಾನುವಾರ ಸಂಜೆ ಎಲ್‌ಒಸಿ ಹೊರಡಿಸಲಾಗಿದೆ. ಆರೋಪಿಯ ಪತ್ತೆಗಾಗಿ 11 ತಂಡಗಳನ್ನು ರಚಿಸಲಾಗಿದೆ' ಎಂದು ಹೇಳಿದ್ದಾರೆ.

ಮಿಹಿರ್, ನೆರೆಯ ಪಾಲ್ಘರ್ ಜಿಲ್ಲೆಯ ಶಿವಸೇನಾ (ಶಿಂದೆ ಬಣ) ಮುಖಂಡ ರಾಜೇಶ್ ಶಾ ಅವರ ಪುತ್ರ.

ಜಾಮೀನು: ಪ್ರಕರಣಕ್ಕೆ ಸಂಬಂಧಿಸಿ ಶಿವಸೇನಾ (ಶಿಂದೆ ಬಣ) ಮುಖಂಡ ರಾಜೇಶ್ ಶಾ ಅವರಿಗೆ ಮುಂಬೈ ಕೋರ್ಟ್ ಸೋಮವಾರ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಿ, ಬಳಿಕ ಜಾಮೀನು ಮಂಜೂರು ಮಾಡಿದೆ. ಅವರ ಕಾರು ಚಾಲಕನು ಪ್ರಕರಣದ ಆರೋಪಿಯಾಗಿದ್ದು, ಅವರನ್ನು ಮಂಗಳವಾರದವರೆಗೆ ಪೊಲೀಸ್ ಕಸ್ಟಡಿಗೆ ವಹಿಸಲಾಗಿದೆ.

ಪ್ರತ್ಯೇಕ ನಿಯಮವಿಲ್ಲ– ಶಿಂದೆ: 'ಈ ಅಪಘಾತಕ್ಕಾಗಿಯೇ ಪ್ರತ್ಯೇಕ ನಿಯಮವಿಲ್ಲ. ಕಾನೂನು ಎಲ್ಲರಿಗೂ ಒಂದೇ. ಸರ್ಕಾರ ಪ್ರತಿಯೊಂದು ಪ್ರಕರಣವನ್ನು ಒಂದೇ ರೀತಿಯಲ್ಲಿ ನೋಡುತ್ತದೆ. ಕಾನೂನಿನ ಪ್ರಕಾರವೇ ಎಲ್ಲವೂ ನಡೆಯಲಿದೆ ಮುಖ್ಯಮಂತ್ರಿ ಏಕನಾಥ ಶಿಂದೆ ಹೇಳಿದ್ದಾರೆ.

ಪ್ರಧಾನಿ ಮೋದಿಗೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮನವಿ

'ಮಣಿಪುರದ ಜನರ ಕಷ್ಟಗಳಿಗೆ ಕಿವಿಯಾಗಿ'

ಪ್ರಜಾವಾಣಿ ವಾರ್ತೆ/ಪಿಟಿಐ

ಬೆಂಗಳೂರು/ಇಂಫಾಲ: 'ಮಣಿಪುರಕ್ಕೆ ಪ್ರಧಾನಿ ನರೇಂದ್ರ ಮೋದಿ ಅವರು ಅವಶ್ಯವಾಗಿ ಭೇಟಿ ನೀಡಬೇಕು. ಎರಡು ಅಥವಾ ಮೂರು ದಿನ ಬಿಡುವು ಮಾಡಿಕೊಳ್ಳಿ. ಇಲ್ಲಿನ ಜನರ ಕಷ್ಟಕ್ಕೆ, ಅವರ ಮಾತುಗಳಿಗೆ ಕಿವಿಯಾಗಿ' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಹೇಳಿದರು.

ಜನಾಂಗೀಯ ಸಂಘರ್ಷ ಪೀಡಿತ ಮಣಿಪುರಕ್ಕೆ ರಾಹುಲ್ ಅವರು ಸೋಮವಾರ ಭೇಟಿ ನೀಡಿದರು. ಮಣಿಪುರಕ್ಕೆ ಇದು ಅವರ ಮೂರನೇ ಭೇಟಿಯಾಗಿದೆ. ಜಿರಿಬಾಮ್, ಚುರಾಚಾಂದ್‌ಪುರ ಹಾಗೂ ವಿಷ್ಣುಪುರ ಜಿಲ್ಲೆಗಳಲ್ಲಿರುವ ನಿರಾಶ್ರಿತ ಶಿಬಿರಗಳಿಗೆ ಭೇಟಿ ನೀಡಿ, ಜನರ ಕಷ್ಟ ಆಲಿಸಿದರು. ಈ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

'ಮಣಿಪುರ ಭಾರತದ ಒಂದು ಪ್ರದೇಶ. ಈ ಮೊದಲೇ ಪ್ರಧಾನಿ ಮೋದಿ ಅವರು ಇಲ್ಲಿಗೆ ಭೇಟಿ ನೀಡಬೇಕಿತ್ತು. ಈಗಲಾದರೂ ಭೇಟಿ ನೀಡಿ. ಇಲ್ಲಿನ ಜನರಿಗೆ ಇದರ ಅವಶ್ಯಕತೆ ಇದೆ. ನೀವು ಇಲ್ಲಿಗೆ ಭೇಟಿ ನೀಡುವುದನ್ನು ಅವರು ಬಯಸುತ್ತಿದ್ದಾರೆ' ಎಂದರು.

'ನಾನು ಇಲ್ಲಿಗೆ ಮೂರನೇ ಬಾರಿ ಬರುತ್ತಿದ್ದೇನೆ. ಪರಿಸ್ಥಿತಿಯಲ್ಲಿ ಬದಲಾವಣೆ ಆಗಿರಬಹುದು ಎಂದುಕೊಂಡಿದ್ದೆ. ಆದರೆ, ಅಲ್ಲಿಂದ ಇಲ್ಲಿಯವರೆಗೂ ಯಾವುದೇ ಬದಲಾವಣೆಯಾಗಿಲ್ಲ. ನನಗೆ ಬಹಳ ನಿರಾಶೆಯಾಗಿದೆ. ವಿರೋಧ ಪಕ್ಷದ ನಾಯಕನಾಗಿ ನಾನು ಸರ್ಕಾರದ ಮೇಲೆ ಏನೆಲ್ಲಾ ಒತ್ತಡ ಹೇರಬಹುದೋ ಎಲ್ಲವನ್ನೂ ಮಾಡುತ್ತೇನೆ' ಎಂದರು

ಮಣಿಪುರದ ರಾಜ್ಯಪಾಲರಾದ ಅನುಸೂಯಾ ಉಯಿಕೆ ಅವರನ್ನು ಭೇಟಿ ಮಾಡಿದ ಕುರಿತು ಸುದ್ದಿಗೋಷ್ಠಿಯಲ್ಲಿ ಪ್ರಸ್ತಾಪಿಸಿದ ರಾಹುಲ್, 'ರಾಜ್ಯದಲ್ಲಿ ಶಾಂತಿ ನೆಲಸಲು ಅಗತ್ಯವಿರುವ ಎಲ್ಲವನ್ನೂ ಮಾಡಲು ಕಾಂಗ್ರೆಸ್ ಸಿದ್ಧವಿದೆ. ಆದರೆ, ಮಣಿಪುರಲ್ಲಿ ಆಗಿರುವ ಪರಿಹಾರಾತ್ಮಕ ಕಾರ್ಯಗಳ ಬಗ್ಗೆ ಪಕ್ಷಕ್ಕೆ ಸಮಾಧಾನವಿಲ್ಲ' ಎಂದು ತಿಳಿಸಿದ್ದಾಗಿ ಹೇಳಿದರು. ಸುಮಾರು 45 ನಿಮಿಷಗಳ ವರೆಗೆ ರಾಹುಲ್ ಹಾಗೂ ರಾಜ್ಯಪಾಲರ ಮಾತುಕತೆ ನಡೆದಿತ್ತು.

ರಾಹುಲ್ ಅವರ ಭೇಟಿಯ ಕುರಿತು ಮಾತನಾಡಿದ ಇಲ್ಲಿನ ಕಾಂಗ್ರೆಸ್ ಅಧ್ಯಕ್ಷ ಕೆ. ಮೇಘಾಚಂದ್ರ, 'ಜನರು ಅವರ ಕಷ್ಟಗಳನ್ನು ವಿವರಿಸಿದರು. ಜನರಿಗೆ ಏನು ಬೇಕು ಎಂಬುದರ ಬಗ್ಗೆ ರಾಹುಲ್ ಅವರು ವಿಚಾರಿಸಿದರು. ಜಿರಿಬಮ್‌ನಲ್ಲಿ ಸಾವಿರಾರು ಮಂದಿ ರಾಹುಲ್ ಅವರನ್ನು ನೋಡಲು ಬಂದಿದ್ದರು. ಜೊತೆಗೆ, ರಾಹುಲ್ ಅವರೊಂದಿಗೆ ಕಷ್ಟಗಳನ್ನು ಹಂಚಿಕೊಳ್ಳುತ್ತಾ ಕೆಲವರು ಕಣ್ತುಂಬಿಕೊಂಡರು' ಎಂದು ಮಾಹಿತಿ ನೀಡಿದರು.



ಮಣಿಪುರದ ಚುರಾಚಾಂದ್‌ಪುರ ಜಿಲ್ಲೆಯಲ್ಲಿರುವ ನಿರಾಶ್ರಿತ ಶಿಬಿರವೊಂದಕ್ಕೆ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಭೇಟಿ ನೀಡಿದರು. ಈ ವೇಳೆ ಶಿಬಿರದಲ್ಲಿದ್ದ ಮಕ್ಕಳಿಗೆ ಚಾಕೊಲೇಟ್ ಹಂಚಿದರು —ಪಿಟಿಐ ಚಿತ್ರ

'ಭ್ರಾತೃತ್ವದ ಬಗ್ಗೆ ಯೋಚಿಸಿ'

ನಾನು ನಿಮ್ಮ ಸಹೋದರನಾಗಿ ಇಲ್ಲಿಗೆ ಬಂದಿದ್ದೇನೆ ಎಂದು ಹೇಳಿದ ರಾಹುಲ್, 'ಪ್ರೀತಿ, ಸೌಹಾರ್ದ, ಭ್ರಾತೃತ್ವದ ಕುರಿತು ಯೋಚಿಸಿ. ಹಿಂಸೆಯು ಯಾವುದೇ ಕಾರಣಕ್ಕೂ ಪರಿಹಾರವಾಗಲಾರದು. ನೀವು ನನ್ನನ್ನು ಎಷ್ಟು ಬಾರಿ ಕರೆಸಿಕೊಂಡರೂ, ಇಲ್ಲಿಗೆ ಬರಲು ನಾನು ಸಿದ್ಧನಿದ್ದೇನೆ. ವಿರೋಧ ಪಕ್ಷದ ನಾಯಕನಾಗಿಯೂ ನಿಮಗೆ ಸಹಾಯ ಮಾಡಲಿದ್ದೇನೆ' ಎಂದು ಮಣಿಪುರಕ್ಕೆ ಸಂದೇಶ ನೀಡಿದರು.

'ಬಾಲಕ ಬುದ್ಧಿ'ಯ ದುರಂತ ಪ್ರವಾಸ'

ಮಣಿಪುರಕ್ಕೆ ರಾಹುಲ್ ಭೇಟಿ ನೀಡಿರುವ ಬಗ್ಗೆ ಲೇವಡಿ ಮಾಡಿ ಬಿಜೆಪಿ ಐಟಿ ಸೆಲ್‌ನ ಮುಖ್ಯಸ್ಥ ಅಮಿತ್ ಮಾಳವೀಯ ಅವರು, 'ರೋಗಗ್ರಸ್ಥ ಮನಃಸ್ಥಿತಿಯ 'ಬಾಲಕ ಬುದ್ಧಿ'ಯ ದುರಂತ ಪ್ರವಾಸ ಕೈಗೊಂಡಿದೆ' ಎಂದು 'ಎಕ್ಸ್'ನಲ್ಲಿ ಬರೆದುಕೊಂಡಿದ್ದಾರೆ. 'ಮಣಿಪುರದಲ್ಲಿನ ಸಂಘರ್ಷವು ಕಾಂಗ್ರೆಸ್ ನೀಡಿದ ಬಳುವಳಿಯಾಗಿದೆ. ದಶಕಗಳವರೆಗೆ, ಕಾಂಗ್ರೆಸ್ ಅಧಿಕಾರದಲ್ಲಿ ಇದ್ದಾಗ, ನಾಗರಿಕರ ಸಾವು, ಪೊಲೀಸರು ಹಾಗೂ ಸೈನಿಕರ ಹತ್ಯೆಗಳು ಇಲ್ಲಿ ಸಂಭವಿಸಿವೆ' ಎಂದಿದ್ದಾರೆ. ಯಾವ ಯಾವ ವರ್ಷದಲ್ಲಿ ಎಷ್ಟು ಹತ್ಯೆಗಳು ಇಲ್ಲಿ ಆಗಿವೆ ಎಂಬುದನ್ನು ಪಟ್ಟಿಮಾಡಿರುವ ಮಾಳವೀಯಾ ಅವರು, ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರನ್ನೂ ದೂಷಿಸಿದ್ದಾರೆ.

'ಮುಟ್ಟಿನ ರಜೆಗೆ ನೀತಿ ರೂಪಿಸಿ'

ಒಂದನೇ ಪುಟದಿಂದ...

ಅಲ್ಲದೆ, ಪೀಠವು, 'ನಾವು ಅರ್ಜಿದಾರರಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯದ ಕಾರ್ಯದರ್ಶಿ ಮತ್ತು ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯಾ ಭಾಟಿ ಅವರನ್ನು ಸಂಪರ್ಕಿಸಲು ಅನುಮತಿ ನೀಡುತ್ತೇವೆ. ನೀತಿ ರೂಪಿಸುವ ಬಗ್ಗೆ ಎಲ್ಲ ಮಧ್ಯಸ್ಥಗಾರರನ್ನು ಸಂಪರ್ಕಿಸಿದ ನಂತರ ನಿರ್ಧಾರ ತೆಗೆದುಕೊಳ್ಳಬಹುದು. ಈ ನಿಟ್ಟಿನಲ್ಲಿ ಸರ್ಕಾರ ಕೈಗೊಳ್ಳುವ ಕ್ರಮಗಳಿಗೆ ಈ ಆದೇಶ ಅಡ್ಡಿಯಾಗುವುದಿಲ್ಲ' ಎಂದೂ ಸ್ಪಷ್ಟಪಡಿಸಿದೆ.

ವಕೀಲ ಶೈಲೇಂದ್ರ ಮಣಿ ತ್ರಿಪಾಠಿ ಅವರು, ದೇಶದಾದ್ಯಂತ, ಮುಟ್ಟಿನ ಅವಧಿಯಲ್ಲಿ ತಮ್ಮ ಕೆಲಸದ ಸ್ಥಳಗಳಲ್ಲಿ ಉದ್ಯೋಗಸ್ಥ ಮಹಿಳೆಯರು ಮತ್ತು ವಿದ್ಯಾರ್ಥಿನಿಯರಿಗೆ ತಿಂಗಳ ರಜೆ ನೀಡಲು ಅನುಮತಿಸುವಂತೆ ನ್ಯಾಯಾಲಯದ ನಿರ್ದೇಶನ ಕೋರಿದ್ದಾರೆ.

1992ರಿಂದ ಮಹಿಳೆಯರಿಗೆ 2 ದಿನಗಳ ವಿಶೇಷ ಮುಟ್ಟಿನ ರಜೆ ನೀಡುತ್ತಿರುವ ದೇಶದ ಏಕೈಕ ರಾಜ್ಯ ಬಿಹಾರವಾಗಿದೆ. 1912ರಲ್ಲಿ, ರಾಜಪ್ರಭುತ್ವದ ಕೊಚ್ಚಿನ್‌ನ (ಈಗಿನ ಎರ್ನಾಕುಳಂ ಜಿಲ್ಲೆ) ತ್ರಿಪುನಿಥುರಾದ ಬಾಲಕಿಯರ ಸರ್ಕಾರಿ ಶಾಲೆಯು ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆಯ ಸಮಯದಲ್ಲಿ ಮುಟ್ಟಾದರೆ ರಜೆ ತೆಗೆದುಕೊಳ್ಳಲು ಅವಕಾಶ ನೀಡಿ, ನಂತರ ಪರೀಕ್ಷೆ ಬರೆಯಲು ಅನುಮತಿಸಿತ್ತು ಎಂದು ಅರ್ಜಿಯಲ್ಲಿ ವಾದಿಸಿದ್ದಾರೆ.

ದೇಶದಾದ್ಯಂತ ವಿದ್ಯಾರ್ಥಿನಿಯರು ಮತ್ತು ಉದ್ಯೋಗಸ್ಥ ಮಹಿಳೆಯರಿಗೆ ಮುಟ್ಟಿನ ರಜೆ ಸೌಲಭ್ಯ ಕಲ್ಪಿಸುವಂತೆ ಕೋರಿ ಸಲ್ಲಿಸಲಾಗಿದ್ದ ಮನವಿಯನ್ನು ಈ ಹಿಂದೆ ಕೋರ್ಟ್ ವಿಲೇವಾರಿ ಮಾಡಿತ್ತು.

ಚೆಸ್ ತಂಡಕ್ಕೆ ಅಶ್ವಿನ್ ಸಹ ಮಾಲೀಕ

ನವದೆಹಲಿ (ಪಿಟಿಐ): ಭಾರತದ ಕ್ರಿಕೆಟ್ ತಾರೆ ಆರ್.ಅಶ್ವಿನ್ ಅವರು ಗ್ಲೋಬಲ್ ಚೆಸ್ ಲೀಗ್‌ನ ಹೊಸ ತಂಡ 'ಅಮೆರಿಕನ್ ಗ್ಯಾಂಬಿಟ್ಸ್' ತಂಡಕ್ಕೆ ಸಹ ಮಾಲೀಕರಾಗಿದ್ದಾರೆ. ಈ ತಂಡವು ಲೀಗ್‌ನ ಎರಡನೇ ಆವೃತಿಯಲ್ಲಿ ಪಾಲ್ಗೊಳ್ಳಲಿದೆ. ಟೆಕ್ ಮಹಿಂದ್ರಾ ಮತ್ತು ಅಂತರರಾಷ್ಟ್ರೀಯ ಚೆಸ್ ಫೆಡರೇಷನ್ ಸಹಭಾಗಿತ್ವದಲ್ಲಿ ಲೀಗ್ ನಡೆಯುತ್ತಿದೆ.

ಚೆಸ್ ಲೀಗ್‌ನ ಎರಡನೇ ಆವೃತಿಯಲ್ಲಿ ಪಾಲ್ಗೊಳ್ಳಲಿರುವ ಆರು ಫ್ರಾಂಚೈಸಿಗಳ ಹೆಸರನ್ನು ಸೋಮವಾರ ಪ್ರಕಟಿಸಲಾಯಿತು. ಈ ಬಾರಿಯ ಲೀಗ್ ಅಕ್ಟೋಬರ್ 3 ರಿಂದ 12ರ ವರೆಗೆ ಲಂಡನ್‌ನಲ್ಲಿ ನಡೆಯಲಿದೆ. ಚಿಂಗಾರಿ ಗಲ್ಫ್ ಟೈಟನ್ಸ್ ಬದಲಿಗೆ ಲೀಗ್‌ಗೆ ಸೇರ್ಪಡೆಯಾಗಿರುವ ಅಮೆರಿಕನ್ ಗ್ಯಾಂಬಿಟ್ಸ್ ತಂಡಕ್ಕೆ ಉದ್ಯಮಿಗಳಾದ ಪ್ರಚುರಾ ಪಿ.ಪಿ, ವೆಂಕಟ್ ಕೆ.ನಾರಾಯಣ ಮತ್ತು ಆರ್. ಅಶ್ವಿನ್ ಮಾಲೀಕರಾಗಿದ್ದಾರೆ.

'ಚೆಸ್ ಜಗತ್ತಿಗೆ ಅಮೆರಿಕನ್ ಗ್ಯಾಂಬಿಟ್ಸ್ ತಂಡ ಪರಿಚಯಿಸಲು ಉತ್ಸುಕರಾಗಿದ್ದೇವೆ. ತಂಡದ ಪಯಣವನ್ನು ವೀಕ್ಷಿಸಲು ಮತ್ತು ಯಶಸ್ಸಿಗೆ ನೆರವಾಗಲು ನಾನು ಉತ್ಸುಕನಾಗಿದ್ದೇನೆ' ಎಂದು ಅಶ್ವಿನ್ ತಿಳಿಸಿದ್ದಾರೆ.



ಆರ್.ಅಶ್ವಿನ್

ಗ್ಯಾಂಬಿಟ್ಸ್ ಜೊತೆಗೆ ಅಲ್ಪೈನ್ ಎಸ್‌ಜಿ ಪೈಪರ್ಸ್, ಪಿಬಿಜಿ ಅಲಾಸ್ಕನ್ ನೈಟ್ಸ್, ಗಾಂಜೆಸ್ ಗ್ರ್ಯಾನ್ ಮಾಸ್ಟರ್ಸ್, ತ್ರಿವೇಣಿ ಕಾಂಟಿನೆಂಟಲ್ ಕಿಂಗ್ಸ್, ಮತ್ತು ಮುಂಬಾ ಮಾಸ್ಟರ್ಸ್ ತಂಡಗಳು ಎರಡನೇ ಆವೃತಿಯಲ್ಲಿ ಭಾಗವಹಿಸಲಿವೆ.

ಡಬಲ್ ರೌಂಡ್ ರಾಬಿನ್ ಲೀಗ್ ಮಾದರಿಯಲ್ಲಿ ನಡೆಯುವ ಪಂದ್ಯಾವಳಿಯಲ್ಲಿ ಪ್ರತಿ ತಂಡಗಳು 10 ಪಂದ್ಯಗಳನ್ನು ಆಡಲಿವೆ. ಲೀಗ್‌ನಲ್ಲಿ ಅತಿ ಹೆಚ್ಚು ಅಂಕ ಪಡೆಯುವ ಎರಡು ತಂಡಗಳು ಫೈನಲ್‌ನಲ್ಲಿ ಆಡಲಿವೆ.

ಹಾಕಿ: ಕಸ್ಟಮ್ಸ್ ತಂಡಕ್ಕೆ ಗೆಲುವು

ಬೆಂಗಳೂರು: ಸಾಂಘಿಕ ಆಟವಾಡಿದ ಕಸ್ಟಮ್ಸ್ ಮತ್ತು ಜಿಎಸ್‌ಟಿ ತಂಡವು ಇಲ್ಲಿ ನಡೆಯುತ್ತಿರುವ ಕರ್ನಾಟಕ ಹಾಕಿ ಲೀಗ್ ಚಾಂಪಿಯನ್‌ಷಿಪ್ 8ನೇ ಆವೃತ್ತಿಯ ಟೂರ್ನಿಯ ಪಂದ್ಯದಲ್ಲಿ ಜಯ ಗಳಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ಕಸ್ಟಮ್ಸ್ ಮತ್ತು ಜಿಎಸ್‌ಟಿ ತಂಡವು 3–2ರಿಂದ ಬಾಯ್ಸ್ ಸ್ಪೋರ್ಟ್ಸ್ ಕಂಪನಿ, ಎಂಇಜಿ ವಿರುದ್ಧ ಗೆಲುವು ಸಾಧಿಸಿತು.

ಕಸ್ಟಮ್ಸ್ ತಂಡದ ಪರ ದ್ವೈತ್ ನಾಚಪ್ಪ (8ನೇ ನಿ), ಪೂವಣ್ಣ ಸಿ.ಬಿ (20ನೇ ನಿ) ಮತ್ತು ವಿಶ್ವಾಸ್ .ಜಿ. (55ನೇ ನಿ) ಗೋಲು ಗಳಿಸಿದರು. ಬಾಯ್ಸ್ ತಂಡದ ಪರ ನಿತೇಶ್ ಶರ್ಮಾ (38ನೇ ನಿ) ಮತ್ತು ಅರ್ಜುನ್ (46ನೇ ನಿ) ತಲಾ ಒಂದು ಗೋಲು ಗಳಿಸಿದರು.

ಟಿ20 ಕ್ರಿಕೆಟ್ ತಂಡದಿಂದ ಪಾಠ ಕಲಿತ ಶ್ರೀಜೇಶ್

'ಕೊನೆಯವರೆಗೂ ಬಿಟ್ಟುಕೊಡಬೇಡ...'

ಬೆಂಗಳೂರು (ಪಿಟಿಐ): ನಾಲ್ಕನೇ ಬಾರಿ ಹಾಗೂ ಬಹುತೇಕ ಕೊನೆಯ ಬಾರಿ ಒಲಿಂಪಿಕ್ಸ್ ಆಡಲು ಸಜ್ಜಾಗಿರುವ ಭಾರತ ಹಾಕಿ ತಂಡದ ಅನುಭವಿ ಗೋಲ್ ಕೀಪರ್ ಪಿ.ಆರ್. ಶ್ರೀಜೇಶ್ ಅವರು ಟಿ20 ವಿಶ್ವಕಪ್ ಗೆದ್ದ ಭಾರತ ತಂಡದಿಂದ ಪಾಠ ಕಲಿತಿದ್ದಾರೆ– 'ಕೊನೆಯವರೆಗೂ ಬಿಟ್ಟುಕೊಡಬೇಡ. ಬಳಿಕವಷ್ಟೇ ಸಂಭ್ರಮಿಸು...' ಎಂಬುದು ಈ ಪಾಠ.

ಭಾರತ ಕ್ರಿಕೆಟ್ ತಂಡ ಕಳೆದ ತಿಂಗಳ ಕೊನೆಯಲ್ಲಿ ನಡೆದ ಟಿ20 ವಿಶ್ವಕಪ್ ಫೈನಲ್‌ನಲ್ಲಿ ಕೊನೆಯ ಐದು ಓವರ್‌ಗಳಿದ್ದಾಗ ಹೆಚ್ಚುಕಮ್ಮಿ ಸೋಲಿನ ಸುಳಿಯಲ್ಲಿತ್ತು. ಆದರೆ ತಿರುಗೇಟು ನೀಡಿ ದಕ್ಷಿಣ ಆಫ್ರಿಕಾ ಕೈಯಿಂದ ಗೆಲುವನ್ನು ಕಸಿದುಕೊಂಡಿತು. ಏಳು ರನ್‌ಗಳಿಂದ ಪಂದ್ಯ ಗೆದ್ದು 11 ವರ್ಷಗಳಿಂದ ಎದುರಿಸುತ್ತಿದ್ದ ಐಸಿಸಿ ಪ್ರಶಸ್ತಿಯ ಬರವನ್ನು ನೀಗಿಸಿತ್ತು.

'ನಾನು ಫೈನಲ್ ಪಂದ್ಯ ನೋಡಿದ್ದೆ. ಕೊನೆಯ ಎಸೆತದವರೆಗೂ ಸಂಭ್ರಮವನ್ನಾಚರಿಸಬೇಡ ಎಂಬುದು ನಾನು ಕಲಿತ ಅತಿ ದೊಡ್ಡ ಪಾಠ. ದಕ್ಷಿಣ ಆಫ್ರಿಕಾ 15ನೇ ಓವರ್‌ವರೆಗೆ ಹೆಚ್ಚು ಕಮ್ಮಿ ಗೆಲುವಿನ ಹಾದಿಯಲ್ಲಿತ್ತು. ಆದರೆ ಭಾರತ ತಂಡ ಸುಲಭವಾಗಿ ಬಿಟ್ಟುಕೊಡಲಿಲ್ಲ ಸೋಲಿನ ದವಡೆಯಿಂದ ಗೆಲುವನ್ನು ಪಡೆಯಿತು' ಎಂದು ಶ್ರೀಜೇಶ್ ಪಿಟಿಐಗೆ ತಿಳಿಸಿದರು. ಅವರು ಭಾರತ ಹಾಕಿ ತಂಡದ ಪರ 328 ಪಂದ್ಯಗಳಲ್ಲಿ ಆಡಿದ್ದಾರೆ.

'ಇದು ನಮಗಷ್ಟೇ ಅಲ್ಲ, ಒಲಿಂಪಿಕ್ಸ್‌ಗೆ ಹೋಗುತ್ತಿರುವ ಎಲ್ಲ ಕ್ರೀಡಾಪಟುಗಳು ಕ್ರಿಕೆಟ್ ತಂಡದಿಂದ ಕಲಿಯಬಹುದಾದ ಪಾಠ. ಬಿಟ್ಟುಕೊಡಬೇಡ. ಕೊನೆಯವರೆಗೂ ಹೋರಾಡು. ನೀವು ಸಾಧಿಸಬಹುದು. ಇದನ್ನು ಒಲಿಂಪಿಕ್ಸ್‌ನಲ್ಲೂ ನಾನು ನೆನಪಿನಲ್ಲಿಟ್ಟುಕೊಳ್ಳುವೆ' ಎಂದರು.

'ಭಾರತ ಹಾಕಿ ತಂಡದ 'ಗೋಡೆ' ಎನಿಸಿರುವ ಶ್ರೀಜೇಶ್, ಭಾರತ ಕ್ರಿಕೆಟ್‌ನ 'ಗೋಡೆ' ರಾಹುಲ್ ದ್ರಾವಿಡ್ ಅವರಿಂದಲೂ ಉಪಯುಕ್ತ ಸಲಹೆ ಪಡೆದಿದ್ದಾರೆ. 'ತುಂಬಾ ಹಿಂದೆ ದ್ರಾವಿಡ್ ಭಾಯ್ ಅವರನ್ನು ಭೇಟಿ ಮಾಡಿದ್ದೆ. ಅವರು ಸಹನೆಯ ಮಹತ್ವದ ಬಗ್ಗೆ ಮತ್ತು ಅವಕಾಶಗಳಿಗೆ ಕಾಯುವಂತೆ ಸಲಹೆಯಿತ್ತರು. ಅದನ್ನೇ ನಾನು ಪಾಲಿಸಿದೆ. ನಾನು ದಿಢೀರನೇ ಒಳ್ಳೆಯ ಗೋಲ್ ಕೀಪರ್ ಆಗಲಿಲ್ಲ. ಅವಕಾಶಗಳಿಗೆ ಕಾದಿದ್ದೆ. ವಿನಮ್ರವಾಗಿರುವುದನ್ನೂ ನಾನು ಅವರಿಂದಲೇ ಕಲಿತಿದ್ದೆ' ಎಂದರು.



ಪಿ.ಆರ್. ಶ್ರೀಜೇಶ್

ಬೋರ್ಡ್ ಪರೀಕ್ಷೆಗಳಲ್ಲಿ ಕೃಪಾಂಕ ಪಡೆಯುವ ಉದ್ದೇಶದಿಂದ ಹಾಕಿ ಆಡಲು ಆರಂಭಿಸಿದ್ದ ಶ್ರೀಜೇಶ್, ನಂತರ ಕ್ರಮಿಸಿದ ಹಾದಿ ಬಲುದೂರದ್ದು. ಟೋಕಿಯೊ ಒಲಿಂಪಿಕ್ಸ್‌ನಲ್ಲಿ (2021) ಕಂಚಿನ ಪದಕವನ್ನೂ ಗೆದ್ದುಕೊಂಡರು. ಒಮ್ಮೆ ಅವರು ಎಫ್‌ಐಎಚ್‌ನಿಂದ 'ವರ್ಷದ ಆಟಗಾರ' ಗೌರವಕ್ಕೂ ಪಾತ್ರರಾಗಿದ್ದರು.

'ಇದೊಂದು ಕನಸಿನ ಪಯಣ. ಮಂಡಳಿ ಪರೀಕ್ಷೆಗಳಲ್ಲಿ ಕೃಪಾಂಕ ಪಡೆಯುವುದಕ್ಕೆ ನಾನು ಈ ಆಟ ಆಡತೊಡಗಿದ್ದೆ. ನಾನು ಭಾರತ ತಂಡಕ್ಕೆ ಆಡುತ್ತೇನೆಂದು ಕನಸುಮನಸಿನಲ್ಲೂ ಎಣಿಸಿರಲಿಲ್ಲ. ಭಾರತದ ಹಾಕಿ ದಂತಕಥೆ ಧನರಾಜ್ ಪಿಳ್ಳೆ ಬಗ್ಗೆ ತಿಳಿದುಕೊಂಡಿದ್ದೆ. ಅವರು ನಾಲ್ಕು ಒಲಿಂಪಿಕ್ಸ್, ನಾಲ್ಕು ವಿಶ್ವಕಪ್, ಚಾಂಪಿಯನ್ಸ್ ಟ್ರೋಫಿ, ಏಷ್ಯನ್ ಗೇಮ್ಸ್‌ನಲ್ಲಿ ಆಡಿದ್ದರು. ನಾನು ನಾಲ್ಕನೇ ಒಲಿಂಪಿಕ್ಸ್ ಆಡುತ್ತಿರುವ ಮೊದಲ ಗೋಲ್ ಕೀಪರ್ ಆಗಿದ್ದೇನೆ. ಇದನ್ನು ನಂಬಲು ಕಷ್ಟವಾಗುತ್ತಿದೆ' ಎಂದು ಶ್ರೀಜೇಶ್ ವಿವರಿಸಿದರು.

ಟೋಕಿಯೊದಲ್ಲಿ ಹಾಕಿ ಕಂಚಿನ ಪದಕಕ್ಕಾಗಿ ನಡೆದ ಪಂದ್ಯದಲ್ಲಿ ಅವರು ಭಾರತದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಅವರಿಗೆ ತಮ್ಮ ಮೇಲೆ ಇರುವ ನಿರೀಕ್ಷೆಗಳ ಬಗ್ಗೆಯೂ ಅರಿವು ಇದೆ. ಯುವ ಆಟಗಾರರಿಗೆ ಅವರು ಮಾರ್ಗದರ್ಶಕನ ಪಾತ್ರವನ್ನೂ ವಹಿಸುತ್ತಿದ್ದಾರೆ.

'ಒಲಿಂಪಿಕ್ಸ್‌ನಲ್ಲಿ ಒತ್ತಡ ಅತೀವ. ಅದು ಪ್ರೆಷರ್ ಕುಕ್ಕರ್ ರೀತಿಯದ್ದು. ನಮ್ಮ ಪ್ರತಿ ಪಂದ್ಯದ ನಡೆಗಳನ್ನು ಮಾಧ್ಯಮಗಳು ಗಮನಿಸುತ್ತಿರುತ್ತವೆ. ಸಾಮಾಜಿಕ ಜಾಲತಾಣಗಳೂ ಇವೆ. ಜನರು ಸಲಹೆಗಳನ್ನು ನೀಡಿ ಮನಸ್ಸನ್ನು ಬೇರೆಡೆ ಸೆಳೆಯುತ್ತಾರೆ. ಇಂಥ ಧ್ವನಿಗಳಿಗೆ ಕಿವಿಯಾಗದೇ ತಂಡವಾಗಿ ಆಡುವ ಕಡೆಗಷ್ಟೇ ಗಮನಹರಿಸಿ ಎಂದು ನಾನು ತಂಡಕ್ಕೆ ಹೇಳುತ್ತಿರುತ್ತೇನೆ' ಎಂದರು.

ಭಾರತ ಹಾಕಿ ತಂಡ ಒಲಿಂಪಿಕ್ಸ್‌ನಲ್ಲಿ ಪ್ರಬಲ 'ಬಿ' ಗುಂಪಿನಲ್ಲಿದೆ. ಅರ್ಜೆಂಟೀನಾ, ಆಸ್ಟ್ರೇಲಿಯಾ, ಬೆಲ್ಜಿಯಂ, ನ್ಯೂಜಿಲೆಂಡ್ ಮತ್ತು ಐರ್ಲೆಂಡ್ ಗುಂಪಿನ ಇತರ ತಂಡಗಳಾಗಿವೆ. ಅರ್ಜೆಂಟೀನಾ ಜಾಣ್ಮೆಯಿಂದ ಆಡುವ ತಂಡ, ಆಸ್ಟ್ರೇಲಿಯಾ ಪ್ರಬಲ ತಂಡ. ಬೆಲ್ಜಿಯಂ ತುಂಬಾ ಅನುಭವಿ ದಾಳಿಯ ವಿಭಾಗವನ್ನು ಹೊಂದಿದೆ. ಆದರೆ ಪಂದ್ಯದ ದಿನ ನಮ್ಮ ಅನುಭವ ಮಹತ್ವದ ಪಾತ್ರ ವಹಿಸುತ್ತದೆ' ಎಂದರು.

ಸಾಹಸ ಶಿಬಿರಕ್ಕೆ ಆಟಗಾರರು

ಬೆಂಗಳೂರು (ಪಿಟಿಐ): ಪ್ಯಾರಿಸ್ ಒಲಿಂಪಿಕ್ಸ್‌ಗೆ ಸಿದ್ಧತೆ ನಡೆಸುತ್ತಿರುವ ಭಾರತ ಪುರುಷರ ಹಾಕಿ ತಂಡವು ಸೋಮವಾರ ಸ್ವಿಟ್ಜರ್ಲೆಂಡ್‌ಗೆ ಪ್ರಯಾಣ ಬೆಳೆಸಿದೆ. ಅಲ್ಲಿ ಮನೋಬಲ ವೃದ್ಧಿಸಲು ಮೂರು ದಿನಗಳ ಸಾಹಸ ಶಿಬಿರದಲ್ಲಿ ಪಾಲ್ಗೊಳ್ಳಲಿದೆ.

ಸ್ವಿಟ್ಜರ್ಲೆಂಡ್‌ನ ಸಾಹಸಿ ಮೈಕ್ ಹಾರ್ನ್ ಗರಡಿಯಲ್ಲಿ ಆಟಗಾರರು ತರಬೇತಿ ಪಡೆಯುವರು. ನಂತರ ಅವರು ನೆದರ್ಲೆಂಡ್ಸ್‌ನಲ್ಲಿ ನಡೆಯುವ ಶಿಬಿರವನ್ನು ಸೇರಿಕೊಳ್ಳುವರು.

'ಬೆಂಗಳೂರಿನ ಸಾಯ್ ಕೇಂದ್ರದಲ್ಲಿ ಎರಡು ವಾರಗಳ ಕಠಿಣ ಶಿಬಿರವನ್ನು ಪೂರ್ಣಗೊಳಿಸಿ, ಸ್ವಿಟ್ಜರ್ಲೆಂಡ್‌ಗೆ ಹೊರಟಿದ್ದೇವೆ. ಅಲ್ಲಿ ಮೈಕ್ ಹಾರ್ನ್ ಅವರೊಂದಿಗೆ ಕೆಲ ದಿನ ಕಳೆದು, ನಂತರ ನೆದರ್ಲೆಂಡ್ಸ್ ಮತ್ತು ಮಲೇಷ್ಯಾ ವಿರುದ್ಧ ಕೆಲವು ಅಭ್ಯಾಸ ಪಂದ್ಯಗಳನ್ನು ಆಡಲಿದ್ದೇವೆ. ಜುಲೈ 20ರಂದು ಪ್ಯಾರಿಸ್‌ಗೆ ತೆರಳಲಿದ್ದೇವೆ' ಎಂದು ನಾಯಕ ಹರ್ಮನ್‌ಪ್ರೀತ್ ಹೇಳಿದರು.



ಗಗನ್ ನಾರಂಗ್



ಪಿ.ವಿ. ಸಿಂಧು

ಷೆಫ್ ಡಿ ಮಿಷನ್ ಆಗಿ ನಾರಂಗ್, ಸಿಂಧು ಮಹಿಳಾ ಧ್ವಜಧಾರಿ

ನವದೆಹಲಿ (ಪಿಟಿಐ): ಲಂಡನ್ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಶೂಟರ್ ಗಗನ್ ನಾರಂಗ್ ಅವರು ಪ್ಯಾರಿಸ್ ಒಲಿಂಪಿಕ್ಸ್‌ಗೆ ಭಾರತ ತಂಡದ ಷೆಫ್ ಡಿ ಮಿಷನ್ (ಸಿಡಿಎಂ) ಆಗಿ ನೇಮಕಗೊಂಡಿದ್ದಾರೆ. ಬ್ಯಾಡ್ಮಿಂಟನ್ ತಾರೆ ಪಿ.ವಿ. ಸಿಂಧು ಅವರು ಒಲಿಂಪಿಕ್ಸ್‌ನ ಉದ್ಘಾಟನಾ ಸಮಾರಂಭದಲ್ಲಿ ಮಹಿಳಾ ಧ್ವಜಧಾರಿಯಾಗಲಿದ್ದಾರೆ.



ಆರು ಬಾರಿಯ ವಿಶ್ವ ಚಾಂಪಿಯನ್ ಬಾಕ್ಸರ್ ಎಂ.ಸಿ.ಮೇರಿ ಕೋಮ್ ಅವರು ವೈಯಕ್ತಿಕ ಕಾರಣ ನೀಡಿ ಭಾರತ ತಂಡದ ಷೆಫ್ ಡಿ ಮಿಷನ್ ಸ್ಥಾನವನ್ನು ಏಪ್ರಿಲ್‌ನಲ್ಲಿ ತ್ಯಜಿಸಿದ್ದರು. ಹೀಗಾಗಿ, ತೆರವಾದ ಹುದ್ದೆಗೆ ಉಪ ಸಿಡಿಎಂ ಸ್ಥಾನದಲ್ಲಿದ್ದ ನಾರಂಗ್ ಅವರು ಆಯ್ಕೆಯಾಗಿದ್ದಾರೆ ಎಂದು ಭಾರತ ಒಲಿಂಲಿಕ್ ಸಂಸ್ಥೆ ಅಧ್ಯಕ್ಷೆ ಪಿ.ಟಿ. ಉಷಾ ಹೇಳಿದ್ದಾರೆ.

'ನಮ್ಮ ತಂಡವನ್ನು ಮುನ್ನಡೆಸಲು ಒಲಿಂಪಿಕ್ ಪದಕ ವಿಜೇತರನ್ನು ಹುಡುಕುತ್ತಿದ್ದೆ. ನನ್ನ ಯುವ ಸಹೋದ್ಯೋಗಿ ನಾರಂಗ್ ಅವರು ಮೇರಿ ಕೋಮ್ ಸ್ಥಾನಕ್ಕೆ ಸೂಕ್ತ ವ್ಯಕ್ತಿ' ಎಂದಿದ್ದಾರೆ.

ಷೆಫ್ ಡಿ ಮಿಷನ್ ಪ್ರಮುಖ ಆಡಳಿತಾತ್ಮಕ ಹುದ್ದೆಯಾಗಿದೆ. ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವ ಕ್ರೀಡಾಪಟುಗಳ ಯೋಗಕ್ಷೇಮವನ್ನು ಖಾತ್ರಿಪಡಿಸುವ ಜವಾಬ್ದಾರಿಯೊಂದಿಗೆ ಅವರ ಅಗತ್ಯಗಳನ್ನು ನೋಡಿಕೊಳ್ಳುವ ಮತ್ತು ಸಂಘಟನಾ ಸಮಿತಿಯೊಂದಿಗೆ ಸಂಪರ್ಕ ಸಾಧಿಸುವ ಕೆಲಸವನ್ನು ಮಾಡಬೇಕಿದೆ.

ಎರಡು ಒಲಿಂಪಿಕ್ ಪದಕಗಳನ್ನು ಗೆದ್ದ ಭಾರತದ ಏಕೈಕ ಮಹಿಳೆ ಸಿಂಧು ಅವರು ಜುಲೈ 26ರಂದು ಒಲಿಂಪಿಕ್ಸ್ ಉದ್ಘಾಟನಾ ಸಮಾರಂಭದಲ್ಲಿ ಟೇಬಲ್ ಟೆನಿಸ್ ತಾರೆ ಎ. ಶರತ್ ಕಮಲ್ ಅವರೊಂದಿಗೆ ಧ್ವಜಧಾರಿಯಾಗಿ ಪಾಲ್ಗೊಳ್ಳುವರು ಎಂದು ಉಷಾ ಹೇಳಿದ್ದಾರೆ.

ಮಾರ್ಚ್‌ನಲ್ಲೇ ಶರತ್ ಅವರನ್ನು ಭಾರತದ ಧ್ವಜಧಾರಿ ಎಂದು ಹೆಸರಿಸಿತ್ತು.

ವಿಂಬಲ್ಡನ್ ಟೆನಿಸ್ ಟೂರ್ನಿ • ರಿಬಾಕಿನಾ, ಸ್ವಿಟೋಲಿನಾ ಮುನ್ನಡೆ • ಜ್ವೆರೇವ್‌ಗೆ ಫ್ರಿಟ್ಜ್ ಆಘಾತ

ಮೊದಲ ಸಲ ಕ್ವಾರ್ಟರ್‌ಗೆ ಮಿನೋರ್

ಲಂಡನ್ (ಎಎಫ್‌ಪಿ): ಆಸ್ಟ್ರೇಲಿಯಾದ ಅಲೆಕ್ಸ್ ಡಿ ಮಿನೋರ್ ನಾಲ್ಕು ಸೆಟ್‌ಗಳ ಸೆಣಸಾಟದಲ್ಲಿ ಫ್ರಾನ್ಸ್‌ನ ಆರ್ಥರ್ ಫಿಲ್ಸ್ ಅವರನ್ನು ಸೋಲಿಸಿ ಮೊದಲ ಬಾರಿ ವಿಂಬಲ್ಡನ್ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು. ಗೆದ್ದ ಸಂದರ್ಭದಲ್ಲೇ ಪಾದದ ನೋವಿನಿಂದ ನರಳಿದರು.

ವಿಶ್ವ ಕ್ರಮಾಂಕದಲ್ಲಿ ಒಂಬತ್ತನೇ ಸ್ಥಾನದಲ್ಲಿರುವ ಡಿ ಮಿನೋರ್ ಸೋಮವಾರ ನಡೆದ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 6–2, 6–4, 4–6, 6–3 ರಿಂದ ಜಯಗಳಿಸಿದರು. ಅವರು ಏಳು ಬಾರಿಯ ಚಾಂಪಿಯನ್ ನೊವಾಕ್ ಜೊಕೊವಿಚ್ (ಸರ್ಬಿಯಾ) ಮತ್ತು ಹೋಲ್ಗರ್ ರೂನ್ (ಡೆನ್ಮಾರ್ಕ್) ನಡುವಣ ಪಂದ್ಯದ ವಿಜೇತರನ್ನು ಕ್ವಾರ್ಟರ್ ಫೈನಲ್‌ನಲ್ಲಿ ಎದುರಿಸಲಿದ್ದಾರೆ.

ಗೆಲುವಿನ ಹೊಡೆತದ ನಂತರ ಅವರು ಪಾದದ ನೋವು ತಡೆಯಲಾಗದೇ ಮುಖ ಕಿವುಚಿಕೊಂಡು, ಅಂಕಣ ಬದಿಯ ಆಸನದತ್ತ ನಡೆದರು. ಗ್ಯಾಲರಿಯ ತಮ್ಮ ಬಾಕ್ಸ್‌ನಲ್ಲಿ ಕುಳಿತಿದ್ದ 2002ರ ಚಾಂಪಿಯನ್ ಲೀಟನ್ ಹೆವಿಟ್ ಮತ್ತು ಸ್ನೇಹಿತೆ ಹಾಗೂ ಬ್ರಿಟನ್‌ನ ಅಗ್ರ ಆಟಗಾರ್ತಿ ಕೇಟಿ ಬೌಲ್ಟರ್ ಅವರತ್ತ ಕಣ್ಣುಹಾಯಿಸಿದರು. 'ನಾನೀಗ ಚೆನ್ನಾಗಿದ್ದೇನೆ' ಎದು ಅವರು ಕೋರ್ಟ್‌ನಲ್ಲೇ ನಡೆದ ಸಂದರ್ಶನದಲ್ಲಿ ತಿಳಿಸಿದರು.

ವಿಶ್ವ ಕ್ರಮಾಂಕದಲ್ಲಿ 34ನೇ ಸ್ಥಾನದಲ್ಲಿರುವ ಫಿಲ್ಸ್ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯೊಂದರ ನಾಲ್ಕನೇ ಸುತ್ತಿನಲ್ಲಿ ಆಡಿದ್ದರು. ಆದರೆ, ಅವರು 66 ತಪ್ಪುಗಳನ್ನೆಸಗಿದ್ದು ದುಬಾರಿಯಾಯಿತು.

ಈ ಹಿಂದೆ ಡಿ ಮಿನೋರ್ ಅವರು ತಮ್ಮ ವೃತ್ತಿಜೀವನದಲ್ಲಿ ಇಬ್ಬರನ್ನೂ (ಜೊಕೊವಿಚ್ ಮತ್ತು ರೂನ್) ಸೋಲಿಸಿದ್ದಾರೆ. ಈ ವರ್ಷ ಆಸ್ಟ್ರೇಲಿಯಾದಲ್ಲಿ ನಡೆದಿದ್ದ ಯುನೈಟೆಡ್ ಕಪ್ ಟೂರ್ನಿಯಲ್ಲಿ 24 ಬಾರಿಯ ಗ್ರ್ಯಾನ್‌ಸ್ಲಾಮ್ ವಿಜೇತ ಜೊಕೊ ಅವರನ್ನು ಸೋಲಿಸಿದ್ದರು. ಕ್ವೀನ್ಸ್ ಕ್ಲಬ್‌ನ ಹುಲ್ಲಿನಂಕಣದಲ್ಲಿ ಸೇರಿದಂತೆ 2023ರಲ್ಲಿ ಎರಡು ಬಾರಿ ರೂನ್ ಅವರನ್ನೂ ಮಣಿಸಿದ್ದರು.



ಗೆಲುವಿನ ಸಂಭ್ರಮದಲ್ಲಿ ಅಲೆಕ್ಸ್ ಡಿ ಮಿನೋರ್ –ಎಎಫ್‌ಪಿ ಚಿತ್ರ

ಮುಸೆಟ್ಟಿ ಮುನ್ನಡೆ: ವಿಶ್ವ ಕ್ರಮಾಂಕದಲ್ಲಿ 25ನೇ ಸ್ಥಾನದಲ್ಲಿರುವ ಇಟಲಿಯ ಲೊರೆಂಝೊ ಮುಸೆಟ್ಟಿ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 4–6, 6–3, 6–3, 6–2 ರಿಂದ ಫ್ರಾನ್ಸ್‌ನ ಗಿಯೊವನ್ನಿ ಪೆಟ್ಶಿ ಪೆರಿಕಾರ್ಡ್ ಅವರನ್ನು ಸೋಲಿಸಿದರು.

ಆ ಮೂಲಕ ಈ ಬಾರಿ ಇಟಲಿಯ ಮೂವರು ಸಿಂಗಲ್ಸ್‌ನಲ್ಲಿ ಎಂಟರ ಘಟ್ಟ ತಲುಪಿದಂತಾಗಿದೆ. ಪುರುಷರ ಸಿಂಗಲ್ಸ್‌ನಲ್ಲಿ ಮುಸೆಟ್ಟಿ ಜೊತೆ ಅಗ್ರ ಕ್ರಮಾಂಕದ ಯಾನಿಕ್ ಸಿನ್ನರ್ ಅವರೂ ಕ್ವಾರ್ಟರ್ಸ್ ತಲುಪಿದ್ದಾರೆ. ಮಹಿಳೆಯ ಸಿಂಗಲ್ಸ್‌ನಲ್ಲಿ ವಿಶ್ವ ಕ್ರಮಾಂಕದಲ್ಲಿ ಏಳನೇ ಸ್ಥಾನದಲ್ಲಿರುವ ಜಾಸ್ಮಿನ್ ಪಾವೊಲಿನಿ ಕೂಡ ಎಂಟರ ಘಟ್ಟ ಪ್ರವೇಶಿಸಿದ್ದಾರೆ.

ರಿಬಾಕಿನಾ ಮುನ್ನಡೆ: ಮಹಿಳೆಯರ ಸಿಂಗಲ್ಸ್‌ನಲ್ಲಿ ಕಣದಲ್ಲುಳಿದಿರುವ ಅತಿ ಹೆಚ್ಚಿನ ಶ್ರೇಯಾಂಕದ ಆಟಗಾರ್ತಿಯಾದ ಎಲೆನಾ ರಿಬಾಕಿನಾ ಎಂಟರ ಘಟ್ಟ ತಲುಪಿದರು. ಭರ್ಜರಿ ಸರ್ವ್‌ಗಳಿಗೆ ಹೆಸರಾದ ನಾಲ್ಕನೇ ಶ್ರೇಯಾಂಕದ ರಿಬಾಕಿನಾ 6–3, 3–0 ಯಿಂದ ಮುನ್ನಡೆಯಲ್ಲಿದ್ದಾಗ ಅವರ ಎದುರಾಳಿ, 17ನೇ ಶ್ರೇಯಾಂಕದ ಅನ್ನಾ ಕಲಿನ್‌ಸ್ಕಾಯಾ (ರಷ್ಯಾ) ಮಣಿಕಟ್ಟಿನ ನೋವಿನಿಂದ ಪಂದ್ಯ ಬಿಟ್ಟುಕೊಟ್ಟರು. ಈ ಹಿಂದಿನ ಪಂದ್ಯದಲ್ಲಿ ಕರೊಲಿನ್ ವೊಜ್ನಿಯಾಕಿ ಅವರ ವಿರುದ್ಧ ಗಳಿಸಿದ ಗೆಲುವು ತಮ್ಮ ವಿಶ್ವಾಸ ವೃದ್ಧಿಸಲು ನೆರವಾಯಿತು ಎಂದು ಮಾಸ್ಕೊದಲ್ಲಿ ಜನಿಸಿದ ಕಜಕಸ್ತಾನದ ಆಟಗಾರ್ತಿ ಪ್ರತಿಕ್ರಿಯಿಸಿದರು. ಅವರು ಎಂಟರ ಘಟ್ಟದ ಪಂದ್ಯದಲ್ಲಿ 21ನೇ ಶ್ರೇಯಾಂಕದ ಎಲಿನಾ ಸ್ವಿಟೊಲಿನಾ ಅವರನ್ನು ಎದುರಿಸಲಿದ್ದಾರೆ.

ಉಕ್ರೇನ್‌ನ ಸ್ವಿಟೊಲಿನಾ ಇನ್ನೊಂದು ಪ್ರಿ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಚೀನಾದ ವಾಂಗ್ ಶಿನ್ಯು ಅವರನ್ನು 6–1, 6–2 ರಿಂದ ಹಿಮ್ಮೆಟ್ಟಿಸಿದರು.

ಕಣ್ಣೀರಿಟ್ಟ ಸ್ವಿಟೊಲಿನಾ: ಪಂದ್ಯ ಮುಗಿಸಿದ ತಕ್ಷಣ ಅವರು, ಉಕ್ರೇನ್‌ನ ರಾಜಧಾನಿ ಕೀವ್‌ನಲ್ಲಿ ಮಕ್ಕಳ ಆಸ್ಪತ್ರೆ ಮೇಲೆ ರಷ್ಯಾ ನಡೆಸಿದ ಕ್ಷಿಪಣಿ ದಾಳಿಯ ವಿಷಯ ನೆನೆದು ಕಣ್ಣೀರಾದರು.

ಗಾಫ್ ನಿರ್ಗಮನ

ಎರಡನೇ ಶ್ರೇಯಾಂಕದ ಕೊಕೊ ಗಾಫ್ ಮಹಿಳೆಯರ ಸಿಂಗಲ್ಸ್‌ನಿಂದ ಹೊರಬಿದ್ದರು. ಅಮೆರಿಕದ ಆಟಗಾರ್ತಿಯರ ವ್ಯವಹಾರವಾಗಿದ್ದ ಪ್ರಿಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ, ವಿಶ್ವ ಕ್ರಮಾಂಕದಲ್ಲಿ 19ನೇ ಸ್ಥಾನದಲ್ಲಿರುವ ಎಮ್ಮಾ ನವಾರೊ ಅವರು 6–4, 6–3 ರಿಂದ ಕೊಕೊ ಗಾಫ್ ಅವರನ್ನು ಸೋಲಿಸಿದರು.

ಜ್ವೆರೇವ್‌ಗೆ ಸೋಲು

ಪುರುಷರ ಸಿಂಗಲ್ಸ್‌ನಲ್ಲಿ 13ನೇ ಶ್ರೇಯಾಂಕದ ಟೇಲರ್ ಫ್ರಿಟ್ಜ್ ಅವರು ನಾಲ್ಕನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವೆರೇವ್ ಅವರಿಗೆ ಆಘಾತ ನೀಡಿದರು. ಮೂರೂವರೆ ಗಂಟೆಗಳ ಕಾಲ ನಡೆದ ಹೋರಾಟದಲ್ಲಿ ಅಮೆರಿಕದ ಫ್ರಿಟ್ಜ್ ಅವರು 4-6, 6-7 (4/7), 6-4, 7-6 (7/3), 6-3 ಸೆಟ್‌ಗಳಿಂದ ಜರ್ಮನಿಯ ಆಟಗಾರನನ್ನು ಹಿಮ್ಮೆಟ್ಟಿಸಿದರು. ಕ್ವಾರ್ಟರ್ ಫೈನಲ್‌ನಲ್ಲಿ ಫ್ರಿಟ್ಜ್ ಅವರು ಮುಸೆಟ್ಟಿ ಅವರನ್ನು ಎದುರಿಸಲಿದ್ದಾರೆ.

ಕಳೆದ ತಿಂಗಳು ಫ್ರೆಂಚ್ ಓಪನ್‌ನಲ್ಲಿ ರನ್ನರ್ ಅಪ್ ಆಗಿದ್ದ ಜ್ವೆರೇವ್ ಅವರು, ಆಸ್ಟ್ರೇಲಿಯಾ ಓಪನ್‌ನಲ್ಲಿ ಸೆಮಿಫೈನಲ್ ತಲುಪಿದ್ದರು. ಆದರೆ, ಇಲ್ಲಿ ಅಂತಿಮ ಎಂಟರ ಘಟ್ಟವನ್ನು ಪ್ರವೇಶಿಸಲು ವಿಫಲವಾದರು.

ಬೌಲಿಂಗ್ ಸುಧಾರಿಸುವತ್ತ ಚಿತ್ತ

ಭಾರತ– ದಕ್ಷಿಣ ಆಫ್ರಿಕಾ ಮಹಿಳಾ ಟಿ20 ಪಂದ್ಯ ಇಂದು

ಚೆನ್ನೈ (ಪಿಟಿಐ): ದಕ್ಷಿಣ ಆಫ್ರಿಕಾ ವಿರುದ್ಧ ಮಂಗಳವಾರ ನಡೆಯಲಿರುವ ಮೂರು ಪಂದ್ಯಗಳ ಟಿ20 ಸರಣಿಯ ಅಂತಿಮ ಪಂದ್ಯವನ್ನು ಗೆದ್ದು ಸರಣಿ ಸಮಬಲ ಮಾಡಲು ಭಾರತ ಮಹಿಳಾ ತಂಡ ತನ್ನೆಲ್ಲಾ ಪ್ರಯತ್ನ ನಡೆಸಲಿದೆ. ಆದರೆ ಇದಕ್ಕಾಗಿ ಬೌಲಿಂಗ್ ವಿಭಾಗದಲ್ಲಿ ಸುಧಾರಣೆ ಕಾಣಬೇಕಾಗಿದೆ.

ಮೊದಲ ಪಂದ್ಯವನ್ನು ಪ್ರವಾಸಿ ತಂಡ 12 ರನ್‌ಗಳಿಂದ ಗೆದ್ದುಕೊಂಡಿತ್ತು. ಭಾನುವಾರ ನಡೆದ ಎರಡನೇ ಪಂದ್ಯ ಅರ್ಧದಷ್ಟು ನಡೆದ ನಂತರ ಮಳೆಯಾಯಿತು. ಭಾರತದ ಇನಿಂಗ್ಸ್ ನಡೆಯದೇ ಪಂದ್ಯ ರದ್ದುಗೊಂಡಿತ್ತು. ಹೀಗಾಗಿ ಸರಣಿ ಸೋಲು ತಪ್ಪಿಸಿಕೊಳ್ಳಲು ಭಾರತ ಕೊನೆಯ ಪಂದ್ಯ ಗೆಲ್ಲಬೇಕಾದ ಒತ್ತಡದಲ್ಲಿದೆ. ಪಂದ್ಯ ನಡೆಯಲು ಮಳೆಯು ಅನುವು ಮಾಡಿಕೊಡಬಹುದೆಂಬ ವಿಶ್ವಾಸದಲ್ಲಿ ಆತಿಥೇಯ ತಂಡವಿದೆ.

ಮೊದಲ ಎರಡೂ ಪಂದ್ಯಗಳಲ್ಲಿ ಭಾರತದ ಬೌಲರ್‌ಗಳು ಎದುರಾಳಿ ಗಳನ್ನು ಕಟ್ಟಿಹಾಕುವಲ್ಲಿ ವಿಫಲರಾಗಿದ್ದು ಎದ್ದುಕಂಡಿದೆ. ಮೊದಲ ಪಂದ್ಯದಲ್ಲಿ ಪ್ರವಾಸಿ ಆಟಗಾರ್ತಿಯರು 9 ವಿಕೆಟ್‌ಗೆ 189 ರನ್ ಗಳಿಸಿದ್ದರೆ, ಎರಡನೇ ಪಂದ್ಯದಲ್ಲಿ ಮಳೆಯಿಂದ ಪಂದ್ಯ ರದ್ದಾಗುವ ಮೊದಲು 6 ವಿಕೆಟ್‌ಗೆ 177 ರನ್ ಕಲೆಹಾಕಿದ್ದರು.

ಮೊದಲ ಪಂದ್ಯದಲ್ಲಿ ರೇಣುಕಾ ಸಿಂಗ್ ದುಬಾರಿಯಾದರೆ, ಎರಡನೇ ಪಂದ್ಯದಲ್ಲಿ ಅವರ ಬದಲು ಕಣಕ್ಕಿಳಿದಿದ್ದ ಸಜೀವನ್ ಸಜನಾ ಕೂಡ ಅಷ್ಟೇನೂ ಪರಿಣಾಮಕಾರಿ ಆಗಿರಲಿಲ್ಲ. ಎರಡನೇ ಪಂದ್ಯದಲ್ಲಿ ರಾಧಾ ಯಾದವ್ ಮತ್ತು ಶ್ರೇಯಾಂಕಾ ಪಾಟೀಲ ಒಂದೊಂದು ವಿಕೆಟ್ ಪಡೆದರೂ ಅವರಿಗೆ ರನ್‌ಗಳನ್ನು ನಿಯಂತ್ರಿಸಲು ಆಗಿರಲಿಲ್ಲ. ಹೀಗಾಗಿ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರು ಬೌಲರ್‌ಗಳಿಂದ ಸುಧಾರಿತ ನಿರ್ವಹಣೆ ನಿರೀಕ್ಷಿಸಿದ್ದಾರೆ.



ಸಹ ಆಟಗಾರ್ತಿಯರೊಂದಿಗೆ ಸ್ಮೃತಿ ಮಂದಾನ –ಪಿಟಿಐ ಚಿತ್ರ

ಬ್ಯಾಟಿಂಗ್ ವಿಭಾಗದಲ್ಲಿ ಜೆಮಿಮಾ ರಾಡ್ರಿಗಸ್ (ಔಟಾಗದೇ 53), ಸ್ಮೃತಿ ಮಂದಾನ (46), ಹರ್ಮನ್‌ಪ್ರೀತ್ (35) ಉಪಯುಕ್ತ ಆಟವಾಡಿದ್ದಾರೆ. ಎರಡನೇ ಪಂದ್ಯದಲ್ಲಿ ಪದಾರ್ಪಣೆ ಮಾಡಿರುವ ವಿಕೆಟ್ ಕೀಪರ್– ಬ್ಯಾಟರ್ ಉಮಾ ಚೆಟ್ರಿ ಅವರಿಗೆ ತಂಡದ ಆಡಳಿತ ಮತ್ತೊಂದು ಅವಕಾಶ ನೀಡುವ ಸಾಧ್ಯತೆಯಿದೆ. ಅವರಿಂದ ಬ್ಯಾಟಿಂಗ್‌ನಲ್ಲೂ ತಂಡ ನಿರೀಕ್ಷೆ ಹೊಂದಿದೆ.

ದಕ್ಷಿಣ ಆಫ್ರಿಕಾ ಬ್ಯಾಟರ್‌ಗಳು ಗಮನಾರ್ಹ ಆಟವಾಡಿದ್ದಾರೆ. ತಾಜ್ಮಿನ್ ಬ್ರಿಟ್ಸ್ ಎರಡೂ ಪಂದ್ಯಗಳಲ್ಲಿ ಅರ್ಧ ಶತಕ ಬಾರಿಸಿದ್ದಾರೆ. ನಾಯಕಿ ಲಾರಾ ವೊಲ್ವಾರ್ಟ್, ಮರೈಝುನ್ ಕಾಪ್ ಮತ್ತು ಅನೆಕೆ ಬಾಷ್ ಅವರೂ ಉಪಯುಕ್ತ ಆಟವಾಡಿದ್ದಾರೆ. ಕ್ಲೊ ಟ್ರಯಾನ್ (2 ಪಂದ್ಯಗಳಿಂದ 24 ರನ್) ಮಾತ್ರ ನಿರಾಸೆ ಮೂಡಿಸಿದ್ದಾರೆ.

ಬಾಂಗ್ಲಾದೇಶದಲ್ಲಿ ಟಿ20 ವಿಶ್ವಕಪ್‌ಗೆ ಮೂರೇ ತಿಂಗಳು ಉಳಿದಿರುವ ಕಾರಣ ಟ್ರಯಾನ್ ಕೂಡ ಲಯಕ್ಕೆ ಮರಳಲು ತವಕದಿಂದ ಇದ್ದಾರೆ.

ಪಂದ್ಯ ಆರಂಭ: ರಾತ್ರಿ 7
ನೇರ ಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ



ಲಂಕಾ ಪ್ರವಾಸ: ಪಾಂಡ್ಯ ಅಥವಾ ರಾಹುಲ್‌ಗೆ ನಾಯಕತ್ವ

ಕೊಹ್ಲಿ, ರೋಹಿತ್‌ಗೆ ವಿಶ್ರಾಂತಿ ಸಂಭವ

ನವದೆಹಲಿ (ಪಿಟಿಐ): ಭಾರತ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ಪ್ರಮುಖ ಬ್ಯಾಟರ್ ವಿರಾಟ್ ಕೊಹ್ಲಿ ಅವರಿಗೆ ಈ ತಿಂಗಳ ಅಂತ್ಯದಲ್ಲಿ ಶ್ರೀಲಂಕಾ ವಿರುದ್ಧ ನಡೆಯುವ ಮೂರು ಪಂದ್ಯಗಳ ಏಕದಿನ ಸರಣಿಗೆ ವಿಶ್ರಾಂತಿ ನೀಡುವ ಸಾಧ್ಯತೆಯಿದೆ. ಲಂಕಾ ಪ್ರವಾಸಕ್ಕೆ ಹಾರ್ದಿಕ್ ಪಾಂಡ್ಯ ಅಥವಾ ಕೆ.ಎಲ್.ರಾಹುಲ್ ಅವರಿಗೆ ನಾಯಕತ್ವ ವಹಿಸುವ ನಿರೀಕ್ಷೆಯಿದೆ.

ತಂಡದ ಪ್ರಮುಖ ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರಿಗೂ ವಿಶ್ರಾಂತಿ ನೀಡುವ ಸಾಧ್ಯತೆ ನಿಚ್ಚಳವಾಗಿದೆ.

ಐಪಿಎಲ್‌ನಿಂದ ಹಿಡಿದು ಟಿ20 ವಿಶ್ವಕಪ್‌ವರೆಗೆ ಬಿಡುವಿಲ್ಲದೇ ಆಡಿರುವ ಕಾರಣ ಭಾರತ ತಂಡದ ಪ್ರಮುಖ ಆಟಗಾರರು ದೀರ್ಘ ವಿರಾಮ ಕೇಳಿದ್ದಾರೆ ಎಂದು ಹೇಳಲಾಗುತ್ತಿದೆ. 37 ವರ್ಷದ ರೋಹಿತ್ ಸುಮಾರು ಆರು ತಿಂಗಳಿಂದ ವಿಶ್ರಾಂತಿಯಿಲ್ಲದೇ ಆಡಿದ್ದಾರೆ.

ಮುಂದಿನ ವರ್ಷದ ಐಸಿಸಿ ಚಾಂಪಿಯನ್ಸ್ ಟ್ರೋಫಿಗೆ ಮುನ್ನ, ಸೆಪ್ಟೆಂಬರ್‌ನಿಂದ ಜನವರಿವರೆಗಿನ ಅವಧಿಯಲ್ಲಿ ಭಾರತ 10 ಟೆಸ್ಟ್ ಪಂದ್ಯಗಳನ್ನು ಆಡಲಿದ್ದು, ಅದರಲ್ಲಿ ರೋಹಿತ್ ಮತ್ತು ಕೊಹ್ಲಿ ಆಡುವತ್ತ ಗಮನ ಹರಿಸಲಿದ್ದಾರೆ ಎಂದು ಬಿಸಿಸಿಐನ ಮೂಲವೊಂದು ಪಿಟಿಐಗೆ ತಿಳಿಸಿದೆ.

ಭಾರತ ತಂಡವು ಬಾಂಗ್ಲಾದೇಶ ವಿರುದ್ಧ ಎರಡು ಟೆಸ್ಟ್, ನ್ಯೂಜಿಲೆಂಡ್ ವಿರುದ್ಧ ಮೂರು ಮತ್ತು ಆಸ್ಟ್ರೇಲಿಯಾದಲ್ಲಿ ಬಾರ್ಡರ್–ಗಾವಸ್ಕರ್ ಟ್ರೋಫಿಗಾಗಿ ಐದು ಟೆಸ್ಟ್‌ಗಳ ಸರಣಿ ಆಡಲಿದೆ.

ರೋಹಿತ್ ಗೈರಿನಲ್ಲಿ ಪಾಂಡ್ಯ ಅವರೇ ನಾಯಕತ್ವ ವಹಿಸುವ ಸಾಧ್ಯತೆಯಿದೆ. ಆದರೆ, ದಕ್ಷಿಣ ಆಫ್ರಿಕಾ ವಿರುದ್ಧ ಏಕದಿನ ಸರಣಿಯಲ್ಲಿ ನಾಯಕರಾಗಿದ್ದ ಕೆ.ಎಲ್.ರಾಹುಲ್ ಅವರನ್ನೂ ಕಡೆಗಣಿಸುವಂತಿಲ್ಲ ಎನ್ನಲಾಗಿದೆ.

ಜಯಸೂರ್ಯ ಹಂಗಾಮಿ ಕೋಚ್



ಕೊಲಂಬೊ (ಪಿಟಿಐ): ಶ್ರೀಲಂಕಾ ತಂಡದ ಮಾಜಿ ನಾಯಕ ಸನತ್ ಜಯಸೂರ್ಯ ಅವರು ಭಾರತ ವಿರುದ್ಧ ಈ ತಿಂಗಳ ಅಂತ್ಯದಲ್ಲಿ ನಡೆಯಲಿರುವ ನಿಯಮಿತ ಓವರುಗಳ ಕ್ರಿಕೆಟ್ ಸರಣಿಗೆ ಹಂಗಾಮಿ ಹೆಡ್ ಕೋಚ್ ಆಗಿ ನೇಮಕಗೊಂಡಿದ್ದಾರೆ.

ಜುಲೈ 27ರಿಂದ ನಡೆಯುವ ಶ್ರೀಲಂಕಾ ಪ್ರವಾಸದಲ್ಲಿ ಭಾರತ ಮೂರು ಟಿ20 ಪಂದ್ಯಗಳನ್ನು ಮತ್ತು ಅಷ್ಟೇ ಸಂಖ್ಯೆಯ ಏಕದಿನ ಪಂದ್ಯಗಳನ್ನು ಆಡಲಿದೆ. ತಮ್ಮ ಕ್ರಿಕೆಟ್ ಜೀವನದಲ್ಲಿ ಬೀಸಾಟಕ್ಕೆ ಹೆಸರಾಗಿದ್ದ ಜಯಸೂರ್ಯ ಅವರು ಕ್ರಿಸ್ ಸಿಲ್ವರ್‌ವುಡ್ ಸ್ಥಾನ ನಿಭಾಯಿಸಲಿದ್ದಾರೆ. ಟಿ20 ವಿಶ್ವಕಪ್‌ನಲ್ಲಿ ಶ್ರೀಲಂಕಾ ತಂಡದ ಕಳಪೆ ಪ್ರದರ್ಶನದ ನಂತರ ಸಿಲ್ವರ್‌ವುಡ್ ಮುಖ್ಯ ಕೋಚ್ ಸ್ಥಾನ ತ್ಯಜಿಸಿದ್ದರು. ಲಂಕಾ ಲೀಗ್ ಹಂತದಲ್ಲೇ ಹೊರಬಿದ್ದಿತ್ತು.

ಈ ಹಿಂದೆ ಆಯ್ಕೆ ಸಮಿತಿ ಮುಖ್ಯಸ್ಥರಾಗಿಯೂ ಕೆಲಸ ಮಾಡಿರುವ ಅವರು, ಇಂಗ್ಲೆಂಡ್‌ಗೆ ಟೆಸ್ಟ್ ಪ್ರವಾಸ ಕೈಗೊಳ್ಳುವ ತಂಡಕ್ಕೂ ಕೋಚ್ ಆಗಿ ಮುಂದುವರಿಯಲಿದ್ದಾರೆ. ಎಂದು 'ದಿ ಡೈಲಿ ಮಿರರ್' ಪತ್ರಿಕೆ ವರದಿ ಮಾಡಿದೆ.

ಈಜು: ಶ್ರೀ ಚರಣಿ ಕೂಟ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ಲೋಬಲ್ ಈಜು ಕೇಂದ್ರದ ಶ್ರೀ ಚರಣಿ ತುಮು ಅವರು ಬಸವನಗುಡಿ ಅಕ್ವಾಟಿಕ್ ಸೆಂಟರ್‌ನಲ್ಲಿ ನಡೆಯುತ್ತಿರುವ ಎನ್‌ಆರ್‌ಜೆ ರಾಜ್ಯ ಸಬ್ ಜೂನಿಯರ್ ಮತ್ತು ಜೂನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಬಾಲಕಿಯರ (1ಬಿ ಗುಂಪು) 800 ಮೀಟರ್ ಫ್ರೀಸ್ಟೈಲ್ ಸ್ಪರ್ಧೆಯಲ್ಲಿ ಕೂಟ ದಾಖಲೆ ನಿರ್ಮಿಸಿದರು.

ಸೋಮವಾರ ನಡೆದ ಸ್ಪರ್ಧೆಯಲ್ಲಿ ಶ್ರೀ ಚರಿಣಿ 9 ನಿಮಿಷ 19.80 ಸೆಕೆಂಡ್‌ನಲ್ಲಿ ಗುರಿ ತಲುಪಿ ಮೊದಲ ಸ್ಥಾನ ಪಡೆದರು. ಆತಿಥೇಯ ಬಿಎಸಿ ಕೇಂದ್ರದ ಮೀನಾಕ್ಷಿ ಮೆನನ್ ಮತ್ತು ತನೀಶಾ ವಿಜಯ್ ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಪಡೆದರು.



ಶ್ರೀ ಚರಣಿ ತುಮು

ಫಲಿತಾಂಶ: ಬಾಲಕರು: 1ಎ: 800 ಮೀ. ಫ್ರೀಸ್ಟೈಲ್: ಎಸ್.ದರ್ಶನ್ (ಬಿಎಸಿ, 8 ನಿ.40.06 ಸೆ). 1ಬಿ 800 ಮೀ. ಫ್ರೀಸ್ಟೈಲ್: ಮೋನಿಷ್ ಪಿ.ವಿ. (ಬಿಎಸಿ, 8 ನಿ. 59.29 ಸೆ). 2ಎ: 1500 ಮೀ. ಫ್ರೀಸ್ಟೈಲ್: ಅಕ್ಷಜ್ ಪಿ. (ಬಿಎಸಿ, 17 ನಿ.36.11ಸೆ). 2ಬಿ: 1500 ಮೀ. ಫ್ರೀಸ್ಟೈಲ್: ಶರಣ್ ಎಸ್ (ಮತ್ಸ್ಯ, 17 ನಿ.15.16ಸೆ). 2ಸಿ 1500 ಮೀ. ಫ್ರೀಸ್ಟೈಲ್: ಜಸ್ ಸಿಂಗ್ (ಎಸಿಇ, 18 ನಿ.30.68 ಸೆ).

ಬಾಲಕಿಯರು: 1ಎ: 800ಮೀ ಫ್ರೀಸ್ಟೈಲ್: ಶಿರಿನ್ (ಬಿಎಸಿ, 9 ನಿ.28.57 ಸೆ). 1ಬಿ: 800ಮೀ ಫ್ರೀಸ್ಟೈಲ್: ಶ್ರೀ ಚರಣಿ ತುಮು (ಗ್ಲೋಬಲ್ ಸ್ವಿಮ್ ಸೆಂಟರ್, 9 ನಿ.19.80 ಸೆ). 2ಎ: 1500ಮೀ ಫ್ರೀಸ್ಟೈಲ್: ಡಿಂಪಲ್ ಸೋನಾಕ್ಷಿ ಎಂ. ಗೌಡ (ಡಾಲ್ಫಿನ್, 19 ನಿ. 23.67 ಸೆ). 2ಬಿ: 1500 ಮೀ ಫ್ರೀಸ್ಟೈಲ್: ಧನ್ಯ ನಟರಾಜ್ ನಾಯ್ಕ್ (ಬಿಎಸ್‌ಎ, 19 ನಿ. 49.86 ಸೆ). 2ಸಿ: 1500ಮೀ ಫ್ರೀಸ್ಟೈಲ್: ಧೃತಿ ಕರಿಬಸವೇಶ್ವರ (ಎಸಿಇ, 20 ನಿ 15.20 ಸೆ).

ಭಾರತ– ಮ್ಯಾನ್ಮಾರ್ ಮಹಿಳಾ ಫುಟ್‌ಬಾಲ್: ಪಂದ್ಯ ಇಂದು

ನವದೆಹಲಿ (ಪಿಟಿಐ): ಭಾರತ ತಂಡ ಯಾಂಗೂನ್‌ನ ತುವುನ್ನಾ ಕ್ರೀಡಾಂಗಣದಲ್ಲಿ ಮಂಗಳವಾರ ನಡೆಯಲಿರುವ ಮಹಿಳಾ ಸೌಹಾರ್ದ ಫುಟ್‌ಬಾಲ್ ಪಂದ್ಯದಲ್ಲಿ ಆತಿಥೇಯ ಮ್ಯಾನ್ಮಾರ್ ತಂಡವನ್ನು ಎದುರಿಸಲಿದೆ. ಭಾರತ ಈ ಪ್ರವಾಸದಲ್ಲಿ ಎರಡು ಪಂದ್ಯಗಳನ್ನು ಆಡಲಿದೆ.

ವಿಶ್ವ ಕ್ರಮಾಂಕದಲ್ಲಿ 67ನೇ ಸ್ಥಾನದಲ್ಲಿರುವ ಭಾರತ, ಈ ಹಿಂದೆ ಮ್ಯಾನ್ಮಾರ್ ವಿರುದ್ಧ ಆಡಿರುವ ಐದು ಪಂದ್ಯಗಳಲ್ಲಿ ಒಂದರಲ್ಲೂ ಜಯಗಳಿಸಿಲ್ಲ. ನಾಲ್ಕು ಪಂದ್ಯಗಳನ್ನು ಸೋತು ಒಂದರಲ್ಲಿ 'ಡ್ರಾ' ಮಾಡಿಕೊಂಡಿದೆ. ಮ್ಯಾನ್ಮಾರ್ ವಿಶ್ವಕ್ರಮಾಂಕದಲ್ಲಿ 54ನೇ ಸ್ಥಾನದಲ್ಲಿದೆ.

ಐದು ವರ್ಷಗಳ ಹಿಂದೆ ಮಂಡಾಲಯದಲ್ಲಿ ನಡೆದ ಎಎಫ್‌ಸಿ ಮಹಿಳಾ ಒಲಿಂಪಿಕ್ ಕ್ವಾಲಿಫೈಯರ್ಸ್‌ನಲ್ಲಿ 3–3 ಗೋಲುಗಳಿಂದ ಡ್ರಾ ಮಾಡಿಕೊಂಡಿತ್ತು. ಈಗಿನ ತಂಡದಲ್ಲೂ ಇರುವ ಸಂಧ್ಯಾ ರಂಗನಾಥನ್, ಸಂಜು ಮತ್ತು ನೊಂಗ್‌ಮೈಥೆಮ್ ರತ್ನಬಾಲಾ ದೇವಿ 2019ರಲ್ಲಿ ನಡೆದಿದ್ದ ಆ ಪಂದ್ಯದಲ್ಲಿ ಗೋಲು ಹೊಡೆದಿದ್ದರು.

ಮುಖ್ಯಮಂತ್ರಿ ಕಪ್: ಬಿಟಿಎಂ ಲೇಔಟ್ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎ.ಎಸ್. ಸುಹಾಸ್ ಎಬೆನೇಜರ್ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರ ತಂಡವು ಮುಖ್ಯಮಂತ್ರಿ ಕಪ್ ಫುಟ್‌ಬಾಲ್ ಟೂರ್ನಿಯ 'ಎ' ಗುಂಪಿನ ಪಂದ್ಯದಲ್ಲಿ ಗೆಲುವು ಸಾಧಿಸಿದೆ.

ಉತ್ತಮ ಆಟವಾಡಿದ ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರ ತಂಡವು 5–1 ಗೋಲುಗಳ ಅಂತರದಿಂದ ದಾಸರಹಳ್ಳಿ ವಿಧಾನಸಭಾ ಕ್ಷೇತ್ರ ತಂಡವನ್ನು ಮಣಿಸಿತು.

ಬಿಟಿಎಂ ತಂಡದ ಪರ ಎ.ಎಸ್ ಸುಹಾಸ್ ಎಬೆನೇಜರ್ (7, 10 ಮತ್ತು 32ನೇ ನಿಮಿಷ), ಎಂ.ಡಿ ರೆಹಾನ್ (38ನೇ ನಿ), ಕಾಬಾ ಬಿನ್ ಅಯ್ಯೂಬ್ (48ನೇ ನಿ) ಗೋಲು ದಾಖಲಿಸಿದರು. ದಾಸರಹಳ್ಳಿ ತಂಡದ ಪರ ಮಂಜುನಾಥ್ ರೆಡ್ಡಿ ಏಕೈಕ ಗೋಲು ದಾಖಲಿಸಿದರು.

'ಸಿ' ಗುಂಪಿನ ಪಂದ್ಯದಲ್ಲಿ ರಾಜಾಜಿನಗರ ವಿಧಾನಸಭಾ ಕ್ಷೇತ್ರ ತಂಡವು 2-1ರಿಂದ ಗಾಂಧಿನಗರ ವಿಧಾನಸಭಾ ಕ್ಷೇತ್ರ ತಂಡವನ್ನು ಮಣಿಸಿತು. ರಾಜಾಜಿನಗರ ತಂಡದ ಪರ ರಾಜು ಡಿ. (25ನೇ ನಿ), ಮೊನೀಶ್ ಕುಮಾರ್ ಜಿ. (36 ನೇ ನಿ) ಗೋಲು ಗಳಿಸಿದರೆ, ಗಾಂಧಿನಗರ ತಂಡದ ಪರ ಮದನ್ (3ನೇ ನಿ) ಏಕೈಕ ಗೋಲು ತಂದಿತ್ತರು.

